ವಿಶ್ವವಾಣಿ
ವಿಶ್ವಾಸವೇ ವಿಶ್ವ

ಫಿಫಾ ಫೀವರ್ ಶುರು

23ನೇ ವಿಶ್ವ ಫುಟ್ಬಾಲ್ ಕ್ರೀಡಾಕೂಟಕ್ಕೆ ಮೆಕ್ಸಿಕೋ ನಗರದಲ್ಲಿ ಗುರುವಾರ ಮಧ್ಯರಾತ್ರಿ ಚಾಲನೆ ದೊರೆತಿದ್ದು, ಆತಿಥೇಯ ಮೆಕ್ಸಿಕೋ ಮತ್ತು ದ. ಆಫ್ರಿಕಾ ನಡುವಣ ಉದ್ಘಾಟನಾ ಪಂದ್ಯವನ್ನು ವಿಶ್ವದೆಲ್ಲೆಡೆಯ ಕ್ರೀಡಾಪ್ರೇಮಿಗಳು ವೀಕ್ಷಿಸಿದರು. ಅಮೆರಿಕ, ಕೆನಡಾ ಮತ್ತು ಮೆಕ್ಸಿಕೋ ಜಂಟಿಯಾಗಿ ಈ ಬಾರಿಯ ಟೂರ್ನಿಯ ಆತಿಥ್ಯ ವಹಿಸಿವೆ.

ಸೊಂಪಾದ ಪುಟಗಳು

ಎಲ್ಲರ ತಲೆಯೊಳಗಿರುವ ಅವನೊಬ್ಬ ವಿಚಿತ್ರ ಇತಿಹಾಸಕಾರ!

ಶಿಶಿರಕಾಲ
ಶಿಶಿರ್ ಹೆಗಡೆ 6

ಕಾಡಿನ ನಡುವೆ ಕಟ್ಟಿಕೊಂಡ ಬದುಕು

ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ



ಅವಕಾಶದ ಬಾಗಿಲು ತೆರೆಯುತ್ತದೆ ಎಂದು ಕಾದು ಕೂರುವುದು ಅಥವಾ ಬಾಗಿಲನ್ನು ತೆರೆಯಲು ಯತ್ನಿಸುವುದು ಬುದ್ಧಿವಂತರ ಲಕ್ಷಣವಲ್ಲ. ಬಾಗಿಲಿನ ಕೀ ಹೋಲ್‌ನಲ್ಲೇ ನುಗ್ಗಿ ಅವಕಾಶ ಸೃಷ್ಟಿಸಿಕೊಳ್ಳಬೇಕು.

ವಕ್ರತುಂಡೋಕ್ತಿ

ಗಂಡ- ಹೆಂಡ್ತಿ ಮಧ್ಯೆ ಸಮಾನತೆ ಓಕೆ. ಆದರೆ ಬದುಕು ಸಮಾನಾಂತರದಲ್ಲಿ ಸಾಗಬಾರದು.

ಶಿವಶ್ರೀ ತೇಜಸ್ವಿಗೆ ಉಸ್ತಾದ್ ಬಿಸ್ಮಿಲ್ಲಾ ಯುವ ಪುರಸ್ಕಾರ

ಬೆಂಗಳೂರು: ಪ್ರಖ್ಯಾತ ಗಾಯಕಿ ಶಿವಶ್ರೀ ತೇಜಸ್ವಿ ಸೂರ್ಯ ಅವರು ಭಾರತ ಸರ್ಕಾರದ ಸಾಂಸ್ಕೃತಿಕ ಸಚಿವಾಲಯದ ಅಡಿಯಲ್ಲಿ ಬರುವ ಸಂಗೀತ, ನೃತ್ಯ ಮತ್ತು ನಾಟಕದ ರಾಷ್ಟ್ರೀಯ ಅಕಾಡೆಮಿಯಾದ 'ಸಂಗೀತ ನಾಟಕ ಅಕಾಡೆಮಿ' ನೀಡುವ 2025ರ ಸಾಲಿನ ಪ್ರತಿಷ್ಠಿತ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರಕ್ಕೆ ಆಯ್ಕೆಯಾಗಿದ್ದಾರೆ. ಶಿವಶ್ರೀ ತೇಜಸ್ವಿ ಸೂರ್ಯ ಅವರನ್ನು ಸಂಗೀತ ವಿಭಾಗದಲ್ಲಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ದೇಶದ ಶ್ರೀಮಂತ ಕಲಾತ್ಮಕ ಸಂಪ್ರದಾಯಗಳಿಗೆ ಸೇವೆ ಸಲ್ಲಿಸುವ ಯುವ ಕಲಾವಿದರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

12 ವರ್ಷದಲ್ಲಿ ದೇಶದ ಡೆಮಾಕ್ರಸಿ ಕೊಲೆಯಾಗಿದೆ ಎಂದ ಕಾಂಗ್ರೆಸ್

ಸುದ್ದಿ



200 ಕೋಟಿ ರು.ಗಳ ಷಡ್ಯಂತ್ರ, ಪ್ರಭಾವಿಗಳ ಕೈವಾಡ: ಹೈಕೋರ್ಟ್‌ನಲ್ಲಿ ಚಿನ್ನಯ್ಯ ರಿಟ್

ಧರ್ಮಸ್ಥಳ ಬುರುಡೆ ನಾಟಕ: ಪ್ರಕಾಶ್ ರಾಜ್ ಪಾತ್ರಧಾರಿ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಧರ್ಮಸ್ಥಳ ಗ್ರಾಮದ 'ಬುರುಡೆ ಪ್ರಕರಣ'ದ ತನಿಖೆಗೆ ಸಂಬಂಧಿಸಿದಂತೆ ಸ್ಫೋಟಕ ತಿರುವು ಸಿಕ್ಕಿದೆ. ಧರ್ಮಸ್ಥಳ ಕ್ಷೇತ್ರದ ಪಾವಿತ್ರ್ಯತೆಗೆ ಕುಂದು ತರಲು ಬರೋಬ್ಬರಿ 200 ಕೋಟಿ ರು. ಬಜೆಟ್ ಇಟ್ಟುಕೊಂಡು ಬೃಹತ್ ಷಡ್ಯಂತ್ರ ರೂಪಿಸಲಾಗಿತ್ತು ಎಂಬ ಆಘಾತಕಾರಿ ಅಂಶ ಬೆಳಕಿಗೆ ಬಂದಿದ್ದು, ಪ್ರಕರಣದಲ್ಲಿ ಬಹುಭಾಷಾ ನಟ ಪ್ರಕಾಶ್ ರಾಜ್ ಹೆಸರು ಪ್ರಸ್ತಾಪವಾಗಿದೆ.

ಸಂಚಿನ ಕುರಿತು ಸಮಗ್ರ ತನಿಖಾ ವರದಿ ಸಲ್ಲಿಕೆ ಕೋರಿ ಪ್ರಕರಣದ ಪ್ರಮುಖ ಆರೋಪಿಯಾಗಿದ್ದ ಚಿನ್ನ ಅಲಿಯಾಸ್ ಚಿನ್ನಯ್ಯ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ಇಡೀ ಪ್ರಕರಣಕ್ಕೆ ಹೊಸ ತಿರುವು ನೀಡಿದ್ದಾನೆ. ಚಿನ್ನಯ್ಯ ಸಲ್ಲಿಸಿರುವ ರಿಟ್ ಅರ್ಜಿಯಲ್ಲಿ ಪ್ರಭಾವಿ ವ್ಯಕ್ತಿಗಳು ಹಾಗೂ ಯೂ ಟ್ಯೂಬರ್‌ಗಳ ಹೆಸರುಗಳು ಉಲ್ಲೇಖವಾಗಿರುವುದು ತೀವ್ರ ಸಂಚಲನ ಮೂಡಿಸಿದೆ.

'ಗಿರೀಶ್ ಮಟ್ಟೆಣ್ಣವರ್ ಹೇಳಿಕೊಟ್ಟಂತೆ ನೀನು ಹೇಳಿಕೆ ಕೊಡು, 29ನೇ ತಾರೀಕು ಬಂದು ನಿನ್ನನ್ನು ಅಪ್ಪಿಕೊಳ್ಳುತ್ತೇನೆ' ಎಂದು ನಟ ಪ್ರಕಾಶ್ ರಾಜ್ ಅವರು ತಮಿಳಿನಲ್ಲಿ ತಮಗೆ ಹೇಳಿದ್ದರು ಎಂಬುದಾಗಿ ಚಿನ್ನಯ್ಯ ಅರ್ಜಿಯಲ್ಲಿ ಉಲ್ಲೇಖಿಸಿದ್ದಾನೆ. ಜತೆಗೆ ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟೆಣ್ಣವರ್, ವಿಠಲಗೌಡ, ಮತ್ತು ಜಯಂತ್ ಷಡ್ಯಂತ್ರದ ಮುಖ್ಯ ರೂವಾರಿಗಳು. ಯೂಟ್ಯೂಬರ್‌ಗಳಾದ ಸಮೀರ್ ಎಂ.ಡಿ ಹಾಗೂ ಅಜಯ್ ಅಂಚನ್ ಎಂಬುವವರು ತಮ್ಮ ಸ್ವಾರ್ಥಕ್ಕೆ ಬೇಕಾದ ರೀತಿಯಲ್ಲಿ 30 ರಿಂದ 35 ವೀಡಿಯೋಗಳನ್ನು ಮೊದಲೇ ಮಾಡಿಕೊಂಡಿದ್ದರು. ಅವರು ತೋರಿಸಿದ ಸ್ಥಳಗಳನ್ನೇ ನಾನು ನಂತರ ಎಸ್‌ಐಟಿ ಅಧಿಕಾರಿಗಳಿಗೆ ತೋರಿಸಬೇಕಾಯಿತು ಎಂದು ಚಿನ್ನಯ್ಯ ದೂರಿದ್ದಾನೆ.

ಎಸ್‌ಐಟಿ ವಿಳಂಬ ನೀತಿ: ಎಫ್‌ಐಆರ್ ಸಂಖ್ಯೆ 39/2025 ರ ತನಿಖೆ ಆರಂಭವಾಗಿ ಇಷ್ಟು ದಿನಗಳಾದರೂ ಎಸ್‌ಐಟಿ ಅಂತಿಮ ವರದಿ ಸಲ್ಲಿಸದೆ ವಿಳಂಬ ಮಾಡುತ್ತಿದೆ. ಪ್ರಾಥಮಿಕ ವರದಿಯಲ್ಲಿ ಅಸಲಿ ಆರೋಪಿಗಳ ಹೆಸರುಗಳನ್ನು ಸ್ಪಷ್ಟವಾಗಿ ಉಲ್ಲೇಖಿಸಿದ್ದರೂ, ಅವರ ವಿರುದ್ಧ ಎಸ್‌ಐಟಿ ಯಾವುದೇ ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ಅರ್ಜಿಯಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದಾನೆ.

→ 4

ಚಿನ್ನಯ್ಯ ಹೇಳಿದ್ದೇನು ?

- ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟೆಣ್ಣವರ್, ವಿಠಲ್ ಗೌಡ ಮತ್ತಿತರರು, ಎಸ್‌ಐಟಿ ಅಧಿಕಾರಿಗಳು ಸಮೀಪಿಸಿದಾಗ ಶವಗಳನ್ನು ಹೂತ ಸ್ಥಳಗಳೆಂದು ಅವರು ಹೇಳಿದ ಜಾಗಗಳನ್ನು ತೋರಿಸುವಂತೆ ಪದೇ ಪದೇ ಸೂಚಿಸಿದ್ದರು. ಹಾಗೆ ಮಾಡದಿದ್ದರೆ ತಮ್ಮ ಪತ್ನಿಯನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿದ್ದರು.
- ತಿಮರೋಡಿ ಅವರ ಮನೆಯ ಒಂದು ಕೋಣೆಯಲ್ಲಿ ಕೂಡಿ ಹಾಕಲಾಗಿತ್ತು. ಗಿರೀಶ್ ಮಟ್ಟೆಣ್ಣನವರ್ ಮತ್ತು ಮಹೇಶ್ ಶೆಟ್ಟಿ ಅವರಿಗೆ ಮಸಾಜ್ ಮಾಡಲು ಬಳಸಿಕೊಂಡಿದ್ದರು.

ಸರಕಾರ, ಎಸ್‌ಐಟಿಗೆ ನೋಟಿಸ್

ಹಿರಿಯ ವಕೀಲ ವಿವೇಕ್ ಸುಬ್ಬಾರೆಡ್ಡಿ ಅವರ ಮೂಲಕ ಸಲ್ಲಿಕೆಯಾಗಿರುವ ಈ ಅರ್ಜಿಯನ್ನು ಪುರಸ್ಕರಿಸಿರುವ ಹೈಕೋರ್ಟ್‌ನ ಏಕಸದಸ್ಯ ಪೀಠದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರು, ರಾಜ್ಯ ಸರಕಾರ ಹಾಗೂ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ನೋಟಿಸ್ ಜಾರಿ ಮಾಡಿದ್ದಾರೆ. ಅಲ್ಲದೆ, ತನಿಖೆಯ ಸದ್ಯದ ಸ್ಥಿತಿಗತಿಯ ಬಗ್ಗೆ ಸಂಪೂರ್ಣ ಮಾಹಿತಿ ನೀಡುವಂತೆ ಎಸ್‌ಐಟಿಗೆ ಸೂಚಿಸಿದೆ. ನಿಜವಾದ ಆರೋಪಿಗಳನ್ನು ಹೆಸರಿಸಿದರೂ ಕೂಡಾ ಎಸ್‌ಐಟಿ ಕ್ರಮ ಕೈಗೊಂಡಿಲ್ಲ. ಪ್ರಾಥಮಿಕ ವರದಿಯಲ್ಲಿರುವವರ ಮೇಲೆ ಸರಿಯಾದ ತನಿಖೆ ನಡೆಸಿಲ್ಲ. ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟೆಣ್ಣವರ್, ಸಮೀರ್ ಎಂಡಿ, ಜಯಂತ್, ಅಜಯ್ ಅಂಚನ್ ಹೀಗೆ ಹಲವರ ವಿರುದ್ಧ ಷಡ್ಯಂತ್ರದ ಬಗ್ಗೆ ತಿಳಿಸಿದ್ದೆ. ಅವರು ನನ್ನನ್ನು ಬಳಸಿಕೊಂಡಿದ್ದರು . ಎಲ್ಲಾ ಮಾಹಿತಿಯನ್ನು ಕೊಟ್ಟಿದ್ದರೂ, ಪೊಲೀಸರು ಕ್ರಮ ಕೈಗೊಂಡಿಲ್ಲ ಎಂದು ರಿಟ್ ಅರ್ಜಿಯಲ್ಲಿ ಚಿನ್ನಯ್ಯ ತಿಳಿಸಿದ್ದಾನೆ.

ಕೊಲ್ಲಿ ಮತ್ತೆ ಪ್ರಕ್ಷುಬ್ಧ

ಇರಾನ್-ಅಮೆರಿಕ ಸಂಘರ್ಷ ತೀವ್ರ, ಹೊರ್ಮುಜ್ ಜಲಸಂಧಿ ಬಂದ್

ಟೆಹರಾನ್/ವಾಷಿಂಗ್ಟನ್: ಅಮೆರಿಕ ಮತ್ತು ಇರಾನ್ ನಡುವೆ ಮತ್ತೆ ಸಂಘರ್ಷ ಆರಂಭವಾಗಿದ್ದು, ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ. ಅಮೆರಿಕ ವೈಮಾನಿಕ ದಾಳಿ ನಡೆಸಿದ ಬೆನ್ನಲ್ಲೇ ಇರಾನ್ ಬಹರೇನ್ ಮತ್ತು ಕುವೈತ್‌ನಲ್ಲಿರುವ ಅಮೆರಿಕದ ಸೇನಾ ನೆಲೆಗಳನ್ನು ಗುರಿಯಾಗಿಸಿಕೊಂಡು ಕ್ಷಿಪಣಿ ದಾಳಿ ನಡೆಸಿದೆ. ಇದೇ ವೇಳೆ ಹೊರ್ಮುಜ್ ಜಲಸಂಧಿ ಬಳಿ ಸಂಚರಿಸುತ್ತಿದ್ದ 24 ಭಾರತೀಯರಿದ್ದ ಹಡಗಿನ ಮೇಲೆ ಅಮೆರಿಕ ನೌಕಾಪಡೆ ದಾಳಿ ನಡೆಸಿದ್ದು, ಮೂವರು ನಾವಿಕರು ಮೃತಪಟ್ಟಿದ್ದಾರೆ. ಭಾರತ ಈ ದಾಳಿಯನ್ನು ಕಟುವಾಗಿ ಖಂಡಿಸಿದೆ.

ದಾಳಿಯ ಬೆನ್ನಲ್ಲೇ ಇರಾನ್ ಹೊರ್ಮುಜ್ ಜಲಸಂಧಿಯನ್ನು ಸಂಪೂರ್ಣವಾಗಿ ಮುಚ್ಚಿರುವುದಾಗಿ ಘೋಷಿಸಿದೆ. ಜಾಗತಿಕ ತೈಲ ಸಾಗಣೆಯ ಪ್ರಮುಖ ಮಾರ್ಗವಾಗಿರುವ ಈ ಜಲಸಂಧಿಯ ಬಂದ್ ನಿರ್ಧಾರವು ವಿಶ್ವದ ಇಂಧನ ಮಾರುಕಟ್ಟೆಯಲ್ಲಿ ಮತ್ತೊಮ್ಮೆ ಆತಂಕ ಸೃಷ್ಟಿಸಿದೆ.

ಟೆಹರಾನ್ ಜತೆ ಮಾತುಕತೆ ವಿಫಲವಾಗಿದ್ದು, ಇದಕ್ಕೆ ಬೆಲೆ ಇರಾನ್ ಕಟ್ಟಲೇಬೇಕು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಎಚ್ಚರಿಕೆ ನೀಡಿದ ಕೆಲವೇ ಗಂಟೆಗಳ ಬಳಿಕ ಅಮೆರಿಕ ಸೇನೆ ಇರಾನ್‌ನ ಹಲವು ನೆಲೆಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದೆ. ಇರಾನ್‌ನ ಬಂದರ್ ಅಬ್ಬಾಸ್, ಸಿರಿಕ್, ಮಿನಾಬ್ ಮತ್ತು ಕರಜ್ ನಗರಗಳಲ್ಲಿರುವ ಸೇನಾ ನೆಲೆಗಳ ಮೇಲೆ ಅಮೆರಿಕ ಪಡೆಗಳು ತೀವ್ರವಾದ ಕ್ಷಿಪಣಿ ದಾಳಿ ನಡೆಸಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ ಇರಾನ್, ಬಹರೇನ್, ಕುವೈತ್ ಮತ್ತು ಜೋರ್ಡಾನ್‌ನಲ್ಲಿರುವ ಅಮೆರಿಕದ ವಾಯುನೆಲೆಗಳನ್ನು ಗುರಿಯಾಗಿಸಿಕೊಂಡು ಕ್ಷಿಪಣಿ ಮತ್ತು ಡ್ರೋನ್ ಬಳಸಿ ದಾಳಿ ಮಾಡಿದೆ. ಒಟ್ಟು 21 ಗುರಿಗಳ ಮೇಲೆ ದಾಳಿ ಮಾಡಿದ್ದಾಗಿ ಇರಾನ್ ಹೇಳಿಕೊಂಡಿದೆ.

ಆದರೆ, ಇರಾನ್‌ನ ಬಹುತೇಕ ಕ್ಷಿಪಣಿಗಳನ್ನು ಮಾರ್ಗಮಧ್ಯೆಯೇ ಹೊಡೆದುರುಳಿಸಲಾಗಿದ್ದು, ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ಅಮೆರಿಕ ಮತ್ತು ಮಿತ್ರರಾಷ್ಟ್ರಗಳು ಸ್ಪಷ್ಟಪಡಿಸಿವೆ. ಅಗತ್ಯಬಿದ್ದರೆ ಬಾಂಬ್‌ಗಳ ಮೂಲಕವೇ ಮಾತುಕತೆ ನಡೆಸಲಾಗುವುದು ಎಂದು ಅಮೆರಿಕ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಹೇಳಿದ್ದಾರೆ. ಈ ಉದ್ವಿಗ್ನತೆಯ ನಡುವೆಯೇ, ಇಸ್ರೇಲ್ ಮತ್ತು ಅಮೆರಿಕದ ಹಿತಾಸಕ್ತಿಗಳು ಯಾವಾಗಲೂ ಒಂದೇ ಆಗಿರುವುದಿಲ್ಲ; ಅಮೆರಿಕ ತನ್ನ ಹಿತಾಸಕ್ತಿಗೆ ತಕ್ಕಂತೆ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಹೇಳಿಕೆ ನೀಡಿರುವುದು, ಇಸ್ರೇಲ್ ಜತೆಗಿನ ಭಿನ್ನಾಭಿಪ್ರಾಯವನ್ನು ಬಹಿರಂಗಪಡಿಸಿದೆ. ಈ ನಡುವೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಅವರು, ಮಧ್ಯಪ್ರಾಚ್ಯ ಪರಿಸ್ಥಿತಿ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.



ಅಮೆರಿಕ ದಾಳಿಗೆ 3 ಭಾರತೀಯರು ಬಲಿ

ತೈಲ ಟ್ಯಾಂಕರ್ ಮೇಲೆ ಕ್ಷಿಪಣಿ ದಾಳಿ

ಟೆಹರಾನ್: ಹೊರ್ಮುಜ್ ಜಲಸಂಧಿಯ ಸಮೀಪ ವಾಣಿಜ್ಯ ಹಡಗಿನ ಮೇಲೆ ಅಮೆರಿಕ ನೌಕಾಪಡೆ ನಡೆಸಿದ ದಾಳಿಯಲ್ಲಿ ಇಬ್ಬರು ಭಾರತೀಯ ನಾವಿಕರು ಮತ್ತು ಓರ್ವ ಮುಖ್ಯ ಇಂಜಿನಿಯರ್ ಸಾವನ್ನಪ್ಪಿದ್ದಾರೆ . ಮೃತರು ಆಂಧ್ರ, ಒರಿಯಾ ಮತ್ತು ಹಿ.ಪ್ರದೇಶದವರು ಎಂದು ತಿಳಿದುಬಂದಿದೆ.

ಕೇಂದ್ರ ಹಡಗು ಸಚಿವ ಸರ್ಬಾನಂದ ಸೋನೋವಾಲ್ ಅವರು ಎಂ.ಟಿ ಸೆಟ್ಟೆಬೆಲ್ಲೊ ಹಡಗಿನ ಮೂವರು ಭಾರತೀಯ ನಾವಿಕರ ದುರಂತ ಸಾವನ್ನು ದೃಢಪಡಿಸಿದ್ದು, ಒಮನ್ ಕರಾವಳಿಯಲ್ಲಿ ಹಡಗಿನ ಮೇಲೆ ಅಮೆರಿಕದ ಮಿಲಿಟರಿ ದಾಳಿಯನ್ನು ಭಾರತ ತೀವ್ರವಾಗಿ ಪ್ರತಿಭಟಿಸಿದೆ ಎಂದು ಹೇಳಿದ್ದಾರೆ. ಅಮೆರಿಕದ ನೌಕಾಪಡೆಗೆ ಹಡಗಿನಲ್ಲಿದ್ದವರ ರಾಷ್ಟ್ರೀಯತೆಗಳ ಬಗ್ಗೆ ಸಂಪೂರ್ಣ ಮಾಹಿತಿ ಇದ್ದೇ ಇರುತ್ತಿತ್ತು. ಹಡಗುಗಳು ಸೂಚನೆಗಳನ್ನು ಪಾಲಿಸದಿದ್ದರೆ ಅವುಗಳನ್ನು ವಶಕ್ಕೆ ಪಡೆಯಬಹುದಾಗಿತ್ತು ಎಂದು ಯಾದವ್, ದಾಳಿಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಇದೇ ವೇಳೆ ಅಮೆರಿಕದ ರಾಜತಾಂತ್ರಿಕ ಅಧಿಕಾರಿಯನ್ನು ಕರೆಸಿ ಭಾರತ ಈ ಸಂಬಂಧ ತನ್ನ ಪ್ರತಿಭಟನೆಯನ್ನು ದಾಖಲು ಮಾಡಿದೆ.

ಮೀನಾಕ್ಷಿ ತಕರಾರು ಅರ್ಜಿ ವಿಚಾರಣೆಗೆ ಸುಪ್ರೀಂ ಸಮ್ಮತಿ

ದೆಹಲಿ: ಮಧ್ಯಪ್ರದೇಶದ ರಾಜ್ಯಸಭೆ ಚುನಾವಣೆಗೆ ಸಲ್ಲಿಸಿದ್ದ ನಾಮಪತ್ರ ತಿರಸ್ಕೃತಗೊಂಡಿರುವುದನ್ನು ಪ್ರಶ್ನಿಸಿ ಕಾಂಗ್ರೆಸ್ ಅಭ್ಯರ್ಥಿ ಮೀನಾಕ್ಷಿ ನಟರಾಜನ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. ಶುಕ್ರವಾರ ಅರ್ಜಿಯ ತುರ್ತು ವಿಚಾರಣೆ ನಡೆಸಲು ಸಮ್ಮತಿಸಿರುವ ಸುಪ್ರೀಂ ಕೋರ್ಟ್, ಫಲಿತಾಂಶ ಪ್ರಕಟಣೆಗೆ ತಡೆಯಾಜ್ಞೆ ನೀಡಲು ನಿರಾಕರಿಸಿದೆ. ಮೀನಾಕ್ಷಿ ಪರ ವಾದ ಮಂಡಿಸಿದ ವಕೀಲ ಎ.ಎಂ. ಸಿಂಘ್ವಿ ಖಾಸಗಿ ದೂರಿನ ಪ್ರಕರಣದಲ್ಲಿ ಅವರಿಗೆ ಕೇವಲ ನೋಟಿಸ್ ಮಾತ್ರ ಜಾರಿಯಾಗಿದೆ ಎಂದು ಸ್ಪಷ್ಟಪಡಿಸಿದರು.

ಎಥೆನಾಲ್ ಪೆಟ್ರೋಲ್‌ಗೆ ಅಬಕಾರಿ ಸುಂಕ ವಿನಾಯ್ತಿ

ದೆಹಲಿ: ಹೆಚ್ಚಿನ ಪ್ರಮಾಣದ ಎಥೆನಾಲ್ ಮಿಶ್ರಿತ ಪೆಟ್ರೋಲ್ ಮೇಲಿನ ಅಬಕಾರಿ ಸುಂಕಕ್ಕೆ ವಿನಾಯಿತಿ ನೀಡಲಾಗಿದೆ ಎಂದು ಕೇಂದ್ರ ಸರಕಾರ ತಿಳಿಸಿದೆ. ಇ22 (ಎಥೆನಾಲ್ 22% ಮತ್ತು ಪೆಟ್ರೋಲ್ 78% ಮಿಶ್ರಿತ ಇಂಧನ), ಇ25, ಇ27 ಮತ್ತು ಇ30 ಎಥೆನಾಲ್ ಮಿಶ್ರಿತ ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು ತೆಗೆದುಹಾಕಲಾಗಿದೆ. ಎಥೆನಾಲ್ ಮಿಶ್ರಿತ ಪೆಟ್ರೋಲ್ ಬಳಕೆಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಉದ್ದೇಶದಿಂದ ಈ ಕ್ರಮಕ್ಕೆಗೊಳ್ಳಲಾಗಿದೆ ಎಂದು ಕೇಂದ್ರ ಸರಕಾರ ತಿಳಿಸಿದೆ.

ಕೊಟ್ಟ ಖಾತೆ ನಿರ್ವಹಿಸಿ; ವರಿಷ್ಠರ ಖಡಕ್ ಮಾತು

ಅಸಮಾಧಾನಿತರಿಗೆ ದೆಹಲಿ ನಾಯಕರ ಸೂಚನೆ । ಸಿಎಂ, ಡಿಸಿಎಂ, ಬಿಕೆಎಚ್ ಜತೆ ಹೈಕಮಾಂಡ್ ಸಭೆ

ಬೆಂಗಳೂರು: ಖಾತೆ ಬದಲಾವಣೆಗೆ ಪಟ್ಟು ಹಿಡಿದು ದೆಹಲಿ ನಾಯಕರ ಮೇಲೆ ಒತ್ತಡ ಹೇರಿದ್ದ ಸಚಿವರಿಗೆ 'ನಿರಾಸೆ' ಉಂಟಾಗಿದ್ದು, ಕೊಟ್ಟಿರುವ ಖಾತೆಯನ್ನು ಮೊದಲು ನಿರ್ವಹಿಸಿ ನಂತರ ನೋಡೋಣ ಎನ್ನುವ ಸ್ಪಷ್ಟ ಸಂದೇಶ ರವಾನೆಯಾಗಿದೆ ಎನ್ನಲಾಗಿದೆ.

ದೆಹಲಿ ಪ್ರವಾಸದಲ್ಲಿರುವ ಡಿ.ಕೆ.ಶಿವಕುಮಾರ್ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರ ಬಳಿಕ ಸಚಿವರ ಖಾತೆ ಅಸಮಾಧಾನದ ಬಗ್ಗೆ ಮತ್ತೊಮ್ಮೆ ಪ್ರಸ್ತಾಪಿಸಿ, ಈ ಸಮಸ್ಯೆ ಬಗೆಹರಿಸುವಂತೆ ಮನವಿ ಮಾಡಿದ್ದಾರೆ. ಆದರೆ ದೆಹಲಿ ನಾಯಕರು, ಸದ್ಯ ಹಂಚಿಕೆಯಾಗಿರುವ ಖಾತೆಗಳನ್ನೇ ಸಚಿವರು ವಹಿಸಿಕೊಂಡು ಕಾರ್ಯಾರಂಭ ಮಾಡಲಿ. ಅಧಿಕಾರ ವಹಿಸಿಕೊಳ್ಳುವ ಮೊದಲೇ ಕ್ಯಾತೆ ತೆಗೆಯೋದು ಸರಿಯಲ್ಲ ಎನ್ನುವ ಮಾತಾಡಿದ್ದಾರೆ ಎನ್ನಲಾಗಿದೆ.

ಪ್ರಮುಖವಾಗಿ ಬೆಂಗಳೂರು ನಗರಾಭಿವೃದ್ಧಿ ಖಾತೆ ವಿಷಯವಾಗಿ ಕೃಷ್ಣಬೈರೇಗೌಡ ಹಾಗೂ ಆಹಾರ ಇಲಾಖೆ ವಿಷಯದಲ್ಲಿ ಕೆ.ಎಚ್.ಮುನಿಯಪ್ಪ ಅವರ ಅಸಮಾಧಾನದ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಈ ಇಬ್ಬರು ಮೊದಲು ಅಧಿಕಾರ ಸ್ವೀಕರಿಸಲಿ ಎಂದು ಸೂಚಿಸಿದ್ದಾರೆ. ಹೈಕಮಾಂಡ್ ಜತೆ ಪ್ರತ್ಯೇಕವಾಗಿ ಕೃಷ್ಣಬೈರೇಗೌಡ ಅವರು ಸಭೆ ನಡೆಸಿದಾಗಲೂ, ಇದೇ ಮಾತನ್ನು ನಾಯಕರು ಹೇಳಿದ್ದಾರೆ ಎಂದು ತಿಳಿದುಬಂದಿದೆ.

ಪರಿಷತ್ ಚುನಾವಣೆ ಬಳಿಕ ವಿಸ್ತರಣೆ: ಸಚಿವರ ಖಾತೆ ಹಂಚಿಕೆಯ ಜತೆಗೆ ಎರಡನೇ ಹಂತದ ಸಂಪುಟ ವಿಸ್ತರಣೆಗೆ ಸಂಬಂಧಿಸಿದಂತೆಯೂ ಡಿ.ಕೆ.ಶಿವಕುಮಾರ್ ಹೈಕಮಾಂಡ್ ನಾಯಕರೊಂದಿಗೆ ಸಭೆ ನಡೆಸಿದ್ದಾರೆ. 18ಕ್ಕೆ ವಿಧಾನಪರಿಷತ್ ಚುನಾವಣೆಯಿದ್ದು, ಐದನೇ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲಾಗಿದೆ. ಪ್ರತಿಷ್ಠೆಯಾಗಿರುವ ಈ ಚುನಾವಣಾ ಪ್ರಕ್ರಿಯೆ ಬಳಿಕ ಸಂಪುಟ ವಿಸ್ತರಣೆ ಬಗ್ಗೆ ಚರ್ಚಿಸೋಣ ಎಂದು ಮಲ್ಲಿಕಾರ್ಜುನ ಖರ್ಗೆ ಅವರು ಹೇಳಿದ್ದಾರೆ ಎನ್ನಲಾಗಿದೆ.

ದೆಹಲಿಯಲ್ಲೇ ಬೀಡುಬಿಟ್ಟ ಶಾಸಕರು: ಇನ್ನು ಡಿ.ಕೆ. ಶಿವಕುಮಾರ್ ಅವರು ಸಂಪುಟ ವಿಸ್ತರಣೆ ಬಗ್ಗೆ ಚರ್ಚಿಸುವ ದೆಹಲಿಯಲ್ಲಿರುವುದರಿಂದ, ಹಲವು ಸಚಿವಾಕಾಂಕ್ಷಿಗಳು ದೆಹಲಿಯಲ್ಲಿ ಬೀಡು ಬಿಟ್ಟಿದ್ದಾರೆ. ಕೆ.ಷಡಕ್ಷರಿ, ಟಿ.ಬಿ. ಜಯಚಂದ್ರ, ಸೇರಿದಂತೆ ಹಲವು ಶಾಸಕರು ದೆಹಲಿಯಲ್ಲಿದ್ದು, ಲಾಬಿ ನಡೆಸುತ್ತಿದ್ದಾರೆ.

→ 4



ಖರ್ಗೆ ನಿವಾಸದಲ್ಲಿ ಸಭೆ

ದೆಹಲಿಯಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ ಅವರೊಂದಿಗೆ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಸಹ ಇರುವುದರಿಂದ, ಸಂಪುಟ ವಿಸ್ತರಣೆ, ನಿಗಮ-ಮಂಡಳಿ ಅಧ್ಯಕ್ಷರ ನೇಮಕಕ್ಕೆ ಸಂಬಂಧಿಸಿದಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಚರ್ಚೆ ನಡೆಸಲಾಗಿದೆ. ಈ ವೇಳೆ ಜಾತಿವಾರು ಹಾಗೂ ಪ್ರಾದೇಶಿಕವಾರು ಹೆಚ್ಚುತ್ತಿರುವ ಒತ್ತಡಕ್ಕೆ ಸಂಬಂಧಿಸಿದಂತೆ ಸಿಎಂ, ಡಿಸಿಎಂ ಖರ್ಗೆ ಅವರಿಗೆ ಮಾಹಿತಿ ನೀಡಿದ್ದು, ಮುಂದಿನ ದಿನದಲ್ಲಿ ಈ ಬಗ್ಗೆ ಮತ್ತೊಂದು ಸುತ್ತಿನ ಸಭೆ ನಡೆಸಿ ತೀರ್ಮಾನ ಕೈಗೊಳ್ಳುವ ಭರವಸೆ ನೀಡಿದ್ದಾರೆ ಎನ್ನಲಾಗಿದೆ.

JSS ACADEMY OF HIGHER EDUCATION & RESEARCH (DEEMED TO BE UNIVERSITY) MYSURU
NAAC A++ Accredited
nirf Among Top 25 University in India
ADMISSIONS OPEN 2026-27
APPLY @ www.jssuni.edu.in | admissions@jssuni.edu.in | +91 99808 41859 +91 821-2548014/416

B.Sc (Allied & Healthcare Education)
- Anesthesia & Operation Theatre Technology
- Medical Laboratory Technology
- Renal Dialysis Technology
- Respiratory Therapy
- Cardiac Care Technology
- Perfusion Technology
- Emergency Medicine Technology
- Optometry
- Physician Assistant

MA/ M.Sc (Medical / Allied & Healthcare Education)
- Medical Microbiology
- Medical Biochemistry
- Medical Physiology
- Medical Anatomy
- Medical Pharmacology
- Medical Genetics and Counseling
- Clinical Psychology
- Clinical Embryology
- Clinical Research
- Respiratory Therapy
- Forensic Odontology
- Echocardiography
- Health Technologies and Data Sciences
- Epidemiology (Spatial epidemiology)
- MA Clinical Psychology
- Prof. Diploma in Clinical Psychology

School of Public Health
- Bachelor of Public Health (BPH)
- Masters in Public Health (MPH)
- Masters in Public Health in Biostatistics

DENTISTRY
- Diploma in Dental Mechatronics
- Dental Operating Room Assistant (DORA)

HEALTH SYSTEM MANAGEMENT STUDIES
- BBA Hospital & Health System Management (Hon's)
- MBA Hospital Administration
- MBA (HR/Finance/Marketing)

LIFE SCIENCES
- Microbiology
- Environmental Sciences
- Food, Nutrition & Dietetics
- Psychology
- Biochemistry
- Statistics & Data Analytics
- Artificial Intelligence & Data Science (Ooty Campus-Tamilnadu)

M.Sc (2 Years)
- Biochemistry
- Geoinformatics
- Microbiology
- Cognitive Neuroscience
- Environmental Sciences
- Molecular Biology
- Nano Science & Technology
- Nutrition & Dietetics
- Medical Statistics
- Bioinformatics
- Medical Physics
- Cosmetic Science
- Biotechnology
- Sports, Nutrition & Management
- Master of Library and Information Science (M.Lib & Info. Sci.)
- Clinical Psychology (Ooty Campus-Tamilnadu)

M.Sc (NEP) -1 Year
- Psychology
- Nutrition and Dietetics
- Biochemistry
- Microbiology
- Biotechnology
- Environmental Sciences

Diploma
- Tissue Culture
- Nutraceutical Technology
- Environment Health & Safety Management
- Industrial Safety

YOGA
- B.Sc Yoga
- M.Sc Yoga
- Yoga Teachers Course (YTC) 3 Months

JSS ACADEMY OF HIGHER EDUCATION & RESEARCH
Sri Shivarathreeshwara Nagara, Bannimantap, Mysuru - 570015 Karnataka, India

ಮೋದಿ ಭೇಟಿಯಾದ ಡಿಕೆಶಿ

ರಾಜ್ಯದ ಯೋಜನೆಗಳಿಗೆ ಸಹಕಾರ ನೀಡಲು ಮನವಿ

ಬೆಂಗಳೂರು: ನೀತಿ ಆಯೋಗದ ಸಭೆಯಲ್ಲಿ ಭಾಗವಹಿಸಿದ್ದ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಭೆಯ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿದ್ದಾರೆ.

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ದೆಹಲಿಗೆ ತೆರಳಿರುವ ಅವರು, ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ, ರಾಜ್ಯದ ವಿವಿಧ ಯೋಜನೆಗಳಿಗೆ ಸಹಕಾರ ನೀಡುವಂತೆ ಮನವಿ ಮಾಡಿದ್ದಾರೆ.

ಈ ಬಗ್ಗೆ ಪೋಸ್ಟ್ ಮಾಡಿರುವ ಅವರು, ಕರ್ನಾಟಕದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಇಂದು ಮೊದಲ ಬಾರಿಗೆ ದೆಹಲಿಯಲ್ಲಿ ನರೇಂದ್ರ ಮೋದಿ ಅವರನ್ನು ಭೇಟಿಯಾದೆ. ಈ ಸಂದರ್ಭದಲ್ಲಿ ಮೂಲ ಸೌಕರ್ಯ, ಹೂಡಿಕೆ, ನಗರ ಚಲನಶೀಲತೆ, ನೀರಾವರಿ, ನಾವೀನ್ಯತೆ ಮತ್ತು ನಮ್ಮ ಜನರ ಜೀವನದ ಮೇಲೆ ನೇರವಾಗಿ ಪರಿಣಾಮ ಬೀರುವ ಕಲ್ಯಾಣ ಉಪಕ್ರಮಗಳೂ ಸೇರಿದಂತೆ ಕರ್ನಾಟಕದ ಅಭಿವೃದ್ಧಿ ಆದ್ಯತೆಗಳ ಕುರಿತು ರಚನಾತ್ಮಕ ಚರ್ಚೆ ನಡೆಸಿದೆವು ಎಂದಿದ್ದಾರೆ.

ದೇಶದ ಬೆಳವಣಿಗೆಯಲ್ಲಿ ಕರ್ನಾಟಕ ಯಾವಾಗಲೂ ಪ್ರಮುಖ ಕೊಡುಗೆ ನೀಡಿದೆ. ಆ ಪಾತ್ರವನ್ನು ಮತ್ತಷ್ಟು ಬಲಪಡಿಸುವ ನಮ್ಮ ಬದ್ಧತೆಯನ್ನು ನಾನು ಪುನರುಚ್ಚರಿಸಿದೆ. ಈ ನಿಟ್ಟಿನಲ್ಲಿ ಅಭಿವೃದ್ಧಿಯನ್ನು ವೇಗಗೊಳಿಸಲು, ಹೆಚ್ಚಿನ ಅವಕಾಶಗಳನ್ನು ಆಕರ್ಷಿಸಲು ಮತ್ತು ಕರ್ನಾಟಕದ ಜನರ ಆಕಾಂಕ್ಷೆಗಳನ್ನು ಪೂರೈಸಲು ಸಹಕಾರಿ ಒಕ್ಕೂಟದ ಉತ್ಸಾಹದಲ್ಲಿ ಕೇಂದ್ರ ಸರಕಾರದೊಂದಿಗೆ ನಿಕಟವಾಗಿ ಕೆಲಸ ಮಾಡಲು ನಾನು ಎದುರು ನೋಡುತ್ತಿದ್ದೇನೆ. ಒಟ್ಟಾಗಿ, ನಾವು ಬಲವಾದ ಕರ್ನಾಟಕವನ್ನು ನಿರ್ಮಿಸಬಹುದು ಮತ್ತು ಬಲವಾದ ಭಾರತಕ್ಕೆ ಅರ್ಥಪೂರ್ಣ ಕೊಡುಗೆ ನೀಡಬಹುದು ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸಮಗ್ರ ಅಭಿವೃದ್ಧಿಗೆ ಸಹಯೋಗ ಅಗತ್ಯ: ಇದಕ್ಕೂ ಮೊದಲು ನೀತಿ ಆಯೋಗದ ಸಭೆಯಲ್ಲಿ ಮಾತನಾಡಿದ ಸಿಎಂ ಡಿಕೆಶಿ, ರಾಜ್ಯಗಳು ಕೇವಲ ಅನುಷ್ಠಾನ ಸಂಸ್ಥೆಗಳಲ್ಲ. ಬದಲಾಗಿ, ನಾವೀನ್ಯತೆ ಮತ್ತು ಬೆಳವಣಿಗೆಯ ಕೇಂದ್ರಗಳಾಗಿವೆ. ಸಹಕಾರಿ ಒಕ್ಕೂಟ, ಸಹಯೋಗದ ಆಡಳಿತ ಮತ್ತು ಸಾಮೂಹಿಕ ರಾಷ್ಟ್ರೀಯ ಪ್ರಯತ್ನದ ಮೂಲಕ ಮಾತ್ರವೇ ಸಮಗ್ರ ಮಾನವ ಅಭಿವೃದ್ಧಿಯ ದೃಷ್ಟಿಕೋನವನ್ನು ಸಾಕಾರಗೊಳಿಸಬಹುದು. ಅಭಿವೃದ್ಧಿ ಎಂಬುದು ಅಂತಿಮವಾಗಿ ಜನಜೀವನದ ಗುಣಮಟ್ಟವನ್ನು ಸುಧಾರಿಸಬೇಕು ಎಂಬುದು ಕರ್ನಾಟಕದ ಆಡಳಿತದ ತತ್ವಶಾಸ್ತ್ರ. ರಾಜ್ಯದ ಗ್ಯಾರಂಟಿ ಯೋಜನೆಯ ಮಾದರಿಯನ್ನು ಅನೇಕ ರಾಜ್ಯಗಳು ಜಾರಿಗೆ ತಂದಿವೆ. ಏಕೆಂದರೆ, ಈ ಯೋಜನೆಗಳು ಮಾನವ ಬಂಡವಾಳದ ಗುಣಮಟ್ಟವನ್ನು ದೊಡ್ಡ ಪ್ರಮಾಣದಲ್ಲಿ ಸುಧಾರಿಸಿವೆ ಎಂದು ಹೇಳಿದರು.

ವಿತ್ತ ಸಚಿವೆ ನಿರ್ಮಲಾ ಭೇಟಿ

ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿಯ ಬಳಿಕ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾಗಿ ಚರ್ಚಿಸಿದರು. ಕೇಂದ್ರದಿಂದ ರಾಜ್ಯಕ್ಕೆ ಬರಬೇಕಿರುವ ಅನುದಾನಗಳಿಗೆ ಸಂಬಂಧಿಸಿದಂತೆ ಜ್ಞಾಪಕ ಪತ್ರ ಸಲ್ಲಿಸಿ ಸಮಾಲೋಚನೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಸಚಿವ ಕೃಷ್ಣ ಬೈರೇಗೌಡ, ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಇದ್ದರು.

ಸಮಾಚಾರ ಸಣ್ಣದಲ್ಲ

ವಿದ್ಯುತ್ ತಂತಿ ತಗುಲಿ ರೈತ ಸಾವು



ಯಮಕನಮರಡಿ: ಸಮೀಪದ ಚಿಕಾಲಗುಡ್ಡ ಗ್ರಾಮದಲ್ಲಿ ನೀರೆತ್ತು ಪಂಪ ಪ್ರಾರಂಭಿಸಲು ಕಬ್ಬಿನ ಸಾಲುಗಳ ಮಧ್ಯೆದಲ್ಲಿ ನಡೆದುಕೊಂಡು ಹೊರಟಾಗ ಹೊಲದಲ್ಲಿ ಕಂಬದ ವಿದ್ಯುತ್ ತಂತಿ ಹರಿದು ಬಿದ್ದಿತ್ತು ತಂತಿ ಕಣ್ಣಿಗೆ ಕಾಣದೆ ತಗುಲಿ ರೈತನೋರ್ವ ಮೃತಪಟ್ಟ ಘಟನೆ ಮಂಗಳವಾರ ದಿ, 9 ರಂದು ಮುಂಜಾನೆ ನಡೆದಿದೆ, ಈ ಘಟನೆಯಲ್ಲಿ ಮೃತರಾದ ರೈತನನ್ನು ಚಿಕಾಲಗುಡ್ಡ ಗ್ರಾಮದ ಮಲ್ಲಯ್ಯಾ ಈಶ್ವರಯ್ಯಾ ಹಿರೇಮಠ (69) ಎಂದು ಗುರುತಿಸಲಾಗಿದ್ದು ಪ್ರಕರಣ ಯಮಕನಮರಡಿ ಠಾಣೆಯಲ್ಲಿ ದಾಖಲಾಗಿದೆ.

ಸಂಘದ ಕಾರ್ಯಕಾರಿ ಸಮಿತಿಗೆ 19 ಶಿಕ್ಷಕರ ಆಯ್ಕೆ

ಹುಕ್ಕೇರಿ: ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯಕಾರಿ ಸಮಿತಿಗೆ 19 ಜನ ಶಿಕ್ಷಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಾಮಾನ್ಯ ಕ್ಷೇತ್ರದಿಂದ ಎಸ್.ಆರ್.ಖಾನಾಪೂರೆ, ಬಿ.ಬಿ. ಅಂಗಡಿ, ಬಿ.ಎಂ.ನಾಯಿಕ, ಕೆ.ಕೆ.ಪಾಟೀಲ, ಎಸ್.ಎನ್. ಸುತ್ತಾರ, ಆರ್.ಆರ್.ತಳವಾರ, ಎಸ್.ಎ. ಮಾವಿನಕಟ್ಟಿ, ವಿ.ಪಿ.ಮಾಳಿ, ವಿ.ಕೆ. ಬಡಿಗೇರ, ಕೆ.ಬಿ. ವಾಘಾರಾಳಕರ, ಪಿ.ಜಿ. ಹೊನಗುಡಿ, ಎನ್.ಎಸ್. ದೇವರಮನಿ ಆಯ್ಕೆಯಾಗಿದ್ದಾರೆ. ಮಹಿಳಾ ಪ್ರತಿನಿಧಿಗಳಾಗಿ ಎಸ್.ವಿ. ಕುಂಬಾರ, ಎಸ್.ಜಿ. ನಾವಿ, ಜಿ.ಎಸ್. ಹಟ್ಟಿ, ಆರ್. ಎಸ್. ಭಂಡಾರಿ, ಯು.ಎನ್. ಕಂಬಳಿ, ಎಸ್.ಎಮ್. ಜಮ್ದಾರ ಆಯ್ಕೆ ಯಾಗಿದ್ದಾರೆ. ಕೆ.ಕೆ. ಪಾಟೀಲ ಅಧ್ಯಕ್ಷರಾಗಿ, ಎಸ್.ಎನ್. ಸುತ್ತಾರ ಪ್ರಧಾನ ಕಾರ್ಯದರ್ಶಿಯಾಗಿ, ಎಸ್.ಎ. ಮಾವಿನಕಟ್ಟಿಉಪಾಧ್ಯಕ್ಷರಾಗಿ, ವೈ.ಪಿ.ಮಾಳಿ ಖಜಾಂಚಿಯಾಗಿ, ಎಸ್.ಜಿ. ನಾವಿ ಮಹಿಳಾ ಕ್ಷೇತ್ರದ ಉಪಾಧ್ಯಕ್ಷರಾಗಿ, ಆರ್.ಆರ್. ತಳವಾರ ಸಂಘಟನಾ ಕಾರ್ಯದರ್ಶಿಯಾಗಿ, ಜಿ.ಎಸ್. ಹಟ್ಟಿ ಮಹಿಳಾ ಸಂಘಟನಾ ಕಾರ್ಯದರ್ಶಿಯಾಗಿ, ಕೆ.ವಿ. ವಾಘಾರಾಳಕರ ಸಹಕಾರ್ಯ ದರ್ಶಿಯಾಗಿ, ಎಸ್. ಎಮ್.ಜಮ್ದಾರ ಮಹಿಳಾ ಸಹಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಎನ್.ಬಿ. ತೇರದಾಳ ತಿಳಿಸಿದ್ದಾರೆ. ಸಹಾಯಕ ಚುನಾವಣಾಧಿಕಾರಿಯಾಗಿ ಎಸ್.ಎಮ್.ಹುಲ್ಲೋಳಿ ಕಾರ್ಯನಿರ್ವಹಿಸಿದರು. ಜಿಲ್ಲಾ ಪದಾಧಿಕಾರಿಗಳಾದ ಎ.ಬಿ. ನಾಯಿಕ, ಎಸ್.ಎಸ್. ಹಿರೇಮಠ, ಎಮ್.ಎಸ್. ನಂದಿ, ಎಮ್.ಎನ್. ಮಗದುಮ್ಮ, ಆರ್.ಎಸ್. ಅಂಬರಿ, ಬಿ.ಡಿ. ನರಸನ್ನವರ, ಜಿ.ವಿ. ದಳವಾಯಿ, ಎಲ್.ಎಸ್. ನಾಶಿಪುಡಿ ಅವರು ಅವಿರೋಧ ಆಯ್ಕೆಗೆ ಶ್ರಮಿಸಿದ್ದಾರೆ.

ಟಿಪ್ಪರ್ ಹರಿದು ವೃದ್ಧ ಸ್ಥಳದಲ್ಲೇ ಸಾವು

ಅಥಣಿ: ಪಟ್ಟಣದ ಅಂಬೇಡ್ಕರ್ ವೃತ್ತದ ಬಳಿ ರಸ್ತೆ ದಾಟುತ್ತಿದ್ದ ವ್ಯಕ್ತಿಯ ಮೇಲೆ ಶರವೇಗದಲ್ಲಿ ಬಂದ ಟಿಪ್ಪರ ಹರಿದು ವೃದ್ಧ ಸ್ಥಳದಲ್ಲೆ ಸಾವಿಗಿಡಾದ ಘಟನೆ ಬುಧವಾರ ಮಧ್ಯಾಹ್ನ ನಡೆದಿದೆ. ಈ ಘಟನೆಯಲ್ಲಿ ಮೃತಪಟ್ಟ ವೃದ್ಧ ಪಟ್ಟಣದ ಶಿವಯೋಗಿ ನಗರದ ಮಹಾಲಿಂಗಯ್ಯಾ ಭದ್ರಯ್ಯಾ ಪುರಣಿಕಮಠ (85) ಎಂದು ಗುರುತಿಸಲಾಗಿದೆ. ಟಿಪ್ಪರ ಚಾಲಕನ ಅಜಾಗೂರುಕತೆ ಹಾಗೂ ಅತೀ ವೇಗವಾಗಿ ಸಾರ್ವಜನಿಕ ರಸ್ತೆ ಮೇಲೆ ವಾಹನ ಓಡಿಸಿಕೊಂಡು ಬಂದು ರಸ್ತೆ ದಾಟುವ ವೃದ್ದನ ಮೇಲೆ ನೇರವಾಗಿ ಡಿಕ್ಕಿ ಹೊಡೆದಿದ್ದಾನೆ. ವೃದ್ಧನ ತಲೆಯ ಮೇಲೆ ವಾಹನ ಹರಿದು ತೀವ್ರ ರಕ್ತಸ್ರಾವವಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ. ಘಟನೆಯ ಸ್ಥಳಕ್ಕೆ ಅಥಣಿ ಪೊಲೀಸ್ ರು ಬೇಟಿ ನೀಡಿ ಪರಿಶೀಲನೆ ನಡೆಸಿ ಮೃತಪಟ್ಟ ವೃದ್ದನ ಶವವನ್ನು ಮರಣೋತ್ತರ ಪರೀಕ್ಷೆ ರವಾನಿಸಲಾಗಿದೆ. ಘಟನಾ ಸ್ಥಳದಲ್ಲೆ ಟಿಪ್ಪರ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ. ಘಟನೆ ಕುರಿತು ಅಥಣಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿರಾಮ
ಪ್ರತಿ ಭಾನುವಾರ

ಅಗಲಿದ ಜೀವ

ಸತ್ತೆಪ್ಪಾ ಕಂಬಾರ

ಮುಗಳಖೋಡ: ಪಟ್ಟಣದ ಲಿಂಗಾಯತ ಪಂಚಮಸಾಲಿ ಸಮಾಜದ ಹಿರಿಯ ಸತ್ತೆಪ್ಪಾ ರಾಯಪ್ಪ ಕಂಬಾರ (86) ಗುರುವಾರ ಅನಾರೋಗ್ಯದಿಂದ ನಿಧನರಾದರು. ಮೃತರರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಒಬ್ಬ ಪುತ್ರಿ ಹಾಗೂ ಅಪಾರ ಬಂದು ಬಳಗವನ್ನು ಅಗಲಿದ್ದಾರೆ.

{ಈಶ್ವರ ಖಂಡ್ರೆ} ಸಚಿವ

ನರೇಗಾ ಬದಲು ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಜು.1ರಿಂದ ಜಾರಿ ಮಾಡುತ್ತಿರುವ ವಿಬಿ ಜಿ ರಾಮ್ ಜಿಯಲ್ಲಿ ಕೇಂದ್ರ ಸರಕಾರ 60:40 ಅನುಪಾತದಡಿ ಹಣ ಒದಗಿಸಲಿದೆ. ಇದು ರಾಜ್ಯ ಸರಕಾರಗಳಿಗೆ ಹೆಚ್ಚಿನ ಹೊರೆಯಾಗಲಿದೆ. ಹೀಗಾಗಿ ಈ ಅನುಪಾತವನ್ನು ಹಿಂದೆ ಇದ್ದಂತೆ 90:10 ಅನುಪಾತದಲ್ಲಿ ಮುಂದುವರಿಸಬೇಕು ಅಥವಾ ಕನಿಷ್ಠ 80:20ಕ್ಕಾದರೂ ಹೆಚ್ಚಿಸಬೇಕು.

ಪ್ರತಿದಿನ ಹೆಚ್ಚುತ್ತಿದೆ ಕಸದ ರಾಶಿ | ಸಾಂಕ್ರಾಮಿಕ ರೋಗ ಹರಡುವ ಭೀತಿ | ಅಧಿಕಾರಿಗಳ ವಿರುದ್ಧ ಸಾರ್ವಜನಿಕರ ಆಕ್ರೋಶ

ಅವ್ಯವಸ್ಥೆಯ ಆಗರ ಹುಕ್ಕೇರಿ ಬಸ್ ನಿಲ್ದಾಣ

ವಿಶ್ವವಾಣಿ ಸುದ್ದಿಮನೆ ಬೆಳಗಾವಿ

ಜಿಲ್ಲೆಯ ಹುಕ್ಕೇರಿ ತಾಲೂಕಿನ ಪ್ರಮುಖ ಸಂಪರ್ಕ ಕೇಂದ್ರವಾಗಿರುವ ಹುಕ್ಕೇರಿ ಬಸ್ ನಿಲ್ದಾಣವು ಈಗ ಕಸದ ತೊಟ್ಟಿಯಂತಾಗಿದೆ. ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಕಸದ ರಾಶಿ ಮತ್ತು ನಿರ್ಲಕ್ಷ್ಯದ ವಿರುದ್ಧ ಪ್ರಯಾಣಿಕರು ಹಾಗೂ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೆಳಗಾವಿ, ಚಿಕ್ಕೋಡಿ, ಸಂಕೇಶ್ವರ, ಗೋಕಾಕ, ಸೇರಿದಂತೆ ವಿವಿಧ ಕಡೆಗೆ ಹೋಗುವ ನೂರಾರು ಬಸ್ಗಳು ಇಲ್ಲಿಂದ ಸಂಚರಿಸುತ್ತವೆ. ದಿನಕ್ಕೆ ಸಾವಿರಾರು ಪ್ರಯಾಣಿಕರು ಸಂಚರಿಸುವ ಈ ನಿಲ್ದಾಣ ಮತ್ತು ಹಿಂಬದಿಯ ಖಾಲಿ ಜಾಗದಲ್ಲಿ ಪ್ಲಾಸ್ಟಿಕ್ ಕವರ್, ನೀರಿನ ಬಾಟಲಿ, ಆಹಾರ ತ್ಯಾಜ್ಯ, ಗಿಡದ ಎಲೆಗಳು ರಾಶಿ ಬಿದ್ದಿವೆ. ಪಕ್ಕದ ಶೌಚಾಲಯದ ಸಮೀಪವೂ ಕಸ ತುಂಬಿ ಹರಿಯುತ್ತಿದ್ದು, ದುರ್ವಾಸನೆ ಬೀರುತ್ತಿದೆ. ಇದರಿಂದ ಸಾಂಕ್ರಾಮಿಕ ರೋಗ ಹರಡುವ ಭೀತಿ ಎದುರಾಗಿದೆ.

ಹುಕ್ಕೇರಿ ಬಸ್ ನಿಲ್ದಾಣದ ಪಕ್ಕದಲ್ಲಿರುವ ಹೊಟೇಲ್ ಗಳಲ್ಲಿ ಒಂದು ಕಪ್ ಚಹಾ ಕುಡಿಯಲು ಜನ ಹಿಂದೇಟು ಹಾಕುವ ಪರಿಸ್ಥಿತಿ ಇದೆ. ಬಸ್ ನಿಲ್ದಾಣದ ಅವ್ಯವಸ್ಥೆಗೆ ಎಲ್ಲೆಡೆ ಗಬ್ಬು ಬಾಸನೆ ಬರುತ್ತಿದ್ದು ಜನರಿಗೆ ಕಿರಿಕಿರಿ ಉಂಟುಮಾಡಿದೆ. ಇನ್ನೂ ಬಸ್ ನಿಲ್ದಾಣ ಸರಿಯಾಗಿ ನಿರ್ವಹಣೆ ಮಾಡದ ಅಧಿಕಾರಿಗಳ ವಿರುದ್ಧ ಸ್ಥಳೀಯರು ಆಕ್ರೋಶ ಹೊರಹಾಕುತ್ತಿದ್ದಾರೆ.

ನಿದ್ರೆಗೆ ಜಾರಿದ ಅಧಿಕಾರಿಗಳು : ಹುಕ್ಕೇರಿ ಬಸ್ ನಿಲ್ದಾಣದಲ್ಲಿ ಇಷ್ಟೆಲ್ಲಾ ಅವಾಂತರ ಇದ್ದರೂ ಅಧಿಕಾರಿಗಳು ಮಾತ್ರ ತಮಗೆ ಸಂಬಂಧ ಇಲ್ಲದಂತೆ ವರ್ತನೆ ಮಾಡುತ್ತಿದ್ದಾರೆ. ಇದರಿಂದ ಪ್ರತಿನಿತ್ಯ ಬರುವ ಸಾವಿರಾರು ಸಂಖ್ಯೆಯ ಪ್ರಯಾಣಿಕರಿಗೆ ಸಂಕಷ್ಟ ತಂದಿದ್ದು ಪ್ರತಿದಿನ ಹಿಡಿಶಾಪ ಹಾಕುತ್ತಿದ್ದಾರೆ.

ಹುಕ್ಕೇರಿ ಬಸ್ ನಿಲ್ದಾಣದಲ್ಲಿ ನಿರುಪಯುಕ್ತವಾದ ಶೌಚಾಲಯ

> ಬೆಳಿಗ್ಗೆ ಶಾಲಾ-ಕಾಲೇಜಿಗೆ ವಿದ್ಯಾರ್ಥಿಗಳು ಹಾಗು ಜನಸಾಮಾನ್ಯರು ಬಸ್ ಗಾಗಿ ಗಂಟೆಗಟ್ಟಲೆ ಕಾಯಬೇಕಾಗುತ್ತದೆ. ಆದರೆ ಇಲ್ಲಿನ ಕೆಟ್ಟ ವಾಸನೆಗೆ ನಿಲ್ಲಲು ಆಗದ ಪರಿಸ್ಥಿತಿ ಇದೆ. ಅನೇಕರಿಗೆ ಆರೋಗ್ಯವೂ ಹದಗೆಟ್ಟಿದೆ.
>
> -ಶ್ವೇತಾ, ವಿದ್ಯಾರ್ಥಿನಿ

ಅರ್ಧಕ್ಕೆ ನಿಂತ ವ್ಯಾಪಾರ ಮಳಿಗೆಗಳು

> ಬಸ್ ನಿಲ್ದಾಣದ ಎದುರು ಗೋಡೆ, ಖಾಲಿ ಸ್ಥಳದ ಸುತ್ತಮುತ್ತ ಪ್ರಯಾಣೀಕರು ಮೂತ್ರ ವಿರ್ಸಜನೆ ಮಾಡುತ್ತಿದ್ದರು, ಇದರಿಂದ ಗಬ್ಬೆದ್ದು ದುರ್ವಾಸನೆ ಬೀರುತ್ತಿತ್ತು. ಖಾಲಿ ಸ್ಥಳದಲ್ಲಿ ಕೆ.ಎಸ್.ಆರ್.ಟಿ ಸಾರಿಗೆ ಸಂಸ್ಥೆ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸುತ್ತಿದ್ದು ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಿದರೆ ಜನರಿಗೆ ಹಾಗೂ ಸಾರಿಗೆ ಇಲಾಖೆಗೆ ಅನುಕೂಲ.
>
> -ಬಸವರಾಜ ಪಾಟೀಲ, ಸ್ಥಳೀಯ ನಿವಾಸಿ

ಸಾರ್ಥಕ ಸೇವೆ ಸಲ್ಲಿಸಿದ ಶಿಕ್ಷಕ ಶ್ರೀಕಾಂತ ಹಂಚಿನಾಳ

ಗೋಕಾಕ: ಸ್ವಾರ್ಥವಿಲ್ಲದೆ ಸಾರ್ಥಕ ಸೇವೆ ಮಾಡಿದ ಹಂಚಿನಾಳ ಶಿಕ್ಷಕರು ಶಿಕ್ಷಣ ಇಲಾಖೆಯಲ್ಲಿ ಕಳೆದ 30 ವರ್ಷಗಳ ಕಾಲ ಸುದೀರ್ಘ ಸೇವೆ ಮಾಡಿ ನಿವೃತ್ತ ಹೊಂದಿರುವ ಅವರಿಗೆ ನಿವೃತ್ತ ಜೀವನ ಸುಖಮಯವಾಗಲಿ ಎಂದು ಮುರುಘರಾಜೇಂದ್ರ ಸ್ವಾಮೀಜಿ ಅವರು ಶುಭ ಹಾರೈಸಿದರು.

ಅವರು, ತಾಲೂಕಿನ ಶಿಂದಿಕುರಬೇಟ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಹೆಣ್ಣು ಮಕ್ಕಳ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಶ್ರೀಕಾಂತ ಹಂಚಿನಾಳ ಅವರ ನಿವೃತ್ತ ಪ್ರಯುಕ್ತ ಬೀಳ್ಕೊಡುಗೆ ಸಮಾರಂಭ ಹಾಗೂ ಶಾಲೆಗೆ ರಾಜ್ಯ ಮಟ್ಟದ ಪ್ರಶಸ್ತಿ ಪಡೆದ ಪ್ರಯುಕ್ತ ಅಭಿನಂದನಾ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು.

ತಾಲೂಕಿನ ನಲ್ಲಾನಟ್ಟಿ, ಘಟಪ್ರಭಾ, ಶಿಂದಿಕುರಬೇಟ ಗ್ರಾಮಗಳಲ್ಲಿ ಶಿಕ್ಷಕರಾಗಿ, ಪ್ರಧಾನ ಗುರುಗಳಾಗಿ ಸೇವೆ ಸಲ್ಲಿಸಿದ ಅವರು ಗ್ರಾಮಸ್ಥರ, ಸಂಘ ಸಂಸ್ಥೆಗಳ ಪದಾಧಿಕಾರಿಗಳ ಮತ್ತು ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದರೆ, ಜನರ ಮೆಚ್ಚುಗೆಯನ್ನು ಗಳಿಸಿದ್ದಾರಲ್ಲದೇ ನಮ್ಮ ಶ್ರೀಮಠದ ಭಕ್ತರಾಗಿದ್ದಾರೆ ಎಂದು ಹೇಳಿದರು. ಮೂಡಲಗಿ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಜಿ.ಮಾವಿನಗಿಡದ ಮಾತನಾಡಿ ಶಿಕ್ಷಕರಾಗಿ ಮತ್ತು ಶಿಕ್ಷಕರ ಸಂಘ ದಲ್ಲಿ ಸಕ್ರೀಯವಾಗಿ ಸೇವೆ ಮಾಡಿದ್ದಾರೆ. ಎಲ್ಲರೊಂದಿಗೆ ನಗುನಗುತ್ತಲೇ ಸದಾ ಇರುವ ಶ್ರೀಕಾಂತ ಹಂಚಿನಾಳ ಸರ್‌ಅವರು ದಕ್ಷ ಮತ್ತು ಪ್ರಾಮಾಣಿಕ ಶಿಕ್ಷಕರಾಗಿದ್ದರು ಎಂದು ಹೇಳಿದರು. ಶಾಲೆಯ ಪ್ರಭಾರ ಪ್ರಧಾನ ಗುರು ಆರ್.ಎಚ್.ತುಳಸಿಗೇರಿ ಮಾತನಾಡಿದರು. ವೇದಿಕೆ ಮೇಲೆ ಪ್ರಭಾ ಶುಗರ್ಸ್ ನಿರ್ದೇಶಕ ಆರೀಫ್ ಪೀರಜಾದೆ, ಎಸ್ .ಡಿ.ಎಂ.ಸಿ ಅಧ್ಯಕ್ಷರುಗಳಾದ ದಯಾನಂದ ಕಳಸನ್ನವರ, ಶ್ರೀಧರ ಕಂಬಾರ, ಸಿಆರ್ಪಿ ಸುಭಾಸ ಪಾಟೀಲ, ಎಸ್ ಬಿ ಬಡಿಗೇರ, ಸಿ ಎಂ ಬಾವಿಮನಿ, ಜಿ ಎಸ್ ಗೋಡೇರ, ಬಿ ಎಸ್ ಮುಗಳಿ, ಕಿರಣ ಕೋಳಿ, ಗುರು ಕಡೇಲಿ, ನಿಂಗಪ್ಪ ಬಂಬಲಾಡಿ, ಜ್ಯೋತೆಪ್ಪ ಟಬಂತಿ, ಮಾರುತಿ ಜಾಧವ್, ಸಿದ್ದಾರೂಢ ಕಂಬಾರ, ಪಿಡಿಒ ಸಾಯಿಶ್ವರಿ ಮೆಣಸಿನಕಾಯಿ, ದುರುಗಪ್ಪ ಬಂಡಿವಡ್ಡರ, ಶೇಖರ್‌ಮಾನೆ, ಮಹಾಲಿಂಗಪ್ಪ ತಳಗೇರಿ, ಶಂಕರ ಕಟ್ಟಿಮನಿ, ಅಶೋಕ ಮೇತ್ರಿ, ನಾರಾಯಣ ಕದಮ, ಬಸವರಾಜ ಗೋಕಾಕ, ಎಡವೀನ್ ಪರಸನ್ನವರ, ಎಸ್ ಎಂ ದಬಾಡಿ, ಆಸೀಫ್ ಪಟಾಣ, ವಿಠ್ಠಲ ಕರೋಶಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಎ.ಎಸ್. ಸವದತ್ತಿ ಸ್ವಾಗತಿಸಿದರು. ಶ್ರೀಯಾ ಬಂಬಲಾಡಿ ನಿರೂಪಿಸಿದರು. ಪೂಜಾ ಮಲ್ಲಾಪುರ ವಂದಿಸಿದರು.

ತಾಲೂಕಿನ ಶಿಂದಿಕುರಬೇಟ ಗ್ರಾಮದಲ್ಲಿ ಶ್ರೀಕಾಂತ ಹಂಚಿನಾಳ ಅವರ ನಿವೃತ್ತ ಪ್ರಯುಕ್ತ ಬೀಳ್ಕೊಡುಗೆ ಸಮಾರಂಭವನ್ನು ಮುರುಘರಾಜೇಂದ್ರ ಸ್ವಾಮೀಜಿ ಅವರು ಉದ್ಘಾಟಿಸಿದರು.

ಮತದಾರರ ಪಟ್ಟಿ ಪರಿಷ್ಕರಣೆಗೆ ಸಹಕರಿಸಿ: ತಹಸೀಲ್ದಾರ್

ರಾಮದುರ್ಗ: ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಮೂಲಕ ಮತದಾರರ ಪಟ್ಟಿಗಳ ಪರಿಷ್ಕರಣೆಯನ್ನು ಚುನಾವಣಾ ಆಯೋಗವು ಜೂನ್ 30 ರಿಂದ ಜುಲೈ 29ರ ವರೆಗೆ ರಾಜ್ಯದಾದ್ಯಂತ ಹಮ್ಮಿಕೊಂಡಿದ್ದು, ತಾಲೂಕಿನ ನಾಗರಿಕರು ಪರಿಷ್ಕರಣೆ ಕಾರ್ಯಕ್ಕೆ ಸಹಕಾರ ನೀಡಬೇಕೆಂದು ಸಹಾಯಕ ಚುನಾವಣಾ ಅಧಿಕಾರಿ ಹಾಗೂ ತಹಶೀಲ್ದಾರ್ ಪ್ರಕಾಶ ಗಾಯಕವಾಡ ಹೇಳಿದರು.

ತಾಲೂಕು ಆಡಳಿತ ಸೌಧದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಸ್‌ಐಆರ್‌ನಿಂದ ಸಾರ್ವಜನಿಕರು ಆತಂಕ ಪಡುವ ಅಗತ್ಯವಿಲ್ಲ. ಈ ವೇಳೆ ಬೂತ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಿದ್ದಾರೆ ಎಂದು ಹೇಳಿದರು.

ತಾಲೂಕಿನಲ್ಲಿ 251 ಮತಗಟ್ಟೆಗಳಿದ್ದು, ಸುಮಾರು 2.11 ಲಕ್ಷಕ್ಕೂ ಅಧಿಕ ಮತದಾರರಿದ್ದಾರೆ. ಬೂತ್ ಮಟ್ಟದ ಅಧಿಕಾರಿಗಳೊಂದಿಗೆ ಈಗಾಗಲೇ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಭೆ ನಡೆಸಲಾಗಿದ್ದು, ಬಿಎಲ್‌ಒಗಳು ಪ್ರತಿ ಮನೆ ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಕೊಡಲಾದ ಸಕ್ರಿಯಗೊಳಿಸುವಿಕೆ ಫಾರ್ಮನ್ನು ಭರ್ತಿ ಮಾಡಿ ಕಡ್ಡಾಯವಾಗಿ ಬೂತ್ಮಟ್ಟದ ಅಧಿಕಾರಿಗಳ ಕೈಗೆ ಕೊಟ್ಟು, ಸ್ವೀಕೃತಿಯನ್ನು ಪಡೆದುಕೊಳ್ಳಬೇಕೆಂದು ಹೇಳಿದರು.

ಆಗಸ್ಟ್ 5 ರಂದು ಕರಡು ಮತದಾರ ಪಟ್ಟಿ ಸಿದ್ದಗೊಳಿಸಲು ಅಂತಿಮ ದಿನವಾಗಿದ್ದು, ಮತದಾರರ ಹೆಸರು ಸೇರ್ಪಡೆ, ಹೆಸರು ತೆಗೆಯುವಿಕೆ ಹಾಗೂ ವಿಳಾಸ ಬದಲಾವಣೆಗೆ ಅವಕಾಶ ಕಲ್ಪಿಸಲಾಗಿದೆ. ಮತಗಟ್ಟೆಯಲ್ಲಿ 1200ಕ್ಕೂ ಅಧಿಕ ಮತದಾರರಿದ್ದಲ್ಲಿ ಹೆಚ್ಚುವರಿ ಮತಗಟ್ಟೆ ತೆರೆಯಲು ಅವಕಾಶವಿದೆ. ಸೆಪ್ಟಂಬರ್7 ರಂದು ಅಂತಿಮ ಮತದಾರರ ಪಟ್ಟಿಯನ್ನು ಸಿದ್ದಪಡಿಸಲಾಗುವುದು ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡ ಜಿ.ಬಿ. ರಂಗನಗೌಡ್ರ, ಕಾರ್ಮಿಕ ಮುಖಂಡ ನಾಗಪ್ಪ ಸಂಗೊಳ್ಳಿ, ಚುನಾವಣಾ ವಿಷಯ ನಿರ್ವಾಹಕ ಬಸವರಾಜ ಕುಂಬಾರ ಸೇರಿದಂತೆ ಮಾಧ್ಯಮ ಮಿತ್ರರು ಇದ್ದರು.

ರಾಮದುರ್ಗದ ತಾಲೂಕು ಆಡಳಿತ ಸೌಧದಲ್ಲಿ ತಹಸೀಲ್ದಾರ್ ಪ್ರಕಾಶ ಗಾಯಕವಾಡ ಸುದ್ದಿಗಾರರೊಂದಿಗೆ ಮಾತನಾಡಿದರು.

ಮಳೆಯಿಂದ ಅಪಾರ ಹಾನಿ: ಪರಿಹಾರ ಒದಗಿಸಲು ಆಗ್ರಹ

ಬೈಲಹೊಂಗಲ: ಈಚೆಗೆ ಬೈಲಹೊಂಗಲ ನಗರದಲ್ಲಿ ಸುರಿದ ಭಾರೀ ಮಳೆಯಿಂದ ಮನೆಗಳು ಕುಸಿದು ಬೀಳುವುದು, ಅಂಗಡಿ-ಮುಂಗಟ್ಟುಗಳಿಗೆ ನೀರು ನುಗ್ಗುವುದು ಸೇರಿದಂತೆ ಅಪಾರ ಪ್ರಮಾಣದ ಆಸ್ತಿ-ಪಾಸ್ತಿಗಳಿಗೆ ಹಾನಿಯಾಗಿದ್ದು, ಸಂಕಷ್ಟಕ್ಕೆ ಸಿಲುಕಿರುವ ಸಂತ್ರಸ್ತರ ನೆರವಿಗೆ ಮಾಜಿ ಶಾಸಕ ಡಾ. ವಿಶ್ವನಾಥ ಪಾಟೀಲ ಧಾವಿಸಿದರು.

ನಗರದ ವಿವಿಧ ವಾರ್ಡ್‌ಗಳು ಹಾಗೂ ಮಳೆ ಹಾನಿಗೊಳಗಾದ ಪ್ರದೇಶಗಳಿಗೆ ಗುರುವಾರ ಭೇಟಿ ನೀಡಿದ ಅವರು, ಹಾನಿಗೊಳಗಾದ ಮನೆಗಳು, ಅಂಗಡಿಗಳು ಹಾಗೂ ವಾಣಿಜ್ಯ ಮಳಿಗೆಗಳನ್ನು ಪರಿಶೀಲಿಸಿ ಪರಿಸ್ಥಿತಿಯ ಅವಲೋಕನ ನಡೆಸಿದರು. ಮಳೆಯಿಂದ ಜೀವನೋಪಾಯ ಕಳೆದುಕೊಂಡಿರುವ ಕುಟುಂಬಗಳೊಂದಿಗೆ ಮಾತುಕತೆ ನಡೆಸಿದ ಅವರು, ಅವರ ಸಮಸ್ಯೆಗಳು ಹಾಗೂ ಸಂಕಷ್ಟಗಳನ್ನು ಆಲಿಸಿ ಧೈರ್ಯ ತುಂಬಿದರು.

ಈ ಸಂದರ್ಭದಲ್ಲಿ ಮಾತನಾಡಿದ ಡಾ. ವಿಶ್ವನಾಥ ಪಾಟೀಲ, ''ಜನಪ್ರತಿನಿಧಿಗಳು ಕೇವಲ ಸುಖದ ಸಮಯದಲ್ಲಿ ಮಾತ್ರವಲ್ಲ, ಜನರು ಸಂಕಷ್ಟಕ್ಕೆ ಸಿಲುಕಿದ ಸಂದರ್ಭದಲ್ಲಿಯೂ ಅವರೊಂದಿಗೆ ನಿಲ್ಲಬೇಕು. ಭಾರೀ ಮಳೆಯಿಂದ ಸಾಕಷ್ಟು ಕುಟುಂಬಗಳು ತೊಂದರೆ ಅನುಭವಿಸುತ್ತಿದ್ದು, ಅವರಿಗೆ ಅಗತ್ಯ ಪರಿಹಾರ ಮತ್ತು ನೆರವು ದೊರಕುವಂತೆ ಸರಕಾರ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಲಾಗುವುದು. ಹಾನಿಗೊಳಗಾದವರಿಗೆ ಶೀಘ್ರ ಪರಿಹಾರ ದೊರಕುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಒತ್ತಾಯಿಸಲಾಗುವುದು'' ಎಂದು ಹೇಳಿದರು.

ಮಳೆ ಹಾನಿಯಿಂದ ಮನೆ ಕಳೆದುಕೊಂಡಿರುವ ಕುಟುಂಬಗಳಿಗೆ ತಾತ್ಕಾಲಿಕ ಆಶ್ರಯ, ಆಹಾರ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತೆ ಅಧಿಕಾರಿಗಳಿಗೆ ಮನವಿ ಮಾಡಲಾಗುವುದು ಎಂದು ಅವರು ತಿಳಿಸಿದರು. ಅಲ್ಲದೆ, ಹಾನಿಯ ಸಂಪೂರ್ಣ ಸಮೀಕ್ಷೆ ನಡೆಸಿ ಅರ್ಹ ಸಂತ್ರಸ್ತರಿಗೆ ಸರಕಾರದ ನಿಯಮಾನುಸಾರ ಪರಿಹಾರ ವಿತರಿಸಬೇಕೆಂದು ಆಗ್ರಹಿಸಿದರು.

ಸಂತ್ರಸ್ತರು ತಮ್ಮ ನೋವು-ನಲಿವುಗಳನ್ನು ಮಾಜಿ ಶಾಸಕರ ಮುಂದೆ ಹಂಚಿಕೊಂಡು, ಮಳೆಯಿಂದ ಉಂಟಾದ ಹಾನಿಯ ಕುರಿತು ವಿವರಿಸಿದರು. ಇದಕ್ಕೆ ಸ್ಪಂದಿಸಿದ ಡಾ. ಪಾಟೀಲ ಅವರು ಜನರ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಕಲ್ಪಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಪುರಸಭೆಯ ಮಾಜಿ ಸದಸ್ಯರಾದ ಜಗದೀಶ ಜಂಬಗಿ, ಶಿವಾನಂದ ಕೋಲಕಾರ, ಬಿಜೆಪಿ ಮಂಡಲದ ನಿಕಟಪೂರ್ವ ಅಧ್ಯಕ್ಷ ಮಡಿವಾಳಪ್ಪ ಹೋಟಿ, ಮುಖಂಡರಾದ ಶ್ರೀಶೈಲ ಯಡಳ್ಳಿ, ಮಹೇಶ ಹರಕುಣಿ, ಅಶೋಕ ಗುಂಡ್ಲೂರ, ಮಹಾಂತೇಶ ಗುಂಡ್ಲೂರ, ರಾಜು ಕೂಡಸೋಮನವರ, ರಿತೇಶ ಪಾಟೀಲ, ನಾಗಪ್ಪ ಗುಂಡ್ಲೂರ, ಸೋಮನಾಥ ಸೊಪ್ಪಿಮಠ, ಜಿ.ಎಸ್. ಪಾಟೀಲ, ಅಂಜುಮ ನೇಗಿನಹಾಳ, ವಿ.ಜಿ. ಪಾಟೀಲ, ಶ್ರೀಕಾಂತ ಶಿರಹಟ್ಟಿ, ವಿಶಾಲ ಬೊಗುರ, ಶಿವಪ್ರಸಾದ ಪಾಟೀಲ, ಅರುಣ ಬೋಳೆತ್ತಿನ, ಸುನೀಲ್ ಈಟಿ ಸೇರಿದಂತೆ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ನಗರದ ವಿವಿಧ ವಾರ್ಡ್‌ಗಳು ಹಾಗೂ ಮಳೆ ಹಾನಿಗೊಳಗಾದ ಪ್ರದೇಶಗಳಿಗೆ ಮಾಜಿ ಶಾಸಕ ಡಾ. ವಿಶ್ವನಾಥ ಪಾಟೀಲ ಅವರು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಶ್ರೀಆದಿನಾಥ ಸಹಕಾರಿಗೆ 1 ಕೋಟಿ ರು.ಲಾಭ

ಹುಕ್ಕೇರಿ: ತಾಲೂಕಿನ ಬೆಲ್ಲದ ಬಾಗೇವಾಡಿ ಗ್ರಾಮದ ಶ್ರೀ ಆದಿನಾಥ ಮಲ್ಟಿಪರ್ಪಜ್ ಸೌಹಾರ್ದ ಸಹಕಾರಿ ಸಂಘವು 2025-26ನೇ ಸಾಲಿನಲ್ಲಿ 1 ಕೋಟಿ 20 ಲಕ್ಷ ನಿವ್ವಳ ಲಾಭ ಗಳಿಸುವ ಮೂಲಕ ಗಮನಾರ್ಹ ಸಾಧನೆ ಮಾಡಿದೆ ಎಂದು ಸಂಘದ ಅಧ್ಯಕ್ಷ ಶೀತಲಕುಮಾರ ಸಿದ್ದಪ್ಪ ಖೆಮಲಾಪುರೆ ಹೇಳಿದರು. ಅವರು ತಾಲೂಕಿನ ಬೆಲ್ಲದ ಬಾಗೇವಾಡಿ ಸಹಕಾರಿ ಸಂಘದ ಸಭಾಭನದಲ್ಲಿ ಮಾತನಾಡಿ ಸಹಕಾರಿಯು ಬಂಡವಾಳ 16.24 ಲಕ್ಷ ಶೇ ಅರು ಬಂಡಾವಾಳ,7.19 ಕೋಟಿ ರು. ನಿಧಿಗಳು. 26.71 ಕೋಟಿಠೇವು. 35.28 ಕೋಟಿ ದುಡಿಯುವ ಬಂಡವಾಳ, ಹೊಂದಿದೆ, ನಾನಾ ಸಂಘ ಬ್ಯಾಂಕುಗಳಲ್ಲಿ 9.27 ಕೋಟಿ ಹೋಡಿಕೆ ಮಾಡುವುದರೊಂದಿಗೆ ಸದಸ್ಯರಿಗೆ 22.91 ಕೋಟಿ ವಿವಿಧ ಸಾಲಗಳನ್ನು ವಿತರಿಸಿ ಸಕಾಲಕ್ಕೆ ಮರು ಪಾವತಿಸಿಕೊಳ್ಳಲಾಗಿದೆ ಎಂದರು. ಸುದ್ದಿಗೋಷ್ಠಿ ಯಲ್ಲಿಉಪಾಧ್ಯಕ್ಷ ಮರೇಪ್ಪಾ ಮುನ್ನೋಳಿ, ನಿರ್ದೇಶಕರಾದ ಅಪ್ಪಾಸಾಹೇಬ ಖೆಮಲಾಪುರೆ, ಶ್ರೀಧರ ಖೆಮಲಾಪುರೆ, ಮಹಾವೀರ ಮುನ್ನೋಳಿ, ಶ್ರೀಕಾಂತ ಹಲಕರ್ಣಿ, ಧನ್ಯಕುಮಾರ ಮುನ್ನೋಳಿ, ಸಂದೀಪ ಮುನ್ನೋಳಿ, ಆದಿನಾಥ ನೇಗಿನಹಾಳ, ದುಂಡಪ್ಪಾ ಹಿಡಕಲ್ಲ, ಭರತೇಶ ಹಲಕರ್ಣಿ, ಲಕ್ಷ್ಮಿ ಖೇಮಲಾಪುರೆ, ಸನ್ಮತಿ ತೇಜನ್ನವರ ಸಲಹಾ ಸಮಿತಿ ಸದಸ್ಯರಾದ ದೇಶಪತ್ತೇಪ್ಪಾ ಖೆಮಲಾಪೂರೆ, ವ್ಯವಸ್ಥಾಪಕ ಸುರೇಶ ಕಂಕಣವಾಡಿ, ಪತ್ರಕರ್ತರು, ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

> ಸಹಕಾರಿಯು ಬಂಡವಾಳ 16.24 ಲಕ್ಷ ಶೇ ಅರು ಬಂಡಾವಾಳ,7.19 ಕೋಟಿ ರು. ನಿಧಿಗಳು. 26.71 ಕೋಟಿಠೇವು. 35.28 ಕೋಟಿ ದುಡಿಯುವ ಬಂಡವಾಳ, ಹೊಂದಿದೆ, ನಾನಾ ಸಂಘ ಬ್ಯಾಂಕುಗಳಲ್ಲಿ 9.27 ಕೋಟಿ ಹೋಡಿಕೆ ಮಾಡುವುದರೊಂದಿಗೆ ಸದಸ್ಯರಿಗೆ 22.91 ಕೋಟಿ ವಿವಿಧ ಸಾಲಗಳನ್ನು ವಿತರಿಸಿ ಸಕಾಲಕ್ಕೆ ಮರು ಪಾವತಿಸಿಕೊಳ್ಳಲಾಗಿದೆ.
>
> -ಶೀತಲಕುಮಾರ ಖೆಮಲಾಪುರೆ, ಶ್ರೀ ಆದಿನಾಥ ಸಂಘದ ಅಧ್ಯಕ್ಷ

ಸೇತುವೆ ಕಾಮಗಾರಿಗೆ ಶಾಸಕ ಐಹೊಳೆ ಚಾಲನೆ

ರಾಯಬಾಗ: ತಾಲೂಕಿನ ಜಲಾಪುರ ರಸ್ತೆಯ ಅನಿಬಾವಿ ಕೋಡಿಯ ಸೂರಣ್ಣವರ ತೋಟದ ಬಳಿ ನೀರಾವರಿ ಇಲಾಖೆಯ ಅನುದಾನದಲ್ಲಿ 20 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಸೇತುವೆ ಕಾಮಗಾರಿಗೆ ಶಾಸಕ ಡಿ. ಎಂ. ಐಹೊಳೆ ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳ ಮೂಲಸೌಕರ್ಯ ಅಭಿವೃದ್ಧಿಗೆ ಇಂತಹ ಕಾಮಗಾರಿಗಳು ಪ್ರಮುಖವಾಗಿದ್ದು, ಸೇತುವೆ ನಿರ್ಮಾಣದಿಂದ ಸ್ಥಳೀಯ ರೈತರು ಹಾಗೂ ಸಾರ್ವಜನಿಕರ ಸಂಚಾರ ಸುಗಮವಾಗಲಿದೆ ಎಂದರು. ವಿಶೇಷವಾಗಿ ಮಳೆಯ ಸಮಯದಲ್ಲಿ ಎದುರಾಗುವ ತೊಂದರೆಗಳು ಕಡಿಮೆಯಾಗುವುದರೊಂದಿಗೆ, ಕೃಷಿ ಚಟುವಟಿಕೆಗಳಿಗೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಮುಖಂಡರಾದ ಸದಾಶಿವ ಘೋರ್ಪಡೆ, ಅಜೀತ ನಿಶಾನದಾರ, ಮಜ್ಜಿದ ಡಾಂಗೆ, ಗೋಪಾಲ ಕೋಚೆರಿ, ಗೋಪಾಲ ನಿಡಗುಂದಿ, ನಿಂಗಪ್ಪ ಸೂರಣ್ಣವರ,ಮಹಾದೇವ ಸೂರಣ್ಣವರ, ಬೀರಪ್ಪ ಸೂರಣ್ಣವರ ಇದ್ದರು.

ಬೇಡರಹಟ್ಟಿ ರಸ್ತೆ ಬಂದ್, ಗ್ರಾಮಸ್ಥರ ಆಕ್ರೋಶ

ಅಥಣಿ: ಅಡಹಳ್ಳಿ ಗ್ರಾಮದ ಕೆರೆಯ ಹತ್ತಿರ ಇರುವ ಸದಾಶಿವ ಮಂದಿರದಿಂದ ಬೇಡರಹಟ್ಟಿ ಸೀಮೆಯ ವರೆಗಿನ ಸಾರ್ವಜನಿಕ ರಸ್ತೆಯನ್ನು ಇಬ್ಬರು ವ್ಯಕ್ತಿಗಳು ಮೇಲಿಂದ ಮೇಲೆ ಬಂದ್ ಮಾಡುತ್ತಿದ್ದು, ಇದರಿಂದ ಪ್ರತಿನಿತ್ಯ ನೂರಾರು ಜನರಿಗೆ, ಮಹಿಳೆಯರಿಗೆ ಮತ್ತು ಶಾಲಾ ಮಕ್ಕಳಿಗೆ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಕಂದಾಯ ಇಲಾಖೆ ಅಧಿಕಾರಿಗಳು ಕೂಡಲೇ ಈ ರಸ್ತೆಯನ್ನು ಸಂಚಾರಕ್ಕೆ ಮುಕ್ತಗೊಳಿಸಬೇಕು ಎಂದು ಚಿದಾನಂದ ಗುಡ್ಡಾಪುರ ಆಗ್ರಹಿಸಿದರು.

ಅವರು ತಾಲೂಕ ಮಿನಿ ವಿಧಾನಸೌಧದ ಮುಂದೆ ಪ್ರತಿಭಟಿಸಿ ತಹಸೀಲ್ದಾರ್ ಅವರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿದ ಅವರು ಅಡಹಳಟ್ಟಿ ಕೆರೆಯ ಹತ್ತಿರ ಇರುವ ಸದಾಶಿವ ಮಂದಿರದಿಂದ ಬೇಡರಹಟ್ಟಿ ಗ್ರಾಮಕ್ಕೆ ಹೋಗುವ ದಾರಿಯಲ್ಲಿ ಮಹದೇವಿ ಚೆನ್ನಪ್ಪ ಸಿಂಧೂರ ಮತ್ತು ಅಣ್ಣಪ್ಪ ಶಿವರಾಯ ಅವಟಿ ಎಂಬವರು ರಸ್ತೆಯನ್ನು ಬಂದ್ ಮಾಡುತ್ತಿದ್ದಾರೆ. ಈ ಪ್ರಕರಣ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದ್ದು, ನ್ಯಾಯಾಲಯದ ಅಂತಿಮ ನಿರ್ಣಯ ಆಗುವವರಿಗೆ ಯಾವುದೇ ರಸ್ತೆಯನ್ನು ಬಂದ್ ಮಾಡಬಾರದು ಅಧಿಕಾರಿಗಳು ಈಗಾಗಲೇ ಸೂಚನೆ ನೀಡಿದ್ದರೂ ಕೂಡ ಈಗ ಮತ್ತೆ ರಸ್ತೆಯನ್ನು ಬಂದ್ ಮಾಡಿದ್ದಾರೆ. ಸಂದಾಯ ಇಲಾಖೆಯ ಅಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳು ಜಂಟಿಯಾಗಿ ಬಂದ್ ಮಾಡಲಾಗಿರುವ ರಸ್ತೆಯನ್ನು ಕೂಡಲೇ ಮುಕ್ತಗೊಳಿಸಬೇಕು. ಮೇಲಿಂದ ಮೇಲೆ ರಸ್ತೆ ಬಂದ್ ಮಾಡಿ ಸಾರ್ವಜನಿಕರಿಗೆ ತೊಂದರೆ ನೀಡುವವರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಬೇಕೆಂದು ಪಟ್ಟು ಹಿಡಿದರು. ಉಪ ತಹಸಿಲ್ದಾರ್ ಮಹಾದೇವ ಬಿರಾದಾರ ಪೊಲೀಸ್ ಠಾಣಾ ಅಧಿಕಾರಿಗಳಿಗೆ ಸೂಚನೆ ನೀಡಿ ಬಂದ್ ಮಾಡಿದ್ದ ರಸ್ತೆಯನ್ನ ತೆರವುಗೊಳಿಸಿದ ನಂತರ ಪ್ರತಿಭಟನೆ ಕೈ ಬಿಡಲಾಯಿತು. ಈ ಸಂದರ್ಭದಲ್ಲಿ ಶ್ರೀಶೈಲ ಕೂಡ್ಲಪಗೋಳ, ಮುತ್ತಪ್ಪ ದೊಡ್ಡವಾಡ, ಶಂಕರ ಕೂಡ್ಲಪಗೋಳ, ಗುರುದೇವ ಗುಡ್ಡಾಪುರ, ವಿಠಲ ಚಿಕ್ಕಟ್ಟಿ, ಬಸಯ್ಯ ಮಠಪತಿ, ಬಸಪ್ಪ ಸಾತಣ್ಣವರ, ಗಿರಮಲ್ಲ ಸಾತಣ್ಣವರ, ಶ್ರೀಶೈಲ ಅವಟಿ, ಬಸಪ್ಪ ಪೂಜಾರಿ, ಮಲ್ಲಿಕಾರ್ಜುನ ಗುಡ್ಡಾಪುರ, ಶಿವಾನಂದ ಕಿರಣಗಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಅಥಣಿ ತಾಲೂಕು ಮಿನಿ ವಿಧಾನಸೌಧದ ಮುಂದೆ ಪ್ರತಿಭಟಿಸಿ ತಹಸೀಲ್ದಾರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಮುರುಘೇಂದ್ರ ಶ್ರೀಗಳ 52ನೇ ಜನ್ಮದಿನ: ಭಕ್ತರ ಗುರುವಂದನೆ

ಯರಗಟ್ಟಿ: ಉತ್ತಮ ಸಮಾಜ ನಿರ್ಮಿಸುವಲ್ಲಿ ಸೋಮಶೇಖರ ಮಠದ ಮುರುಘೇಂದ್ರ ಸ್ವಾಮೀಜಿ ಪ್ರಮುಖರು ಅಂಥ ಗುರುವಿನ ಮಾರ್ಗದರ್ಶನದಲ್ಲಿ ಎಲ್ಲರೂ ಮುನ್ನಡೆಯಬೇಕು ಎಂದು ತೊರಗಲ್ಲಮಠದ ದೀಪಕ್ ಸ್ವಾಮಿ ಹೇಳಿದರು.

ಗ್ರಾಮದ ಶ್ರೀ ಗ್ರಾಮದೇವಿ ಅಭಿವೃದ್ಧಿ ಸೇವಾ ಸಂಘ, ಕ್ರೀಡಾ ಹಾಗೂ ಸಾಂಸ್ಕೃತಿಕ ಯುವ ವೇದಿಕೆ ಹಾಗೂ ತಲ್ಲೂರ ಗ್ರಾಮಸ್ಥರು, ವೀರಶೈವ ಲಿಂಗಾಯತ ಯುವ ವೇದಿಕೆ, ಕರ್ನಾಟಕ ಪತ್ರಕರ್ತರ ಸಂಘದ ಆಶ್ರಯದಲ್ಲಿ ಮುನವಳ್ಳಿ ಸೋಮಶೇಖರ ಮಠದ ಮುರುಘೇಂದ್ರ ಸ್ವಾಮೀಜಿ ಅವರ 52ನೇ ಜನ್ಮ ದಿನದ ಅಂಗವಾಗಿ ಬುಧವಾರ ಭಕ್ತಿಯ ಗುರುವಂದನೆ ಸಲ್ಲಿಸಿ ಮಾತನಾಡಿದ ಅವರು, ಬಡ ವಿದ್ಯಾರ್ಥಿಗಳ ಆಶ್ರಯದಾತರು, ತ್ರಿವಿಧಿ ದಾಸೋಹಿಗಳು, ಮಾತೃಹೃದಯಿ ಸಮಾನರಾದ ಶ್ರೀಗಳಿಗೆ ಭಗವಂತ ಆಯುರಾರೋಗ್ಯ ಭಾಗ್ಯ ಕರುಣಿಸಲಿ ಎಂದು ಶುಭ ಹಾರೈಸಿದರು. ಗುರುವಂದನೆ ಸ್ವೀಕರಿಸಿ ಮುರುಘೇಂದ್ರ ಸ್ವಾಮೀಜಿ ಮಾತನಾಡಿ, ಎಲ್ಲ ಭಕ್ತರ ಸಹಕಾರ, ಸೇವಾ ಮನೋಭಾವದಿಂದ ಶ್ರೀಮಠ ಸಮಾಜದಲ್ಲಿ ಮುನ್ನಡೆಯುತ್ತಿದೆ ಎಂದರು. ಮುಖಂಡ ಶಂಕರಗೌಡ ಪಾಟೀಲ, ಮಲ್ಲೂರ ಪಿಡಿಒ ವಿಜಯಕುಮಾರ ಅಂಗಡಿ, ಈರಣ್ಣ ಹುದ್ದಾರ, ಶಂಕರ ಬಡಿಗೇರ, ಈರಣ್ಣ ಹುಲ್ಲೂರ, ಆರ್.ಬಿ.ಅಣ್ಣಿಗೇರಿ, ಬಸವರಾಜ ಬಡಿಗೇರ, ಆರ್.ಎಸ್.ಕಲ್ಲನ್ನವರ, ಎಂ.ವಿ.ಉಪ್ಪಿನ, ಆರ್.ಕೆ.ಪಟಾತ, ಪಡೆಪ್ಪ ನರಿ ಮತ್ತಿತರಿದ್ದರು.



ಗುರುವಂದನೆ ಕಾರ್ಯಕ್ರಮದಲ್ಲಿ ತೊರಗಲ್ಲಮಠದ ದೀಪಕ್ ಸ್ವಾಮಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಮಾಚಾರ ಸಣ್ಣದಲ್ಲ

ಶಾಸಕ ಭೀಮಸೇನಗೆ ಸಚಿವ ಸ್ಥಾನ ನೀಡಿ

ಗುಳೇದಗುಡ್ಡ: ನೂತನ ಮುಖ್ಯಮಂತ್ರಿ ಡಿಕೆ ಶಿವಕುಮಾರ ಅವರ ಸಚಿವ ಸಂಪುಟದಲ್ಲಿ ಯುವ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಮಂಗಳಗುಡ್ಡ ಗ್ರಾಮದ ಕಾಂಗ್ರೆಸ್ ಮುಖಂಡ ಮಂಜುನಾಥ ಪಾಟೀಲ ಹೈಕಮಾಂಡ್‌ಗೆ ಮನವಿ ಮಾಡಿದ್ದಾರೆ. ಅವರು ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿ, 2018ರಲ್ಲಿ ಬಾದಾಮಿ ಮತಕ್ಷೇತ್ರದಿಂದ ಸ್ಪರ್ಧಿಸಿದ್ದ ಸಿದ್ದರಾಮಯ್ಯನವರನ್ನು ಗೆಲುವಿಗಾಗಿ ಅವರ ತಂದೆಯೊಂದಿಗೆ ಶ್ರಮಪಟ್ಟಿದ್ದಾರೆ. ಅಲ್ಲದೆ ಅವರ ತಂದೆ ಮಾಜಿ ಸಚಿವ ಬಿ.ಬಿ.ಚಿಮ್ಮನಕಟ್ಟಿ ಅವರ ಹಾದಿಯಲ್ಲಿ ಕ್ಷೇತ್ರದ ಎಲ್ಲಾ ಸಮಾಜದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಇಂತಹ ಕ್ರಿಯಾಶೀಲ ಯುವ ನಾಯಕನಿಗೆ ಸಚಿವ ಸ್ಥಾನ ನೀಡಬೇಕು. ಇದರಿಂದ ಬಾಗಲಕೋಟೆ ಜಿಲ್ಲೆಯ ಸಮಗ್ರಹ ಅಭಿವೃದ್ಧಿ ಕಾರ್ಯಗಳು ವೇಗ ಸಿಗಲಿದೆ ಎಂದು ತಿಳಿಸಿದರು.

ಆಶಾದೇವಿ ಗುಡಗುಂಟಿಗೆ ಗೌರವ ಸನ್ಮಾನ

ಮುಧೋಳ: ಬಾಗಲಕೋಟೆ ಬಿವಿವಿ. ಸಂಘದ ಸ್ಥಳಿಯ ಎಸ್.ಆರ್.ಕಂಠಿ ಮಹಾವಿದ್ಯಾಲಯದ ಹಿರಿಯ ವಿದ್ಯಾರ್ಥಿಗಳ ಹಾಗೂ ಪಾಲಕರ ಸಂಘದ ಉಪಾಧ್ಯಕ್ಷೆ ಆಶಾದೇವಿ ಜಗದೀಶ ಗುಡಗುಂಟಿ ಅವರಿಗೆ ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದವರು 2025-26 ನೇ ಸಾಲಿಗೆ ಗೌರವ ಡಾಕ್ಟರೇಟ್ ಪದವಿ ನೀಡಿರುವುದಕ್ಕೆ ಮುಧೋಳ ಎಸ್.ಆರ್. ಕಂಠಿ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಸಂಘದ ವತಿಯಿಂದ ಅವರ ನಿವಾಸದಲ್ಲಿ ಸನ್ಮಾನಿಸಿ, ಗೌರವಿಸಲಾಯಿತು. ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಮಲ್ಲಿಕಾರ್ಜುನ ಜರಕುಂಟಿ, ವಿಶ್ರಾಂತ ಪ್ರಾಧ್ಯಾಪಕ ಪಿ.ಬಿ.ಬಡಿಗೇರ, ಪಾಲಕರ ಹಾಗೂ ಹಳೆಯ ವಿದ್ಯಾರ್ಥಿಗಳ ಕಾಲೇಜು ಕಮಿಟಿ ಅಧ್ಯಕ್ಷ ವಿಶ್ವನಾಥ ಮುನವಳ್ಳಿ, ಸಂ.ಕಾ. ಡಾ.ಎಂ.ಎಚ್. ಜೋಗಿ, ಕಾರ್ಯದರ್ಶಿ ಡಾ.ಎಸ್.ಎಸ್.ಸಬರದ, ಪ್ರೊ.ಶಾರದಾ ಎಸ್. ಬಿರಾದಾರ, ಡಾ.ಎಮ್.ಕೆ.ಗವಿಮಠ, ಪ್ರೊ.ಅನೀಲ ಪತ್ತಾರ, ಡಾ.ಸುರೇಶ ಮೋದಿ, ಪ್ರೊ.ದುಂಡಪ್ಪ ಇಂಗಳಗಿ, ಸಿ.ಎಸ್.ಪತ್ತಾರ ಇದ್ದರು.

ಹೊಲಗಳಿಗೆ ತೆರಳಲು ರೈತರಿಗೆ ತೊಂದರೆ | ತೆಗ್ಗಿ ಗ್ರಾಮಸ್ಥರಿಂದ ಆಕ್ರೋಶ

ರಸ್ತೆ ಅಗಲೀಕರಣಕ್ಕೆ ರೈತರ ಆಗ್ರಹ

ಗುಳೇದಗುಡ್ಡ : ಸಮೀಪದ ತೆಗ್ಗಿ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಹೈದ್ರಬಾದ್ ಪಣಜಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯಲ್ಲಿ ರೈತರು ಜಮೀನುಗಳಿಗೆ ತೆರಳಲು ನಿರ್ಮಾಣ ಮಾಡುತ್ತಿರುವ ರಸ್ತೆಯನ್ನು ಅಗಲೀಕರಣ ಗೊಳಿಸಬೇಕೆಂದು ತೆಗ್ಗಿ ಗ್ರಾಮಸ್ತರು ಆಗ್ರಹಿಸಿದ್ದಾರೆ.

ಅವರು ಸುದ್ದಿಗಾರರೊಂದಿಗೆ ಮಾತನಾಡಿ, ತೆಗ್ಗಿ ಗ್ರಾಮದಲ್ಲಿ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ರೈತರಿಗೆ ಜಮೀನುಗಳಿಗೆ ತೆರಳಲು ರಸ್ತೆ ನಿರ್ಮಾಣ ಮಾಡಿದ್ದು ಬಹಳ ಚಿಕ್ಕದಾಗಿದ್ದು, 10 ಮೀಟರ್‌ಅಷ್ಟೇ ರಸ್ತೆ ಮಾಡುತ್ತಿದ್ದಾರೆ. ಆದರೆ ಇದರಿಂದ ರೈತರು ತಮ್ಮ ಹೊಲಗಳಿಗೆ ಟ್ರ್ಯಾಕ್ಟರ್‌ಮೂಲಕ ಕುರಿಗೆ ಸೇರಿದಂತೆ ಕೃಷಿ ಸಲಕರಣೆಗಳನ್ನು ತೆಗೆದುಕೊಂಡು ಹೋಗುವುದು ಕಷ್ಟವಾಗುತ್ತದೆ ಎಂದು ರೈತರು ದೂರಿದ್ದಾರೆ.

ಇಲಾಖೆಯ ಅಧಿಕಾರಿಗಳು ರಸ್ತೆಯನ್ನು ಚಿಕ್ಕದಾಗಿ ಮಾಡುತ್ತಿದ್ದು, ಇದು ಸರಿಯಲ್ಲ. ಇದರಿಂದ ಮುಂದಿನ ದಿನಗಳಲ್ಲಿ ರೈತರಿಗೆ ಸಾಕಷ್ಟು ತೊಂದರೆಯಾಗಲಿದೆ.

10ಮೀಟರ್‌ರಸ್ತೆ ಇರುವುದರಿಂದ ಎದುರಿಗೆ ಇನ್ನೊಂದು ವಾಹನ ಬಂದರೆ ಪಕ್ಕಕ್ಕೆ ಸರಿದುಕೊಳ್ಳಲು ಆಗವುದಿಲ್ಲ. ಆದ್ದರಿಂದ ಅಧಿಕಾರಿಗಳು 10 ಮೀಟರ್‌ರಸ್ತೆಯನ್ನು 12-13 ಮೀಟರ್ ರಸ್ತೆ ಅಗಲೀಕರಣ ಮಾಡಿದರೆ ಅನುಕೂಲವಾಗಲಿದೆ ಎಂದು ಮುಕ್ಕಣ್ಣ ಕೆಂಗಾರ, ಬಾಲಪ್ಪ ಕಾಟಾಪೂರ, ಹನಮಂತ ಕರಡಿಗುಡ್ಡ, ಹನಮಂತ ಮೇಟಿ, ಪರಸು ಗಂಗೂರ, ಹನಮಂತ ಹೊನ್ನಾಯಕರ, ಪುಂಡಪ್ಪ ಕರಡಿಗುಡ್ಡ, ಲಕ್ಷ್ಮಣ ಮುಳೂರು ಸೇರಿದಂತೆ ಇತರರು ಆಗ್ರಹಿಸಿದ್ದಾರೆ.

ಗುಳೇದಗುಡ್ಡ ಸಮೀಪದ ತೆಗ್ಗಿ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಹೈದ್ರಬಾದ್ ಪಣಜಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯಲ್ಲಿ ರೈತರು ಜಮೀನುಗಳಿಗೆ ತೆರಳಲು ನಿರ್ಮಾಣ ಮಾಡುತ್ತಿರುವ ರಸ್ತೆಯನ್ನು ಅಗಲೀಕರಣಗೊಳಿಸಬೇಕೆಂದು ತೆಗ್ಗಿ ಗ್ರಾಮಸ್ಥರು ಆಗ್ರಹಿಸಿದ್ದಾರೆ.

> **ರೈತರು ತಮ್ಮ ಜಮೀನುಗಳಿಗೆ ತೆರಳಲು ಸ್ವಲ್ಪ ದೂರದಲ್ಲಿ 300 ಮೀಟರ್‌ರಸ್ತೆ ಮಾಡಿದ್ದೇವೆ. ಸದ್ಯ ಇಲ್ಲಿ ರಸ್ತೆ ನಿರ್ಮಿಸಲು ಇಲಾಖೆ ಅಧಿಕಾರಿಗಳು ಎಷ್ಟು ರಸ್ತೆ ಮಾಡಬೇಕೆಂದು ಡ್ರಾಯಿಂಗ್ ಹಾಕಿಕೊಟ್ಟಿದ್ದಾರೆ. ಆ ಪ್ರಕಾರ ನಾವು ರಸ್ತೆ ನಿರ್ಮಾಣ ಮಾಡುತ್ತಿದ್ದು, ಇನ್ನಷ್ಟು ಹೆಚ್ಚು ರಸ್ತೆ ಅಗಲೀಕರಣ ಮಾಡಲು ಮತ್ತೇ ಅಧಿಕಾರಿಗಳು ಸೂಚಿಸಿದರೆ ನಾವು ಮಾಡುತ್ತೇವೆ.**
>
> - ಮಲ್ಲನಗೌಡ, ಗುತ್ತಿಗೆದಾರರು, ರಾಷ್ಟ್ರೀಯ ಹೆದ್ದಾರಿ ಕಾಮಗಾರಿ

ಶಾಸಕ ಆರ್.ಬಿ.ತಿಮ್ಮಾಪುರ ಕಾಮಗಾರಿ ಪರಿಶೀಲನೆ

ಮುಧೋಳ: ನಗರದ ದತ್ತ ಕೆರೆ ಹಾಗು ಪಕ್ಕದ ಸಾರ್ವಜನಿಕ ಉದ್ಯಾನವನ ಅಭಿವೃದ್ಧಿಗಾಗಿ ಮಂಜೂರಾದ ರೂ.60.ಲಕ್ಷದಲ್ಲಿ ನಡೆಯುತ್ತಿರುವ ಕಾಮಗಾರಿಯನ್ನು ಶಾಸಕ ಆರ್.ಬಿ. ತಿಮ್ಮಾಪುರ ಗುರುವಾರ ವಿಕ್ಷಿಸಿ ಪರಿಶೀಲನೆ ಮಾಡಿದರು.

ಪೌರಾಯುಕ್ತ ಗೋಪಾಳ ಕಾಸೆ ಅವರಿಗೆ ಈ ಕುರಿತು ಸಲಹೆ ನೀಡಿದ ಅವರು, ಗುಣಮಟ್ಟದ ಕಾಮಗಾರಿ ನಡೆಯುವ ಹಾಗೆ ನೋಡಿಕೊಳ್ಳಬೇಕು, ಮತ್ತು ಇಲ್ಲಿ ಸ್ವಚ್ಚತೆ ಕಡೆ ಗಮನ ಹರಿಸಿ, ವಾಯು ವಿಹಾರಗೆ ಆಗಮಿಸುವ ಸಾರ್ವಜನಿಕರಿಗೆ ಅನುಕೂಲಕರ ವಾತಾವರಣ ಸೃಷ್ಟಿ ಮಾಡಿಕೊಡಬೇಕು ಎಂದು ತಿಮ್ಮಾಪುರ ಸೂಚನೆ ನೀಡಿದರು.

ಪಕ್ಷದ ಅಧ್ಯಕ್ಷ ಸದುಗೌಡ ಪಾಟೀಲ, ನಗರ ಘಟಕ ಅಧ್ಯಕ್ಷ ರಘು ಮೊಕಾಶಿ, ಲೋಕಾಪುರ ವಲಯ ಅಧ್ಯಕ್ಷ ಅಶೋಕ ಕಿವಡಿ, ಯುವ ಘಟಕ ಅಧ್ಯಕ್ಷ ಇಮಾಮ ಜಮಾದಾರ, ಎಪಿಎಂಸಿ. ಅಧ್ಯಕ್ಷ ಸಂಗಪ್ಪ ಇಮ್ಮನ್ನವರ, ತಾಪಂ. ನೂತನ ಕಾ.ನಿ.ಅಧಿಕಾರಿ ರಾಘವೇಂದ್ರ ಕಳ್ಳಿಮನಿ, ಅಧಿಕಾರಿ ಹಣಮಂತ ಡೋಣಿ, ಅಭಯ ಕುಮಾರ್‌ಮೊರಬ, ಸಿ.ಆರ್. ಮಾಚನೂರ, ಎಂ.ಬಿ. ಹೊಸೂರ, ಸಿಪಿಐಯ್. ಎಮ್. ನಾಗರಡ್ಡಿ ಇತರರಿದ್ದರು.

ನಗರದ ದತ್ತ ಕೆರೆ ಹಾಗು ಪಕ್ಕದಲ್ಲಿರುವ ಸಾರ್ವಜನಿಕ ಉದ್ಯಾನವನದ ಅಭಿವೃದ್ಧಿ ಕಾಮಗಾರಿಯನ್ನು ಶಾಸಕ ಆರ್.ಬಿ. ತಿಮ್ಮಾಪುರ ಪರೀಶಿಲಿಸಿದರು, ಮುಖಂಡರು, ಅಧಿಕಾರಿಗಳು ಇದ್ದರು.

ಸಾರ್ವಜನಿಕರ ಕುಂದುಕೊರತೆ ಸಭೆ

ಜಮಖಂಡಿ: ನಗರದ ತಾಲೂಕಾಡಳಿತ ಸೌಧದಲ್ಲಿ ಜಿಲ್ಲಾ ಲೋಕಾಯುಕ್ತ ಅಧಿಕಾರಿಗಳ ನೇತೃತ್ವದಲ್ಲಿ ಸಾರ್ವಜನಿಕ ಕುಂದುಕೊರತೆ ಮತ್ತು ಅಹವಾಲು ಸ್ವೀಕಾರ ಸಭೆ ನಡೆಯಿತು. ಸಭೆಯಲ್ಲಿ ವಿವಿಧ ಸರ್ಕಾರಿ ಇಲಾಖೆಗಳ ಕಾರ್ಯವೈಖರಿ ಕುರಿತು ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸಲ್ಲಿಸಿದರು.

ತಾಲೂಕಿನ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾರ್ವಜನಿಕರು ಸರಕಾರಿ ಕಚೇರಿಗಳಲ್ಲಿ ದಾಖಲೆಗಳ ವಿಲೇವಾರಿ ವಿಳಂಬ, ಅರ್ಜಿಗಳ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ಹಾಗೂ ಅಧಿಕಾರಿಗಳ ಸ್ಪಂದನೆಯ ಕೊರತೆ ಕುರಿತು ದೂರುಗಳನ್ನು ಸಲ್ಲಿಸಿದರು. ಅಹವಾಲುಗಳ ಕುರಿತು ಲೋಕಾಯುಕ್ತ ಅಧಿಕಾರಿಗಳು ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಸಭೆಯಲ್ಲಿ ಉಪಸ್ಥಿತರಿದ್ದ ವಿವಿಧ ಇಲಾಖೆಗಳ ಅಧಿಕಾರಿಗಳು ತಮ್ಮ ಇಲಾಖೆಗಳ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ಉಪವಿಭಾಗಾಧಿಕಾರಿ ಶ್ವೇತಾ ಬೀಡಿ ಕರ್ ಮಾತನಾಡಿ, ಇಲಾಖೆಗಳು ಸಾರ್ವಜನಿಕರಿಗೆ ಉತ್ತಮ ಸೇವೆ ನೀಡಲು ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದರು.

ನಗರಸಭೆ, ಲೋಕೋಪಯೋಗಿ ಇಲಾಖೆ ಹಾಗೂ ಆರೋಗ್ಯ ಇಲಾಖೆಯ ಅಧಿಕಾರಿಗಳು ತಮ್ಮ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳು ಮತ್ತು ಸೇವೆಗಳ ಕುರಿತು ವಿವರಿಸಿದರು. ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ನಗರದ ಪ್ರಮುಖ ರಸ್ತೆ ಕಾಮಗಾರಿಗಳ ಪ್ರಗತಿ ಕುರಿತು ಮಾಹಿತಿ ನೀಡಿದರು.ಸಾರ್ವಜನಿಕ ಆಸ್ಪತ್ರೆಗಳಲ್ಲಿ ರೋಗಿಗಳಿಂದ ಅನಧಿಕೃತವಾಗಿ ಹಣ ವಸೂಲಿ ಮಾಡುವ ಬಗ್ಗೆ ದೂರುಗಳು ಬಂದಲ್ಲಿ ತನಿಖೆ ನಡೆಸಲಾಗುವುದು ಎಂದು ಅಧಿಕಾರಿಗಳು ತಿಳಿಸಿ ದರು.

ಆದರೆ, ಸಭೆಯಲ್ಲಿ ತಮ್ಮ ಅಹವಾಲುಗಳಿಗೆ ಸ್ಪಷ್ಟ ಉತ್ತರ ಹಾಗೂ ತ್ವರಿತ ಪರಿ ಹಾರದ ಭರವಸೆ ದೊರೆಯಲಿಲ್ಲ ಎಂದು ಕೆಲ ಸಾರ್ವಜ ನಿಕರು ಅಸಮಾಧಾನ ವ್ಯಕ್ತಪಡಿಸಿದರು. ಸಭೆ ಕೇವಲ ಔಪಚಾರಿಕವಾಗಿ ನಡೆದಂತಾಯಿತು ಎಂದು ಕೆಲವರು ಅಭಿಪ್ರಾಯಪಟ್ಟರು.

ಜಮಖಂಡಿ ತಾಲೂಕಾಡಳಿತ ಸೌಧದಲ್ಲಿ ಜಿಲ್ಲಾ ಲೋಕಾಯುಕ್ತ ಅಧಿಕಾರಿಗಳ ನೇತೃತ್ವದಲ್ಲಿ ನಡೆದ ಸಾರ್ವಜನಿಕ ಕುಂದುಕೊರತೆ ಮತ್ತು ಅಹವಾಲು ಸ್ವೀಕಾರ ಸಭೆಯಲ್ಲಿ ಅಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

9ನೇ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಜೂ.14ಕ್ಕೆ

ಇಳಕಲ್: ಶ್ರೀ ರಾಮಾನುಜಾಚಾರ್ಯ ಫೌಂಡೇಶನ್ ಇಳಕಲ್, ಮಹೇಶ್ವರಿ ಚಿಕ್ಕ ಮಕ್ಕಳ ಆಸ್ಪತ್ರೆ, ಬನಶಂಕರಿ ಬ್ಲಡ್ ಬ್ಯಾಂಕ್ ಬಾಗಲಕೋಟೆ ಹಾಗೂ ವಿಜಯಮಹಾಂತ ಬ್ಲಡ್ ಬ್ಯಾಂಕ್, ಇಳಕಲ್

ಇವರುಗಳ ಸಹಯೋಗದೊಂದಿಗೆ ಬರುವ ಜೂ. 14 ರಂದು ನಗರದ ಮಹೇಶ್ವರಿ ಚಿಕ್ಕಮಕ್ಕಳ ಆಸ್ಪತ್ರೆಯಲ್ಲಿ ಆಯೋಜಿಸಲಾಗಿದೆ ಎಂದು ಶ್ರೀ ರಾಮಾನುಜಾಚಾರ್ಯ ಫೌಂಡೇಶನ್ ಅಧ್ಯಕ್ಷ ಅಭಿಷೇಕ ದರಕ ತಿಳಿಸಿದರು.

ಇಳಕಲ್ ತಾಲೂಕಾ ಕಾನಿಪ ಭವನದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ವಿಶ್ವ ರಕ್ತದಾನಿಗಳ ದಿನಾಚರಣೆ ಹಾಗೂ ಮಹೇಶ್ ನವಮಿ ಪ್ರಯುಕ್ತವಾಗಿ ತುರ್ತು ಶಸ್ತ್ರ ಚಿಕಿತ್ಸೆ ಸಂದರ್ಭ ಹಾಗೂ ಥಲಸ್ಸಿಮೀಯಾ ಪೀಡಿತ ಮಕ್ಕಳಿಗಾಗಿ 9ನೇ ಬೃಹತ್ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಇದೇ 14ರ ರವಿವಾರ ದಂದು ಬೆಳಿಗ್ಗ 8ಗಂಟೆಗೆ ಆರಂಭವಾಗುವ ಶಿಬಿರ ಮಧ್ಯಾಹ್ನ 4 ಗಂಟೆಯ ವರೆಗೆ ನಡೆಯಲಿದೆ ಎಂದರು.

ಚಿಕ್ಕ ಮಕ್ಕಳ ತಜ್ಞ ಡಾ. ಪವನ ದರಕ ಮಾತನಾಡಿ, ಶ್ರೀ ರಾಮಾನುಜಾಚಾರ್ಯ ಫೌಂಡೇಶನ್ ಅಧ್ಯಕ್ಷ ಅಭಿಷೇಕ ದರಕ ಅಧ್ಯಕ್ಷತೆಯಲ್ಲಿ ನಡೆಯುವ ಈ ಶಿಬಿರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ಇಚ್ಚಲಕರಂಜಿ ಮಹಾನಗರ ಪಾಲಿಕೆಯ ಡೆಪ್ಯೂಟಿ ಮೇಯರ್‌ಹಾಗೂ ವಕೀಲರಾದ ಅನೀಲಜಿ ಡಾ ಅಯಾ, ಚಲನಚಿತ್ರ ನಟಿ, ಕು. ಮನೀಶಾ ಕಂದಕೂರ, ಮುಖ್ಯ ಅತಿಥಿಗಳಾಗಿ ರಾಯಪೂರ್‌ಛತ್ತೀಸಗಡದ ಕಾಶ್ ಫೌಂಡೇ ಶನ್ ಅಧ್ಯಕ್ಷೆ ಶ್ರೀಮತಿ ಕಾಜಲ್ ಸಚ್ದೇವ, ಬೆಂಗಲೂ ರಿನ ಕಿಮ್ಸ್ ಆಸ್ಪತ್ರೆಯ ಚಿಕ್ಕಮಕ್ಕಳ ಹೆಮಾಟೋ ಆಂಕೋಲಾಜಿಸ್ಟ್ ಡಾ. ರವಿ ಜೋಶಿ ಹಾಗೂ ಖ್ಯಾತ ಉದ್ದಿಮೇದಾರರು ಹಾಗೂ ಸಮಾಜ ಸೇವಕರು ಸುಭಾಶ ಚಂದ್ರಜೀ ಕಠಾಲಿಯಾ ಜೈನ ಪಾಲ್ಗೊಳ್ಳ ಲಿದ್ದಾರೆ ಎಂದು ತಿಳಿಸಿದರು.

ಫೌಂಡೇಶನ್ ಸದಸ್ಯ ಸಂದೀಪ ಮೆಹತಾ ಮಾತನಾಡಿದರು.

ಗೋಷ್ಠಿಯಲ್ಲಿ ಜಯಪ್ರಕಾಶ್ ನಾವಂದರ, ಗೋಕುಲ್ ದರಕ, ಯತೀರಾಜ್ ದರಕ, ಸಜ್ಜನರಾಜ ಮೆಹತಾ ಸೇರಿದಂತೆ ಪೌಂಡೇ ಶನ್ ಸದಸ್ಯರು ಉಪಸ್ಥಿತರಿದ್ದರು.

ಶ್ರೀ ರಾಮಾನುಜಾಚಾರ್ಯ ಫೌಂಡೇಶನ್ ಅಧ್ಯಕ್ಷ ಅಭಿಷೇಕ ದರಕ 9ನೇ ಸ್ವಯಂ ಪ್ರೇರಿತ ರಕ್ತದಾನ ಶಿಬಿರದ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕಾರ್ಮಿಕ ಇಲಾಖೆ
ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಕರ್ನಾಟಕ ರಾಜ್ಯ ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನಾ ಯೋಜನಾ ಸೊಸೈಟಿ (ರಿ)

ಶ್ರೀ ಡಿ. ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು

ಡಾ. ಜಿ. ಪರಮೇಶ್ವರ
ಮಾನ್ಯ ಉಪಮುಖ್ಯಮಂತ್ರಿಗಳು

"ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ"
12 ನೇ ಜೂನ್ -2026
"Red Card to Child Labour: Fair play for children, decent work for adults"
"ಬಾಲ ಕಾರ್ಮಿಕ ಪದ್ಧತಿಗೆ ಕೆಂಪು ಕಾರ್ಡ್: ಮಕ್ಕಳಿಗೆ ನ್ಯಾಯಯುತ ಆಟ, ವಯಸ್ಕರಿಗೆ ಯೋಗ್ಯ ಕೆಲಸ"

ಮಕ್ಕಳನ್ನು ಶಾಲೆಗೆ ಕಳುಹಿಸಿ, ಕೆಲಸಕ್ಕಲ್ಲ

ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಅನ್ವಯ ಎಲ್ಲಾ ಉದ್ಯೋಗ ಮತ್ತು ಪ್ರಕ್ರಿಯೆಗಳಲ್ಲಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವುದು ಹಾಗೂ 18 ವರ್ಷದೊಳಗಿನ ಕಿಶೋರರನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ.

- ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಬಾಲ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳದಂತೆ ತಡೆಯಲು ಕ್ರಮ ಕೈಗೊಳ್ಳಲಾಗಿದ್ದು ನಿರಂತರ ಪರಿಶೀಲನೆಯನ್ನು ನಡೆಸಲಾಗುತ್ತಿದೆ.
- ಬಾಲ ಕಾರ್ಮಿಕ ನಿರ್ಮೂಲನೆಯ ಉದ್ದೇಶದಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ ಶೈಕ್ಷಣಿಕ ಧನ ಸಹಾಯವನ್ನು ನೀಡಲಾಗುತ್ತಿದೆ.
- ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಪರಿಣಾಮಕಾರಿ ಅನುಷ್ಠಾನ.
- ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿಗಳನ್ನು ಸ್ಥಾಪಿಸಲಾಗಿದೆ.
- ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸಿಕೊಂಡಲ್ಲಿ, ಮೊದಲ ಅಪರಾಧಕ್ಕೆ ಮಾಲೀಕರಿಗೆ 06 ತಿಂಗಳಿಂದ 02 ವರ್ಷಗಳವರೆಗೆ ಜೈಲು ಶಿಕ್ಷೆ ಅಥವಾ ರೂ. 20,000/- ರಿಂದ ರೂ. 50,000/- ಗಳವರೆಗೆ ದಂಡ ಅಥವಾ ಎರಡೂ. ಪುನರಾವರ್ತಿತ ಅಪರಾಧಕ್ಕೆ 01 ವರ್ಷದಿಂದ 03 ವರ್ಷಗಳವರೆಗೆ ಜೈಲು ಶಿಕ್ಷೆ.
- ತಪ್ಪಿತಸ್ಥ ಮಾಲೀಕರು ತಾವು ನಿಯೋಜಿಸಿಕೊಂಡ ಪ್ರತಿ ಮಗುವಿಗೆ ರೂ. 20,000/-ಗಳಂತೆ ಮಕ್ಕಳ ಪುನರ್ವಸತಿಗೆ ರಚಿಸಲಾದ ಕಲ್ಯಾಣ ನಿಧಿಗೆ ಪಾವತಿಸಬೇಕಾಗುತ್ತದೆ. ಸರ್ಕಾರದ ವತಿಯಿಂದ ಪ್ರತಿ ಮಗುವಿಗೆ ರೂ. 15,000/-ಗಳ ಸಮಾನಾಂತರ ವಂತಿಕೆಯನ್ನು ನಿಧಿಗೆ ಪಾವತಿಸಲಾಗುತ್ತದೆ.
- ಮಕ್ಕಳನ್ನು ಕೆಲಸಕ್ಕೆ ದೂಡುವ ಪೋಷಕರಿಗೂ ಸಹ ಶಿಕ್ಷಾ ಪ್ರಾವಧಾನವಿದ್ದು, ಪುನರಾವರ್ತಿತ ಅಪರಾಧಕ್ಕೆ ರೂ. 10,000/-ಗಳ ದಂಡ.

ಮಕ್ಕಳ ದುಡಿಮೆ ತಡೆಯೋಣ- ಸದೃಢ ಭವಿಷ್ಯ ರೂಪಿಸೋಣ
ಅಂತರ್ಜಾಲ ವ್ಯವಸ್ಥೆ : https://pencil.gov.in/ https://ncpcr.gov.in/user.complaints.php/ https://childlabour.karnataka.gov.in
ಸಹಾಯವಾಣಿಗಳು: ಮಕ್ಕಳ ಸಹಾಯವಾಣಿ - 1098, ಕಾರ್ಮಿಕರ ಸಹಾಯವಾಣಿ - 155214, ಪೊಲೀಸ್ ಸಹಾಯವಾಣಿ - 112

ಶ್ರೀಮತಿ ಸಲ್ಮಾ ಕೆ. ಫಹೀಮ್ ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು
ಕಾರ್ಮಿಕ ಇಲಾಖೆ

ಡಾ|| ಹೆಚ್.ಎನ್. ಗೋಪಾಲಕೃಷ್ಣ ಭಾ.ಆ.ಸೇ
ಆಯುಕ್ತರು
ಕಾರ್ಮಿಕ ಇಲಾಖೆ

ಶ್ರೀ ರವಿ. ಡಿ. ಚನ್ನಣ್ಣವರ್ ಭಾ.ಪೊ.ಸೇ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಕಾರ್ಯದರ್ಶಿಗಳು
ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ನೈಸರ್ಗಿಕ ಪರಿಸರವನ್ನು ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ

SESHADRIPURAM EDUCATIONAL TRUST
(Since 1930)
Seshadripuram Institute of Technology
(Affiliated to Visvesvaraya Technological University, Belagavi, Karnataka and Approved by AICTE, New Delhi.)

Tuition Fee Support for Meritorious Students

ComedK Code : E-212
K-CET Code : E-307

ADMISSIONS OPEN FOR 2026-27
for the following Engineering Programs

B.E.
- Mechanical Engineering
- Artificial Intelligence and Machine Learning
- Computer Science & Engineering
- Electrical & Electronics Engineering
- Information Science & Engineering
- Electronics and Communication Engineering

The institute is nestled on an expansive 10-acre Campus amidst serene environs on the outskirts of the Heritage City of Mysuru. Housed in a modern building with revolutionary design, it is embellished with state-of-the-art infrastructure and facilities. The highly experienced faculty facilitates excellent Academic Foundation for budding professionals.

Seshadripuram Institute of Technology
Campus No. 4, 5, 6A, 6B & 7B, Kadakola Industrial Area, Mysuru - 571 311.
Contact : Phone No. +91-96064 50926 / +91-96064 50925 / 0821-2440024
E-Mail: sitsetmysuru@gmail.com Website: sitmysore.ac.in

N. R. Pandith Aradhya, President | Dr. Wooday P. Krishna, Honorary General Secretary | B. A. Anantharam, Chairman Governing Council | Dr. Prahalad Rao K., Principal

ಪಲ್ಟಿ: 20 ಮಂದಿಗೆ ಗಾಯ

ಕಣ್ಣೂರು: ಕೇರಳದ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಕೊಟ್ಟಿಯೂರಿಗೆ ತೆರಳುತ್ತಿದ್ದ ಪ್ರವಾಸಿಗರ ಟೆಂಪೊ ಟ್ರಾವೆಲರ್ ವಾಹನವೊಂದು ನಿಯಂತ್ರಣ ತಪ್ಪಿ ಪಲ್ಟಿಯಾಗಿ ಗುರುವಾರ ಅಪಘಾತ ಸಂಭವಿಸಿದೆ. ಈ ದುರ್ಘಟನೆಯಲ್ಲಿ ವಾಹನದಲ್ಲಿದ್ದ ಸುಮಾರು 20ಕ್ಕೂ ಹೆಚ್ಚು ಮಂದಿ ಪ್ರಯಾಣಿಕರು ತೀವ್ರವಾಗಿ ಗಾಯಗೊಂಡಿದ್ದು ನೆರೆಯ ವಯನಾಡ್ ಜಿಲ್ಲೆಯ ಸರಕಾರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಅಪಘಾತ ನಡೆದ ತಕ್ಷಣವೇ ಸ್ಥಳೀಯರು ಪೊಲೀಸರಿಗೆ ಹಾಗೂ ಆಂಬ್ಯುಲೆನ್ಸ್‌ಗೆ ಮಾಹಿತಿ ನೀಡಿದರು.

ಕಣ್ಣೂರು ಜಿಲ್ಲೆಯ ಗಡಿ ಭಾಗದ ಸಮೀಪವಿರುವ ಆಂಬಾಯತ್ತೋಡ್ ಎಂಬಲ್ಲಿ ಈ ಅಪಘಾತ ಸಂಭವಿಸಿದೆ. ಚಾಲಕನ ನಿಯಂತ್ರಣ ತಪ್ಪಿದ ಟೆಂಪೊ ಪಲ್ಟಿಯಾಗಿದೆ. ಗಾಯಾಳುಗಳ ಪೈಕಿ ಕೆಲವರ ಸ್ಥಿತಿ ಗಂಭೀರವಾಗಿದೆ ಎಂದು ತಿಳಿದುಬಂದಿದ್ದು, ಆಸ್ಪತ್ರೆಯಲ್ಲಿ ಅವರಿಗೆ ತುರ್ತು ಚಿಕಿತ್ಸೆ ನೀಡಲಾಗುತ್ತಿದೆ. ಈ ಟೆಂಪೋ ಕರ್ನಾಟಕದಿಂದ ಕೊಟ್ಟಿಯೂರು ಕಡೆ ಪ್ರಯಾಣ ಮಾಡುತ್ತಿತ್ತು. ಹೀಗಾಗಿ ಗಾಯಗೊಂಡವರು ಕರ್ನಾಟಕದ ಯಾವ ಜಿಲ್ಲೆಯವರು ಎಂಬ ಮಾಹಿತಿ ಲಭ್ಯವಾಗಿಲ್ಲ.

ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ
ಹಳಿಯಾಳ ರಸ್ತೆ, ಧಾರವಾಡ-580003.
Tel: 0836-2008581. E-mail:- heacademy2015@gmail.com
ಸಂಖ್ಯೆ: 136/ಉಶಿಅ/ಟೆಂಡರ್/ಮ್ಯಾನ್‌ಪವರ್/2026-27/Vol-12 ದಿನಾಂಕ: 10-06-2026
ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟ್‌ಲ್ ಮೂಲಕ)
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ, ಹಳಿಯಾಳ ರಸ್ತೆ, ಧಾರವಾಡ ಇಲ್ಲಿಗೆ ಅವಶ್ಯವಿರುವ ಕಚೇರಿ ಹಾಗೂ ಅನ್ಯ ಸಿಬ್ಬಂದಿ (ಸಹಾಯಕರು, ಗ್ರೂಪ್-ಡಿ, ಸೆಕ್ಯುರಿಟಿ, ಕುಕ್, ಹಾರ್ಟಿಕಲ್ಚರಿಸ್ಟ್) ಗಳ ಸೇವೆಯನ್ನು ಹೊರಗುತ್ತಿಗೆ ಏಜೆನ್ಸಿಯವರಿಂದ ಪಡೆಯಲು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ರ ಮೂಲಕ ಅರ್ಹ ಏಜೆನ್ಸಿಯವರಿಂದ ದರ ನಮೂದಿಸಲು ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಇ.ಎಂ.ಡಿ. ಮೊತ್ತ **ರೂ.50,000/-**. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **10.07.2026 (4.00 ಘಂಟೆ)**. ಟೆಂಡರ್ ಸಂಖ್ಯೆ: **KHEA/2026&27/SE0011/**
ಸಹಿ/-
ನಿರ್ದೇಶಕರು (ಪ್ರಭಾರ)
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ, ಧಾರವಾಡ
ವಾಸಾಸಂಇ/ಧಾ/ದಿಶಾ/
292/2026-27

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂ.: ಅ.ಇಂ(ವಿ)/ಪ್ರ(ಯೋ)/ಬೆ.ಗ್ರಾ.ವೃ/ಕಾ.ನಿ.ಇಂ(ಕ)/ಸಕಾನಿಇಂ-2/2026-27/449-50 ದಿ: 10.06.2026
ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಕವಿಪ್ರನಿನಿಯ, ವಿಚಾರಣೆ ಸಂಖ್ಯೆ: **KPTCL/2026-27/RC HK-01**ರ ಅನ್ವಯ ಕ.ವಿ.ಪ್ರ.ನಿ.ನಿ ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ(ಯೋಜನೆ), ಗ್ರಾಮೀಣ ವೃತ್ತ, ಬೆಂಗಳೂರು ಹಾಗೂ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಯೋಜನೆ ವಿಭಾಗ, ಕೋಲಾರ ಕಛೇರಿಗಳಿಗೆ ಶುಚಿತ್ವ ಕಾರ್ಯನಿರ್ವಹಿಸಲು ಹೊರಗುತ್ತಿಗೆ ಏಜೆನ್ಸಿ ಮುಖಾಂತರ 2 ಸಂಖ್ಯೆಯ ಶುಚಿಗಾರ್ತಿ ಸೇವೆಯನ್ನು ಪಡೆಯಲು ಬಿಡ್‌ಗಳನ್ನು ಆಹ್ವಾನಿಸಲಾಗಿದೆ.
ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ವಿಷಯಕ್ಕೆ ಸಂಬಂಧಿಸಿದಂತೆ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್: **https://kptcl.karnataka.gov.in** ಹೈಪರ್ ಲಿಂಕ್ **"E-Procurement KPTCL"** ಅಥವಾ **https://kppp.karnataka.gov.in. ದಿನಾಂಕ: 12.06.2026** ರಂದು ಅಥವಾ ತದನಂತರ ಪಡೆಯಬಹುದು.
ಸಹಿ/- ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಯೋ) ಗ್ರಾಮೀಣ ವೃತ್ತ, ಕವಿಪ್ರನಿನಿ, ಪಂತರಪಾಳ್ಯ, ಮೈಸೂರು ರಸ್ತೆ, ಬೆಂಗಳೂರು.

ನಗರಸಭಾ ಕಾರ್ಯಾಲಯ ಹೊಸಪೇಟೆ.
No:SE7735/3/CMC HOSPETE/TENDER/2026-27
Dated: 11.06.2026
ಟೆಂಡರಿಗಾಗಿಆಹ್ವಾನ (ಐ.ಎಫ್.ಟಿ.) ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೋಕ್ಯೂರಮೆಂಟ್ ಮುಖಾಂತರ)
2026-27 ನೇ ಸಾಲಿನ ನಗರಸಭೆ ನಿಧಿಅನುದಾನದಡಿಯಲ್ಲಿಈ ಕೆಳಗಿನ ಕೆಲಸಕ್ಕಾಗಿಸೂಕ್ತ ದರ್ಜೆಯಲ್ಲಿ ನೊಂದಾಯಿಸಿದ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್‌ಡಾಕ್ಯುಮೆಂಟ್ ನಿಯಮಾವಳಿಯಂತೆ ಇ-ಪ್ರೋಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು.ಗುತ್ತಿಗೆದಾರರುತಮಗೆ ಬೇಕಾದಟೆಂಡರ್ ವಿವರಗಳನ್ನು **www.eproc.karnataka.govt.in** ವೆಬ್‌ಸೈಟ್ ಮೂಲಕ ಪಡೆದುಕೊಂಡು, ಸದರಿ ಇ-ಪ್ರೋಕ್ಯೂರಮೆಂಟಿನ ಷರತ್ತಿಗೊಳಪಟ್ಟು ಭರ್ತಿ ಮಾಡಿದ ಟೆಂಡರ್‌ಗಳನ್ನು ಇ- ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ:16-06-2026 ಸಂಜೆ 5.00 ಗಂಟೆ ವರೆಗೆ**, ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ:17-06-2026 ಸಂಜೆ 5.30 ಗಂಟೆ ವರೆಗೆ** ಟೆಂಡರ್‌ಗಳನ್ನು ತೆರೆಯುವ ಸ್ಥಳನಗರಸಭೆ, ಹೊಸಪೇಟೆ. ಕಾಮಗಾರಿಯ ವಿವರ: **Operation and Maintenance of water Supply Distribution System of CMC Hosapete(DMA/2026-27/SE7735/CALL-3)** ಅಂದಾಜು ಮೊತ್ತ(ರೂ.ಲಕ್ಷಗಳಲ್ಲಿ):56.27 ಗಳು
ಸಹಿ/-ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ನಗರಸಭೆ, ಹೊಸಪೇಟೆ.
ಸಹಿ/-ಪೌರಾಯುಕ್ತರು ನಗರಸಭೆ, ಹೊಸಪೇಟೆ
ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/133

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಕಬಿನಿ ಜಲಾಶಯ ವಿಭಾಗ, ಕಬಿನಿ ಕಾಲೋನಿ, ಹೆಚ್.ಡಿ.ಕೋಟೆ ತಾ||,
ಮೈಸೂರು ಜಿಲ್ಲೆ
Ph/ Fax: 08228-268378, e-mail: xekrdhdk@yahoo.com
ಸಂ: ಕಾ.ಇಂ/ಕ.ಜ.ವಿ/ಯೋ.ಶಾ/ ಟೆಂಡರ್ ಪ್ರ.ಸಂ.04/2026-27
ದಿನಾಂಕ: 08.06.2026
ಟೆಂಡರ್ ಪ್ರಕಟಣೆ ಸಂಖ್ಯೆ: 04/2026-27, ದಿನಾಂಕ: 08.06.2026
(ಕೆ.ಪಿ.ಪಿ ಪೋರ್ಟ್‌ಲ್ ಮೂಲಕ ಮಾತ್ರ)
ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕನಿಷ್ಠ ಮೊತ್ತ ರೂ.154.52 ಲಕ್ಷ ಮತ್ತು ಗರಿಷ್ಠ ಮೊತ್ತ ರೂ.2081.73 ಲಕ್ಷದ ಒಟ್ಟು 02 ಕಾಮಗಾರಿಗಳನ್ನು ಅರ್ಹ ವರ್ಗದ ನೊಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಅಹ್ವಾನಿಸಲಾಗಿದೆ. ಟೆಂಡರ್‌ಗೆ ಅರ್ಜಿ ಸಲ್ಲಿಸಲು ಕಡೆಯ ದಿ: 09.07.2026 ಸಾ:5.00 ಗಂಟೆವರೆಗೆ ಮತ್ತು ತಾಂತ್ರಿಕ ಬಿಡ್ಡನ್ನು ದಿ: 10.07.2026ರ ಸಾ:5.00 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ತಾಂತ್ರಿಕ ಬಿಡ್ಡು ಅನುಮೋದನೆಯಾದ ನಂತರ ತೆರೆಯಲಾಗುವುದು. ಟೆಂಡರ್ ವಿವರಗಳನ್ನು ಕರ್ನಾಟಕ ಸರ್ಕಾರದ ವೆಬ್‌ಸೈಟ್ https://kppp.karnataka.gov.in/kppp ನಿಂದ ದಿ: 08.06.2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಕಬಿನಿ ಜಲಾಶಯ ವಿಭಾಗ, ಕಬಿನಿ ಕಾಲೋನಿ.
DIPR/DDMYS/292/KSMCA/203/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕನೀನಿನಿ, ತುಂ.ಭ.ಎ.ಕಾ. ವಿಭಾಗ ನಂ.3, ಸಿಂಧನೂರು-584128
ಸಂ: ಕನೀನಿನಿ/ಕಾನಿಅ-3/ಟಿ.ಎಲ್.ಬಿ.ಸಿ/ತಾಶಾ/ಕನಾಯೋ/ನೋಟಿಫಿಕೇಷನ್/2026-27/ 428 ದಿ: 04.06.2026.
ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್ಮೆಂಟ್ ಮುಖಾಂತರ ಮಾತ್ರ)
ಈ ವಿಭಾಗದ ವ್ಯಾಪ್ತಿಯಲ್ಲಿನ ಲೆಕ್ಕ ಶೀರ್ಷಿಕೆ 4701 ರ ಅಡಿಯಲ್ಲಿ Diversion of Flood water from Maski nala to Kanakanala Valley and Modernization of Kanakanala Project ಕಾಮಗಾರಿಗೆ ಈ ಕಛೇರಿಯಿಂದ ಇ-ಪ್ರೊಕ್ಯೂರಮೆಂಟ್ ವೇದಿಕೆ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತೇದಾರರಿಂದ ಶೇಕಡಾವಾರು ಟೆಂಡರಗಳನ್ನು ಆಮಂತ್ರಿಸಲಾಗಿದೆ. ಟೆಂಡರಗಿಟ್ಟ ಮೊತ್ತ ರೂ. 10089.97 ಲಕ್ಷಗಳು ಇರುತ್ತದೆ. ಭರ್ತಿ ಮಾಡಿದ ಟೆಂಡರನ್ನು ದಿನಾಂಕ 09.07.2026 ರ ಸಂಜೆ 4-00 ಗಂಟೆ ವರೆಗೆ ಸಲ್ಲಿಸಬಹುದಾಗಿದೆ. ಕಾಮಗಾರಿಯ ಹೆಸರು, ಇ.ಎಂ.ಡಿ. ಮೊತ್ತ, ಗುತ್ತೇದಾರರ ದರ್ಜೆ ಹಾಗೂ ಇತರೆ ಎಲ್ಲಾ ವಿವರಗಳನ್ನು ಈ ಕಛೇರಿಯಿಂದ ಕಛೇರಿಯ ಸಮಯದಲ್ಲಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಅಂತರ್ಜಾಲದಲ್ಲಿ https://kppp.karnataka.gov.in/#/portal/ portal-home ಪಡೆಯಬಹುದಾಗಿದೆ.
ಸಹಿ/- ಕಾರ್ಯಪಾಲಕ ಅಭಿಯಂತರರು,
ಕನೀನಿನಿ, ತುಂ.ಎ.ಕಾ. ವಿಭಾಗ ನಂ.3, ಸಿಂಧನೂರು.
DIP/RCR/115KSMCA/117/2026-27

ಜಾಗತಿಕ ಸವಾಲಿನ ನಡುವೆ ಮೋದಿಯವರದು ಸಮರ್ಥ ಆಡಳಿತ: ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ

ಭ್ರಷ್ಟಾಚಾರದಲ್ಲಿ ಮುಳುಗಿದ ಕಾಂಗ್ರೆಸ್ ಸರಕಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರಕಾರದಲ್ಲಿ ಭ್ರಷ್ಟಾಚಾರ ರಹಿತ ಆಡಳಿತ ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿ ಇತ್ತು. ಹತ್ತು ವರ್ಷದ ಯುಪಿಎ ಸರಕಾರದ ಆಡಳಿತದಿಂದ ದೇಶದ ಜನ ಬೇಸತ್ತಿದ್ದರು. ಇದಕ್ಕೆಲ್ಲ ಪರಿಹಾರವೆಂಬಂತೆ ನರೇಂದ್ರ ಮೋದಿ ದೇಶದ ಚುಕ್ಕಾಣಿ ಹಿಡಿದು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಸಂವಾದದಲ್ಲಿ ಮಾತನಾಡಿ, ಕಾಂಗ್ರೆಸ್ ಆಡಳಿತದಲ್ಲಿ ಅಭಿವೃದ್ಧಿ ಸಾಧ್ಯವಿಲ್ಲ, ಕೋಟ್ಯಂತರ ಯುವಕರು ಭವಿಷ್ಯ ಕಟ್ಟಿಕೊಡಲು ಅಸಾಧ್ಯ ಎಂಬ ಸ್ಥಿತಿ ಇತ್ತು. ಯಾವುದೇ ಅಭಿವೃದ್ಧಿ ಇಲ್ಲದೆ 2ಜಿ ಹಗರಣ, ಬೋಫೋರ್ಸ್, ಕಾಮನ್‌ವೆಲ್ತ್ ಹಗರಣ ಸೇರಿ 12 ಲಕ್ಷ ಕೋಟಿಗೂ ಹೆಚ್ಚು ಹಗರಣ ನಡೆದಿತ್ತು. ಆದರೆ ಮೋದಿ ಅವರ ಆಡಳಿತದಲ್ಲಿ ಒಂದೇ ಒಂದು ಹಗರಣ ನಡೆದಿಲ್ಲ. ಇದೂ ದಾಖಲೆಯಾಗಿದ್ದು ಭಾರತ ವಿಶ್ವದಲ್ಲೇ ಬಲಿಷ್ಠ ದೇಶವಾಗಿ ಬದಲಾಗಿದೆ ಎಂದು ವಿವರಿಸಿದರು.

2014ರಲ್ಲಿ ಮೋದಿ ಅವರು, ದೇಶದ ಮುಂದಿದ್ದ ಸವಾಲನ್ನು ಸ್ವೀಕರಿಸಿ ಭಾರತಕ್ಕೆ ಉಜ್ವಲ ಭವಿಷ್ಯ ಇದೆ. ಭ್ರಷ್ಟಾಚಾರ ರಹಿತ ಆಡಳಿತ ನೀಡಲು ಸಾಧ್ಯ. ಜಗತ್ತಿನ ಭೂಪಟದಲ್ಲಿ ಭಾರತಕ್ಕೆ ಸ್ಥಾನ ನೀಡಬಲ್ಲೆವು ಎಂಬುದನ್ನು ಸಾಬೀತು ಮಾಡಿದರು. 12 ವರ್ಷದಲ್ಲಿ ಎನ್‌ಡಿಎ ಸರಕಾರ ಮಾಡಿದ ಆಮೂಲಾಗ್ರ ಬದಲಾವಣೆಗಳು ಸಾಕಷ್ಟು ಇವೆ.

ಜಾಗತಿಕ ಸವಾಲುಗಳ ನಡುವೆ ಭಾರತ ವಿಶ್ವದ ನಾಲ್ಕನೇ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ. ಮೋದಿ ಅವರ ಇಚ್ಛಾಶಕ್ತಿಯಿಂದ ಇದೆಲ್ಲ ಸಾಧ್ಯವಾಗಿದೆ. ದೇಶದಲ್ಲಿರುವುದು ನಾಲ್ಕು ಜಾತಿ ಮಾತ್ರ. ಅವರು ಬಡವರು, ರೈತರು, ಮಹಿಳೆಯರು ಮತ್ತು ಯುವಕರು. ಅವರಿಗಾಗಿ ವಿವಿಧ ರೀತಿಯ ಕಾರ್ಯಕ್ರಮ ನೀಡಿ ಸರ್ವ ರಂಗದಲ್ಲಿ ಅಭಿವೃದ್ಧಿ ಸಾಧಿಸಲಾಗಿದೆ. ದೇಶದ 140 ಕೋಟಿ ನಾಗರಿಕರಿಗೆ ಮೋದಿ ಅವರ ನಾಯಕತ್ವದ ಬಗ್ಗೆ ವಿಶ್ವಾಸ ಬಂದಿದೆ. ಜಾಗತಿಕ ಕುಸಿತದ ನಡುವೆ ಭಾರತ ಹೆಚ್ಚಿನ ಅಭಿವೃದ್ಧಿ ದಾಖಲಿಸಿದೆ ಎಂದರು.

ವಿರೋಧ ಪಕ್ಷದ ನಾಯಕ ಆರ್.ಅಶೋಕ್, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದರಾದ ಗೋವಿಂದ ಕಾರಜೋಳ, ಪಿ.ಸಿ. ಮೋಹನ್ ಇದ್ದರು.

ಪ್ರಧಾನಿ ಮೋದಿ ನೇತೃತ್ವದ 12 ವರ್ಷಗಳ ಆಡಳಿತ ಸಾಧನೆಯ ಪೋಸ್ಟರ್ ಅನ್ನು ರಾಜ್ಯ ಬಿಜೆಪಿ ಕಚೇರಿಯಲ್ಲಿ ಬಿಡುಗಡೆ ಮಾಡಲಾಯಿತು. ಈ ವೇಳೆ ವಿಪಕ್ಷ ನಾಯಕ ಆರ್. ಅಶೋಕ್, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದರಾದ ಗೋವಿಂದ ಕಾರಜೋಳ, ಪಿ.ಸಿ.ಮೋಹನ್ ಇದ್ದರು.

ಈಶಾನ್ಯ ಭಾರತದ ರಾಜ್ಯಗಳ ಕಡೆಗೆ ಪ್ರಧಾನಿ ಗಮನ
ಕಳೆದ 12 ವರ್ಷಗಳಲ್ಲಿ ನಕ್ಸಲ್ ಹಾವಳಿ ತೀರ ವಿರಳ

ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಈಶಾನ್ಯ ರಾಜ್ಯಗಳ ಕಡೆಗೆ ಗಮನ ಕೊಟ್ಟಿರಲಿಲ್ಲ. ಆದರೆ ಮೋದಿ ಅವರು ಪ್ರಧಾನಿಗಳಾದ ಮೇಲೆ ಈಶಾನ್ಯ ರಾಜ್ಯಗಳಿಗೆ ರೈಲ್ವೆ ಸಂಪರ್ಕ, ಹೆದ್ದಾರಿ, ವಿಮಾನ ನಿಲ್ದಾಣ ಸೌಲಭ್ಯ ಉತ್ತಮ ಗೊಂಡಿದೆ. ಆ ಭಾಗದ ಜನರೂ ನಾವು ಭಾರತೀಯರು ಎಂಬ ಭಾವನೆ ಮೂಡಿ ದೆ. ಮೋದಿ ಹಾಗೂ ಅಮಿತ್ ಶಾ ಅವರ ನಾಯಕತ್ವದಲ್ಲಿ ನಕ್ಸಲ್ ಪಿಡುಗನ್ನು ನಿರ್ಮೂಲನೆ ಮಾಡಲಾಗಿದೆ. ನಕ್ಸಲ್ ಪೀಡಿತ ಜಿಲ್ಲೆಗಳ ಸಂಖ್ಯೆ ಗಣನೀಯವಾಗಿ ಕಡಿಮೆ ಆಗಿದೆ. ನಕ್ಸಲ್ ಪೀಡಿತ ಜಿಲ್ಲೆಗಳಲ್ಲಿ ಐಟಿಐಗಳ ಸ್ಥಾಪನೆ, ಕೌಶಲ ಅಭಿವೃದ್ಧಿ ಯೋಜನೆ ಜಾರಿ ಮಾಡಿದೆ. ಯುವಕರು ಉದ್ಯೋಗ ಪಡೆಯುತ್ತಿದ್ದಾರೆ. ಕಾಶ್ಮೀರ ಅಭಿವೃದ್ಧಿ ಪಥದತ್ತ ಸಾಗುತ್ತಿದೆ. ಪ್ರವಾಸೋದ್ಯಮ ಉತ್ತಮಗೊಂಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಗ್ಯಾರಂಟಿ ಯೋಜನೆಗಳಿಗೆ ಹಣ ಸಂಗ್ರಹಿಸಲು ತೆರಿಗೆ ಹೆಚ್ಚಳ: ಕಿಡಿ

ಸಿದ್ದರಾಮಯ್ಯ ಮುಖ್ಯಮಂತ್ರಿಗಳಾದ ಮೇಲೆ ನಾಲ್ಕು ಬಾರಿ ತೈಲದ ಮೇಲೆ ತೆರಿಗೆ ಹೆಚ್ಚಳ ಮಾಡಿದ್ದಾರೆ. ಆಗ ಜಾಗತಿಕ ಸಮಸ್ಯೆ ಇರಲಿಲ್ಲ, ತಮ್ಮ ಗ್ಯಾರಂಟಿಗಳಿಗೆ ಹಣ ಸಂಗ್ರಹಿಸಲು ತೆರಿಗೆ ಹೆಚ್ಚಿಸಿದರು. ಅಂತರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾತೈಲ ಬೆಲೆ ಏರಿಕೆಯಾದ್ದರಿಂದ ತೈಲ ಬೆಲೆಯನ್ನು ಕೇಂದ್ರ ಸರಕಾರ ಹೆಚ್ಚಳ ಮಾಡಿದೆ. ತೈಲ ಬೆಲೆ ಏರಿಕೆ ಕೇವಲ ಭಾರತಕ್ಕೆ ಮಾತ್ರ ಪರಿಣಾಮ ಬೀರಿಲ್ಲ. ಎಲ್ಲ ದೇಶಕ್ಕೂ ತೊಂದರೆಯಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಪುರುಷ ಸರಕಾರಿ ನೌಕರರಿಗೂ ಶಿಶುಪಾಲನಾ ರಜೆ ಸೌಲಭ್ಯ

ಮಹಿಳಾ ನೌಕರರಿಗಿದ್ದ ಸೌಲಭ್ಯ ಪುರುಷರಿಗೂ ವಿಸ್ತರಣೆ

ಬೆಂಗಳೂರು: ಒಂಟಿ ಪುರುಷ ಸರಕಾರಿ ನೌಕರರಿಗೂ ಶಿಶುಪಾಲನಾ ರಜೆಯ ಸೌಲಭ್ಯವನ್ನು ರಾಜ್ಯ ಸರಕಾರ ವಿಸ್ತರಿಸಿದೆ. ಇದುವರೆಗೆ ಶಿಶುಪಾಲನಾ ರಜೆಯ ಸೌಲಭ್ಯವನ್ನು ಕೇವಲ ಮಹಿಳಾ ಸರಕಾರಿ ನೌಕರರಿಗೆ ಮಾತ್ರ ನೀಡಲಾಗುತ್ತಿತ್ತು. ಆದರೆ, ಮಕ್ಕಳ ಆರೈಕೆಗಾಗಿ ಒಂಟಿ ಪುರುಷ ನೌಕರರಿಗೂ ಇದೇ ಹಕ್ಕು ಅಗತ್ಯವೆಂದು ಪರಿಗಣಿಸಿ, ಸರಕಾರ 6 ತಿಂಗಳವರೆಗೆ (180 ದಿನ) ಶಿಶುಪಾಲನಾ ರಜೆಯನ್ನು ಮಂಜೂರು ಮಾಡಿದೆ.

ಮಕ್ಕಳಿಗೆ ತಾಯಿ ಎಂಬುದು ಭಾವನಾತ್ಮಕ ಆಧಾರ. ಆದರೆ, ಜೀವನದ ಅಸಮಂಜಸ ಪರಿಸ್ಥಿತಿಗಳಲ್ಲಿ ತಂದೆಯು ಒಂಟಿಯಾಗಿರುವ ಸಂದರ್ಭಗಳು ಹೆಚ್ಚಾಗುತ್ತವೆ. ವಿಧುರರು, ವಿವಾಹ-ವಿಚ್ಛೇದಿತರಾ ದವರು ಅಥವಾ ಅವಿವಾಹಿತರು ತಮ ಮಕ್ಕಳಿಗೆ ತಾಯಿ- ತಂದೆಯಿಯರ ಪಾತ್ರವನ್ನೂ ನಿರ್ವಹಿಸಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಮಕ್ಕಳಿಗೆ ತಂದೆಯ ಸಾನ್ನಿಧ್ಯ, ಆರೈಕೆ, ಪ್ರೀತಿ ಅತ್ಯಗತ್ಯ. ಈ ನಿರ್ಧಾರವು ಮಕ್ಕಳ ಹಕ್ಕನ್ನು ಕಾಪಾಡುವ ಜತೆಗೆ ತಂದೆಯ ಹೊಣೆಗಾರಿಕೆಯನ್ನು ಮಾನ್ಯಗೊಳಿಸುತ್ತದೆ.

ಈ ಬಗ್ಗೆ ಸ್ಪಷ್ಟ ಆದೇಶ ಹೊರಡಿಸಿರುವ ಸರಕಾರ, ಒಂಟಿ ಪುರುಷರು ಈ ರಜೆಯನ್ನು ಪಡೆಯಬ ಹುದು. ಆದರೆ, ಅವರು ರಜೆಯ ಅವಧಿಯಲ್ಲಿ ವಿವಾಹ ಮಾಡಿಕೊಂಡರೆ, ಆ ದಿನಾಂಕದಿಂದಲೇ ರಜೆ ತಾನಾಗಿಯೇ ರದ್ದುಗೊಳ್ಳುತ್ತದೆ. ಇದು ಮಕ್ಕಳ ಆರೈಕೆಯ ನಿಜವಾದ ಅಗತ್ಯವನ್ನು ಗಮನದಲ್ಲಿಟ್ಟುಕೊಂಡ ನಿಯಮವಾಗಿದೆ. ಈ ನಿರ್ಧಾರವು ಕೇವಲ ಆಡಳಿತಾತ್ಮಕ ಕ್ರಮವಲ್ಲ, ಅದು ಮಕ್ಕಳ ಹೃದಯದ ಹಕ್ಕನ್ನು ಮಾನ್ಯಗೊಳಿಸುವ ಮಾನವೀಯ ಹೆಜ್ಜೆ. ತಾಯಿ ಇಲ್ಲದಿದ್ದಾಗ ತಂದೆಯೇ ತಾಯಿಯಂತೆ ಮಡಿಲು ನೀಡುವ ಹಕ್ಕನ್ನು ಸರಕಾರ ಮಾನ್ಯಗೊಳಿಸಿದೆ.

ಧರ್ಮಸ್ಥಳದ ಬುರುಡೆ ನಾಟಕ: ಪ್ರಕಾಶ್ ರಾಜ್ ಪಾತ್ರಧಾರಿ?

← ಮೊದಲಪುಟದಿಂದ

ಕೇರಳದ ಹಣದ ಲಿಂಕ್: ಈ ಷಡ್ಯಂತ್ರದ ಹಿಂದೆ ಅಂತಾರಾಜ್ಯ ಮಟ್ಟದ ಆರ್ಥಿಕ ವಹಿವಾಟು ನಡೆದಿರುವ ಬಗ್ಗೆ ಚಿನ್ನಯ್ಯ ಕೋರ್ಟ್‌ಗೆ ಮಾಹಿತಿ ನೀಡಿದ್ದಾನೆ. ಧರ್ಮಸ್ಥಳದ ವಿರುದ್ಧ ಸುಳ್ಳು ಸುದ್ದಿ ಹಬ್ಬಿಸಲು ಒಟ್ಟು 200 ಕೋಟಿ ರು.ಬಜೆಟ್ ಸಿದ್ಧವಾಗಿತ್ತು.

ಈ ಸಂಚಿನ ಭಾಗವಾಗಿ ನನಗೆ 50 ಲಕ್ಷ ರು. ಕೊಡುವ ಆಮಿಷವನ್ನು ಮಹೇಶ್ ಶೆಟ್ಟಿ ತಿಮರೋಡಿ ಒಡ್ಡಿದ್ದರು. ಈ ಷಡ್ಯಂತ್ರಕ್ಕಾಗಿ ಕೇರಳದಿಂದ ಹಣ ಸಂದಾಯವಾಗಿದೆ. ಇದ ರೊಂದಿಗೆ ಚಿತ್ರದುರ್ಗದ ರಮಾ ನಾಗರಾಜ್ ಎಂಬುವವರೂ ಕೂಡ ಹಣ ನೀಡಿದ್ದಾರೆ. ತಮ್ಮ ಪತ್ನಿಯ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಯಾಗಿರುವ ಮಾಹಿತಿ ಹಾಗೂ ನಗದು ಹಣದ ವಹಿವಾಟಿನ ಸಂಪೂರ್ಣ ವಿವರಗಳನ್ನು ಚಿನ್ನಯ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದಾನೆ.

ನಾನೊಬ್ಬನೇ ಏಕೆ ಈ ಪ್ರಕರಣದಲ್ಲಿ ಬಲಿಪಶು?

ಅರ್ಜಿಯಲ್ಲಿ ಇಡೀ ಜಾಲವನ್ನು ಎಳೆಎಳೆಯಾಗಿ ಬಿಚ್ಚಿಟ್ಟಿರುವ ಚಿನ್ನಯ್ಯ, ಎಸ್‌ಐಟಿ ತನಿಖೆಯ ಕರ್ತವ್ಯಲೋಪವನ್ನು ಪ್ರಶ್ನಿಸಿದ್ದಾನೆ. 'ನನ್ನ ಪಾಡಿಗೆ ನಾನಿದ್ದೆ. ಇವರೇ ನನ್ನನ್ನು ಒತ್ತಾಯಪೂರ್ವಕವಾಗಿ ಕರೆತಂದು ಇದರಲ್ಲಿ ಸಿಲುಕಿಸಿದ್ದಾರೆ. ಇಷ್ಟೆಲ್ಲಾ ದೊಡ್ಡ ಮಟ್ಟದ ಪ್ರಭಾವಿಗಳು ಸೇರಿ ಷಡ್ಯಂತ್ರ ಹೆಣೆದಿದ್ದರೂ, ಜೈಲಿಗೆ ಹೋಗಿದ್ದು ಪರಿಶಿಷ್ಟ ಜಾತಿಗೆ ಸೇರಿದ ನಾನೊಬ್ಬನೇ. ಅಸಲಿ ಸೂತ್ರಧಾರರು ಈಗಲೂ ಆರಾಮಾಗಿದ್ದಾರೆ ಎಂದು ಚಿನ್ನಯ್ಯ ತನ್ನ ಅರ್ಜಿಯಲ್ಲಿ ಉಲ್ಲೇಖಿಸಿದ್ದಾನೆ.

ಒತ್ತೆಯಾಳಾಗಿಟ್ಟಿದ್ದ ಆರೋಪ: ಧರ್ಮಸ್ಥಳದ ಧರ್ಮಾಧಿಕಾರಿಗಳ ವಿರುದ್ಧ ಸುಳ್ಳು ಹೇಳಲು ನನ್ನ ಆತ್ಮಸಾಕ್ಷಿ ಒಪ್ಪಲಿಲ್ಲ. ಆಗ ಮಹೇಶ್ ಶೆಟ್ಟಿ ತಿಮರೋಡಿ ಚಾಕುವಿನಿಂದ ನನ್ನನ್ನು ಕೊಲ್ಲಲು ಬಂದಿದ್ದರು. ಹೇಳಿಕೊಟ್ಟಂತೆ ಕೇಳದಿದ್ದರೆ ನಿನ್ನ ಹೆಂಡತಿಯನ್ನು ಕೊಲ್ಲುತ್ತೇವೆ ಎಂದು ಹೆದರಿಸಿ ದ್ದರು.

ಒಂದು ವೇಳೆ ತಪ್ಪು ಹೇಳಿಕೆ ನೀಡಿದರೆ, ಅದೇ ಜಾಗದಲ್ಲಿ ಹೂತು ಹಾಕುವುದಾಗಿ ಗ್ಯಾಂಗ್ ಬೆದರಿಕೆ ಹಾಕಿತ್ತು. ನನ್ನ ಕೈಗೆ ಬುರುಡೆ ಕೊಟ್ಟು ಫೋಟೋ ತೆಗೆಸಿಕೊಂಡಿದ್ದರು. ಸುಜಾತಾ ಭಟ್ ಎಂಬುವವರ ಜತೆ ದೆಹಲಿಗೆ ಕರೆದೊಯ್ದು ಕಂಡ ಕಂಡಲ್ಲಿ ಸಹಿ ಹಾಕಿಸಿಕೊಂಡರು. ವಕೀಲರ ಕಚೇರಿ ಯಲ್ಲಿ ಕೂರಿಸಿ ಹೇಗೆ ಹೇಳಿಕೆ ನೀಡಬೇಕೆಂದು ತರಬೇತಿ ನೀಡಲಾಗಿತ್ತು.

ನನ್ನನ್ನು ಸಂಪೂರ್ಣ ವಾಗಿ ಒತ್ತೆಯಾಳುವಿನಂತೆ ಇರಿಸಿಕೊಳ್ಳಲಾಗಿತ್ತು. ನನಗೆ ಹಾಕಲಾಗಿದ್ದ ಮಾಸ್ಕ್‌ನ ಹಿಂದೆ ಹೆಡ್‌ಫೋನ್ ಇರಿಸಲಾಗಿತ್ತು. ಅದರಲ್ಲಿ ಕ್ಷಣಕ್ಷಣಕ್ಕೂ ನಾನು ಏನು ಮಾತನಾಡಬೇಕು ಎಂಬ ಸೂಚನೆಗಳು ಬರುತ್ತಿದ್ದವು. ಈ ಮಾನಸಿಕ ಕಿರುಕುಳ ತಾಳಲಾರದೆ ನಾನು ಒಮ್ಮೆ ಆತ್ಮಹತ್ಯೆಗೂ ಯತ್ನಿಸಿದ್ದೆ ಎಂದು ಚಿನ್ನಯ್ಯ ಅರ್ಜಿಯಲ್ಲಿ ಉಲ್ಲೇಖಿಸಿದ್ದಾನೆ.

ಮೃತ, ಅನರ್ಹರ ಪತ್ತೆಗಷ್ಟೇ ಕ್ರಮ | ಅರ್ಹರಿಗೆ ನಷ್ಟವಿಲ್ಲ: ದಿನೇಶ್ ಗೂಳಿಗೌಡ

ಗೃಹಲಕ್ಷ್ಮಿ ಪರಿಷ್ಕರಣೆ ಹೊರತು ಸ್ಥಗಿತ ಇಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸರಕಾರದ ಮಹತ್ವಾಕಾಂಕ್ಷೆಯ ಗೃಹಲಕ್ಷ್ಮಿ ಯೋಜನೆಯನ್ನು ದುರುಪಯೋಗದಿಂದ ತಡೆದು, ಅರ್ಹರಿಗೆ ಮಾತ್ರ ತಲುಪಿಸುವ ನಿಟ್ಟಿನಲ್ಲಿ ಯೋಜನೆ ಪರಿಷ್ಕರಣೆಗೆ ಆಗ್ರಹಿಸಲಾಗಿದೆಯೇ ಹೊರತು, ಯೋಜನೆಯನ್ನು ನಿಲ್ಲಿಸುವ ಯಾವುದೇ ಉದ್ದೇಶ ಸರಕಾರಕ್ಕಿಲ್ಲ ಎಂದು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಸ್ಪಷ್ಟಪಡಿಸಿದ್ದಾರೆ.

ಗೃಹಲಕ್ಷ್ಮೀ ಯೋಜನೆ ಕುರಿತು ಪ್ರತಿಪಕ್ಷಗಳು ಮಾಡುತ್ತಿರುವ ಅಪಪ್ರಚಾರಕ್ಕೆ ತಿರುಗೇಟು ನೀಡಿರುವ ಅವರು, ರಾಜ್ಯದಲ್ಲಿ ಇದುವರೆಗೆ ಸುಮಾರು 1 ಕೋಟಿ 24 ಲಕ್ಷಕ್ಕೂ ಅಧಿಕ ಮಹಿಳಾ ಯಜಮಾನಿಯರಿಗೆ ಪ್ರತಿ ತಿಂಗಳು ತಲಾ 2,000 ರು.ಗಳಂತೆ ಗೃಹಲಕ್ಷ್ಮಿ ಯೋಜನೆಯ ಹಣ ತಲುಪುತ್ತಿದೆ. ಇತ್ತೀಚಿನ ಅಂಕಿ-ಅಂಶಗಳ ಪ್ರಕಾರ, ಯೋಜನೆಯ ಫಲಾನುಭವಿಗಳಾಗಿದ್ದ ಸುಮಾರು 1 ಲಕ್ಷದ 95 ಸಾವಿರಕ್ಕೂ ಹೆಚ್ಚು ಕುಟುಂಬದ ಯಜಮಾನಿಯರು ಮರಣ ಹೊಂದಿದ್ದಾರೆ. ಆದಾಗ್ಯೂ, ತಾಂತ್ರಿಕ ಕಾರಣಗಳಿಂದಾಗಿ ಮೃತಪಟ್ಟವರ ಬ್ಯಾಂಕ್ ಖಾತೆಗಳಿಗೂ ಇನ್ನೂ ಹಣ ಸಂದಾಯವಾಗುತ್ತಿರುವುದು ಗಮನಕ್ಕೆ ಬಂದಿದೆ. ಈ ರೀತಿಯ ದುರುಪಯೋಗವನ್ನು ತಡೆಯುವ ಕೆಲಸವನ್ನು ಸರಕಾರದಿಂದ ಮಾಡಲಾಗುತ್ತಿದೆ ಎಂದು ಹೇಳಿದರು.

ಪರಿಷ್ಕರಣೆಯ ಮೂಲ ಉದ್ದೇಶ ಮೃತಪಟ್ಟ ಹಾಗೂ ಅನರ್ಹ ಫಲಾನುಭವಿಗಳನ್ನು ಪತ್ತೆ ಹಚ್ಚಿ, ಸರಕಾರದ ಹಣ ದುರುಪಯೋಗವಾಗುವುದನ್ನು ತಪ್ಪಿಸುವುದಾಗಿದೆ. ಯಾವುದೇ ಕಾರಣಕ್ಕೂ ಪ್ರಸ್ತುತ ಸೌಲಭ್ಯ ಪಡೆಯುತ್ತಿರುವ ಯಾವುದೇ ಒಬ್ಬನೇ ಒಬ್ಬ ಅರ್ಹ ಫಲಾನುಭವಿಗೆ ಈ ಯೋಜನೆಯಿಂದ ಯಾವುದೇ ರೀತಿಯ ತೊಂದರೆಯಾಗಲಿ ಅಥವಾ ನಷ್ಟವಾಗಲಿ ಸಂಭವಿಸುವುದಿಲ್ಲ. ಪ್ರತಿಪಕ್ಷದವರು ರಾಜಕೀಯ ಪ್ರೇರಿತ ಅಪಪ್ರಚಾರಗಳನ್ನು ನಂಬಬಾರದು.

- **ದಿನೇಶ್ ಗೂಳಿಗೌಡ,** ಉಪಾಧ್ಯಕ್ಷ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ

ಈಗೇಕೆ ಕಂಡಿಷನ್: ಸಿ.ಟಿ.ರವಿ

ಇದೇ ವಿಷಯಕ್ಕೆ ಸಂಬಂಧಿಸಿದಂತೆ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಮಾತನಾಡಿದ್ದು, ಗೃಹಲಕ್ಷ್ಮೀ ಯೋಜನೆಗೆ ಆಗ ಇಲ್ಲದ ಕಂಡಿಷನ್ ಈಗೇಕೆ?

ಎಂದು ಪ್ರಶ್ನಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಕಾಕಾ ಪಾಟೀಲ್ ನಿಂಗೂ ಫ್ರೀ, ಜಮೀರ್ ಅಹ್ಮದ್, ಮಹದೇವಪ್ಪ ನಿಂಗೂ ಫ್ರೀ ಎಂದು ಚುನಾವಣೆ ಪ್ರಚಾರದ ವೇಳೆ ಸಿದ್ದರಾಮಯ್ಯನವರು ತಿಳಿಸಿದ್ದರು. ಆದರೆ, ಈಗ ಗೃಹಲಕ್ಷ್ಮೀ ಕೊಡಬೇಕಾಗುತ್ತದೆ ಎಂದು ಹೊಸ ಬಿಪಿಎಲ್ ಕಾರ್ಡ್ ಕೊಡುವುದನ್ನೂ ನಿಲ್ಲಿಸಿದ್ದಾರೆ. ಇದರಿಂದಾಗಿ ಅರ್ಹ ಫಲಾನುಭವಿಗಳು ಬಿಪಿಎಲ್ ಕಾರ್ಡ್ ನಿಂದಲೂ ವಂಚಿತರಾಗಿದ್ದಾರೆ ಎಂದರು. ರಾಜ್ಯದಲ್ಲಿ ರಸಗೊಬ್ಬರ ಬೇಡಿಕೆಗೆ ಅನುಗುಣವಾಗಿ ಸ್ಟಾಕ್ ಇದೆ ಎಂದು ಹಿಂದಿನ ಕೃಷಿ ಸಚಿವರು ಹೇಳಿಕೆ ನೀಡಿದ್ದರು. ಹಾಗಿದ್ದರೆ ಕೊರತೆ ಹೇಗೆ? ಯಾಕೆ ಕಾಳಸಂತೆಯಲ್ಲಿ ಮಾರಾಟ ಆಗುತ್ತಿದೆ ಎಂಬುದಕ್ಕೆ ಹೊಸ ಸರಕಾರ ಮತ್ತು ಅಧಿಕಾರಿಗಳು ಉತ್ತರ ಕೊಡಲಿ. ಯೂರಿಯ ಕೇರಳ, ತಮಿಳುನಾಡಿಗೆ ಹೋಗುವ ದೂರು ಇದೆ. ಅದರ ಕಡೆ ಗಮನಿಸಿ, ರೈತರಿಗೆ ಸಮರ್ಪಕವಾಗಿ ಗೊಬ್ಬರ ಸಿಗುವಂತೆ ನೋಡಿಕೊಳ್ಳಲಿ. ಕಾಳಸಂತೆಯಲ್ಲಿ ಫ್ಯಾಕ್ಟರಿಗೆ ಸರಬರಾಜು ಮಾಡಲು ಅವಕಾಶ ಕೊಡದಿರಿ ಎಂದು ಆಗ್ರಹಿಸಿದರು.

ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ಮನವಿ: ಮೃತಪಟ್ಟವರ ಖಾತೆಗಳಿಗೆ ಸರಕಾರದ ಹಣ ಪಾವತಿಯಾಗುತ್ತಿರುವುದನ್ನು ತಡೆಗಟ್ಟಲು ಮತ್ತು ಯೋಜನೆಯನ್ನು ಸದ್ವಿನಿಯೋಗಪಡಿಸಿಕೊಳ್ಳಲು ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯ ಅವರಿಗೆ ನಾನು ಈ ಹಿಂದೆ ಲಿಖಿತ ಮನವಿಯೊಂದನ್ನು ಸಲ್ಲಿಸಿ, ಫಲಾನುಭವಿಗಳಿಗೆ 'ಜೀವಿತ ಪ್ರಮಾಣ ಪತ್ರ' ಕಡ್ಡಾಯಗೊಳಿಸುವಂತೆ ಕೋರಿದ್ದೆ. ಅದೇ ರೀತಿ, ಪ್ರಸ್ತುತ ಮುಖ್ಯಮಂತ್ರಿಗಳಾಗಿರುವ ಡಿ.ಕೆ. ಶಿವಕುಮಾರ್ ಅವರಿಗೂ ಸಹ ಈ ಯೋಜನೆಯಲ್ಲಿನ ಲೋಪದೋಷಗಳನ್ನು ಸರಿಪಡಿಸಿ, ಮೃತಪಟ್ಟವರು ಹಾಗೂ ಅನರ್ಹರನ್ನು ಯೋಜನೆಯಿಂದ ಹೊರಗಿಡುವ ಮೂಲಕ ಗೃಹಲಕ್ಷ್ಮಿ ಯೋಜನೆಯನ್ನು ಸಂಪೂರ್ಣವಾಗಿ ಪರಿಷ್ಕರಣೆ ಮಾಡಬೇಕು ಎಂದು ಮನವಿ ಮಾಡಿದ್ದೇನೆ ಎಂದರು.

ಕೊಟ್ಟ ಖಾತೆ ನಿರ್ವಹಿಸಿ ವರಿಷ್ಠರ ಖಡಕ್ ಮಾತು

← ಮೊದಲಪುಟದಿಂದ

ಈ ನಡುವೆ ಮತಚೋರಿ ವಿಷಯದಲ್ಲಿ ರಾಹುಲ್ ಗಾಂಧಿ ಹೇಳಿಕೆಗೆ ವ್ಯತಿರಿಕ್ತವಾಗಿ ಮಾತನಾಡಿ ಸಂಪುಟದಿಂದ ವಜಾಗೊಂಡಿದ್ದ ಕೆ.ಎನ್.ರಾಜಣ್ಣ ಅವರ ಪುತ್ರ ರಾಜೇಂದ್ರ ರಾಜಣ್ಣ ದೆಹಲಿಯಲ್ಲಿ ಬೀಡು ಬಿಟ್ಟಿದ್ದು, ತಂದೆಯ ಪರವಾಗಿ ಬ್ಯಾಟ್ ಬೀಸುತ್ತಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶುಕ್ರವಾರ ಬೆಂಗಳೂರಿಗೆ ಆಗಮಿಸುತ್ತಿರುವುದರಿಂದ ಹಲವು ಶಾಸಕರು, ಬೆಂಗಳೂರಿನಲ್ಲಿಯೇ ಲಾಭಿ ನಡೆಸುವ ಆಲೋಚನೆಯಲ್ಲಿದ್ದಾರೆ. ಮೊದಲ ಹಂತದ ಸಂಪುಟ ರಚನೆಯಲ್ಲಿ 14 ಜನರಿಗೆ ಅವಕಾಶ ಕಲ್ಪಿಸಲಾಗಿದೆ. ಇನ್ನೂ ಬಾಕಿಯಿರುವ 20 ಸ್ಥಾನಗಳಿಗೆ ಸಚಿವರನ್ನು ನೇಮಿಸಬೇಕಿದೆ. ಇದರೊಂದಿಗೆ ನಿಗಮ ಮಂಡಳಿಗಳ ಅಧ್ಯಕ್ಷ ಸ್ಥಾನದ ವಿಷಯದಲ್ಲಿಯೂ ಲಾಭಿ ನಡೆಸಲಾಗುತ್ತಿದೆ.

ಇಂದು ನೀರಾವರಿ ಸಚಿವರೊಂದಿಗೆ ಸಭೆ

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಜಲಸಂಪನ್ಮೂಲ ಇಲಾಖೆ ಸಚಿವ ರಾಮಲಿಂಗಾರೆಡ್ಡಿ ಅವರು ರಾಜ್ಯದ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಶುಕ್ರವಾರ ಕೇಂದ್ರ ಜಲಸಂಪನ್ಮೂಲ ಸಚಿವರನ್ನು ಭೇಟಿಯಾಗಲಿದ್ದಾರೆ. ಪ್ರಮುಖವಾಗಿ ಭದ್ರಾ ಮೇಲ್ದಂಡೆ ಯೋಜನೆಯ ಬಾಕಿ ಮೊತ್ತ, ರಾಜ್ಯದ ನೀರಾವರಿ ಯೋಜನೆಗಳಿಗೆ ಕೇಂದ್ರದಿಂದ ಸಿಗಬೇಕಿರುವ ಅನುಮೋದನೆ, ಮೇಕೆದಾಟು ಯೋಜನೆ ಸೇರಿದಂತೆ ಸಮಗ್ರ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಚರ್ಚಿಸಿ, ಅಗತ್ಯ ಅನುಮೋದನೆ ಹಾಗೂ ಅನುದಾನಕ್ಕೆ ಮನವಿ ಮಾಡಲು ತೀರ್ಮಾನಿಸಲಾಗಿದೆ. ಈ ಸಂಬಂಧ ಸಚಿವ ರಾಮಲಿಂಗಾರೆಡ್ಡಿ ಅವರು ಗುರುವಾರ ನೀರಾವರಿ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾಹಿತಿ ಪಡೆದುಕೊಂಡಿದ್ದಾರೆ.

ಅಗ್ನಿ ಅವಘಡ: ತಪ್ಪಿದ ಅನಾಹುತ

ಕಲಬುರಗಿ: ನಗರದ ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತದಲ್ಲಿರುವ ಬಾರ್ ರೆಸ್ಟೋರೆಂಟ್ ಒಂದರ ಕಟ್ಟಡದಲ್ಲಿ ಆಕಸ್ಮಿಕ ಅಗ್ನಿ ಅವಘಡ ಸಂಭವಿಸಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಬಾರ್‌ನ ಮೇಲಂತಸ್ತಿನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದೆ. ಕ್ಷಣಾರ್ಧದಲ್ಲೇ ಜ್ವಾಲೆಗಳು ವ್ಯಾಪಿಸಿ ಕಟ್ಟಡದ ಮೇಲ್ಭಾಗ ಧಗಧಗನೆ ಹೊತ್ತಿ ಉರಿದಿದೆ. ವಿಷಯ ತಿಳಿಯುತ್ತಿದ್ದಂತೆ ಎರಡು ಅಗ್ನಿಶಾಮಕ ದಳದ ವಾಹನಗಳು ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿವೆ. ಅಗ್ನಿಶಾಮಕ ಸಿಬ್ಬಂದಿ ಸಮಯೋಚಿತವಾಗಿ ಕಾರ್ಯಾಚರಣೆ ನಡೆಸಿದ ಪರಿಣಾಮ ಬೆಂಕಿ ಅಕ್ಕಪಕ್ಕದ ಕಟ್ಟಡಗಳಿಗೆ ವ್ಯಾಪಿಸದಂತೆ ತಡೆಗಟ್ಟಲಾ ಯಿತು. ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿದ ಬಗ್ಗೆ ವರದಿಯಾಗಿಲ್ಲ. ಪ್ರಾಥಮಿಕ ಮಾಹಿತಿಯಂತೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಸ್ಟೇಷನ್ ಬಜಾರ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಹೊತ್ತಿ ಉರಿಯುತ್ತಿರುವ ರೆಸ್ಟೋರೆಂಡ್.

1790 ಲೀ. ಕಳ್ಳಭಟ್ಟಿ ಕಚ್ಚಾ ಸಾಮಗ್ರಿ ವಶ

ರಾಯಬಾಗ (ಬೆಳಗಾವಿ): ರಾಯಬಾಗ ತಾಲೂಕಿನ ಮೊರಬ ಗ್ರಾಮದಲ್ಲಿ ಕಳ್ಳಭಟ್ಟಿ ಸಂಘ್ರಹಿಸಿಟ್ಟಿದ್ದ ಸ್ಥಳದ ಗುರುವಾರ ಮೇಲೆ ನಡೆಸಿ ಕಳ್ಳಭಟ್ಟಿ ತಯಾರಿಸುವ 1790 ಲೀ ಕಚ್ಚಾವಸ್ತು ಹಾಗೂ 10 ಲೀಟರ್ ಕಳ್ಳಭಟ್ಟಿ ಸರಾಯಿ, ಬ್ಯಾರಲ್‌ಗಳನ್ನು ಜಪ್ತಿ ಮಾಡಲಾಗಿದೆ. ಅಲ್ಲದೆ ಕಳ್ಳಭಟ್ಟಿ ಆರೋಪಿಯನ್ನು ಬಂಧಿಸಲಾಗಿದೆ.

ಬೆಳಗಾವಿ ಎಸ್‌ಪಿ ಕೆ. ರಾಮರಾಜನ್, ಹೆಚ್ಚುವರಿ ಎಸ್ಪಿ ಆರ್ ಬಿ ಬಸರಗಿ, ಡಿಎಸ್ಪಿ ಪ್ರಶಾಂತ ಮುನ್ನೋಳಿ, ಸಿಪಿಐ ರತನಕು ಮಾರ ಜೀರಗ್ಯಾಳ, ಪಿಎಸ್‌ಐ ಪ್ರೀತಮ್ ನಾಯಿಕ, ಕುಡಚಿ ಪೊಲೀಸ್ ಠಾಣೆ ಸಿಬ್ಬಂದಿ ಎಎಸ್ ಐ.ಕೆ.ಆರ್ ಸಾಳುಂಕೆ, ಪಿ.ಎಲ್.ಖವಟಿಕೊಪ್ಪ, ಎಚ್.ಎಸ್.ಗುಡ್ಡದ, ಬಿ.ಎಸ್. ಖೋತ, ಎ.ಎ.ಶಾಂಡಗೆ, ಎ.ಎಸ್ .ಪಾಟೀಲ ಮತ್ತು ಮಹಿಳಾ ಸಿಬ್ಬಂದಿಯಾದ ಆರ್.ಎಸ್.ಸನದಿ ಎಲ್ಲರೂ ಸೇರಿ ದಾಳಿ ನಡೆಸಿದ್ದಾರೆ.

ಸಮಾಚಾರ ಸಣ್ಣದಲ್ಲ

ತೆಂಗಿನಕಾಯಿ ತಲೆಗೆ ಬಿದ್ದು ಮಗು ಸಾವು

ಉಡುಪಿ: ತಾಯಿಯ ಮಡಿಲಲ್ಲಿದ್ದ ಕಂದಮ್ಮನ ಮೇಲೆ ತೆಂಗಿನಕಾಯಿ ಬಿದ್ದು, ಮಗು ಮೃತಪಟ್ಟಿರುವ ಘಟನೆ ಬ್ರಹ್ಮಾವರ ತಾಲೂಕಿನ ಚಾಂತಾರು ಹೆರಂಜಾಲು ಗ್ರಾಮದಲ್ಲಿ ಘಟನೆ ನಡೆದಿದೆ. ಒಂದೂವರೆ ವರ್ಷದ ದಕ್ಷ ಮೃತ ಮಗು. ಪ್ರಶಾಂತ್ ಮತ್ತು ಸುಚಿತ್ರಾ ದಂಪತಿಯ ಎರಡನೇ ಪುತ್ರ ದಕ್ಷ. ಮಗುವನ್ನು ಮಡಿಲಲ್ಲಿ ಮಲಗಿಸಿ ಕೊಂಡು ತಾಯಿ ತೆಂಗಿನ ಮರದ ಕೆಳಗೆ ಕುಳಿತಿದ್ದರು. ಈ ವೇಳೆ, ಮರ ದಿಂದ ತೆಂಗಿನಕಾಯಿ ನೇರವಾಗಿ ಮಗುವಿನ ತಲೆ ಮೇಲೆ ಬಿದ್ದು ಮಗು ತೀವ್ರವಾಗಿ ಗಾಯಗೊಂಡು ಸಾವನ್ನಪ್ಪಿದೆ.

ಶಾಸಕರ ಒಡೆತನದ ಕಲ್ಲುಗಣಿ ಗುತ್ತಿಗೆ ರದ್ದು

ತುಮಕೂರು: ಸರಕಾರಿ ನಿಯಮ ಉಲ್ಲಂಘಿಸಿ 10 ಕೋಟಿ ರುಪಾಯಿಗಿಂತ ಅಧಿಕ ರಾಯಧನ ಬಾಕಿ ಪಾವತಿಸದ ಹಿನ್ನೆಲೆ ಪಾವಗಡ ಕಾಂಗ್ರೆಸ್ ಶಾಸಕ ವೆಂಕಟೇಶ್, ಪತ್ನಿ ಶಶಿಕಲಾ ಒಡೆತನದ ವೆಂಕಟೇಶ್ವರ ಕಲ್ಲುಗಣಿ ಗುತ್ತಿಗೆ ರದ್ದುಪಡಿಸಲಾಗಿದೆ. ಪಾವಗಡ ತಾಲೂಕಿನ ತಿಪ್ಪಯ್ಯನದುರ್ಗದ ಸರ್ವೇ ನಂಬರ್ 42ರಲ್ಲಿ ನಡೆಯುತ್ತಿದ್ದ ವೆಂಕಟೇಶ್ವರ ಸ್ಟೋನ್ ಕ್ರಷರ್ 10,28,67,402 ರುಪಾಯಿ ರಾಯಧನ ಬಾಕಿ ಉಳಿಸಿಕೊಂಡಿದ್ದು, ನಿಗದಿತ ಪ್ರದೇಶಕ್ಕಿಂತ ಹೆಚ್ಚು ಒತ್ತುವರಿ ಮಾಡಿ ಕಾನೂನುಬಾಹಿರ ಗಣಿಗಾರಿಕೆ ನಡೆಸಿರುವುದು, ಪರಿಸರ ನಿಯಮ ಉಲ್ಲಂಘನೆ ಹಿನ್ನೆಲೆ ಗಣಿಗಾರಿಕೆ ಚಟುವಟಿಕೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ಆದೇಶಿಸಿದೆ.

4ನೇ ರ‍್ಯಾಂಕ್ ಬಂದಿದ್ದ ವಿದ್ಯಾರ್ಥಿನಿ ಸಾವು

ಸುಳ್ಯ: ಇತ್ತೀಚೆಗೆ ಪ್ರಕಟಗೊಂಡ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 596 ಅಂಕಗಳನ್ನು ಗಳಿಸಿ ರಾಜ್ಯ ಮಟ್ಟದಲ್ಲಿ 4ನೇ ರ‍್ಯಾಂಕ್ ಗಳಿಸಿ ಗಮನ ಸೆಳೆದಿದ್ದ ಪ್ರತಿಭಾವಂತ ವಿದ್ಯಾರ್ಥಿನಿ ಅಭಿಜ್ಞಾ ಭಟ್ (19) ಅನಾರೋಗ್ಯದಿಂದ ಬುಧವಾರ ಮೃತಪಟ್ಟಿದ್ದಾರೆ. ಅಭಿಜ್ಞಾ ಭಟ್ ಅವರು ಸುಳ್ಯದ ಹೆಸರಾಂತ ಕಿವಿ, ಮೂಗು ಮತ್ತು ಗಂಟಲು ತಜ್ಞ ವೈದ್ಯರಾದ ಡಾ. ರವಿಶಂಕರ್ ಅವರ ಹಿರಿಯ ಪುತ್ರಿ. ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅಭಿಜ್ಞಾ ಭಟ್ ಚಿಕಿತ್ಸೆ ಪಡೆಯುತ್ತಿದ್ದರು. ಆರೋಗ್ಯದಲ್ಲಿ ಏರುಪೇರು ಕಂಡುಬಂದ ಹಿನ್ನೆಲೆಯಲ್ಲಿ ಅವರನ್ನು ಸುಳ್ಯದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಜೂನ್ 10ರಂದು ಮೃತಪಟ್ಟಿದ್ದಾರೆ.

ಊಟ ಸೇವಿಸಿ 15 ವಿದ್ಯಾರ್ಥಿಗಳು ಅಸ್ವಸ್ಥ

ಹಾಸನ: ಹಲ್ಲಿ ಬಿದ್ದ ಸಾಂಬಾರ್ ಸೇವನೆ ಮಾಡಿದ 15 ವಿದ್ಯಾರ್ಥಿನಿಯರು ಅಸ್ವಸ್ಥಗೊಂಡಿರುವ ಘಟನೆ ಹಾಸನ ತಾಲೂಕಿನ ಸಾರಾಪುರದಲ್ಲಿರುವ ಕೃಷಿ ವಿಜ್ಞಾನ ಕಾಲೇಜಿನಲ್ಲಿ ನಡೆದಿದೆ. ಬುಧವಾರ ರಾತ್ರಿ ಊಟ ಮಾಡುವಾಗ ಸಾಂಬಾರ್‌ನಲ್ಲಿ ಹಲ್ಲಿ ಪತ್ತೆಯಾಗಿದೆ. ತೀವ್ರವಾಗಿ ಅಸ್ವಸ್ಥಗೊಂಡ ಆರು ವಿದ್ಯಾರ್ಥಿಗಳಿಗೆ ಹಾಸನದ ಹಿಮ್ಸ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಹಿಮ್ಸ್‌ಗೆ ಡಿಎಚ್‌ಒ ಅನಿಲ್ ಕುಮಾರ್ ಭೇಟಿ ನೀಡಿ, ವಿದ್ಯಾರ್ಥಿನಿಯರ ಆರೋಗ್ಯ ವಿಚಾರಿಸಿದರು. ಸಿಲಿಂಡರ್ ಕೊರತೆಯಿಂದ ಹೊರಗೆ ಸೌದೆ ಒಲೆಯಲ್ಲಿ ಅಡುಗೆ ಮಾಡುತ್ತಿರುವುದರಿಂದ ಅಚಾತುರ್ಯ ನಡೆದಿದೆ ಎನ್ನಲಾಗಿದೆ. ಸುಮಾರು 400 ವಿದ್ಯಾರ್ಥಿನಿಯರು ಇರುವ ಹಾಸ್ಟಲ್‌ಗೆ ಸಿಲಿಂಡರ್ ಸಿಗದೆ ಸಂಕಷ್ಟ ಎದುರಾಗಿದೆ. ವಾರಕ್ಕೆ ನಾಲ್ಕರಿಂದ 6 ವಾಣಿಜ್ಯ ಸಿಲಿಂಡರ್ ಅವಶ್ಯಕತೆ ಇದ್ದು, ಗ್ಯಾಸ್ ಏಜೆನ್ಸಿ ವಾರಕ್ಕೆ ಕೇವಲ ಒಂದು, ಎರಡು ಸಿಲಿಂಡರ್ ನೀಡುತ್ತಿದೆ. ಹೀಗಾಗಿ ಸೌದೆ ಒಲೆಯ ಮೊರೆ ಹೋಗಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
12.06.2026
ಸಂಜೆ: 06.55 ರಿಂದ 08.05 ರವರೆಗೆ

ಶುಕ್ರವಾರದ ಅತಿಥಿ
ಶ್ರೀ ಪಿ.ಕೆ.ನಂದೀಶ್
ವಿಷಯ
ಅರವಿಂದರ ಸಾವಿತ್ರಿ -28
vishwavani.news

ದಿನ ವಿಶೇಷ

12 ಜೂನ್ 2026 ಶುಕ್ರವಾರ

- » ಸೂರ್ಯೋದಯ : 5-41
- » ಸೂರ್ಯಾಸ್ತ : 7-11
- » ತಿಥಿ : ದ್ವಾದಶಿ
- » ನಕ್ಷತ್ರ : ಭರಣಿ
- » ಸಂವತ್ಸರ : ಪರಾಭವ
- » ಅಯನ : ಉತ್ತರಾಯನ
- » ಋತು : ಗ್ರೀಷ್ಮ
- » ಮಾಸ : ಅಧಿಕ ಜ್ಯೇಷ್ಠ
- » ಪಕ್ಷ : ಕೃಷ್ಣಪಕ್ಷ

ಆಡಳಿತ, ಪ್ರತಿಪಕ್ಷದ ಅಭ್ಯರ್ಥಿ ಗೆಲುವಿಗೆ ಪಕ್ಷೇತರ ಅಭ್ಯರ್ಥಿಗಳ ಮತಗಳು ಅನಿವಾರ್ಯ
ಕಾಂಗ್ರೆಸ್‌ನಿಂದ ಪ್ರತಿ ಅಭ್ಯರ್ಥಿಗೆ 30 ಮತ, 5ನೇ ಅಭ್ಯರ್ಥಿಗೆ ದ್ವಿತೀಯ ಪ್ರಾಶಸ್ತ್ಯದ ಮತ

ಪರಿಷತ್ ಚುನಾವಣೆ: ಪಕ್ಷೇತರರೇ ನಿರ್ಣಾಯಕ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕದಿಂದ ರಾಜ್ಯಸಭೆಗೆ ನಾಲ್ವರು ಅವಿರೋಧವಾಗಿ ಆಯ್ಕೆಯಾಗಿದ್ದರೂ, ವಿಧಾನಪರಿಷತ್‌ನ ಏಳನೇ ಸ್ಥಾನಕ್ಕೆ ತೀವ್ರ ಪೈಪೋಟಿ ಏರ್ಪಡುವುದು ನಿಶ್ಚಿತವಾಗಿದ್ದು, ಪಕ್ಷೇತರ ಶಾಸಕರ ಮತಗಳೇ ನಿರ್ಣಾಯಕವಾಗಿದೆ.

ಕಾಂಗ್ರೆಸ್‌ನ ಐದನೇ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ವಿನಯ್ ಕಾರ್ತಿಕ್ ಹಾಗೂ ಜೆಡಿಎಸ್‌ನ ಗೋವಿಂದರಾಜ್ ಇಬ್ಬರಿಗೂ ಅಗತ್ಯ ಸಂಖ್ಯಾಬಲವಿಲ್ಲ. ಆದರೆ ಪಕ್ಷೇತರ, ಬಿಜೆಪಿಯಿಂದ ಉಚ್ಚಾಟಿತ ಶಾಸಕರ ನೆರವು ಸಿಕ್ಕರೆ ಗೆಲುವು ಸಾಧ್ಯ. ಆದ್ದರಿಂದ ಪಕ್ಷೇತರ ಶಾಸಕರು ಮತ್ತು ಅತೃಪ್ತ ಶಾಸಕರು ಏಳನೇ ಅಭ್ಯರ್ಥಿ ಗೆಲುವನ್ನು ನಿರ್ಧರಿಸಲಿದ್ದಾರೆ.

ಕಾಂಗ್ರೆಸ್ ಮತ್ತು ಜೆಡಿಎಸ್ ಎರಡೂ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ಶಾಸಕರನ್ನು ಒಗ್ಗೂಡಿಸುವ ಕಸರತ್ತು ನಡೆಸುತ್ತಿವೆ. ಬಿಜೆಪಿ ಬಂಡಾಯ ಶಾಸಕರು ಯಾರತ್ತ ವಾಲುತ್ತಾರೆ ಎಂಬುದು ಮತ್ತು ಜೆಡಿಎಸ್‌ನ ಹಿರಿಯ ನಾಯಕ ಜಿ.ಟಿ.ದೇವೇಗೌಡ ಅವರ ನಿಲುವು ಏನು ಎನ್ನುವ ಕುತೂಹಲ ಅನೇಕರಲ್ಲಿದೆ. ಬಿಜೆಪಿ ಎರಡು ಸ್ಥಾನಗಳನ್ನು ಸುಲಭವಾಗಿ ಗೆಲ್ಲುವ ಸ್ಥಿತಿಯಲ್ಲಿದೆ. ಆದರೆ, ಜೆಡಿಎಸ್‌ನೊಂದಿಗೆ ಮೈತ್ರಿ ಮಾಡಿಕೊಂಡಿದ್ದರೂ, ಹೆಚ್ಚುವರಿ ಮತಗಳಿಗಾಗಿ ಬಿಜೆಪಿ ಬಂಡಾಯ ನಾಯಕರು ಮತ್ತು ಸ್ವತಂತ್ರರ ಮೊರೆ ಹೋಗುವ ಅನಿವಾರ್ಯತೆ ಇದೆ. ಪಕ್ಷದಿಂದ ಉಚ್ಚಾಟಿತ ಶಾಸಕರು ಯಾರಿಗೆ ಬೆಂಬಲ ನೀಡುತ್ತಾರೆ ಎಂಬುದು ಈ ಚುನಾವಣೆಯ ಫಲಿತಾಂಶವನ್ನು ನಿರ್ಧರಿಸಲಿದೆ.

ಸಂಖ್ಯೆಗಳ ಲೆಕ್ಕಾಚಾರದಲ್ಲಿ ಯಾರೂ ಸಂಪೂರ್ಣ ಸುರಕ್ಷಿತವಾಗಿಲ್ಲ. ಶಾಸಕರನ್ನು ತಮತ್ತ ಸೆಳೆಯಲು ಪಕ್ಷಗಳು ಹರಸಾಹಸ ಪಡುತ್ತಿವೆ. ಇದೇ ಕಾರಣಕ್ಕೆ ಪಕ್ಷೇತರರು ಮತ್ತು ಅತೃಪ್ತ ಶಾಸಕರಿಗೆ ಈ ಚುನಾವಣೆಯಲ್ಲಿ ಹೆಚ್ಚಿನ ಡಿಮ್ಯಾಂಡ್ ಸೃಷ್ಟಿಯಾಗಿದೆ. ಹೀಗಾಗಿ ಬಿಜೆಪಿಯಿಂದ ಉಚ್ಚಾಟನೆಗೊಂಡಿರುವ ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್, ಎಸ್.ಟಿ.ಸೋಮಶೇಖರ್, ಶಿವರಾಂ ಹೆಬ್ಬಾರ್, ಪಕ್ಷೇತರ ಶಾಸಕರಾದ ಲತಾ ಮಲ್ಲಿಕಾರ್ಜುನ್, ಪುಟ್ಟಸ್ವಾಮಿಗೌಡ ಗೌರಿಬಿದನೂರು ಮತ್ತು ದರ್ಶನ್ ಪುಟ್ಟಣ್ಣಯ್ಯ ಮೇಲುಕೋಟೆ ಅವರನ್ನು ಸೆಳೆಯಲು ಅಭ್ಯರ್ಥಿಗಳು ಪೈಪೋಟಿ ನಡೆಸಿದ್ದಾರೆ.

ಅಡ್ಡ ಮತದಾನದ ಭೀತಿ: ಮತದಾನದ ವೇಳೆ ತಮ್ಮ ಪಕ್ಷದ ಅಧಿಕೃತ ಅಭ್ಯರ್ಥಿಗೆ ಮತ ಚಲಾಯಿಸಬೇಕು ಎಂದು ವಿಪ್ ಜಾರಿಗೊಳಿಸಲು ಪಕ್ಷಗಳಿವೆ ಅವಕಾಶವಿದೆಯಾದರೂ, ರಹಸ್ಯ ಮತದಾನವಾಗಿರುವುದರಿಂದ ಅಡ್ಡ ಮತದಾನ ಅಥವಾ ಮತ ಅಸಿಂಧು ಮಾಡುವ ಸಾಧ್ಯತೆಯಿದೆ. ಅದರಲ್ಲಿಯೂ ಜೆಡಿಎಸ್‌ನಲ್ಲಿ ಎಷ್ಟು ಶಾಸಕರು ಪಕ್ಷದೊಂದಿಗೆ ನಿಲ್ಲುತ್ತಾರೆ ಎನ್ನುವ ಆತಂಕ ನಾಯಕರಲ್ಲಿದೆ.

28 ಮತ ಸಿಗದಿದ್ದರೆ ದ್ವಿತೀಯ ಪ್ರಾಶಸ್ತ್ಯದ ಮತ ಎಣಿಕೆ

ಏಳನೇ ಅಭ್ಯರ್ಥಿಗೆ ಪ್ರಥಮ ಪ್ರಾಶಸ್ತ್ಯದ ನಿಗದಿತ 28 ಮತಗಳು ಸಿಗದಿದ್ದರೆ, ಆಗ ದ್ವಿತೀಯ ಪ್ರಾಶಸ್ತ್ಯದ ಮತ ಎಣಿಕೆಯಾಗುತ್ತದೆ. ಆ ಹಂತದಲ್ಲಿ ಕಾಂಗ್ರೆಸ್‌ನ ಎಲ್ಲ ಶಾಸಕರು ಐದನೇ ಅಭ್ಯರ್ಥಿ ವಿನಯ್ ಕುಲಕರ್ಣಿಗೆ ಮತ ಹಾಕಿದರೆ ಸಹಜವಾಗಿಯೇ ಕಾಂಗ್ರೆಸ್ ಅಭ್ಯರ್ಥಿ ಹೆಚ್ಚು ಮತ ಪಡೆದು ಗೆಲುವು ಸಾಧ್ಯವಾಗುತ್ತದೆ. ಈ ಹಂತದಲ್ಲಿಯೂ ಕಾಂಗ್ರೆಸ್ ತನ್ನ ಐದನೇ ಅಭ್ಯರ್ಥಿಯನ್ನು ಪರಿಷತ್‌ಗೆ ಆಯ್ಕೆ ಮಾಡಬಹುದು ಎನ್ನುವ ವಿಶ್ವಾಸ ನಾಯಕರಿಗಿದೆ.

ಅಸಿಂಧುವಿನ ಆತಂಕ: ಹೆಚ್ಚುವರಿ ಮತ

ಪ್ರತಿ ಅಭ್ಯರ್ಥಿಯ ಗೆಲುವಿಗೆ 28 ಮತಗಳು ಅಗತ್ಯವಿದ್ದರೂ, ಕಾಂಗ್ರೆಸ್ ನಾಯಕರು ಕನಿಷ್ಠ ಎರಡು ಹೆಚ್ಚುವರಿ ಮತಗಳನ್ನು ಹಾಕಿಸುವ ಲೆಕ್ಕಾಚಾರದಲ್ಲಿದ್ದಾರೆ. ಆಡಳಿತರೂಢ ಕಾಂಗ್ರೆಸ್‌ನಲ್ಲಿ ಅಡ್ಡಮತದಾನದ ಆತಂಕವಿಲ್ಲದಿದ್ದರೂ, ಬ್ಯಾಲೆಟ್ ಪೇಪರ್ ಮೂಲಕ ಮತದಾನ ನಡೆಯುವುದರಿಂದ ಮತಗಳು ಅಸಿಂಧುವಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಆದ್ದರಿಂದ ಮೊದಲ ನಾಲ್ವರಿಗೆ 30 ಮತಗಳನ್ನು ಹಾಕಿಸಲು ತೀರ್ಮಾನಿಸಲಾಗಿದೆ. ನಾಲ್ವರಿಗೆ 30ರಂತೆ ಹಾಕಿಸಿದರೂ 120 ಮತಗಳಾಗಲಿವೆ. ಇನ್ನುಳಿದ 14 ಮತ ಹಾಗೂ ಪಕ್ಷೇತರ, ಉಚ್ಚಾಟಿತ ಶಾಸಕರ ಏಳು ಮತ, ವಿಧಾನಸಭಾಧ್ಯಕ್ಷರ ಒಂದು ಮತ ಸೇರಿಸಿದರೆ 22 ಮತಗಳಾಗಲಿದೆ. ಇನ್ನುಳಿದ ಮತಗಳನ್ನು ಜೆಡಿಎಸ್‌ನಿಂದ ಸೆಳೆಯುವ ಲೆಕ್ಕಾಚಾರದಲ್ಲಿ ಕಾಂಗ್ರೆಸ್‌ಯಿದೆ. ಒಂದು ವೇಳೆ ಕಾಂಗ್ರೆಸ್ ಅಭ್ಯರ್ಥಿಗೆ 28 ಮತಗಳು ಬಾರದಿದ್ದರೂ ಪರವಾಗಿಲ್ಲ. ಆದರೆ ಜೆಡಿಎಸ್‌ನ ಗೋವಿಂದರಾಜು ಅವರಿಗೆ 28 ಮತಗಳು ಬಾರದಿರುವಂತೆ ನೋಡಿಕೊಳ್ಳುವುದು ಕಾಂಗ್ರೆಸ್ ತಂತ್ರವಾಗಿದೆ.

- ಕರ್ನಾಟಕದಿಂದ ರಾಜ್ಯಸಭೆಗೆ ನಾಲ್ವರು ಅವಿರೋಧವಾಗಿ ಆಯ್ಕೆ
- ವಿಧಾನಪರಿಷತ್‌ನ ಏಳನೇ ಸ್ಥಾನಕ್ಕೆ ತೀವ್ರ ಪೈಪೋಟಿ ನಿಶ್ಚಿತ
- ಕಾಂಗ್ರೆಸ್‌ನ ವಿನಯ್ ಕಾರ್ತಿಕ್, ಜೆಡಿಎಸ್‌ನ ಗೋವಿಂದರಾಜ್‌ಗೆ ಅಗತ್ಯ ಸಂಖ್ಯಾಬಲ ಕೊರತೆ
- ಏಳನೇ ಅಭ್ಯರ್ಥಿ ಗೆಲುವು ಪಕ್ಷೇತರ ಶಾಸಕರು, ಅತೃಪ್ತ ಶಾಸಕರ ಮತ ನಿರ್ಣಯ
- ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಎಸ್.ಟಿ.ಸೋಮಶೇಖರ್, ಶಿವರಾಂ ಹೆಬ್ಬಾರ್,
- ಲತಾ ಮಲ್ಲಿಕಾರ್ಜುನ್, ಪುಟ್ಟಸ್ವಾಮಿ ಗೌಡ, ದರ್ಶನ್ ಪುಟ್ಟಣ್ಣಯ್ಯ ಮತ ನಿರ್ಣಾಯಕ

ಕೆಪಿಸಿಸಿ ಅಧ್ಯಕ್ಷರಾಗಿ ನಿಯೋಜಿತರಾಗಿರುವ ಬಿ.ಕೆ.ಹರಿಪ್ರಸಾದ್ ಅವರು ಗುರುವಾರ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ ಚರ್ಚಿಸಿದರು. ಈ ವೇಳೆ ಜೂನ್ 21ರ ಪದಗ್ರಹಣ ಕಾರ್ಯಕ್ರಮ ಹಾಗೂ ಪಕ್ಷದ ಸಂಘಟನೆಗೆ ಸಂಬಂಧಿಸಿದಂತೆ ಸುದೀರ್ಘ ಚರ್ಚೆ ನಡೆಸಲಾಯಿತು.

ಬೆಂಗಳೂರು-ಶಿವಮೊಗ್ಗ ಮಾರ್ಗವನ್ನು ಉಡಾನ್‌ಗೆ ಸೇರಿಸಲು ಕೇಂದ್ರ ಸರಕಾರಕ್ಕೆ ಎಂಬಿ ಪಾಟೀಲ್ ಪತ್ರ

ಬೆಂಗಳೂರು: ನಷ್ಟದ ಕಾರಣಕ್ಕಾಗಿ ಸದ್ಯಕ್ಕೆ ಸ್ಥಗಿತಗೊಂಡಿರುವ ಬೆಂಗಳೂರು–ಶಿವಮೊಗ್ಗ ವಿಮಾನ ಸೇವೆಯನ್ನು ಸದ್ಯದಲ್ಲೇ ನಡೆಯಲಿರುವ ಉಡಾನ್ ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಸೇರಿಸಬೇಕು. ವಿಮಾನ ಸೇವೆಯ ಪುನಾರಂಭವು ಮಲೆನಾಡು ಮತ್ತು ಮಧ್ಯ ಕರ್ನಾಟಕದ ಪ್ರಗತಿಗೆ ನಿರ್ಣಾಯಕವಾಗಿದೆ ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ. ಈ ಸಂಬಂಧ ಕೇಂದ್ರ ವಿಮಾನಯಾನ ಸಚಿವ ರಾಮಮೋಹನ್ ನಾಯ್ಡು ಅವರಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ.

> ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ನೈಟ್ ಲ್ಯಾಂಡಿಂಗ್ ಸೌಲಭ್ಯ ಒದಗಿಸುವ ಕಾಮಗಾರಿ ಭರದಿಂದ ಸಾಗಿದೆ. ಇದಲ್ಲದೆ, ಉಳಿದ ಎಲ್ಲಾ ಸೌಲಭ್ಯಗಳೂ ಇಲ್ಲಿ ಈಗಾಗಲೇ ಇವೆ. ಆದ್ದರಿಂದ ಈ ಮನವಿಯನ್ನು ಗಂಭೀರವಾಗಿ ಪರಿಗಣಿಸಿ, ಸಕಾರಾತ್ಮಕವಾಗಿ ಸ್ಪಂದಿಸಬೇಕು.
> -ಎಂ.ಬಿ.ಪಾಟೀಲ, ಸಚಿವ

ಶಿವಮೊಗ್ಗ ವಿಮಾನ ನಿಲ್ದಾಣವು 2023ರ ಫೆಬ್ರವರಿಯಲ್ಲಿ ಕಾರ್ಯಾರಂಭ ಮಾಡಿತು. ಇದಾದ ಮೇಲೆ ಇಂಡಿಗೋ ಸಂಸ್ಥೆಯು ಶಿವಮೊಗ್ಗ-ಬೆಂಗಳೂರು ನಡುವೆ ವಿಮಾನ ಕಾರ್ಯಾಚರಣೆ ನಡೆಸುತ್ತಿತ್ತು.

ಆದರೆ ಕೆಲ ತಿಂಗಳಿನಿಂದ ಇದು ಸ್ಥಗಿತಗೊಂಡಿದ್ದು, ತೊಂದರೆಯಾಗಿದೆ. ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ, ದಾವಣಗೆರೆ, ಚಿತ್ರದುರ್ಗ, ಹಾವೇರಿ ಜಿಲ್ಲೆಗಳ ಆರ್ಥಿಕ, ಕೃಷಿ, ಪ್ರವಾಸೋದ್ಯಮ ಮತ್ತು ಕೈಗಾರಿಕಾ ಬೆಳವಣಿಗೆಗೆ ಇದರಿಂದ ಹಾನಿಯಾಗಿದೆ. ಶಿವಮೊಗ್ಗದಿಂದ ಬೆಂಗಳೂರು ನಗರಕ್ಕೆ ನೇರ ವಿಮಾನ ಇಲ್ಲದೆ ಇರುವುದರಿಂದ ದೇಶದ ಬೇರೆಬೇರೆ ಭಾಗಗಳು ಮತ್ತು ವಿದೇಶಗಳಿಗೆ ಹೋಗುವವರಿಗೂ ತೊಂದರೆಯಾಗಿದೆ. ಆದ್ದರಿಂದ ವಿಜಿಟಿ ಫಂಡ್ ನೆರವಿನ ಮೂಲಕ ಉಡಾನ್ ಯೋಜ ಉದ್ದೇಶಿತ ಬಿಡ್ ನಲ್ಲಿ ಈ ಮಾರ್ಗದ ಸೇರ್ಪಡೆ ಮಾಡಲು ತಾವು ಮಧ್ಯೆ ಪ್ರವೇಶಿಸಬೇಕು ಎಂದಿದ್ದಾರೆ.

ವೀರಗಾಸೆ ಕಲಾರತ್ನ ಮಹದೇವಪ್ಪ ನಿಧನ

ನಾಗಮಂಗಲ: ವೀರಗಾಸೆ ಕಲಾವಿದ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮಹದೇವಪ್ಪ ಅವರು ಅನಾರೋಗ್ಯದಿಂದ ಗುರುವಾರ ಬೆಳಗ್ಗೆ ನಾಗಮಂಗಲದಲ್ಲಿ ನಿಧನರಾಗಿದ್ದಾರೆ.

ವೀರಗಾಸೆ ಕಲೆಯನ್ನು ತಮ್ಮ ಜೀವನದ ಉಸಿರಾಗಿಸಿಕೊಂಡಿದ್ದ ಮಹದೇವಪ್ಪ ಮಂಡ್ಯ ಜಿಲ್ಲೆಯ ಹೆಮ್ಮೆಯಷ್ಟೇ ಅಲ್ಲದೆ, ರಾಜ್ಯದ ಜಾನಪದ ಕ್ಷೇತ್ರದ ಅಮೂಲ್ಯ ಆಸ್ತಿಯಾಗಿದ್ದರು. ತಮ್ಮ ವಿಶಿಷ್ಟ ಡಮರುಗದ ನಾದ, ಆಕರ್ಷಕ ಹೆಜ್ಜೆಗಳು ಹಾಗೂ ಮನಮೋಹಕ ಕಲಾ ಪ್ರದರ್ಶನಗಳ ಮೂಲಕ ಸಾವಿರಾರು ಜನರ ಮನ ಗೆದ್ದಿದ್ದರು. ಬಡತನದ ನಡುವೆ ಕಲೆಯ ಮೇಲಿನ ಅಪಾರ ಪ್ರೀತಿಯಿಂದ ವೀರಗಾಸೆ ಪರಂಪರೆಯನ್ನು ಉಳಿಸಿ ಬೆಳೆಸಿದ ಅವರು, ನೂರಾರು ಶಿಷ್ಯರಿಗೆ ತರಬೇತಿ ನೀಡಿದ್ದಾರೆ.

ರಾಜ್ಯಸಭೆಗೆ ನಾಲ್ವರು ಅವಿರೋಧ ಆಯ್ಕೆ

ಬೆಂಗಳೂರು: ಕರ್ನಾಟಕದಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ನಾಲ್ವರು ಅಭ್ಯರ್ಥಿಗಳು ಅವಿರೋಧ ಆಯ್ಕೆಯಾಗಿದ್ದಾರೆ. ಕಾಂಗ್ರೆಸ್‌ನಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಹಾಗೂ ಮನ್ಸೂರ್ ಅಲಿ ಖಾನ್ ಆಯ್ಕೆಯಾಗಿದ್ದಾರೆ. ಇನ್ನು ಬಿಜೆಪಿಯಿಂದ ಪ್ರೊ.ಎಂ. ನಾಗರಾಜ್ ಅವರು ಆಯ್ಕೆಯಾಗಿದ್ದಾರೆ. ಯಾವುದೇ ಹೆಚ್ಚುವರಿ ಅಭ್ಯರ್ಥಿ ನಾಮಪತ್ರ ಸಲ್ಲಿಸದ ಕಾರಣ ಗುರುವಾರ ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಅವರು ಫಲಿತಾಂಶವನ್ನು ಪ್ರಕಟಿಸಿದ್ದು, ನಾಲ್ವರು ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿವಶ್ರೀಗೆ ಉಸ್ತಾದ್ ಬಿಸ್ಮಿಲ್ಲಾಖಾನ್ ಯುವ ಪುರಸ್ಕಾರ

ಬೆಂಗಳೂರು: ಕೇಂದ್ರ ಸರಕಾರದ ಸಾಂಸ್ಕೃತಿಕ ಸಚಿವಾಲಯದ ಅಡಿಯಲ್ಲಿ ಬರುವ ಸಂಗೀತ, ನೃತ್ಯ ಮತ್ತು ನಾಟಕದ ರಾಷ್ಟ್ರೀಯ ಅಕಾಡೆಮಿಯಾದ 'ಸಂಗೀತ ನಾಟಕ ಅಕಾಡೆಮಿ' ನೀಡುವ 2025ರ ಪ್ರತಿಷ್ಠಿತ 'ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ'ಕ್ಕೆ ಗಾಯಕಿ ಶಿವಶ್ರೀ ತೇಜಸ್ವಿ ಸೂರ್ಯ ಅವರು ಆಯ್ಕೆಯಾಗಿದ್ದಾರೆ.

ಭಾರತ ರತ್ನ ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರ ಸ್ಮರಣಾರ್ಥ ಸ್ಥಾಪಿಸಲಾದ ಈ ಪ್ರಶಸ್ತಿಯು, ದೇಶದ ಶ್ರೀಮಂತ ಕಲಾತ್ಮಕ ಸಂಪ್ರದಾಯಗಳಿಗೆ ಸೇವೆ ಸಲ್ಲಿಸುವ ಯುವ ಕಲಾವಿದರಿಗೆ ಗೌರವದ ಪ್ರತೀಕವಾಗಿದೆ. ಶಿವಶ್ರೀ ತೇಜಸ್ವಿ ಸೂರ್ಯ ಅವರನ್ನು ಸಂಗೀತ ವಿಭಾಗದಲ್ಲಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ಕರ್ನಾಟಕ ಸಂಗೀತ ಕೃತಿಗಳು, ಭಜನೆಗಳು ಮತ್ತು ಅಭಂಗಗಳ ತಮ್ಮ ಭಾವಪೂರ್ಣ ಗಾಯನದ ಮೂಲಕ, ಅವರು ಭಾರತ ಮತ್ತು ಪ್ರಪಂಚದಾದ್ಯಂತದ ಅನೇಕ ಗೋಷ್ಠಿಗಳಲ್ಲಿ ಪಾಲ್ಗೊಂಡು ಹೆಸರುವಾಸಿಯಾಗಿದ್ದಾರೆ. ಭಾರತದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಸಮಕಾಲೀನ ಪ್ರೇಕ್ಷಕರಿಗೆ ತಲುಪಿಸುವ ಕಾರ್ಯದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಭಗವಂತನ ಕೃಪೆ ಮತ್ತು ಆಶೀರ್ವಾದಗಳಿಗಾಗಿ ನಾನು ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನನ್ನ ಸಂಗೀತದ ಪಯಣವನ್ನು ರೂಪಿಸಿದ, ನನ್ನನ್ನು ಮುನ್ನಡೆಸಿದ ಪೂಜ್ಯ ಗುರುಗಳಿಗೆ ಈ ಗೌರವವನ್ನು ಸಮರ್ಪಿಸುತ್ತೇನೆ. ಈ ಅತ್ಯುನ್ನತ ಗುರುತಿಸುವಿಕೆಗಾಗಿ ನಾನು ಸಂಗೀತ ನಾಟಕ ಅಕಾಡೆಮಿಗೆ ಕೃತಜ್ಞತೆಗಳು. ಭಾರತದ ಶ್ರೀಮಂತ ಸಂಗೀತ ಸಂಪ್ರದಾಯಗಳ ಸೇವೆ ಮಾಡಲು, ಪ್ರಚಾರ ಮಾಡಲು ನಾನು ಸದಾ ಬದ್ಧಳಾಗಿರುತ್ತೇನೆ ಎಂದು ಶಿವಶ್ರೀ ತೇಜಸ್ವಿ ಸೂರ್ಯ ತಿಳಿಸಿದ್ದಾರೆ.

ಚಳ್ಳಕೆರೆ ಶಾಸಕ ಟಿ.ರಘುಮೂರ್ತಿ ಅವರ 63ನೇ ಜನ್ಮದಿನಾಚರಣೆ

ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕ ಸೇವೆ

ಚಿತ್ರದುರ್ಗ: ಸಮಾಜ ಮುಖಿ ಕೆಲಸಗಳು ಎಲ್ಲಿರುತ್ತೋ ಅಲ್ಲಿ ಖಂಡಿತ ಜಯ ಸಿಕ್ಕೆ ಸಿಗುತ್ತದೆ. ಹಾಗಾಗಿ ನಾನು ಮೂರನೇ ಬಾರಿ ಚಳ್ಳಕೆರೆ ಶಾಸಕನಾಗಿದ್ದೇನೆ. ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮ ವಹಿಸುತ್ತೇನೆ ಎಂದು ಶಾಸಕ ಟಿ. ರಘುಮೂರ್ತಿ ಹೇಳಿದರು.

ತಮ್ಮ 63ನೇ ಜನ್ಮದಿನದ ನಿಮಿತ್ತ ಒನಕೆ ಓಬವ್ವ ವೃತ್ತದಲ್ಲಿ ಟಿ.ರಘುಮೂರ್ತಿ ಯುವ ಸೇನೆ, ಭೂಮಿ ಗೀತಾ ಪ್ರಾಪರ್ಟಿಸ್, ಅಹೋಬಲ ಟಿ.ವಿ.ಎಸ್. ಹಾಗೂ ಕರುನಾಡ ವಿಜಯಸೇನೆಯಿಂದ ಏರ್ಪಡಿಸಿದ್ದ ಜನ್ಮದಿನ ಆಚರಣೆ ಕಾರ್ಯಕ್ರಮದಲ್ಲಿ ಅವರು ಪಾಲ್ಗೊಂಡರು.

ಸನ್ಮಾನ ಸ್ವೀಕರಿಸಿ ನಂತರ ಟಿ.ರಘುಮೂರ್ತಿ ಅವರು ಯುವ ಸೇನೆ ಲೋಗೋ ಬಿಡುಗಡೆಗೊಳಿಸಿದರು. ಈ ವೇಳೆ ಮಾತನಾಡಿದ ಅವರು, ನಿಮ್ಮ ಪ್ರೀತಿ, ಅಭಿಮಾನಕ್ಕೆ ಅಭಾರಿಯಾಗಿದ್ದೇನೆ. ಕಳೆದ ಹದಿಮೂರು ವರ್ಷಗಳಿಂದಲೂ ಕ್ಷೇತ್ರ ಸೇರಿದಂತೆ ಜಿಲ್ಲೆಯ ಅಭಿವೃದ್ಧಿ ವಿಚಾರದಲ್ಲಿ ಯಾರ ಮನಸ್ಸಿಗೂ ನೋವಾಗದಂತೆ ನಡೆದುಕೊಂಡು ಜನ ಸೇವೆಯಲ್ಲಿ ಮುಂದುವರಿಯುತ್ತಿದ್ದೇನೆ. ಪ್ರತಿಯೊಬ್ಬರ ಏಳಿಗೆ ಬಯಸುವುದು ನಮ್ಮ ಉದ್ದೇಶ ಎಂದು ಹೇಳಿದರು.

ಜಿಲ್ಲೆಗೆ ಭದ್ರಾ ಮೇಲ್ದಂಡೆ ಯೋಜನೆಯಿಂದ ನೀರು ಹರಿಸುವುದಕ್ಕಾಗಿ ಜಿಲ್ಲೆಯ ಎಲ್ಲಾ ಶಾಸಕರು ಪಕ್ಷಾತೀತವಾಗಿ ಸಾಕಷ್ಟು ಹೋರಾಟಗಳನ್ನು ಮಾಡಿಕೊಂಡು ಬರುತ್ತಿದ್ದೇವೆ ಎಂದರು.

ಸಚಿವ ಸ್ಥಾನದ ನಿರೀಕ್ಷೆ

ಜಾತಿವಾರು ಹಾಗೂ ಅಭಿವೃದ್ಧಿಯ ಆಧಾರದ ಮೇಲೆ ರಾಜ್ಯದ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ನನಗೆ ಮಂತ್ರಿ ಸ್ಥಾನ ಸಿಗುತ್ತದೆಂಬ ಭರವಸೆಯಿದೆ. ಒಂದು ವೇಳೆ ಸಿಗದಿದ್ದರೂ ನಿರಾಸೆಯಾಗಲ್ಲ. ಶಾಸಕನಾಗಿ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳುತ್ತೇನೆ ಎಂದು ಶಾಸಕ ಟಿ.ರಘುಮೂರ್ತಿ ವಿಶ್ವಾಸ ವ್ಯಕ್ತಪಡಿಸಿದರು.

ಚಿತ್ರದುರ್ಗದ ಒನಕೆ ಓಬವ್ವ ವೃತ್ತದಲ್ಲಿ ಟಿ.ರಘುಮೂರ್ತಿ ಯುವ ಸೇನೆ ಆಯೋಜಿಸಿದ್ದ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಟಿ.ರಘುಮೂರ್ತಿ ಅವರಿಗೆ ಸನ್ಮಾನಿಸಲಾಯಿತು.

ವಚನಾನಂದ ಶ್ರೀ ವಿರುದ್ಧ ಪೋಕ್ಸೊ ಪ್ರಕರಣ: ಚಾರ್ಜ್‌ಶೀಟ್ ಸಲ್ಲಿಕೆ

ದಾವಣಗೆರೆ: ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಪದಚ್ಯುತ ಪೀಠಾಧ್ಯಕ್ಷ ವಚನಾನಂದ ಸ್ವಾಮೀಜಿ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣದ ತನಿಖೆ ಪೂರ್ಣಗೊಳಿಸಿದ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸಿದ್ದಾರೆ.

ಪ್ರಕರಣ ದಾಖಲಾದ ತಿಂಗಳಲ್ಲೇ ತನಿಖೆ ಪೂರ್ಣಗೊಂಡಿದ್ದು, 100ಕ್ಕೂ ಹೆಚ್ಚು ಪುಟಗಳ ದೋಷಾರೋಪಪಟ್ಟಿಯು ಜಿಲ್ಲಾ ವಿಶೇಷ ಪೋಕ್ಸೊ ನ್ಯಾಯಾಲಯಕ್ಕೆ ಜೂನ್ 6ರಂದು ಸಲ್ಲಿಕೆಯಾಗಿದೆ. ಸಾಕ್ಷ್ಯಗಳು, ಸಂತ್ರಸ್ತ ಬಾಲಕ, ಆತನ ಸಹಪಾಠಿಗಳು ಸೇರಿ ಹಲವರ ಹೇಳಿಕೆ ಕೂಡ ದೋಷಾರೋಪ ಪಟ್ಟಿಯಲ್ಲಿದೆ.

ವಸತಿನಿಲಯದ ಬಾಲಕರನ್ನು ದುರ್ಬಳಕೆ ಮಾಡಿಕೊಂಡು ದೌರ್ಜನ್ಯ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲ್ಯುಸಿ) ಸಿದ್ಧಪಡಿಸಿದ ವರದಿ ದೋಷಾರೋಪಪಟ್ಟಿಯಲ್ಲಿದೆ. ಕೆಲ ವೈದ್ಯಕೀಯ, ವಿಧಿವಿಜ್ಞಾನ ಪ್ರಯೋಗಾಲಯದ ವರದಿಗಳು ಮಾತ್ರ ಬಾಕಿ ಇವೆ ಎಂದು ಮೂಲಗಳು ಮಾಹಿತಿ ನೀಡಿವೆ.

ಸಂತ್ರಸ್ತ ಬಾಲಕನ ತಾಯಿಯೊಬ್ಬರು ಗದಗ ಜಿಲ್ಲೆ ಲಕ್ಷ್ಮೇಶ್ವರ ಠಾಣೆಯಲ್ಲಿ ಮೇ 5ರಂದು ಸ್ವಾಮೀಜಿ ವಿರುದ್ಧ ಪೋಕ್ಸೊ ಕೇಸ್ ದಾಖಲಿಸಿದ್ದರು. ಕೃತ್ಯ ನಡೆದ ಸ್ಥಳದ ವ್ಯಾಪ್ತಿಯ ಹರಿಹರ ಗ್ರಾಮಾಂತರ ಠಾಣೆಗೆ ಪ್ರಕರಣ ವರ್ಗಾವಣೆಯಾಗುತ್ತಿದ್ದಂತೆ ಪೊಲೀಸರು ತನಿಖೆ ಚುರುಕುಗೊಳಿಸಿದ್ದರು. ನಿರೀಕ್ಷಣಾ ಜಾಮೀನು ಪಡೆದಿದ್ದ ಸ್ವಾಮೀಜಿಯನ್ನು ಠಾಣೆಗೆ ಕರೆಸಿ ಹಲವು ಬಾರಿ ವಿಚಾರಣೆಗೆ ಒಳಪಡಿಸಿದ್ದರು.

18ಕ್ಕೆ ಆದೇಶ ಕಾಯ್ದಿರಿಸಿದ ನ್ಯಾಯಾಲಯ

ವಚನಾನಂದ ಸ್ವಾಮೀಜಿ ಅವರಿಗೆ ಪೋಕ್ಸೊ ಪ್ರಕರಣದಲ್ಲಿ ನೀಡಿರುವ ನಿರೀಕ್ಷಣಾ ಜಾಮೀನು ರದ್ದುಗೊಳಿಸುವಂತೆ ಕೋರಿ ಪೊಲೀಸರು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಜಿಲ್ಲಾ ವಿಶೇಷ ಪೋಕ್ಸೊ ನ್ಯಾಯಾಲಯ ಆದೇಶವನ್ನು ಜೂನ್ 18ಕ್ಕೆ ಕಾಯ್ದಿರಿಸಿದೆ. ಪ್ರಕರಣ ದಾಖಲಾಗುವುದಕ್ಕೂ ಮುನ್ನವೇ ಪಡೆದಿರುವ ನಿರೀಕ್ಷಣಾ ಜಾಮೀನು ರದ್ದು ಮಾಡುವಂತೆ ಹರಿಹರ ಗ್ರಾಮಾಂತರ ಠಾಣೆಯ ಪೊಲೀಸರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯ, ಸಂತ್ರಸ್ತ ಬಾಲಕನ ಹೇಳಿಕೆ ಕೂಡ ಆಲಿಸಿ ಅಂತಿಮ ಆದೇಶವನ್ನು ಕಾಯ್ದಿರಿಸಿತು.

> ಪೋಕ್ಸೊ ಗಂಭೀರ ಪ್ರಕರಣವಾಗಿದ್ದು, ಪೊಲೀಸರು ವಿಸ್ತೃತ ತನಿಖೆ ಮಾಡಬೇಕಿತ್ತು. ಆದರೆ, ಎಫ್‌ಐಆರ್ ದಾಖಲಾದ ಮೂರು ವಾರಗಳಲ್ಲಿ ತನಿಖೆಯನ್ನು ಪೂರ್ಣಗೊಳಿಸಲಾಗಿದೆ. ಅವಸರದಲ್ಲಿ ದೋಷಾರೋಪಪಟ್ಟಿ ಸಲ್ಲಿಸಿದ್ದು ಅನುಮಾನ ಮೂಡಿಸಿದೆ. ಬಾಹ್ಯ ಒತ್ತಡಕ್ಕೆ ಮಣಿದಿರುವ ಪೊಲೀಸರು, ಸ್ವಾಮೀಜಿ ಅವರನ್ನು ಪ್ರಕರಣದಲ್ಲಿ ಸಿಲುಕಿಸುವ ದುರುದ್ದೇಶ ಹೊಂದಿದ್ದಾರೆ.
> -ಎಸ್.ವಿ.ಪಾಟೀಲ, ಸ್ವಾಮೀಜಿ ಪರ ವಕೀಲ

ಜೆಡಿಎಸ್‌ನ ಒಕ್ಕಲಿಗ ಮತಗಳು ಚದುರಿ ಹೋಗಲ್ಲ ಪ್ರಧಾನಿ ಹುದ್ದೆ ತ್ಯಾಗ ಮಾಡಿದ ಗೌಡರಿಗೆ ರಾಜ್ಯಸಭಾ ಸ್ಥಾನ ದೊಡ್ಡದಲ್ಲ: ರೇವಣ್ಣ

ಮೈಸೂರು: ಪ್ರಧಾನಿ ಹುದ್ದೆಯನ್ನೇ ತ್ಯಾಗ ಮಾಡಿ ಬಂದ ಎಚ್.ಡಿ. ದೇವೇಗೌಡರಿಗೆ ರಾಜ್ಯಸಭಾ ಸದಸ್ಯ ಸ್ಥಾನ ದೊಡ್ಡದೇನಲ್ಲ. ಅವರು ರಾಜ್ಯಸಭಾ ಸದಸ್ಯ ಸ್ಥಾನ ಕೇಳಿರಲೇ ಇಲ್ಲ. ಮಾಧ್ಯಮದಲ್ಲಿ ಆ ವಿಚಾರ ಪ್ರಸ್ತಾಪವಾಯಿತು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು, ಒಮ್ಮೆ ದೇವೇಗೌಡರ ಹೆಸರು ಪ್ಯಾನಲ್‌ನಲ್ಲಿ ಇದೆ ಎಂದರು, ಮತ್ತೊಮ್ಮೆ ಇಲ್ಲ ಎಂದರು. ಆದರೆ, ನಮಗೆ ಯಾವ ಗೊಂದಲವೂ ಇರಲಿಲ್ಲ ಎಂದು ಶಾಸಕ ಎಚ್.ಡಿ.ರೇವಣ್ಣ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ದೇವೇಗೌಡರಿಗೆ ರಾಜ್ಯಸಭಾ ಸದಸ್ಯ ಸ್ಥಾನ ಮುಖ್ಯವಲ್ಲ, ಪ್ರಧಾನಿ ನರೇಂದ್ರ ಮೋದಿ ಅವರ ಕೈಬಲಪಡಿಸುವುದಷ್ಟೆ ನಮಗೆ ಮುಖ್ಯ. ನಾನಾಗಲಿ, ಎಚ್.ಡಿ. ಕುಮಾರಸ್ವಾಮಿ ಅವರಾಗಲಿ, ದೇವೇಗೌಡರಾಗಲಿ ಆ ಸ್ಥಾನ ಕೊಡಿ ಎಂದು ಬಿಜೆಪಿಯವರನ್ನು ಕೇಳಿರಲಿಲ್ಲ. ಕಾಂಗ್ರೆಸ್‌ನವರು ಈಗ ಚರ್ಚಿಸುತ್ತಿರುವುದು ಅಪ್ರಸ್ತುತ ಎಂದು ಹೇಳಿದರು.

> ಶಾಸಕ ಜಿ.ಟಿ.ದೇವೇಗೌಡ ಅವರು ಜೆಡಿಎಸ್ ಬಿಡುವುದಿಲ್ಲ. ಮುಂದಿನ ಚುನಾವಣೆಯಲ್ಲಿ ನಮ್ಮ ಪಕ್ಷದಿಂದಲೇ ಸ್ಪರ್ಧಿಸುತ್ತಾರೆ. ನಾನು, ಎಚ್‌ಡಿಕೆ, ಜಿಟಿಡಿ ಹಾಗೂ ಸಾ.ರಾ.ಮಹೇಶ್ ಎಲ್ಲರೂ ಕುಳಿತು ಚರ್ಚಿಸುತ್ತೇವೆ. ಜಿಟಿಡಿ ನಮ್ಮನ್ನು ಬಿಟ್ಟು ಎಲ್ಲೂ ಹೋಗುವುದಿಲ್ಲ. ಸಮಸ್ಯೆ ಬಗೆಹರಿಯುತ್ತದೆ. ಖುದ್ದು ಬಂದು ದೇವೇಗೌಡರನ್ನು ಭೇಟಿ ಮಾಡಿದ್ದಾರೆ.
> -ಎಚ್.ಡಿ.ರೇವಣ್ಣ ಶಾಸಕ

ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಹಾಸನದಲ್ಲಿರುವವರು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯಾ? ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾ ಎನ್ನುವುದು ಗೊತ್ತಿಲ್ಲ. ಅವರು ಏನು ಎಂಬುದನ್ನು ಬಿಜೆಪಿ ಅಧ್ಯಕ್ಷರೇ ಹೇಳಬೇಕು ಎಂದರು.

ಡಿ.ಕೆ.ಶಿವಕುಮಾರ್ ಸಿಎಂ ಆದರೆಂದು ಒಕ್ಕಲಿಗ ಮತಗಳು ಜೆಡಿಎಸ್‌ನಿಂದ ಚದುರಿ ಹೋಗುವುದಿಲ್ಲ. ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಆಗಿದ್ದಾಗ ಒಕ್ಕಲಿಗ ಮತಗಳು ಕಾಂಗ್ರೆಸ್‌ಗೆ ಹೋದವೇ? ಜೆಡಿಎಸ್‌ಗೆ ಒಕ್ಕಲಿಗ ಮತ ಬ್ಯಾಂಕ್ ಇದ್ದೇ ಇದೆ, ಮುಂದೆಯೂ ಸಮಸ್ಯೆ ಆಗುವುದಿಲ್ಲ ಎಂದರು.

ದೇವೇಗೌಡರ ರಾಜಕಾರಣ ಮುಗಿದೇ ಹೋಯಿತು ಎಂದು ಹಲವರು ಹೇಳಿದ್ದರು. ಈಗಲೂ ದೇವೇಗೌಡರು ರಾಜಕಾರಣ ಮಾಡುತ್ತಿಲ್ಲವೇ? ಡಿಕೆಶಿ ಸಿಎಂ ಆಗಿರುವುದಕ್ಕೂ ಒಕ್ಕಲಿಗ ಮತ ಬ್ಯಾಂಕ್‌ಗೂ ಸಂಬಂಧವಿಲ್ಲ, ನಮ್ಮ ಸಮಾಜದ ಒಬ್ಬರು ಸಿಎಂ ಆಗಿದ್ದಾರೆ. ಸಿದ್ದರಾಮಯ್ಯ ಅವರೇ ಮುಂದುವರಿಯುತ್ತಾರೆ ಎಂದು ಕೊಂಡಿದ್ದೆ. ಏನೋ ಒಪ್ಪಂದ ಎಂದು ಬಿಟ್ಟು ಕೊಟ್ಟಿದ್ದಾರೆ. ಹೊಸಬರು ಆಡಳಿತ ನಡೆಸಲಿ ಬಿಡಿ. 2028ರ ಚುನಾವಣೆಯ ಬಗ್ಗೆ ಈಗಲೇ ಏಕೆ ಮಾತು? ಎಂದು ಕೇಳಿದರು.

ವಿಶ್ವವಾಣಿ

ಸಂಪಾದಕೀಯ

ಗೃಹಲಕ್ಷ್ಮಿ ಲೋಪ ಸರಿಪಡಿಸಿ

ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಯಲ್ಲಿ ದೊಡ್ಡದೊಂದು ಪ್ರಮಾದ ವರದಿಯಾಗಿದೆ. ಸುಮಾರು 1.12 ಲಕ್ಷದಷ್ಟು ಮಂದಿ ಅನರ್ಹರಿಗೆ ಹಲವು ತಿಂಗಳುಗಳಿಂದ ಮಾಸಿಕ 2000 ರೂ.ಗಳಷ್ಟು ಗೃಹಲಕ್ಷ್ಮಿ ಹಣ ಸಂದಾಯ ಆಗುತ್ತಿದೆ. ಇವರಲ್ಲಿ ಹಲವರು ತೆರಿಗೆ ಪಾವತಿದಾರರು, ಅಂದರೆ ಈ ಯೋಜನೆಯ ಫಲಾನುಭವಿಗಳಾಗಲು ಅನರ್ಹರು ಮತ್ತು ಹಲವರು ಮೃತರು. ಒಟ್ಟಾರೆ ಹೀಗೆ ರಾಜ್ಯದ ಖಜಾನೆಗೆ ನಷ್ಟವಾದ ಹಣ ಹಲವು ಕೋಟಿಗಳಷ್ಟು. ಇದು ಯೋಜನೆಯ ಅನುಷ್ಠಾನದ ಹಂತದಲ್ಲಿ ನಡೆದ ಬೃಹತ್ ಪ್ರಮಾದ. ಇದೀಗ ಅನರ್ಹರನ್ನು ಪತ್ತೆ ಹಚ್ಚುವ ಕಾರ್ಯ ನಡೆಯುತ್ತಿದ್ದು, ಅನರ್ಹರ ಹೆಸರನ್ನು ಪಟ್ಟಿಯಿಂದ ಡಿಲೀಟ್ ಮಾಡಲಾಗುತ್ತಿದೆ. ಅರ್ಹರನ್ನು ಗುರುತಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದ್ದರೆ ತೆರಿಗೆ ಪಾವತಿದಾರರನ್ನು ಸೇರಿಸಿಕೊಳ್ಳುವ ಪ್ರಮಾದ ಆಗುತ್ತಿರಲಿಲ್ಲ. ಇನ್ನು ಮೃತರ ವಿಷಯ. ಇಂದು ಜನನ ಹಾಗೂ ಮರಣಗಳು ಆ ಕ್ಷಣವೇ ನೋಂದಣಿ ಆಗುತ್ತಿವೆ. ಇವನ್ನೆಲ್ಲ ಡಿಜಿಟಲೀಕರಣ ಮಾಡಿ ಬಹಳ ಕಾಲವಾಯಿತು. ಈ ಡಾಟಾಗಳನ್ನು ಈ ಯೋಜನೆಗೆ ಜೋಡಿಸುವುದು ಕಷ್ಟದ ಕೆಲಸವೇನಲ್ಲ. ಮೃತರ ಹೆಸರನ್ನು ಡಿಲೀಟ್ ಮಾಡುವುದು ಒಂದು ಕ್ಲಿಕ್‌ನಲ್ಲಿ ಆಗುವಂಥ ಕೆಲಸ. ಇಷ್ಟನ್ನೂ ಸಮರ್ಥವಾಗಿ ಮಾಡಲು ಸಾಧ್ಯವಿಲ್ಲ ಎಂದರೇನರ್ಥ. ಗೃಹಲಕ್ಷ್ಮಿ ಯೋಜನೆಯಲ್ಲಿ ನಡೆದ ಹಗರಣ, ಇನ್ನಿತರ ಗ್ಯಾರಂಟಿ ಯೋಜನೆಗಳಲ್ಲೂ ನಡೆದಿಲ್ಲ ಎಂಬ ಖಾತ್ರಿಯೇನೂ ಇಲ್ಲ. ಈಗಾಗಲೇ ಶಕ್ತಿ ಯೋಜನೆಯಲ್ಲಿ ಸಿಬ್ಬಂದಿಯಿಂದಲೂ ಹಲವು ಜನಸಾಮಾನ್ಯರಿಂದಲೂ ದುರ್ಬಳಕೆ ನಡೆದ ವರದಿಗಳಿವೆ. ಆದರೆ ಇವು ದೊಡ್ಡ ಪ್ರಮಾಣದಲ್ಲಿ ನಡೆದಿವೆಯೇ ಎಂಬುದನ್ನು ತನಿಖೆಯಿಂದ ಪತ್ತೆ ಹಚ್ಚಬೇಕಷ್ಟೆ. ಗೃಹಜ್ಯೋತಿ ಯೋಜನೆಯ ಮಾನದಂಡದ ಬಗ್ಗೆಯೇ ಕಟು ವಿಮರ್ಶೆಗಳಿವೆ. ಇದರಲ್ಲಿ ಯುನಿಟ್‌ಗಳನ್ನು ಹೇಗೆ ನಿಗದಿಪಡಿಸಲಾಗುತ್ತಿದೆ ಎಂಬುದು ಸಾಮಾನ್ಯ ಬಳಕೆದಾರನಿಗೆ ಗೊತ್ತೇ ಆಗುತ್ತಿಲ್ಲ. ಮಾಸಿಕ ಸರಾಸರಿ ವಿದ್ಯುತ್ ಬಳಕೆಯ ಮೇಲೆ, 200 ಯುನಿಟ್‌ಗಳ ವಿದ್ಯುತ್ ಬಳಕೆ ಉಚಿತ ಹಾಗೂ ಮಿಕ್ಕಿದ್ದಕ್ಕೆ ಶುಲ್ಕ ಎಂದು ಲೆಕ್ಕ. ಹೊಸ ಬಾಡಿಗೆದಾರರಿಗೆ, ಮನೆ ಕಟ್ಟಿದವರಿಗೆ ಇದರ ಲಾಭ ಲಭಿಸುತ್ತಿಲ್ಲ. ಹಲವೊಮ್ಮೆ ನಿಗೂಢ ರೀತಿಯಲ್ಲಿ ಶುಲ್ಕ ಜಡಿಯಲಾಗುತ್ತಿದೆ. ಯೋಜನೆಗಳನ್ನು ಆರಂಭಿಸುವುದು ಸುಲಭ. ಆದರೆ ಅವುಗಳನ್ನು ಲೋಪವಿಲ್ಲದೆ ದಡ ಸೇರಿಸಲು ಕಾರ್ಯಾಂಗವೂ ಪೂರಕವಾಗಿ, ಪ್ರಾಮಾಣಿಕವಾಗಿ ಹಾಗೂ ಚುರುಕಾಗಿ ದುಡಿಯಬೇಕಾಗುತ್ತದೆ. ಇಲ್ಲವಾದರೆ ಗೃಹಲಕ್ಷ್ಮಿಯಂಥ ಪ್ರಮಾದಗಳು ಘಟಿಸುತ್ತವೆ.

ಸೊಂಪಾದಕೀಯ

ಜಿಪಿಎಸ್ ಎಂಬ ಸರಪಳಿ

ದಿಲ್ಲಿಯ ಕಂಪನಿಯೊಂದು ಸಿಬ್ಬಂದಿಗಳಿಗೆ ವರ್ಕ್ ಫ್ರಂ ಹೋಂ ಕೊಟ್ಟಿದೆ. ಕೊಡುವಾಗ, ಉದ್ಯೋಗಿಗಳನ್ನು ಜಿಪಿಎಸ್‌ಗೆ ಅಟ್ಯಾಚ್ ಮಾಡಿದೆ. ಅದರ ಕಂಡಿಷನ್ ಪ್ರಕಾರ, ಉದ್ಯೋಗಿಗಳು ದಿಲ್ಲಿ- ಎನ್‌ಸಿಆರ್ ಬಿಟ್ಟು ಹೋಗಬಾರದು. ನೌಕರರು ಬೇರೆಲ್ಲಾದರೂ ಹೋದರೆ ಕಂಪನಿಗೆ ಗೊತ್ತಾಗಿಬಿಡುತ್ತದೆ. 'ಇದೊಂದು ಬಗೆಯ ಆಧುನಿಕ ಜೀತ' ಎಂದು ಕೆಲವರು ಕಿಡಿ ಕಾರಿದ್ದಾರೆ. ಉದ್ಯೋಗಿಗಳಿಗೆ ಅಂಟಿಸಿದ ಈ ಜಿಪಿಎಸ್, ಅವರಿಗೇ ಕಾಣದ, ಆದರೆ ಕಂಪನಿಗೆ ಅದೃಶ್ಯವಾಗಿ ಬಿಗಿದ ಕಾಲಿನ ಸರಪಳಿ ಎಂದು ಭಾವಿಸಲು ಅಡ್ಡಿಯಿಲ್ಲ. ಆದರೆ ವರ್ಕ್ ಫ್ರಂ ಹೋಮ್ ನೀಡಿದ ಕೂಡಲೇ ಹೆಚ್ಚಿನ ಕೆಲಸಗಾರರು ತಮ್ಮ ಊರಿಗೆ ಪರಾರಿ ಆಗಿಬಿಡುತ್ತಾರೆ. ಯಾಕೆಂದರೆ ಅಲ್ಲಿ ಜೀವನವೆಚ್ಚ ಕಡಿಮೆ. ದಿಲ್ಲಿಯಂಥ ಸಿಟಿಯಲ್ಲಿ ಕೊಡುವಂತೆ ಲಕ್ಷಗಟ್ಟಲೆ ರೂಂ ಬಾಡಿಗೆ ಕೊಡಬೇಕಿಲ್ಲ ಎಂಬುದೇನೋ ಉದ್ಯೋಗಿಗಳ ದೃಷ್ಟಿಯಿಂದ ಯೋಚಿಸಿದರೆ ಸರಿಯೇ. ಆದರೆ ಅರ್ಜೆಂಟ್ ಆಗಿ ನೌಕರರನ್ನು ಆಫೀಸಿಗೆ ಕರೆಸಬೇಕಾದರೆ ಕಷ್ಟವಾಗಿ ಬಿಡುತ್ತದೆ ಎಂದು ಕಂಪನಿಯ ದೃಷ್ಟಿಕೋನ. ಈ ಸುದ್ದಿ ಕೇಳಿದ ಬೆಂಗಳೂರಿನ ಐಟಿ ಕಂಪನಿಗಳು ಕೂಡ ಹೀಗೇ ಮಾಡಲು ಸ್ಕೆಚ್ ಹಾಕುತ್ತಿವೆ ಎಂಬ ಸುದ್ದಿಯೇನೂ ಬಂದಿಲ್ಲ. ಆದರೆ, ಕಾಫಿ ಟೀ ಅಂತ ಎರಡೆರಡು ಗಂಟೆ ಆಫೀಸಿನಿಂದ ಹೊರಗೆ ಸುತ್ತಾಡುವ ಉದ್ಯೋಗಿಗಳನ್ನು ಟ್ರ್ಯಾಕ್ ಮಾಡಲು ಈ ತಂತ್ರ ಬಳಸಬಹುದಲ್ಲಾ ಎಂದು ಕೆಲವು ಕಂಪನಿಗಳ ಎಚ್‌ಆರ್‌ಗಳಾದರೂ ಯೋಚಿಸಿರಲಿಕ್ಕೂ ಸಾಕು. ಆದರೆ ಕೆಲಸಕ್ಕೆ ಲಾಗಿನ್ ಆಗಿ ಮನೆಯಲ್ಲಿ ಪಾತ್ರೆ ತೊಳೆಯುವ, ಸಿನಿಮಾ ನೋಡುವ ಉದ್ಯೋಗಿಗಳನ್ನು ಏನು ಮಾಡುವುದು? ನಾವು ಶ್ರೀಲಂಕಾದಿಂದ ವರ್ಕ್ ಫ್ರಂ ಹೋಮ್ ಮಾಡುತ್ತೇವೆ, ಆದರೆ ಯಲಹಂಕದಿಂದ ಎಲೆಕ್ಟ್ರಾನಿಕ್ ಸಿಟಿಗೆ ಹೋಗಿ ಬರುವ ಮಾತೇ ಇಲ್ಲ ಎನ್ನುವ ಉದ್ಯೋಗಿಗಳ ಮನ ಒಲಿಸಲು ಸಾಧ್ಯವಿದೆಯೇ?

ಸಂಪಾದಕರ ಸದ್ಯಶೋಧನೆ

'ವಿಜಿಗೀಷು ಪ್ರವೃತ್ತಿ' ಎಂದರೇನು?

ಕೆಲವು ತಿಂಗಳುಗಳ ಹಿಂದೆ, ಹಮಾಸ್ ಉಗ್ರರ ದಾಳಿಯಲ್ಲಿ ಬದುಕುಳಿದ ಇಸ್ರೇಲಿಗಳು ಹೇಳಿದ ಕತೆಗಳನ್ನೊಳಗೊಂಡ, ನಾನು ಅನುವಾದಿಸಿದ, 'ಬದುಕುಳಿದವರು ಕಂಡಂತೆ' ಪುಸ್ತಕದ ಬಿಡುಗಡೆ ಸಮಾರಂಭದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿಯವರು ಮಾತಾಡುತ್ತಾ, 'ಇಸ್ರೇಲಿಗಳು ಇಂದಿಗೂ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಂಡಿದ್ದರೆ ಅದಕ್ಕೆ ಅವರ 'ವಿಜಿಗೀಷು ಪ್ರವೃತ್ತಿ'ಯೇ ಕಾರಣ' ಎಂದು ಹೇಳಿದರು. ತಮ್ಮ ಮಾತಿನಲ್ಲಿ ನಾಲ್ಕೈದು ಸಲ ಅವರು 'ವಿಜಿಗೀಷು ಪ್ರವೃತ್ತಿ' ಎಂಬ ಪದಪುಂಜವನ್ನು ಬಳಸಿದರು. ನಾನು ಈ ಪದವನ್ನು ಪ್ರೊ.ಕೆ.ಎಸ್. ನಾರಾಯಣಾಚಾರ್ಯರರು ಬಳಸಿದ್ದನ್ನು ಕೇಳಿದ್ದೆ. ರಾಜಕಾರಣಿಯೊಬ್ಬರ ಬಾಯಿಯಿಂದ ಈ ಪದವನ್ನು ಕೇಳಿದ್ದು ಅದೇ ಮೊದಲು. ಮರುದಿನ ನಾನು ಪ್ರಲ್ಹಾದ ಜೋಶಿ ಅವರಿಗೆ ಫೋನ್ ಮಾಡಿ, 'ನಿಮ್ಮ ಭಾಷಣದಲ್ಲಿ 'ವಿಜಿಗೀಷು ಪ್ರವೃತ್ತಿ' ಎಂಬ ಪದವನ್ನು ಬಳಸಿದ್ದು ನನಗೆ ಬಹಳ ಖುಷಿಕೊಟ್ಟಿತು' ಎಂದು ಹೇಳಿದೆ. ರಾಜಕಾರಣಿಗಳನ್ನು ಬಿಡಿ, ಸಾಹಿತಿಗಳು, ವಿದ್ವಾಂಸರು ಸಹ ಸಾಮಾನ್ಯವಾಗಿ ಯಾರೂ ಆ ಪದವನ್ನು ಬಳಸುವುದಿಲ್ಲ. ಹೀಗಾಗಿ ಜೋಶಿಯವರ ಬಾಯಿಂದ ಆ ಪದ ಬಂದಾಗ ನನಗೆ ಅದು ವಿಶೇಷ ಎನಿಸಿತು. 'ವಿಜಿಗೀಷು' ಎಂಬುದು ಸಂಸ್ಕೃತ ಮೂಲದ ಅತ್ಯಂತ ಶಕ್ತಿಯುತವಾದ ಪದಗುಚ್ಛ. ಆಡಳಿತ, ರಾಜಕೀಯ, ಯುದ್ಧನೀತಿ ಹಾಗೂ ವ್ಯಕ್ತಿತ್ವ ವಿಕಸನದಲ್ಲಿ ಈ ಪದಕ್ಕೆ ವಿಶೇಷ ಸ್ಥಾನವಿದೆ. 'ವಿಜೇತುಮ್ ಇಚ್ಛುಃ ಇತಿ ವಿಜಿಗೀಷುಃ' ಎಂದರೆ 'ವಿಜಯವನ್ನು ಸಾಧಿಸಲೇಬೇಕು ಎಂದು ತೀವ್ರವಾಗಿ ಹಂಬಲಿಸುವವನು' ಅಥವಾ 'ಜಯಶಾಲಿಯಾಗುವ ಮಹದಾಸೆ ಉಳ್ಳವನು' ಎಂದರ್ಥ. ಇನ್ನು ಪ್ರವೃತ್ತಿ ಎಂದರೆ ಸ್ವಭಾವ, ಗುಣ, ಅಥವಾ ನಡೆದುಕೊಳ್ಳುವ ರೀತಿ. ಆದ್ದರಿಂದ, ವಿಜಿಗೀಷು ಪ್ರವೃತ್ತಿ ಎಂದರೆ ಯಾವುದೇ ಸವಾಲಿನ, ಕಠಿಣ ಪರಿಸ್ಥಿತಿಯಲ್ಲಿ ಎದುರಾಳಿಯನ್ನು ಸದೆಬಡಿದು, ತಾನು ಅಂದುಕೊಂಡ ಗುರಿಯಲ್ಲಿ ಅಂತಿಮ ಗೆಲುವನ್ನು ಪಡೆಯಲೇಬೇಕು ಎಂಬ ಛಲ ಮತ್ತು ಸಾಹಸ ಮನೋಭಾವ ಹೊಂದುವುದು. ಭಾರತೀಯ ರಾಜತಾಂತ್ರಿಕ ಇತಿಹಾಸದಲ್ಲಿ ಈ ಪದಕ್ಕೆ ರಾಜಕೀಯ ಆಯಾಮ ನೀಡಿದವರು ಮಹಾಜ್ಞಾನಿ ಕೌಟಿಲ್ಯ (ಚಾಣಕ್ಯ). ತನ್ನ ಪ್ರಸಿದ್ಧ ಗ್ರಂಥ 'ಅರ್ಥಶಾಸ್ತ್ರ'ದ 'ಮಂಡಲ ಸಿದ್ಧಾಂತ'ದಲ್ಲಿ ಕೌಟಿಲ್ಯನು ಒಬ್ಬ ಆದರ್ಶ ರಾಜನಿಗೆ ಇರಬೇಕಾದ ಮುಖ್ಯ ಗುಣವನ್ನು ವಿವರಿಸುವಾಗ 'ವಿಜಿಗೀಷು' ಪದವನ್ನು ಬಳಸುತ್ತಾನೆ. ಕೌಟಿಲ್ಯನ ಪ್ರಕಾರ, ಸಾಮ್ರಾಜ್ಯವನ್ನು ವಿಸ್ತರಿಸಲು, ಪ್ರಜೆಗಳನ್ನು ರಕ್ಷಿಸಲು ಮತ್ತು ಶತ್ರುಗಳನ್ನು ಸದೆಬಡಿಯಲು ಬಯಸುವ ಕೇಂದ್ರ ರಾಜನೇ 'ವಿಜಿಗೀಷು'. ಆತನ ಸುತ್ತಮುತ್ತಲಿನ ರಾಜ್ಯಗಳು ಮಿತ್ರ ಅಥವಾ ಶತ್ರುಗಳಾಗಿರುತ್ತಾರೆ. ಆದರೆ ವಿಜಿಗೀಷು ಆದವನು ತನ್ನ ಬುದ್ಧಿಬಲ, ಬಾಹುಬಲ ಮತ್ತು ಚತುರೋಪಾಯಗಳಿಂದ (ಸಾಮ, ದಾನ, ಭೇದ, ದಂಡ) ಎಲ್ಲರನ್ನೂ ಗೆದ್ದು ಸಾರ್ವಭೌಮನಾಗುತ್ತಾನೆ. ಒಬ್ಬ ವ್ಯಕ್ತಿ ಅಥವಾ ನಾಯಕನಲ್ಲಿ ವಿಜಿಗೀಷು ಪ್ರವೃತ್ತಿ ಇದೆ ಎಂದರೆ ಅವನಲ್ಲಿ ಕೆಲವು ಗುಣಗಳು ಎದ್ದು ಕಾಣುತ್ತವೆ. ಆ ಪೈಕಿ ಅಚಲವಾದ ಮಹತ್ವಾಕಾಂಕ್ಷೆ, ಸೋಲೊಪ್ಪದ ಮನೋಭಾವ, ಸ್ಪರ್ಧಾತ್ಮಕ ಮನೋಭಾವ, ಕಾರ್ಯತತ್ಪರತೆ ಮತ್ತು ಶೌರ್ಯ ಪ್ರಮುಖವಾದವು. ಸಾಮಾನ್ಯ ಜನರು ಸಣ್ಣ ಸೋಲು ಅಥವಾ ಅಡೆತಡೆಗಳು ಬಂದಾಗ ಧೃತಿಗೆಟ್ಟು ಕುಳಿತುಕೊಳ್ಳುತ್ತಾರೆ. ಆದರೆ ವಿಜಿಗೀಷು ಪ್ರವೃತ್ತಿಯವರು ಸೋಲನ್ನು ಕೇವಲ ಒಂದು ತಾತ್ಕಾಲಿಕ ಘಟನೆ ಎಂದು ಭಾವಿಸುತ್ತಾರೆ. ಬಿದ್ದಷ್ಟೂ ವೇಗವಾಗಿ ಪುಟಿಯುವ ಗುಣ ಇವರದ್ದಾಗಿರುತ್ತದೆ. ಇವರು ಪರಿಸ್ಥಿತಿ ತಮಗೆ ಪೂರಕವಾಗುವವರೆಗೆ ಕಾಯುವುದಿಲ್ಲ. ಬದಲಿಗೆ ತಾವೇ ಪರಿಸ್ಥಿತಿಯನ್ನು ಸೃಷ್ಟಿಸುತ್ತಾರೆ ಅಥವಾ ತಮಗೆ ಅನುಕೂಲವಾಗುವಂತೆ ತಿರುಗಿಸಿಕೊಳ್ಳುತ್ತಾರೆ. ಇವರ ನಿಘಂಟಿನಲ್ಲಿ 'ಅಸಾಧ್ಯ' ಎಂಬ ಪದವೇ ಇರುವುದಿಲ್ಲ. ಇವರಿಗೆ ಕೇವಲ 'ಬದುಕುಳಿಯುವುದು' ಮುಖ್ಯವಲ್ಲ, ಬದಲಿಗೆ ಆಯಾ ಕ್ಷೇತ್ರದಲ್ಲಿ 'ಅಗ್ರಸ್ಥಾನ' ಪಡೆಯುವುದು ಮುಖ್ಯವಾಗಿರುತ್ತದೆ. ಮಧ್ಯಮ ದರ್ಜೆಯ ಯಶಸ್ಸು ಇವರ ಹಸಿವನ್ನು ನೀಗಿಸುವುದಿಲ್ಲ. ವಿಜಿಗೀಷು ಪ್ರವೃತ್ತಿ ಪ್ರಗತಿಗೆ ಪೂರಕವಾಗಿದ್ದರೂ, ಅದು ಮಿತಿ ಮೀರಬಾರದು. ಗೆಲುವಿನ ಹಪಾಹಪಿಯಲ್ಲಿ ಅಹಂಕಾರ ತಲೆಗೇರಬಾರದು. ಯಾವುದೇ ಬೆಲೆ ತೆತ್ತಾದರೂ ಗೆಲ್ಲಲೇಬೇಕು ಎನ್ನುವ ಧಾವಂತದಲ್ಲಿ ನೈತಿಕತೆಯನ್ನು ಮರೆಯಬಾರದು. ಕೌಟಿಲ್ಯನೂ ಕೂಡ ಧರ್ಮವಿಜಯಕ್ಕೇ ಆದ್ಯತೆ ನೀಡಿದ್ದಾನೆಯೇ ಹೊರತು ಅಧರ್ಮಕ್ಕಲ್ಲ. ವಿಜಿಗೀಷು ಪ್ರವೃತ್ತಿ ಎಂದರೆ ಕೇವಲ ಯುದ್ಧ ಹೂಡುವುದಲ್ಲ, ಅದು ತನ್ನ ಮಿತಿಗಳನ್ನು ಮೀರಿ ಬೆಳೆಯುವ, ಸವಾಲುಗಳನ್ನು ಸದೆಬಡಿಯುವ ಮತ್ತು ಬದುಕಿನ ಪ್ರತಿ ಹಂತದಲ್ಲೂ ವಿಜಯಶಾಲಿಯಾಗಿ ಹೊರಹೊಮ್ಮುವ ಶ್ರೇಷ್ಠ ಮಾನಸಿಕ ಶಕ್ತಿಯಾಗಿದೆ.

ಎಲ್ಲರ ತಲೆಯೊಳಗಿರುವ ಅವನೊಬ್ಬ ವಿಚಿತ್ರ ಇತಿಹಾಸಕಾರ!

ನಾವೆಲ್ಲ ನೆನಪನ್ನು ಒಂದು ಉಗ್ರಾಣ ಎಂದು ಭಾವಿಸಿದ್ದೇವೆ. ಬದುಕು ನಡೆಯುತ್ತದೆ, ಮೆದುಳು ಅದನ್ನು ರೆಕಾರ್ಡ್ ಮಾಡಿಕೊಳ್ಳುತ್ತಾ ಹೋಗುತ್ತದೆ, ಮತ್ತು ಬೇಕಾದಾಗ ಉಗ್ರಾಣಕ್ಕೆ ಹೋಗಿ ಆ ಫೈಲ್ ತೆಗೆದು ನೋಡುತ್ತದೆ- ಎಂದು. ನೆನಪೆಂದರೆ ಒಂದು ರೀತಿಯ ಲೈಬ್ರರಿ ಎಂದು. ನಮ್ಮ ನೆನಪು ಕೆಲಸ ಮಾಡುವ ರೀತಿ ಕಂಪ್ಯೂಟರ್ ರೀತಿ ಎನ್ನುವುದು ಹೌದೆ?



ಶಿಶಿರಕಾಲ
ಶಿಶಿರ್ ಹೆಗಡೆ
vveditoped@gmail.com

ಮೂರೂರಿನಲ್ಲಿ ನನ್ನ ಸೋದರಮಾವನ ಮಗಳ ಮದುವೆ ಸಂದರ್ಭ. ಬೇಸಿಗೆಯ ಸೆಖೆಯಲ್ಲಿ ನಡೆಯುವ ಮದುವೆಯ ಕಥೆ ಗೊತ್ತಲ್ಲ ! ಅದಾಗಲೇ ಬಹುತೇಕರ ಬಟ್ಟೆ ರವಿಚಂದ್ರನ್ ಚಲನಚಿತ್ರದ ಹೀರೋ ಹೀರೋಯಿನ್ ತರಹ ಒದ್ದೆಯಾಗಿತ್ತು, ಬೆವರಿಗೆ. ಊಟದ ಪಂಕ್ತಿಯಲ್ಲಿ ಮೇಲೆ ಹಾಕಿದ ಫ್ಯಾನುಗಳು ಬಿಸಿ ಗಾಳಿಯನ್ನು ಒಂದು ಚೂರು ಕೂಡ ಹಾಳುಮಾಡದೇ ತಗಡಿನಿಂದ ನೇರವಾಗಿ ಕೆಳಗಿರುವ ನೆಂಟರನ್ನು ಇನ್ನಷ್ಟು ಬಿಸಿಮಾಡುತ್ತಿದ್ದವು! ಎರಡು ಫ್ಯಾನಿನ ನಡುವೆ ಸೀಟು ಸಿಕ್ಕವರಿಗೆ ಬಿಸಿ ಗಾಳಿಯ ಕನಿಷ್ಠ ಪುಣ್ಯವೂ ಇಲ್ಲ. ಒಟ್ಟಾರೆ ಊಟದ ಪಂಕ್ತಿಯಲ್ಲಿ ಎಲ್ಲರೂ ನಡು ಬಗ್ಗಿಸಿ, ಬೆವರಿಳಿಸಿ ಊಟ ಮಾಡುತ್ತಿದ್ದರು!

ನಾನೀಗ ಹೇಳಲು ಹೊರಟಿರುವ ಕುಶಾಲಿನ ಜಟಾಪಟಿ ನಡೆದದ್ದು ಪಾಯಸ ಮತ್ತು ಎರಡನೇ ಬಾರಿ ಜಿಲೇಬಿ ಬರುವ ನಡುವಿನ ಆ ಐದು ನಿಮಿಷದ ಗ್ಯಾಪ್‌ನಲ್ಲಿ. ಗಲಾಟೆಯ ವಿಷಯ ಏನೆಂದು ಕೇಳಿದಿರಾ? ವರದಕ್ಷಿಣೆಯ ವಿಚಾರವೂ ಅಲ್ಲ, ಆಸ್ತಿ ಅಥವಾ ರಾಜಕೀಯ ವಿಷಯವೂ ಅಲ್ಲ, ಬೀಗರ ಗಲಾಟೆಯೂ ಅಲ್ಲ. ವಿಷಯ ತೀರಾ ಪೊಕ್ಕು. ಮೂವತ್ತೈದು ವರ್ಷದ ಹಿಂದೆ ನಮ್ಮೂರಲ್ಲಿ ಆದ ನೆರೆಹಾವಳಿ- ಅತಿವೃಷ್ಟಿ ಯಾವ ಇಸವಿಯಲ್ಲಿ ಆಗಿದ್ದು ಎಂದು!

ನಮ್ಮ ಊರಿನ ಅಧಿಕೃತ ಇತಿಹಾಸಕಾರ ಎಂದು ಸ್ವತಃ ತಮ್ಮನ್ನು ತಾವೇ ನೇಮಿಸಿಕೊಂಡಿರುವ ಪುಟ್ಟಣ್ಣ ಹೆಗಡೇರು ಶಂಕ್ರಪ್ಪ ಆಚಾರಿಯ ಕೊಟ್ಟಿಗೆ ಕೊಚ್ಚಿಕೊಂಡು ಹೋದ ದೊಡ್ಡ ನೆರೆ ಬಂದದ್ದು 1989ರಲ್ಲಿ. ಅದೇ ವರ್ಷ ಶಾರದತ್ತೆ ಮದುವೆ ಆಗಿತ್ತು. ಹೌದು, ಆ ವರ್ಷವೇ ನೆರೆಹಾವಳಿ! ಅವರು ಹೇಳಿದ ಧಾಟಿ ಹೇಗಿತ್ತೆಂದರೆ, ಹೈಕೋರ್ಟ್ ಜಡ್ಜ್ ತೀರ್ಪು ಓದಿ ಪೆನ್ನು ಕೆಳಕ್ಕಿಟ್ಟಂತೆ! ಕೇಸ್ ಮೊಕ್ಲಿಕ್. ಅದನ್ನು ಕೇಳಿದ ಗಣಪಯ್ಯ ಮಾವ ಶಾಂತವಾಗಿ ಬಾಳೆಲೆಯಿಂದ ತಲೆ ಮೇಲಕ್ಕೆತ್ತುತ್ತ, ಅಷ್ಟೇ ಖಚಿತವಾಗಿ: ಅದು 1991.

ಆಗ ತಾನೇ ನಾನು ರಾಜದೂತ್ ತಗೊಂಡಿದ್ದೆ, ಅದಕ್ಕೇ ನೆನಪು. ಎಂತದ್ದು ರಾಜದೂತ್? ನೀನು ರಾಜದೂತ್ ತಗೊಂಡದ್ದು ಬಾಬರಿ ಮಸೀದಿ ಆದ ಮೇಲೆ! ಇಲ್ಲಪ್ಪ ಆ ನೆರೆ ನೀರಲ್ಲಿ ಮೊಣಕಾಲವರೆಗೆ ನೀರಿದ್ದ ಹಳ್ಳ ದಾಟಿದ್ದೆ ನಾನು! ಅಯ್ಯೋ, ನೀನು ಆ ಮಳೆಗಾಲ ಪೂರ್ತಿ ಹುಬ್ಬಳ್ಳಿಯಲ್ಲಿದ್ದೆ ಮಾರಾಯ! ಇನ್ನಿಬ್ಬರು ಮಾತಿಗೆ ಜೊತೆಯಾದರು. ಇಲ್ಲಪ್ಪಾ.. ಆಗ ದೊಡ್ಡ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದರು, ಹಾಗಾಗಿ ಅದು 1989! ಎಹ್ ನನಗೆ ನೆನಪಿದೆ, ವೀರೇಂದ್ರ ಪಾಟೀಲರು ಆಗ ಮುಖ್ಯಮಂತ್ರಿ- ನೆರೆಹಾವಳಿ ಬಂದದ್ದು 1989. ಬಿಲ್ಕುಲ್, ನೆರೆಹಾವಳಿಯಲ್ಲಿ ಗಂಜಿ ಕೇಂದ್ರ ಘೋಷಿಸಿದ್ದು ಬಂಗಾರಪ್ಪ - ಹಾಗಾಗಿ 1991! ಪ್ರತಿಯೊಬ್ಬರಿಗೂ ಅವರು ಹೇಳುತ್ತಿರುವುದು ಸತ್ಯವೆಂದು ನೂರಕ್ಕೆ ನೂರು ಖಾತ್ರಿ. ಪ್ರತಿಯೊಬ್ಬರ ನೆನಪಿಗೂ ಅವರದೇ ಸಾಕ್ಷಿಗಳು. ಬಂದ ನೆರೆಹಾವಳಿ ಒಂದೇ ಆದರೂ, ಪ್ರತಿಯೊಬ್ಬರ ನೆನಪಿನಲ್ಲೂ ಅವರದೇ ನೆನಪಿನ 'ನೆರೆಹಾವಳಿ'! ಊಟ ಮುಗಿಯುವ ಹೊತ್ತಿಗೆ ಎಲ್ಲರೂ ಒಪ್ಪಿಕೊಂಡ ಒಂದೇ ವಿಷಯವೆಂದರೆ- ಉಳಿದವರೆಲ್ಲರ ನೆನಪು ಸರಿಯಿಲ್ಲ - ನನಗೆ ನೆನಪಿದ್ದದ್ದೇ ಸರಿ!

ಆದರೇನು ಗೊತ್ತಾ.. ಆ ಪಂಕ್ತಿಯಲ್ಲಿ ಯಾರೊಬ್ಬರೂ ಸುಳ್ಳು ಹೇಳುತ್ತಿರಲಿಲ್ಲ. ಪ್ರತಿಯೊಬ್ಬರೂ ಸತ್ಯವನ್ನೇ ಹೇಳುತ್ತಿದ್ದರು- ಅವರವರ ನೆನಪಿನಲ್ಲಿ ಇದ್ದ ಹಾಗೆ. ತನಗೆ ನೆನಪಿದ್ದದ್ದೇ ಸತ್ಯ ಎನ್ನುವುದನ್ನು ಯಾರೊಬ್ಬರೂ ಬಿಟ್ಟುಕೊಡಲು ತಯಾರಿರಲಿಲ್ಲ!

ಇದು ಕೇವಲ ನನ್ನ ಕುಟುಂಬದ ಕಥೆಯಲ್ಲ. ಪ್ರತಿ ಭಾಷೆಯ, ಪ್ರತಿ ಊರಿನ, ಸತ್ಯನಾರಾಯಣ ಕಥೆ, ಸ್ನೇಹಕೂಟ, ಮದುವೆ ಪಂಕ್ತಿ ಹೀಗೆ ನಾಲ್ಕು ಜನ ಸೇರಿದಾಗ, ತಮ್ಮ ಗತಕಾಲವನ್ನು ನೆನಪು ಮಾಡಿಕೊಳ್ಳುವಾಗಲೆಲ್ಲ ಇದೇ ಸನ್ನಿವೇಶ ನಡೆಯುತ್ತದೆ. ಒಂದೇ ಘಟನೆ, ಆದರೆ ಒಬ್ಬೊಬ್ಬರದು ಒಂದೊಂದು ನೆನಪು. ಎಲ್ಲರಿಗೂ ತಮ್ಮ ನೆನಪಿನ ಮೇಲೆ ಎಲ್ಲಿಲ್ಲದ ನಂಬಿಕೆ, ದೃಢತೆ.

ಅದೇಕೆ ಹೀಗೆ? ನಾವೆಲ್ಲ ನೆನಪನ್ನು ಒಂದು ಉಗ್ರಾಣ ಎಂದು ಭಾವಿಸಿದ್ದೇವೆ. ಬದುಕು ನಡೆಯುತ್ತದೆ, ಮೆದುಳು ಅದನ್ನು ರೆಕಾರ್ಡ್ ಮಾಡಿಕೊಳ್ಳುತ್ತಾ ಹೋಗುತ್ತದೆ, ಮತ್ತು ಬೇಕಾದಾಗ ಉಗ್ರಾಣಕ್ಕೆ ಹೋಗಿ ಆ ಫೈಲ್ ತೆಗೆದು ನೋಡುತ್ತದೆ- ಎಂದು. ನೆನಪೆಂದರೆ ಒಂದು ರೀತಿಯ ಲೈಬ್ರರಿ, ಕಂಪ್ಯೂಟರಿನ ಹಾರ್ಡ್ ಡಿಸ್ಕ್ , ತಲೆಬುರುಡೆಯೊಳಗೆ ಭದ್ರವಾಗಿ ಇಟ್ಟಿರುವ ವೀಡಿಯೋ ಕ್ಯಾಸೆಟ್ ಎಂದು. ನಮ್ಮ ನೆನಪು ಕೆಲಸ ಮಾಡುವ ರೀತಿ ಕಂಪ್ಯೂಟರ್ ರೀತಿ ಎನ್ನುವುದು ಹೌದೆ?

ವಿಜ್ಞಾನವೂ ಮನುಷ್ಯ ನೆನಪು 'ವಿಡಿಯೋ ಕೆಸೆಟ್'ನಂತೆ ಕೆಲಸ ಮಾಡುತ್ತದೆ ಎಂದೇ ಒಂದೆರಡು ಶತಮಾನ ನಂಬಿಕೊಂಡಿತ್ತು. ಆದರೆ ಇತ್ತೀಚೆ ಅತ್ಯಾಧುನಿಕ ಬ್ರೈನ್ ಸ್ಕ್ಯಾನಿಂಗ್ ಉಪಕರಣ ಗಳನ್ನು ಬಳಸಿ ನಡೆದ ಪ್ರಯೋಗಗಳಲ್ಲಿ ಕೆಲವೊಂದಿಷ್ಟು ಹೊಸ ವಿಷಯಗಳು ಸಿದ್ಧವಾಗಿವೆ. ಏನೆಂದರೆ ನಾವು ನೀವು ಏನನ್ನಾದರೂ ನೆನಪಿಸಿಕೊಂಡಾಗಲೆಲ್ಲ ಮೆದುಳು ಎಲ್ಲೋ ಒಂದು ಕಡೆ ಕುಳಿತ ಪ್ಲೇ ಬಟನ್ ಒತ್ತುವುದಿಲ್ಲ. ಅಸಲಿಗೆ ಮೆದುಳು ಇಡೀ ದೃಷ್ಟಾಂತವನ್ನು ನೆನಪಿನಲ್ಲಿಟ್ಟುಕೊಳ್ಳುವುದಿಲ್ಲ. ಬದಲಿಗೆ ಘಟನೆಯ ಕೆಲವೇ ತುಣುಕುಗಳನ್ನು ಮಾತ್ರ ನೆನಪಿಟ್ಟುಕೊಂಡಿರುತ್ತದೆ. ಕ್ರಿಕೆಟ್ ಹೈಲೈಟ್ಸ್‌ನಂತೆ. ಹಳೆಯ ಘಟನೆಯನ್ನು ನೆನಪು ಮಾಡಿಕೊಂಡಾಗ, ಈ ನೆನಪಿನ ತುಣುಕುಗಳನ್ನು, ಅದರ ಜೊತೆ ಆಗ ಸಂಭವಿಸಿದ್ದ ನಮ್ಮೊಳಗಿನ ಭಾವನೆ, ನಂತರ ಆ ವಿಷಯದ ಬಗ್ಗೆ ಕೇಳಿದ ಮಾತುಗಳು, ನಂತರ ನೋಡಿದ ಫೋಟೋ ಇತ್ಯಾದಿ ವಿಷಯಗಳನ್ನು ಬೆರೆಸಿ, ಸೇರಿಸಿ ಇಡೀ ದೃಷ್ಟಾಂತವನ್ನು, ಘಟನೆಯನ್ನು ಮನಸ್ಸಿನೊಳಗೆ ಇನ್ನೊಮ್ಮೆ ಸೃಷ್ಟಿಸುತ್ತದೆ.

ತಲೆ-ಹರಟೆ 1

ಇದನ್ನು ಮೆದುಳು, ಮನಸ್ಸು ಪ್ರತೀ ಬಾರಿ ಘಟನೆಯನ್ನು ನೆನಪುಮಾಡಿಕೊಂಡಾಗಲೂ ತಪ್ಪದೇ ಮಾಡುತ್ತದೆ. ಘಟನೆಯನ್ನು ಪ್ರತಿಬಾರಿ ಮರುಸೃಷ್ಟಿಸುತ್ತದೆ. ಬ್ರೈನ್ ಸ್ಕ್ಯಾನರ್ ಹುಟ್ಟುವ ಸಾವಿರಾರು ವರ್ಷ ಮೊದಲೇ ಪ್ರಾಚೀನ ದಾರ್ಶನಿಕರು ಇದನ್ನು ಪರೋಕ್ಷವಾಗಿಯೇ ಗಮನಿಸಿದ್ದರು, ಬಲ್ಲವರಾಗಿದ್ದರು ಹೌದು. ಮನಸ್ಸು ಯಾವತ್ತೂ ವಾಸ್ತವವನ್ನು ಪ್ರತಿಬಿಂಬಿಸುವುದಿಲ್ಲ, ಬದಲಿಗೆ ವ್ಯಾಖ್ಯಾನಿಸುತ್ತದೆ. ನಾವು 'ಭೂತಕಾಲ' ಎಂದು ಕರೆಯುವುದು ಯಥಾವತ್ ಘಟನೆಯನ್ನಲ್ಲ, ಬದಲಿಗೆ ನೆನಪಿದ್ದ ಘಟನೆಗಳ ಭಾಗ, ಭಾವನೆ ಮತ್ತು ಅರ್ಥಗಳನ್ನು ಹೆಣೆದು ಮಾಡಿದ ಒಂದು ಕಥೆಯನ್ನು. ಇದನ್ನು ಆಧುನಿಕ ನರವಿಜ್ಞಾನ ಸಾವಿರ ವರ್ಷಗಳ ನಂತರ ಕೋಟಿಗಟ್ಟಲೆ ಡಾಲರ್ ಕಳೆದು ಹೌದೆಂದಿದೆ.

ನಮ್ಮ ಮನೆಯಲ್ಲಿ ಅಪ್ಪ, ಚಿಕ್ಕಪ್ಪ, ಅತ್ತೆಯಂದಿರು ಹಳೆಯ ಯಾವುದೋ ಜೊತೆಯಲ್ಲಿದ್ದ ಘಟನೆಯನ್ನು, ಅಥವಾ ಅಜ್ಜನನ್ನು ನೆನಪಿಸಿಕೊಳ್ಳುವಾಗ ಕೂಡ ಇದನ್ನು ಗಮನಿಸಿದ್ದೇನೆ. ಒಬ್ಬೊಬ್ಬರಿಗೂ ಅಜ್ಜ ದಕ್ಕಿದ ರೀತಿಯಲ್ಲಿ ಅಜ್ಜನ ವ್ಯಕ್ತಿತ್ವವನ್ನು ವರ್ಣಿಸುತ್ತಾರೆ, ನೆನಪಿಸಿಕೊಳ್ಳುತ್ತಾರೆ. ಹಾಗಲ್ಲ ಹೀಗಾಗಿತ್ತು ಎಂದು ವಾದಕ್ಕಿಳಿಯುತ್ತಾರೆ. ಹಾಗಾದರೆ ಇಲ್ಲಿ ಯಾರು ಸರಿ? ಬಹುಶಃ ಎಲ್ಲರೂ. ಏಕೆಂದರೆ ಅವರು ನೆನಪಿಸಿಕೊಳ್ಳುತ್ತಿರುವುದು ಕ್ಯಾಮೆರಾ ರೆಕಾರ್ಡಿಂಗ್ ಅಲ್ಲ. ಅವೆಲ್ಲವೂ ಅವರವರ ಬಾಲ್ಯಗಳ ಜರಡಿಯಲ್ಲಿ ಹಾದು ಬಂದ ಒಂದೇ ಬದುಕು. ಘಟನೆ ಎಲ್ಲರದ್ದೂ ಒಂದೇ. ಅನುಭವ ಮಾತ್ರ ಅವರವರದ್ದು.

ಎರಡೂವರೆ ಸಾವಿರ ವರ್ಷಗಳ ಹಿಂದೆ ಬುದ್ಧ ಇದನ್ನೇ ಹೇಳಿದ್ದ. ನಾವು ಜಗತ್ತನ್ನು, ಘಟನೆಯನ್ನು ಇದ್ದಹಾಗೆಯೇ ನೋಡುವುದಿಲ್ಲ, ನಡೆದಂತೆಯೇ ನೆನಪಿಟ್ಟುಕೊಳ್ಳುವುದಿಲ್ಲ. ಬದಲಿಗೆ ನಮ್ಮ ಗ್ರಹಿಕೆಯ ಕನ್ನಡಕದ ಮೂಲಕ ನೋಡುತ್ತೇವೆ ಎಂದು. ಅವನಿಗೆ ಅದನ್ನು ಸಾಬೀತು ಮಾಡಲಿಕ್ಕೆ ಒಂದು ಮದುವೆ ಊಟದ ಪಂಕ್ತಿ ಸಿಕ್ಕಿರಲಿಲ್ಲ, ಅಷ್ಟೆ.

ಮನಃಶಾಸ್ತ್ರಜ್ಞರು ಕಂಡುಕೊಂಡಿರುವ ಇನ್ನೊಂದು, 'ನೆನಪಿನ ವಿಷಯದಲ್ಲಿ ಆತ್ಮವಿಶ್ವಾಸಕ್ಕೂ ನಿಖರತೆಗೂ ಸಂಬಂಧವೇ ಇಲ್ಲ' ಎಂದು. ಊಟದ ಪಂಕ್ತಿಯಲ್ಲಿ ಪುಟ್ಟಣ್ಣ ಹೆಗಡೇರ ಧ್ವನಿಯಲ್ಲಿದ್ದ ಆ ಖಚಿತತೆ ಆಧಾರದ ಮೇಲೆ ಅವರು ಹೇಳುತ್ತಿದ್ದುದೇ ಸತ್ಯ ಎನ್ನುವಂತಿಲ್ಲ. ನಿಜ ಹೇಳಬೇಕೆಂದರೆ, ಮತ್ತೆ ಮತ್ತೆ ನೆನಪಿಸಿಕೊಂಡರೆ, ಅರ್ಥಾತ್ ಕಥೆಯ ಮರುಸೃಷ್ಟಿ ಮಾಡುತ್ತಿದ್ದರೆ, ಕಾಲ ಕಳೆದಂತೆ ನಮ್ಮ ಕಥೆಯ ಮೇಲೆ ಆತ್ಮವಿಶ್ವಾಸ ಬೆಳೆಯುತ್ತಲೇ ಹೋಗುತ್ತದೆ.

ನೆನಪು ಮಾಡಿಕೊಂಡಾಗಲೆಲ್ಲ ನೆನಪಿರುವ ತುಣುಕುಗಳು ಮೂಲಕ ಕಥೆ ನಮ್ಮ ತಲೆಯೊಳಗೆ ಮರುಸೃಷ್ಟಿ ಆಗುತ್ತದೆ ಎಂದೆನಲ್ಲ, ಇಲ್ಲೊಂದು ಗಮನಿಸಬೇಕು. ಏನೆಂದರೆ, ಪ್ರತಿ ಬಾರಿ ನೆನಪು ಮಾಡಿಕೊಂಡಾಗಲೂ ಈ ಚಿಕ್ಕಪುಟ್ಟ ವಿಷಯಗಳು ಆಚೀಚೆಯಾಗುತ್ತವೆ, ಇಲ್ಲ ಕೆಲವೊಂದು ಮರೆತು ಹೋಗಿರುತ್ತದೆ. ಆ ರೀತಿ ಮರೆತ ವಿವರವನ್ನು ನಮ್ಮ ತಲೆ ನಮಗೆ ಗೊತ್ತಿಲ್ಲದಂತೆ ಮರುಸೃಷ್ಟಿಸಿರುತ್ತದೆ. ಉದಾಹರಣೆಗೆ, ಯಾವುದೋ ಒಂದು ಘಟನೆ ನೆನಪು ಮಾಡಿಕೊಳ್ಳುತ್ತಿದ್ದೀರಿ ಎಂದಿಟ್ಟುಕೊಳ್ಳಿ, ಅದರಲ್ಲಿ ಕೆಲವಷ್ಟೇ ನೆನಪಿದ್ದು ಇನ್ನು ಕೆಲವು ತಲೆಯ ಸೃಷ್ಟಿಯಾಗಿರಬಹುದು. ಘಟನೆ ನೆನಪಿರಬಹುದು, ಆದರೆ ಆ ಘಟನೆಯಲ್ಲಿ ಯಾವ ಅಂಗಿ ಹಾಕಿದ್ದ, ಅಥವಾ ಸಂಪೂರ್ಣ ನಡೆದ ಜಾಗ ಇತ್ಯಾದಿ ಮರೆತು, ಕಲ್ಪಿತ ಸೃಷ್ಟಿಯಾಗಿರಬಹುದು!

ಹಾಗಾಗಿ ಪ್ರತಿ ಬಾರಿ ನೆನಪಾದಾಗಲೂ ಕಥೆಯೂ ಕೊಂಚ ಬದಲಾಗುತ್ತಿರುತ್ತದೆ. ಬಹುತೇಕ ಬಾರಿ ಈ ರೀತಿ ನೆನಪಿನ ಬಿಟ್ಟ ಸ್ಥಳ ತುಂಬಿದಾಗ ಸತ್ಯವೇ ಆಚೀಚೆ ಆಗಿರುತ್ತದೆ! ಅರ್ಧ ಕಲ್ಪಿತ ಕಥೆಯನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತ, ಕೊನೆಗೆ ಅದುವೆ ಸತ್ಯವೆಂದು ನಾವೇ ಗಟ್ಟಿ ನಂಬಿಬಿಡುತ್ತೇವೆ! ಇಲ್ಲಿ ಹೈಲೈಟ್ ಮಾತ್ರ ಸತ್ಯ- ಅದರಿಂದ ಮರುಸೃಷ್ಟಿಸಿದ 'ಪೂರ್ಣ ಕ್ರಿಕೆಟ್ ಮ್ಯಾಚ್' ಸತ್ಯವಲ್ಲ, ಆದರೆ ಮ್ಯಾಚ್ ಸತ್ಯ.

ಮನಸ್ಸಿನ ಈ ಚಾಳಿಗೆ- ತಾನೇ ಕಟ್ಟಿದ ಕಥೆಯನ್ನು ವಾಸ್ತವ ಎಂದು ನಂಬುವ ಚಾಳಿಗೆ- ನಮ್ಮ ಪ್ರಾಚೀನ ಭಾರತೀಯ ದಾರ್ಶನಿಕರ ಬಳಿ ಒಂದು ನಿಖರವಾದ ಪದವೇ ಇತ್ತು. ಮಾಯೆ. ಮಾಯೆಯನ್ನು ನಾವು 'ಭ್ರಮೆ' ಎಂದು ಭಾವಿಸುತ್ತೇವೆ. ಆದರೆ ಮಾಯೆ ಎಂದರೆ 'ತಪ್ಪು ಗ್ರಹಿಕೆ'. ಏನನ್ನೋ ನೋಡುತ್ತೇವೆ, ಅದರ ಸುತ್ತ ಒಂದು ಕಥೆ ಕಟ್ಟುತ್ತೇವೆ, ಆಮೇಲೆ ಆ ಕಥೆ ವಾಸ್ತವವಲ್ಲ ಎಂಬುದನ್ನೇ ಮರೆತುಬಿಡುತ್ತೇವೆ. ಅದನ್ನೇ ನಂಬಿಕೊಂಡು ಊಟದ ಪಂಕ್ತಿಯಲ್ಲೇ ವಾದಕ್ಕಿಳಿಯುತ್ತೇವೆ!

ಇದೆಲ್ಲ ಮದುವೆ ಊಟದ ತಮಾಷೆ ಎಂದರೆ, ನಿಮಗೆ 'ಫ್ರೆಡ್ ಕ್ಲೇ' ಎಂಬ ಹುಡುಗನ ಕಥೆ ಹೇಳಬೇಕಿದೆ. 1979, ಅಮೆರಿಕ. ಅಲ್ಲೊಂದು ಕೊಲೆಯಾಯಿತು. ಕೊಲೆಗಾರನನ್ನು ಕೆಲವರು ದೂರದಿಂದ ನೋಡಿದ್ದರು. ಶಂಕಿತರನ್ನು ತಂದು ನಿಲ್ಲಿಸಿ ಯಾರು ಕೊಲೆಗಾರ ಎಂದು ಪ್ರತ್ಯಕ್ಷ ದರ್ಶಿಗಳಲ್ಲಿ ಕೇಳಲಾಯಿತು. ನೋಡಿದ ಇಬ್ಬರಿಗೂ ಮುಖ ಸರಿಯಾಗಿ ನೆನಪಿರಲಿಲ್ಲ. ಹದಿನಾರು ವರ್ಷದ ಈ ಹುಡುಗನೇ ಕೊಲೆಗಾರ ಎಂದು ಒಬ್ಬ ಅನುಮಾನದಿಂದ ತೋರಿಸಿದ.

ಆದರೆ ಫ್ರೆಡ್ ಕ್ಲೇ ಕೊಲೆಯಾಗುವ ಸಮಯದಲ್ಲಿ ಹಾಸ್ಟೆಲ್‌ನಲ್ಲಿ ಮಲಗಿದ್ದ. ಅಲ್ಲಿ ಭೌತಿಕ ಸಾಕ್ಷ್ಯ ಒಂದೂ ಇರಲಿಲ್ಲ. ಇನ್ನೊಬ್ಬ ಹೌದು, ಇವನೇ. ನಾನು ನೋಡಿದ್ದೇನೆ ಎಂದು ಪೂರ್ಣ ನಂಬಿಕೆಯಿಂದ ಬೆರಳು ತೋರಿಸಿದ. ಮೊದಲನೆಯವನಿಗೂ ಹೌದೆಂದೆನಿಸಿತು. ಎರಡನೇ ಸಾಕ್ಷಿಗೆ ಹೆಚ್ಚಿನ ವಿವರ ನೆನಪಾಗಲಿಲ್ಲ, ಆಗ ಅವನನ್ನು ಹಿಪ್ನಾಟೈಜ್ ಮಾಡಿ ಸಾಕ್ಷ್ಯ ಕೇಳಲಾಯಿತು. ಅಷ್ಟಾಗುವಾಗ ಅಲ್ಲಿರುವ ಎರಡು ಮೂರು ಮಂದಿಗೆ ಫ್ರೆಡ್ ಮುಖವೇ ಕಂಡದ್ದು ಹೌದೆಂದೆನಿಸಲು ಶುರುವಾಯಿತು. ತರುವಾಯ ಫ್ರೆಡ್ ಕ್ಲೇ- ಜೈಲಿಗೆ ಹಾಕಲಾಯಿತು. ಮೂವತ್ತೆಂಟು ವರ್ಷ! ತೀರಾ ಇತ್ತೀಚೆ ಡಿಎನ್‌ಎ ತಂತ್ರಜ್ಞಾನ ಅಭಿವೃದ್ಧಿ ಹೊಂದಿದ ಮೇಲೆ, ಅಲ್ಲಿದ್ದ ರಕ್ತದ ಸ್ಯಾಂಪಲ್, ಡಿಎನ್‌ಎ ಎಲ್ಲವನ್ನೂ ಮರುಪರೀಕ್ಷಿಸಲಾಗಿ ಅವನು ಕೊಲೆಗಾರನಲ್ಲ ಎಂಬ ಸತ್ಯ ಹೊರಬಂತು. ನಿರಪರಾಧಿ ಎಂದು ಬಿಡುಗಡೆಯಾಯಿತು. ಒಟ್ಟಾರೆ ಒಂದಿಬ್ಬರ ನೆನಪಿನ ಅವಾಂತರದಿಂದಾಗಿ ಆತ ಮೂವತ್ತೆಂಟು ವರ್ಷ ಜೈಲಿನೊಳಗೆ ಕಳೆಯಬೇಕಾಯ್ತು. ಇಂತಹ ನೂರಾರು ಕೇಸುಗಳಿವೆ! ಇಲ್ಲಿ ಸಾಕ್ಷಿಗಳು ಸುಳ್ಳುಗಾರರಲ್ಲ. ಆದರೆ ಅವರು ಹೇಳಿದ್ದು ಸತ್ಯವೂ ಅಲ್ಲ. ಇಲ್ಲೊಂದು ಪ್ರಶ್ನೆ ಏಳುತ್ತದೆ. ನೆನಪು ಇಷ್ಟು ಅಪನಂಬಿಕೆಯ ವ್ಯವಸ್ಥೆ ಎಂದಾದರೆ, ವಿಕಸನದಲ್ಲಿ ಹಾಗೇಕೆ ಆಯಿತು? ವಿಕಾಸ ನಮಗೊಂದು ಸರಿಯಾದ ರೆಕಾರ್ಡಿಂಗ್ ಯಂತ್ರವನ್ನೇ ಕೊಡಬಹುದಿತ್ತಲ್ಲ? ಅದೇಕೆ ಇಂತಹ ಸೃಷ್ಟಿಯಾಯಿತು? ಉತ್ತರ ಬಹಳ ಸುಲಭ - ನಮ್ಮ ಪೂರ್ವಜರಿಗೆ ವಿಕಸನದ ಅದೆಷ್ಟೋ ಕೋಟಿ ವರ್ಷ ಘಟನೆಯನ್ನು ನಿಖರವಾಗಿ ನೆನಪಿಟ್ಟುಕೊಳ್ಳುವ ಅವಶ್ಯಕತೆಯೇ ಇರಲಿಲ್ಲ.

ಬದಲಿಗೆ ಹುಲಿ ಬಂದಾಗ, ಇನ್ನೊಬ್ಬರು ದಾಳಿ ಮಾಡಿದಾಗ ಇತ್ಯಾದಿ ಮುಖ್ಯ ಘಟನೆ, ಅದರಲ್ಲೂ ವಿವರಣೆಗಿಂದ ನಮ್ಮೊಳಗೆ ಏನೇನು ಭಾವಗಳು ಆ ಕ್ಷಣದಲ್ಲಿ ಹುಟ್ಟಿದವು ಎನ್ನುವುದನ್ನು ನೆನಪಿಟ್ಟುಕೊಂಡರೆ ಸಾಕು. ಡೇಂಜರ್- ಇದು ಅಪಾಯ, ಇದು ಅಪಾಯವಲ್ಲ ಎಂಬುದಕ್ಕೆ ಪೂರ್ತಿ ಘಟನೆ ನೆನಪಿಟ್ಟುಕೊಳ್ಳಬೇಕಾಗಿಲ್ಲ. ಆದರೆ ಕೆಲವೊಂದು ವಿಷಯಗಳು- ಉದಾಹರಣೆಗೆ ಯಾವ ಹಣ್ಣು ವಿಷ, ಯಾವ ಹಣ್ಣು ವಿಷವಲ್ಲ ಎಂಬ ಜ್ಞಾನ ನಿಜವಾಗಿ ಸಾವು ಬದುಕಿನ ಪ್ರಶ್ನೆ- ಅದನ್ನು ಮಾತ್ರ ಸ್ಪಷ್ಟ ನೆನಪಿಟ್ಟು, ಉಳಿದ ಘಟನೆಗಳಲ್ಲಿ ಕೆಲವೊಂದನ್ನು, ನಮಗನಿಸಿದ್ದನ್ನಷ್ಟೇ ನೆನಪಿಟ್ಟುಕೊಳ್ಳುವ, ಬೇಕಾದಾಗ ಮರುಸೃಷ್ಟಿಸುವ ವ್ಯವಹಾರ ಬೆಳೆದುಬಂತು. ಇದರಿಂದಾಗಿ ಯಾವುದು ಅಪಾಯದ ಘಟನೆಯೋ, ಅದು ನೆನಪಿಸಿಕೊಂಡಾಗಲೆಲ್ಲ ಇನ್ನಷ್ಟು ಹೆದರಿಕೆಯಾಗುವಂತೆ ಕಥೆಯ ಮರುಸೃಷ್ಟಿಯಾಗಿ ನಮ್ಮನ್ನು ಇನ್ನಷ್ಟು ರಕ್ಷಿಸುತ್ತಿತ್ತು.

ಆ ಕಾರಣಕ್ಕೆ, ಶಾಲೆಯ ಮೇಷ್ಟ್ರು ಹೇಳಿದ ಪಾಠದ ಒಂದು ವಾಕ್ಯವೂ ಈಗ ನಮಗೆ ನೆನಪಿಲ್ಲ. ಆದರೆ ಕಡಿಮೆ ಮಾರ್ಕ್ಸ್ ತೆಗೆದುಕೊಂಡಾಗ, ಫೇಲಾದಾಗ ಹೆಗಲ ಮೇಲೆ ಕೈಯಿಟ್ಟ ಆ ಒಬ್ಬ ಮೇಷ್ಟ್ರು ಮಾತ್ರ ನೆನಪಿದ್ದಾರೆ. ಗೆಳೆತನವನ್ನು ಮುರಿದ ಜಗಳದ ಮಾತುಗಳು ಮರೆತುಹೋಗಿವೆ; ಗಾಯ ಮಾತ್ರ ನೆನಪಿನಲ್ಲಿರುತ್ತದೆ. ವಿವರ ಮಾಸುತ್ತದೆ. ಭಾವ ಉಳಿಯುತ್ತದೆ. People remember how you made them feel. ಜನರು ಘಟನೆಯನ್ನು, ಮಾತನ್ನು, ವಿವರವನ್ನು ನೆನಪಿಟ್ಟುಕೊಳ್ಳುವುದಿಲ್ಲ, ಬದಲಿಗೆ ಆದ ಭಾವನಾತ್ಮಕ ಅನುಭವ ಮಾತ್ರ ನೆನಪಿರುತ್ತದೆ. ಆ ಭಾವ ಪ್ರತಿ ಬಾರಿ ನೆನಪಿಸಿಕೊಂಡಾಗಲೂ ಇನ್ನಷ್ಟು ತೀವ್ರತೆ ಪಡೆಯುತ್ತ ಹೋಗುತ್ತದೆ. ನಮ್ಮ ರಕ್ಷಣಾ ವಿಕಾಸ ಹೇಗಿದೆಯೆಂದರೆ ಇದ್ಯಾವುದೂ ನಮ್ಮ ಗಮನಕ್ಕೆ ಬರುವುದೇ ಇಲ್ಲ.

ಇತ್ತೀಚೆ ನಾಲ್ಕು ಸ್ನೇಹಿತರು ಮಾತನಾಡುತ್ತಿದ್ದೆವು. ಆಗ ಮಾತು ಮಾತಿಗೆ 'ನನಗೆ ಈಗಲೂ ಪರೀಕ್ಷೆಗೆ ಹಾಲ್ ಟಿಕೆಟ್ ಮರೆತು ಹೋದಂತೆ' ಕನಸು ಬೀಳುತ್ತದೆ ಎಂದೆ. ಅದಕ್ಕೆ ಸ್ನೇಹಿತೆ- ಅಯ್ಯೋ ನನಗೂ ಹೌದು, ನನಗಂತೂ ರೋಲ್ ನಂಬರ್ ಬರೆಯದೇ ಉತ್ತರ ಪತ್ರಿಕೆ ಕೊಟ್ಟು ಬಂದಂತೆ ಕನಸು ಬೀಳುತ್ತದೆ ಎಂದರು. ನೋಡಿದರೆ ಈ ಕನಸು ನನ್ನ ಎಲ್ಲಾ ಸ್ನೇಹಿತರಿಗೂ ಆಗೀಗ ಬರುತ್ತದೆಯಂತೆ! ಏನದರರ್ಥ? ನಾವೆಲ್ಲ ಈ ವಿಷಯದಲ್ಲಿ ಅನುಭವಿಸಿದ ಭಾವೋತ್ಕಟತೆ, ಆತಂಕ ಅಂದಿನ ದಿನದ ಜೀವನ್ಮರಣದ ವಿಷಯ! ಹಾಗಾಗಿ ಈಗ ಉದ್ಯೋಗದಲ್ಲಿದ್ದರೂ ನಮ್ಮ ತಲೆ ಮಾತ್ರ ಅದನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತದೆ! ಹಾಗಾಗಿಯೇ ಈಗಲೂ ಕೆಲವೊಮ್ಮೆ ಹಾಗಿನ ಕನಸು ಬಿದ್ದು ನಿದ್ರೆಯಿಂದ ಎಚ್ಚರವಾಗುತ್ತದೆ!

ಹಾಗಾದರೆ ನಮ್ಮ ಹೆಚ್ಚಿನ ಘಟನೆಗಳ ನೆನಪು ವಿಶ್ವಾಸಾರ್ಹವಲ್ಲ ಎಂದಾದರೆ ನೆನಪನ್ನು ನಂಬುವುದನ್ನೇ ನಿಲ್ಲಿಸಬೇಕೇ? ಇಲ್ಲ. ಇದೆಲ್ಲ ತಿಳಿದಿರಬೇಕು, ಆಗಲೇ ನಮ್ಮ ನೆನಪನ್ನು ನಾವು ವೈಭವೀಕರಿಸುವುದನ್ನು ನಿಲ್ಲಿಸುವುದು. ಯಾವುದೇ ಘಟನೆಯ ನೆನಪು 100% ಸರಿ ಎನ್ನುವಂತಿಲ್ಲ. ಬಹುತೇಕ ಬಾರಿ, ನಮ್ಮ ತಲೆಯ ತಲೆಹರಟೆಯಿಂದಾಗಿ ಸತ್ಯವೇ ಬದಲಾಗಿರುತ್ತದೆ. ಹಾಗಾಗಿ ಸಂಬಂಧಗಳಲ್ಲಿ, ಸ್ನೇಹದಲ್ಲಿ ಯಾವತ್ತೂ ನಾವು ನಂಬಿಕೊಂಡಿದ್ದೇ ಸರಿ, ಸತ್ಯವಾಗಿರುವುದಿಲ್ಲ. ನಮ್ಮಲ್ಲೊಂದು ಶಬ್ದದ ಬಳಕೆಯಿದೆ- 'ವಿವೇಕ'. ನೆನಪಿನ ಜೊತೆ ಅದರ ಪಾಲನೆಯೂ ಅಷ್ಟೇ ಮುಖ್ಯ.

ನಮ್ಮೆಲ್ಲರ ತಲೆಯಲ್ಲೂ ಒಬ್ಬ ಕಥೆಗಾರ, ಈ ವಿಚಿತ್ರ ಇತಿಹಾಸಕಾರ ಇದ್ದಾನೆ! ಅವನು ಸ್ಟೆನೋಗ್ರಾಫರ್ ಅಲ್ಲ. ಹಾಗಾಗಿ ಅವನನ್ನು ಪೂರ್ತಿ ನಂಬುವಂತಿಲ್ಲ. ಜಗತ್ತು ಉಳಿದವರು ಕಂಡಂತಲ್ಲ, ಅವರವರು ಕಂಡಂತೆ! ಇಲ್ಲಿ ಎಲ್ಲರೂ ನಂಬಿ ಕೆಟ್ಟವರೇ, ನೆನಪಿರಲಿ!

ನೆಹರೂ- ಮೋದಿ ಆರ್ಥಿಕ ನೀತಿ: ನಮಗೀಗ ಯಾವುದಗತ್ಯ?

ಮನಿಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಪ್ರಧಾನಿ ನರೇಂದ್ರ ಮೋದಿಯವರ ಆರ್ಥಿಕ ನೀತಿಯು 'ಮೋದಿನಾಮಿಕ್ಸ್' ಎಂದು ಜನಪ್ರಿಯವಾಗಿದೆ. ಇದರ ಸುತ್ತ ದೊಡ್ಡ ಮಟ್ಟದ ಚರ್ಚೆ ಗಳು, ಪರ-ವಿರೋಧದ ವಾದಗಳು ಮತ್ತು ಕೆಲವು ಅಪಪ್ರಚಾರಗಳು ಸೃಷ್ಟಿಯಾಗಿವೆ.

ಹಾಗಾದರೆ ಏನಿದು? ಮೋದಿನಾಮಿಕ್ಸ್‌ನ ಮುಖ್ಯ ಉದ್ದೇಶಗಳಲ್ಲಿ ದೇಶದ ಮೂಲಸೌಕರ್ಯ ಅಭಿವೃದ್ಧಿ, ಡಿಜಿಟಲೀಕರಣ ಮತ್ತು ಜನಕಲ್ಯಾಣ ಯೋಜನೆಗಳನ್ನು ಗುರುತಿಸಬಹುದು. ಮೊದಲನೆಯದಾಗಿ ಹೆದ್ದಾರಿಗಳು, ರೈಲ್ವೆ, ವಿಮಾನ ನಿಲ್ದಾಣಗಳು ಮತ್ತು ಬಂದರುಗಳ ನಿರ್ಮಾಣ ಮತ್ತು ಆಧುನೀಕರಣಕ್ಕೆ ದಾಖಲೆ ಮಟ್ಟದ ಹಣ ಹಂಚಿಕೆಯಾಗಿದೆ. ಉದಾಹರಣೆಗೆ ಇತ್ತೀಚಿನ ಬಜೆಟ್‌ನಲ್ಲಿ ಬಂಡವಾಳ ವೆಚ್ಚವನ್ನು 12.2 ಲಕ್ಷ ಕೋಟಿಗೆ ಏರಿಸಲಾಗಿದೆ.

ಎರಡನೆಯದಾಗಿ, ಡಿಜಿಟಲ್ ಮೂಲಸೌಕರ್ಯಕ್ಕೆ ನೀಡಿದ ಆದ್ಯತೆ ಚಾರಿತ್ರಿಕ. ಯುಪಿಐ (ಯುನಿಫೈಡ್ ಪೇಮೆಂಟ್ಸ್ ಇಂಟರ್ಫೇಸ್), ಡಿಜಿಟಲ್ ಇಂಡಿಯಾ ಮತ್ತು ಜನ್‌ಧನ್ ಖಾತೆಗಳ ಮೂಲಕ ಆರ್ಥಿಕತೆಯನ್ನು ಕ್ರಾಂತಿಕಾರಕವಾಗಿ ಸಂಘಟಿತಗೊಳಿಸಲಾಗಿದೆ. ಇದರ ಪ್ರಯೋಜನ ಮತ್ತು ಸಕಾರಾತ್ಮಕ ಪರಿಣಾಮಗಳು ಹಲವಾರು. ಇಡೀ ಜಗತ್ತು ನಿಬ್ಬೆರಗಾಗಿ ಇದನ್ನು ನೋಡಿದೆ.

ಮೂರನೆಯದಾಗಿ ಸಮಾಜ ಕಲ್ಯಾಣ ಅಧರಿತ ಅರ್ಥಶಾಸ್ತ್ರ. ನೇರ ನಗದು ವರ್ಗಾವಣೆ (ಡಿಬಿಟಿ), ಉಚಿತ ಪಡಿತರ, ಆಯುಷ್ಮಾನ್ ಭಾರತ್, ಮತ್ತು ಸ್ವಚ್ಛ ಭಾರತ್ ಅಡಿಯಲ್ಲಿ ಶೌಚಾಲಯಗಳ ನಿರ್ಮಾಣ ದಾಖಲೆಯ ಮಟ್ಟದಲ್ಲಿ ನಡೆಯಿತು. ನಾಲ್ಕನೆಯದಾಗಿ, ಆತ್ಮನಿರ್ಭರ ಭಾರತ. 'ಮೇಕ್ ಇನ್ ಇಂಡಿಯಾ' ಮತ್ತು ಪಿಎಲ್‌ಐ (Productivity Linked Incentive) ಯೋಜನೆಗಳ ಮೂಲಕ ದೇಶೀಯ ಉತ್ಪಾದನೆಗೆ ಮತ್ತು ರಫ್ತಿಗೆ ಆದ್ಯತೆ ನೀಡಲಾಯಿತು.

ಐದನೆಯದಾಗಿ, ರಚನಾತ್ಮಕ ಆರ್ಥಿಕ ಸುಧಾರಣೆಗಳು. ಸ್ವತಂತ್ರ ಭಾರತದ ಅತಿ ದೊಡ್ಡ ಪರೋಕ್ಷ ತೆರಿಗೆ ಸುಧಾರಣೆಯಾಗಿರುವ ಜಿಎಸ್‌ಟಿ ಜಾರಿಯಾಗಿರುವುದು ಗಮನಾರ್ಹ. ಇನ್‌ಸಾಲ್ವೆನ್ಸಿ ಮತ್ತು ದಿವಾಳಿ ನೀತಿ ಸಂಹಿತೆ (ಐಬಿಸಿ) ಮೂಲಕ ಉದ್ಯಮ ಸ್ನೇಹಿ ವಾತಾವರಣಕ್ಕೆ ಸಹಕಾರಿಯಾಗಿದೆ.

ಮೋದಿ ಸರಕಾರದ ಆರ್ಥಿಕ ನೀತಿಗಳ ಕುರಿತು ಪ್ರತಿ ಪಕ್ಷಗಳು ಮತ್ತು ಕೆಲವು ಆರ್ಥಿಕ ತಜ್ಞರು ಮಾಡುವ ಪ್ರಮುಖ ಟೀಕೆಗಳು ಮತ್ತು ವಾಸ್ತವವನ್ನು ಗಮನಿಸೋಣ.

ಇದು ಕೇವಲ ಕಾರ್ಪೊರೇಟ್‌ಗಳು ಮತ್ತು ಶ್ರೀಮಂತರ ಪರವಾದ ಸರಕಾರ ಎಂಬ ಟೀಕೆ ಇದೆ. ಸರಕಾರವು ಕೇವಲ ಅದಾನಿ, ಅಂಬಾನಿಯಂತಹ ದೊಡ್ಡ ಉದ್ಯಮಿಗಳಿಗೆ ಮಾತ್ರ ಬೆಂಬಲ ನೀಡುತ್ತಿದೆ, ಬಡವರನ್ನು ನಿರ್ಲಕ್ಷಿಸಿದೆ. ಕಾರ್ಪೊರೇಟ್ ತೆರಿಗೆ ಕಡಿತಗೊಳಿಸಿ ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರನ್ನಾಗಿ ಮಾಡುತ್ತಿದೆ ಎಂಬ ಅಪಪ್ರಚಾರ. ವಾಸ್ತವವಾಗಿ ಉದ್ಯಮಗಳಿಗೆ ತೆರಿಗೆ ಕಡಿತ ಮಾಡಿದ್ದು ಹೂಡಿಕೆ ಮತ್ತು ಉದ್ಯೋಗ ಸೃಷ್ಟಿಯನ್ನು ಹೆಚ್ಚಿಸಲು. ಅದೇ ಸಮಯದಲ್ಲಿ, ಜನ್‌ಧನ್- ಆಧಾರ್- ಮೊಬೈಲ್ ಮೂಲಕ ಮಧ್ಯವರ್ತಿಗಳ ಕಾಟವಿಲ್ಲದೆ 34 ಲಕ್ಷ ಕೋಟಿಗೂ ಹೆಚ್ಚು ಹಣವನ್ನು ನೇರವಾಗಿ ಬಡವರ ಖಾತೆಗೆ (ಡಿಬಿಟಿ) ತಲುಪಿಸಲಾಗಿದೆ. ಮುದ್ರಾ ಯೋಜನೆ ಮೂಲಕ ಕೋಟ್ಯಂತರ ಸಣ್ಣ ಉದ್ಯಮಿಗಳಿಗೆ ಗ್ಯಾರಂಟಿ ರಹಿತ ಸಾಲ ನೀಡಲಾಗಿದೆ. ವಿಶ್ವಬ್ಯಾಂಕ್ ವರದಿಗಳ ಪ್ರಕಾರ, ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ ಸುಮಾರು 25 ಕೋಟಿ ಜನರು ನಾನಾ ಆಯಾಮಗಳ ಬಡತನದಿಂದ ಹೊರಬಂದಿದ್ದಾರೆ.

ಎರಡನೆಯದಾಗಿ, ಜಿಡಿಪಿ ಬೆಳವಣಿಗೆ ಕೇವಲ ಅಂಕಿ-ಅಂಶಗಳ ಮಾಯಾಜಾಲ ಯಥಾರ್ಥವಲ್ಲ ಎಂಬ ಟೀಕೆ ಇದೆ. ಭಾರತದ ಜಿಡಿಪಿ ಬೆಳವಣಿಗೆಯ ದರ ಸುಮಾರು 7 ಪರ್ಸೆಂಟ್‌ಗಿಂತ ಹೆಚ್ಚು ಎನ್ನುವುದು ಕೇವಲ ಕಾಗದದ ಮೇಲಿದೆ. ತಳಮಟ್ಟದಲ್ಲಿ ಆರ್ಥಿಕತೆ ಕುಸಿದಿದೆ ಮತ್ತು ಶ್ರೀಮಂತ ಹಾಗೂ ಬಡವರ ನಡುವಿನ ಕಂದಕ ಹೆಚ್ಚಾಗಿದೆ ಎನ್ನುತ್ತಾರೆ ಪ್ರತಿಪಕ್ಷಗಳ ಮುಖಂಡರು. ಆದರೆ ವಾಸ್ತವವಾಗಿ, ಜಾಗತಿಕ ಆರ್ಥಿಕ ಹಿಂಜರಿತ ಮತ್ತು ಪಶ್ಚಿಮ ಏಷ್ಯಾದ ಸಂಘರ್ಷಗಳ ನಡುವೆಯೂ ಭಾರತವು ವಿಶ್ವದಲ್ಲೇ ಅತಿ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಮುಂದುವರಿದಿದೆ. ಜಿಎಸ್‌ಟಿ ಸಂಗ್ರಹವು ಪ್ರತಿ ತಿಂಗಳು ಸರಾಸರಿ 1.7 ಲಕ್ಷ ಕೋಟಿ ದಾಟುತ್ತಿರುವುದು ಮತ್ತು ಡಿಜಿಟಲ್ ಪಾವತಿಗಳ (ಯುಪಿಐ) ಗಣನೀಯ ಬೆಳವಣಿಗೆಯನ್ನು ಬಿಂಬಿಸಿದೆ.

ಮೂರನೆಯದಾಗಿ ನೋಟು ಅಮಾನ್ಯೀಕರಣ ಸಂಪೂರ್ಣ ವಿಫಲ ಎನ್ನುವ ಆರೋಪವನ್ನು ಈಗಲೂ ಅನೇಕ ಮಂದಿ ಮಾಡುತ್ತಾರೆ. ಇದರಲ್ಲಿ ಅರೆಬರೆ ತಿಳುವಳಿಕೆಯ ಪತ್ರಕರ್ತರನ್ನೂ ಗಮನಿಸಬಹುದು. 2016ರ ನೋಟು ಅಮಾನ್ಯತೆಯಿಂದಾಗಿ ಕಪ್ಪುಹಣ ಪತ್ತೆಯಾಗಲಿಲ್ಲ. ಬದಲಿಗೆ ಸಣ್ಣ ಉದ್ಯಮಗಳು ನಾಶವಾಯಿತು. ಮತ್ತು ಜಿಡಿಪಿ ಕುಸಿಯಿತು ಎಂಬುದು ಅವರ ಆಪಾದನೆ. ಆದರೆ ಆಗಿದ್ದೇನು? ತಾತ್ಕಾಲಿಕವಾಗಿ ನೋಟು ಅಮಾನ್ಯತೆಯಿಂದ ಜನರಿಗೆ ತೊಂದರೆಯಾಗಿದ್ದು ಮತ್ತು ಸಣ್ಣ ಉದ್ಯಮಗಳ ಮೇಲೆ ಪರಿಣಾಮ ಬೀರಿದ್ದು ನಿಜ. ಆದರೆ ದೀರ್ಘಾವಧಿಯಲ್ಲಿ, ಇದು ಭಾರತೀಯ ಆರ್ಥಿಕತೆಯನ್ನು ಡಿಜಿಟಲೀಕರಣದತ್ತ ಮುನ್ನಡೆಸಲು ಭದ್ರವಾದ ಅಡಿಪಾಯ ಹಾಕಿತು. ತೆರಿಗೆ ಪಾವತಿಸುವವರ ಸಂಖ್ಯೆ ಹೆಚ್ಚಾಯಿತು. ನಗದು ಆಧಾರಿತವಾಗಿದ್ದ ಆರ್ಥಿಕತೆಯು ಬ್ಯಾಂಕಿಂಗ್ ವ್ಯವಸ್ಥೆಯೊಳಗೆ ಬರುವಂತಾಯಿತು.

ನಾಲ್ಕನೆಯದಾಗಿ, ಉದ್ಯೋಗ ಸೃಷ್ಟಿ ಸಂಪೂರ್ಣ ಶೂನ್ಯವಾಗಿದೆ ಎಂಬ ಆರೋಪ. ದೇಶದಲ್ಲಿ ನಿರುದ್ಯೋಗ ದರವು ದಾಖಲೆ ಮಟ್ಟದಲ್ಲಿದೆ, ಯುವಕರಿಗೆ ಕೆಲಸ ಸಿಗುತ್ತಿಲ್ಲ ಮತ್ತು 'ಮೇಕ್ ಇನ್ ಇಂಡಿಯಾ' ವಿಫಲವಾಗಿದೆ ಎನ್ನುತ್ತಾರೆ ಪ್ರತಿಪಕ್ಷ ನಾಯಕರು. ಆದರೆ ವಾಸ್ತವವಾಗಿ, ಸಾಂಪ್ರದಾಯಿಕ 'ಸರಕಾರಿ ಉದ್ಯೋಗಗಳ' ಸಂಖ್ಯೆ ಸೀಮಿತವಾಗಿದ್ದರೂ, ಸ್ಟಾರ್ಟಪ್, ಗಿಗ್ ಎಕಾನಮಿ (ಡೆಲಿವರಿ ಬಾಯ್ಸ್, ಫ್ರೀಲಾನ್ಸರ್ಸ್), ಮತ್ತು ಮೂಲಸೌಕರ್ಯ (ರಸ್ತೆ, ರೈಲ್ವೆ ನಿರ್ಮಾಣ) ವಲಯದಲ್ಲಿ ಕೋಟ್ಯಂತರ ಪರೋಕ್ಷ ಉದ್ಯೋಗಗಳು ಸೃಷ್ಟಿಯಾಗಿವೆ. ಭಾರತವು ಇಂದು ವಿಶ್ವದ 3ನೇ ಅತಿ ದೊಡ್ಡ ಸ್ಟಾರ್ಟಪ್ ಹಬ್ ಆಗಿದೆ. ಆದಾಗ್ಯೂ, ಪ್ರತಿವರ್ಷ ಉದ್ಯೋಗ ಮಾರುಕಟ್ಟೆಗೆ ಬರುವ ಲಕ್ಷಾಂತರ ಪದವೀಧರರಿಗೆ ಅವರ ವಿದ್ಯಾರ್ಹತೆಗೆ ತಕ್ಕ ಉದ್ಯೋಗ ಮತ್ತು ಉತ್ಪಾದನಾ ವಲಯದಲ್ಲಿ ನಿರೀಕ್ಷಿತ ಮಟ್ಟದ ಉದ್ಯೋಗ ಸೃಷ್ಟಿಸುವುದು ಇಂದಿಗೂ ಸರಕಾರದ ಮುಂದಿರುವ ಸವಾಲಾಗಿದೆ.

ಮೋದಿನಾಮಿಕ್ಸ್ ಎಂಬುದು ಆರ್ಥಿಕ ವಿವೇಚನೆ ಮತ್ತು ಕಲ್ಯಾಣ ನೀತಿಗಳ ಮಿಶ್ರಣವಾಗಿದೆ. ರಾಜಕೀಯವಾಗಿ ಇದರ ಮೇಲೆ ಅನೇಕ ಅಪಪ್ರಚಾರಗಳು ನಡೆದರೂ, ವಾಸ್ತವದಲ್ಲಿ ಇದು ಭಾರತದ ಮ್ಯಾಕ್ರೋ-ಎಕನಾಮಿಕ್ ಸ್ಥಿರತೆಯನ್ನು ಬಲಪಡಿಸಿದೆ. ಆದರೆ, ಹೆಚ್ಚುತ್ತಿರುವ ಆರ್ಥಿಕ ಅಸಮಾನತೆ, ಗ್ರಾಮೀಣ ಭಾಗದ ಆರ್ಥಿಕ ಒತ್ತಡ ಮತ್ತು ಯುವಕರಿಗೆ ಗುಣಮಟ್ಟದ ಉದ್ಯೋಗ ಸೃಷ್ಟಿಯ ಸವಾಲುಗಳನ್ನು ಸಂಪೂರ್ಣವಾಗಿ ನಿವಾರಿಸಲು ಸರಕಾರ ಇನ್ನೂ ಶ್ರಮಿಸಬೇಕಾಗಿದೆ.



ಭಾರತದ ಮೊದಲ ಪ್ರಧಾನಿ ಜವಹರಲಾಲ್ ನೆಹರೂ ಅವರ ಆರ್ಥಿಕ ನೀತಿಯನ್ನು 'ನೆಹರುವಾದಿ ಸಮಾಜವಾದ' ಅಥವಾ 'ಮಿಶ್ರ ಆರ್ಥಿಕತೆ' ಎಂದು ಕರೆಯುವ ಪರಿಪಾಠವಿದೆ. ಸ್ವಾತಂತ್ರ್ಯ ಸಿಕ್ಕಾಗ ಬಡತನ ಮತ್ತು ಬ್ರಿಟಿಷರ ಶೋಷಣೆಯಿಂದ ಜರ್ಜರಿತವಾಗಿದ್ದ ಭಾರತವನ್ನು ಮುನ್ನಡೆಸಲು ಅವರು ಈ ನೀತಿಯನ್ನು ರೂಪಿಸಿದರು. ಅವರು ಸೋವಿಯತ್ ಒಕ್ಕೂಟದ (ರಷ್ಯಾ) ಮಾದರಿಯಿಂದ ಪ್ರಭಾವಿತರಾಗಿದ್ದರು.

ಅಭಿವೃದ್ಧಿಯಲ್ಲಿ ಸರಕಾರ (ಸಾರ್ವಜನಿಕ ವಲಯ) ಮತ್ತು ಖಾಸಗಿ ವಲಯ ಎರಡೂ ಜೊತೆಯಾಗಿ ಕೆಲಸ ಮಾಡುವ ಮಾದರಿ ಅವರದ್ದಾಗಿದ್ದರೂ, ಪ್ರಮುಖ ನಿರ್ಧಾರಗಳು ಸರಕಾರದ ಕೈಯಲ್ಲಿದ್ದವು. 1951ರಲ್ಲಿ ಪಂಚ ವಾರ್ಷಿಕ ಯೋಜನೆಗಳಿಗೆ ಯೋಜನಾ ಆಯೋಗವನ್ನು ಸ್ಥಾಪಿಸಿದರು. ನೆಹರೂ ಅವರು ಬೃಹತ್ ಕೈಗಾರಿಕೆಗಳನ್ನು ಆಧುನಿಕ ಭಾರತದ ದೇವಾಲಯಗಳು ಎಂದು ಕರೆದರು. ಉಕ್ಕಿನ ಕಾರ್ಖಾನೆಗಳು (ರೂರ್ಕೆಲಾ, ಭಿಲಾಯ್), ಜಲವಿದ್ಯುತ್ ಅಣೆಕಟ್ಟುಗಳು (ಭಾಕ್ರಾ, ನಂಗಲ್) ಮತ್ತು ಗಣಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಯಿತು. ತಾಂತ್ರಿಕ ಮತ್ತು ವೈಜ್ಞಾನಿಕ ಬೆಳವಣಿಗೆಗೆ ಬುನಾದಿ ಹಾಕಲು ಐಐಟಿ, ಐಐಎಂ, ಏಮ್ಸ್ ಸೇರಿದಂತೆ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಗಳನ್ನು ಸ್ಥಾಪಿಸಿದರು. ಇಂದು ಭಾರತವು ಮಾಹಿತಿ ತಂತ್ರಜ್ಞಾನ, ಬಾಹ್ಯಾಕಾಶ ಮತ್ತು ವೈದ್ಯಕೀಯ ವಲಯದಲ್ಲಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದ್ದರೆ, ಅದಕ್ಕೆ ನೆಹರೂ ಅವರು ಅಂದು ಬಿತ್ತಿದ ಗುಣಮಟ್ಟದ ಶಿಕ್ಷಣ ಸಂಸ್ಥೆಗಳ ಕೊಡುಗೆಯೂ ಇದೆ. ಹೀಗಿದ್ದರೂ, ಖಾಸಗಿ ಉದ್ದಿಮೆಗಳ ಬೆಳವಣಿಗೆಗೆ ನೆಹರೂ ಆದ್ಯತೆ ನೀಡಿರಲಿಲ್ಲ. ಲೈಸೆನ್ಸ್ ರಾಜ್ ಹಾವಳಿಯಿಂದಾಗಿ ಖಾಸಗಿ ಉದ್ದಿಮೆಗಳ ಪ್ರಗತಿಯಾಗಲಿಲ್ಲ. ಕಡು ಭ್ರಷ್ಟಾಚಾರ, ಕೆಂಪು ಪಟ್ಟಿ, ಉದ್ಯಮಶೀಲತೆಯ ದಮನಕ್ಕೆ ಕಾರಣವಾಯಿತು.

ಕೃಷಿ ವಲಯದ ಕಡೆಗಣನೆಯಿಂದ ಭಾರತವು ಆಹಾರದ ತೀವ್ರ ಅಭಾವ ಎದುರಿಸುವಂತಾಯಿತು. ಹಲವು ದಶಕಗಳ ಕಾಲ ಜಿಡಿಪಿ ಬೆಳವಣಿಗೆ 3.5 ಪರ್ಸೆಂಟ್‌ಗಿಂತ ಕೆಳಗಿತ್ತು. ಆದರೆ ಆಗ ಖಾಸಗಿ ವಲಯದಲ್ಲಿ ಬಂಡವಾಳ ಇದ್ದಿರಲಿಲ್ಲ ಎಂಬ ವಾದವೂ ಇದೆ. ಆದರೆ ಕಾಲ ಬದಲಾದಂತೆ ನೀತಿಯನ್ನು ಬದಲಾಯಿಸದೆ ಹೋಗಿದ್ದುದು ಯಡವಟ್ಟಿಗೆ ಕಾರಣವಾಯಿತು.

ನೆಹರು ಮತ್ತು ನರೇಂದ್ರ ಮೋದಿ ಅವರ ಆರ್ಥಿಕ ನೀತಿಗಳು ಭಿನ್ನ ಕಾಲಘಟ್ಟ, ಸಿದ್ಧಾಂತ ಮತ್ತು ಸವಾಲುಗಳಿಗೆ ಅನುಗುಣವಾಗಿ ರೂಪಿತವಾಗಿವೆ. ನೆಹರು ಅವರ ನೀತಿಗಳು ಭಾರತಕ್ಕೆ ಭದ್ರವಾದ ಅಡಿಪಾಯ ಹಾಕಿಕೊಟ್ಟವು. ಆದರೆ ಮೋದಿಯವರ ನೀತಿಗಳು ಆ ಅಡಿಪಾಯದ ಮೇಲೆ ಭಾರತವನ್ನು ಜಾಗತಿಕ ಆರ್ಥಿಕ ಮಹಾಶಕ್ತಿಯನ್ನಾಗಿ ಬೆಳೆಸುತ್ತಿವೆ. ಇಂದಿನ ಆಧುನಿಕ, ಯುವ ಮತ್ತು ಮಹತ್ವಾಕಾಂಕ್ಷೆಯ ಭಾರತಕ್ಕೆ ಉದ್ಯಮಶೀಲತೆ, ತಂತ್ರಜ್ಞಾನ ಮತ್ತು ಜಾಗತಿಕ ಮುಕ್ತ ಮಾರುಕಟ್ಟೆಗೆ ಆದ್ಯತೆ ನೀಡುವ ನರೇಂದ್ರ ಮೋದಿಯವರ ಆರ್ಥಿಕ ನೀತಿಯೇ ಪ್ರಸ್ತುತ ಅತ್ಯುತ್ತಮ ಮತ್ತು ಯಶಸ್ವಿ ಮಾದರಿಯಾಗಿದೆ.

ದೇಶ ಸ್ವತಂತ್ರವಾದ ಸಂದರ್ಭ ಖಾಸಗಿ ವಲಯದವರಲ್ಲಿ ಹೂಡಿಕೆಯ ಶಕ್ತಿ ಇದ್ದಿರಲಿಲ್ಲ. ನೆಹರು ಕಾಲದಲ್ಲಿ ದೇಶದ ಜನಸಂಖ್ಯೆ ಕೇವಲ 36 ಕೋಟಿ ಇದ್ದಿದ್ದರೆ, ಈಗ 147 ಕೋಟಿಗೆ ಏರಿಕೆಯಾಗಿದೆ. ಉದ್ಯೋಗ ಸೃಷ್ಟಿಗೆ ಭಾರಿ ಬಂಡವಾಳ ಅಗತ್ಯ. ಅದು ಸರಕಾರ ಒಂದರಿಂದಲೇ ಅಸಾಧ್ಯ. ಖಾಸಗಿ ಮತ್ತು ವಿದೇಶಿ ಹೂಡಿಕೆಯನ್ನು ಆಕರ್ಷಿಸುವ ಮೋದಿ ನೀತಿ ಅನಿವಾರ್ಯ. ಭಾರತವು ಸೇವಾ ಕ್ಷೇತ್ರದಲ್ಲಿ ಗಣನೀಯ ಸಾಧಿಸಿದೆ. ಆದರೆ ಉತ್ಪಾದನಾ ಕ್ಷೇತ್ರದಲ್ಲೂ ಚೀನಾದಂತೆ ಮುಂಚೂಣಿಗೆ ಬರುವುದು ಅನಿವಾರ್ಯ. ಅದಕ್ಕೆ 'ಮೇಕ್ ಇನ್ ಇಂಡಿಯಾ' ಮತ್ತು ಪಿಎಲ್‌ಐ ಮಾದರಿಯ ಯೋಜನೆಗಳು ಅಗತ್ಯ.

ಇಂದಿನ ಪರಿಸ್ಥಿತಿಗೆ ಕೇವಲ ನೆಹರು ಅವರ 1950ರ ದಶಕದ ಲೈಸೆನ್ಸ್ ರಾಜ್ (ಸರಕಾರಿ ನಿಯಂತ್ರಣ) ನೀತಿಯೂ ಸೂಕ್ತವಲ್ಲ. ಹಾಗೆಯೇ ಸಂಪೂರ್ಣ ಬಂಡವಾಳಶಾಹಿ ನೀತಿಯೂ ಭಾರತದಂತಹ ವೈವಿಧ್ಯಮಯ ದೇಶಕ್ಕೆ ಒಪ್ಪುವುದಿಲ್ಲ. ಸಮತೋಲಿತ ಅಥವಾ ಹೈಬ್ರಿಡ್ ಆರ್ಥಿಕ ನೀತಿಯ ಅಗತ್ಯವಿದೆ. ಈಗಿನ ಭಾರತಕ್ಕೆ ಸಾಮಾಜಿಕ ಕಲ್ಯಾಣವೂ ಬೇಕು, ಆರ್ಥಿಕ ದಕ್ಷತೆ ಮತ್ತು ವೇಗವೂ ಬೇಕು. ಮೋದಿಯವರ ನೀತಿಗಳಲ್ಲಿ ಇವೆರಡರ ಸಮ್ಮಿಳನವನ್ನೂ ಕಾಣಬಹುದು.

ಸಂಪತ್ತನ್ನು ಸೃಷ್ಟಿಸಲು ಮೋದಿಯವರ ಮುಕ್ತ ಮಾರುಕಟ್ಟೆ ನೀತಿ ಬೇಕು. ಉತ್ಪಾದನೆ ತನ್ನ ವೇಗವನ್ನು ಹೆಚ್ಚಿಸಿಕೊಳ್ಳಬೇಕು. ಅಂಡಮಾನ್ ನಿಕೋಬಾರ್ ಕೂಡ ಅತ್ಯಾಧುನಿಕವಾಗಿ ಬೆಳೆಯಬೇಕು. ಆದರೆ ಜನ ಸಾಮಾನ್ಯರನ್ನು ರಕ್ಷಿಸುವ ಬ್ರೇಕ್ ಮತ್ತು ಸ್ಟೀರಿಂಗ್ ಆಗಿ ಸರಕಾರ ಕೆಲಸ ಮಾಡಬೇಕು. ಈ ಸಮತೋಲನವೇ ಭಾರತವನ್ನು ಭವಿಷ್ಯದಲ್ಲಿ ಸೂಪರ್ ಪವರ್ ಮಾಡಬಲ್ಲದು.

ಭಟ್ಟರ್ ಸ್ಕಾಚ್

- **ವೆಂಕಟೇಶ ನಾಡಿಗ, ಕನಕಪುರ**
  ಭಟ್ರೇ, ನೋಡ್ತಾ ನೋಡ್ತಾ ಹೋಗಿಬಿಡುತ್ತೆ ಅಂತಾರಲ್ಲ, ಹಾಗಂದ್ರೇನು?
  - **ಬೇಕಾದರೆ ಡಿಕೆಶಿ ಅಧಿಕಾರ ಅವಧಿ ನೋಡ್ತಾ ನೋಡ್ತಾ ಹೋಗಿಬಿಡುತ್ತೆ ಅಂದ್ಕೋ!**
- **ಜ್ಞಾನೇಂದ್ರ ಗುಬ್ಬಲಾಳ, (ಇಮೇಲ್ ಮೂಲಕ)**
  ಭಟ್ರೇ, ಪ್ರವಾಸೋದ್ಯಮ ಮಂತ್ರಿ ಪ್ರವಾಸ ಮಾಡಲೇಬೇಕಾ?
  - **ಪ್ರವಾಸ ಮಾಡದೆಯೂ ಆ ಖಾತೆ ನಿಭಾಯಿಸಬಹುದು ಎಂದು ಎಚ್ಕೆ ಪಾಟೀಲ್ ತೋರಿಸಿಕೊಟ್ಟಿದ್ದಾರಲ್ಲ?!**
- **ರಾಜಣ್ಣ, ಹಾಸನ**
  ಭಟ್ರೇ, ಪ್ರಗತಿಪರ ಸಾಹಿತಿಗಳು ಗರಬಡಿದವರ ರೀತಿ ಕುಳಿತಿದ್ದಾರಲ್ಲ?
  - **ಅಕಾಡೆಮಿಗಳ ಪುನಾರಚನೆ ಶೀಘ್ರ, ಅಂತ ಸುದ್ದಿ ಪ್ರಕಟವಾಗಲಿ, ಮುಂದೆ ನೋಡು ಮಜಾ!**
- **ಕ.ಮ.ಶಂಕರ, ಹಳಿಯಾಳ**
  ಭಟ್ರೇ, ಪತ್ರಿಕೆಗಳು ಸಪ್ಪೆ ಅಂತಾಳಲ್ಲ?
  - **ಕೆಲವು ಸಂಪಾದಕರನ್ನು ನೋಡಿ ಹಾಗೆ ಹೇಳಬಾರದಿತ್ತು !**
- **ಸಿ.ಚಂದ್ರಣ್ಣ, ಮುದ್ದೇಬಿಹಾಳ**
  ಭಟ್ರೇ, ನೀವು ಪಾಕಶಾಲೆ ಭಟ್ರಾ?
  - **ಹೂಂ..ಪತ್ರಿಕೋದ್ಯಮ ಪಾಕಶಾಲೆ ಭಟ್ಟರು!**
- **ಸುಧಾ ಸಿ.ಮೂರ್ತಿ, ಬೇಲೂರು**
  ಭಟ್ರೇ, ದೇವೇಗೌಡರು ರಾಜ್ಯಸಭೆಗೆ ಹೋಗಬೇಕಿತ್ತು ಅಲ್ಲವಾ?
  - **ರಾಜ್ಯದಲ್ಲಿಯೇ ಸಭೆಗಳಿಗೆ ಹೋಗುತ್ತಾರಂತೆ!**
- **ಗಂಗಾಧರ ಹೂಡಲಿ, ಕೊಪ್ಪಳ**
  ಭಟ್ರೇ, ಬಿಜೆಪಿ ರಾಜ್ಯಸಭಾ ಅಭ್ಯರ್ಥಿ ಯಾರು ಅಂತಾನೆ ಗೊತ್ತಿಲ್ಲವಲ್ಲ?
  - **ಅಂಥವರನ್ನೇ ಹುಡುಕಿ ಹುಡುಕಿ ಕಳಿಸುತ್ತಾರಪ್ಪ!**
- **ಶಂಕರ ಪಾಟೀಲ, (ಇಮೇಲ್ ಮೂಲಕ)**
  ಭಟ್ರೇ, ಹೊಸ ಸೀರೆ ತಂದುಕೊಡ್ತೀನಿ ಅಂದ್ರೂ ಪ್ರೀತಿಸುವುದಿಲ್ಲವಲ್ಲ?
  - **ಐಫೋನ್ ತಂದುಕೊಡ್ತೀನಿ ಎನ್ನಬೇಕಿತ್ತು!**
- **ಪರಮೇಶ್ವರ ಸಂಕಿ, ತುಮಕೂರು**
  ಭಟ್ರೇ, ಈಗಲೇ ಬೇಡ ಮದುವೆ ಎನ್ನುತ್ತಿದ್ದಾಳಲ್ಲ?
  - **ಮೋದಿಯವರ ಉಳಿತಾಯದ ಮಾತನ್ನು ಅಷ್ಟು ಸೀರಿಯಸ್ ಆಗಿ ತೆಗೆದುಕೊಳ್ಳಬೇಡ ಎನ್ನಬೇಕಿತ್ತು!**

ಕಾಡಿನ ನಡುವೆ ಕಟ್ಟಿಕೊಂಡ ಬದುಕು

ಶಶಾಂಕಣ

ಶಶಿಧರ ಹಾಲಾಡಿ
vveditoped@gmail.com

ನಮ್ಮ ರಾಜ್ಯದ ಮಲೆನಾಡು ಮತ್ತು ಕರಾವಳಿಗೆ ತಾಗಿಕೊಂಡ ಬೆಟ್ಟಗುಡ್ಡಗಳಲ್ಲಿ, ಪುರಾತನ ಕಾಲದಿಂದಲೂ ನಾಗರಿಕತೆ ಅರಳಿದೆ; ದಟ್ಟಕಾಡಿನ ನಡುವೆ, ಕಡಿದಾದ ಪರ್ವತಗಳ ಮಗ್ಗುಲಿನಲ್ಲಿ, ಕೃಷಿ ಮಾಡುತ್ತಾ, ತಮ್ಮದೇ ಸಂಸ್ಕೃತಿಯನ್ನು ಕಟ್ಟಿಕೊಂಡ ಹಲವು ಪ್ರದೇಶಗಳಿವೆ. ಅಂತಹ ಒಂದು ಆಪ್ತ ಎನಿಸುವ ಊರು ಎಂದರೆ, ಕಬ್ಬಿನಾಲೆ ಎಂಬ ಗ್ರಾಮದ ತುತ್ತತುದಿಯಲ್ಲಿರುವ ಕುಚ್ಚೂರು. ಈಗ ಅಲ್ಲಿ ಬಿರುಸಾದ ಮಳೆಗಾಲವಾಗಿದೆ; ಮಳೆ ಸುರಿವಾಗ ಅಂತಹ ಜಾಗಗಳ ನೆನಪುಗಳು ಇನ್ನಷ್ಟು ಕಾಡುತ್ತವೆ.

ನಾನು ಕುಚ್ಚೂರಿಗೆ ಮೊದಲ ಬಾರಿ ಹೋಗಿದ್ದು, ನಾಲ್ಕನೆಯ ತರಗತಿಯಲ್ಲಿದ್ದಾಗ. ನನ್ನನ್ನು ಕರೆದೊಯ್ದವರು ನಮ್ಮ ಅಮ್ಮಮ್ಮ. ಕರ್ನಾಟಕದ ಅತಿ ಸುಂದರ ಗ್ರಾಮಗಳಲ್ಲಿ ಒಂದು ಎನ್ನಬಹುದಾದ ಕಬ್ಬಿನಾಲೆಯ ತುತ್ತ ತುದಿಯಲ್ಲಿರುವ ಕುಚ್ಚೂರು ಪ್ರದೇಶಕ್ಕೆ ಅಂದು ಹೋಗುವುದೆಂದರೆ ಒಂದು ಸಾಹಸ. ಸುತ್ತಲೂ ಕಾಡು, ಅಲ್ಲಲ್ಲಿ ಅಡಿಕೆ ತೋಟ; ಸಮುದ್ರ ಮಟ್ಟದಿಂದ ಸುಮಾರು 2,000 ಅಡಿ ಎತ್ತರದ ಕುಚ್ಚೂರು, ಪ್ರಕೃತಿ ಮಾತೆಯ ಪುಟ್ಟ ಕೂಸು ಎನ್ನಬಹುದಾದ ಸುಂದರ ತಾಣ. ಅಲ್ಲಿ ನಮ್ಮ ಬಂಧುಗಳ ಮನೆಯಿದೆ.

ಕುಚ್ಚೂರಿನ ಆ ಮನೆಯ ಎದುರಿನಲ್ಲೇ ಒಂದು ಗದ್ದೆಯಿದೆ. ಗದ್ದೆಯ ತುದಿಯಲ್ಲಿ ನಿಂತರೆ, ಕೆಳಗೆ ಪ್ರಪಾತ, ಅದರಾಚೆ ದಟ್ಟ ಕಾಡು ತುಂಬಿದ ಕಣಿವೆ; ಎಡಭಾಗದಲ್ಲಿ ಮೇಲೇರಿ ನಿಂತ ಸುಳಿಗಲ್ ಬರೆ ಎಂಬ ಮಲೆ. ಪ್ರಪಾತದ ಕೆಳಭಾಗದಲ್ಲಿ ಪುಟ್ಟ ನದಿಯ ನೀರಿನ ಮೊರೆತ ಸಣ್ಣಗೆ ಕೇಳುತ್ತದೆ; ಗದ್ದೆಯ ತುದಿಯಲ್ಲಿ ನಿಂತು ಸೂರ್ಯಾಸ್ತ ನೋಡುವ ಅನುಭವವೇ ಒಂದು ದೃಶ್ಯಕಾವ್ಯ. ಸುತ್ತಲೂ ಹರಡಿರುವ ಹಸಿರು ತುಂಬಿದ ಪರ್ವತಗಳು ಕಣಿವೆಗಳು, ಅಡಿಕೆ ತೋಟಗಳು; ಅವುಗಳ ನಡುವಿನಿಂದ ಕಾಣುವ ಸೂರ್ಯಾಸ್ತದ ಸೊಬಗನ್ನು ಅಕ್ಷರಗಳಲ್ಲಿ ಬಣ್ಣಿಸುವುದು ಅಸಾಧ್ಯ; ಕೆಂಬಣ್ಣದ ಸೂರ್ಯನು ದೂರದ ಸಮುದ್ರದಲ್ಲಿ ಮುಳುಗುವಾಗ, ಇಡೀ ಜಗತ್ತನ್ನೇ ಕೆಂಬಣ್ಣದಲ್ಲಿ ಮುಳುಗಿಸಿ ಬಿಡುತ್ತಾನೆ.

ಹಸಿರನ್ನೇ ಒಡಲಲ್ಲಿ ತುಂಬಿಕೊಂಡಿರುವ ಕುಚ್ಚೂರು, ಸಂಜೆ ಹೊತ್ತಿನ ಕೆಂಬಣ್ಣದ ಲೋಕದಲ್ಲಿ, ಬೇರೊಂದೇ ವರ್ಣಛಾಯೆಯಲ್ಲಿ ಮಿಂದೇಳುತ್ತದೆ; ಮನದಲ್ಲಿ ಕಾವ್ಯಾನುಭವವನ್ನೇ ಮೂಡಿಸುತ್ತದೆ. ಕೊನೆಯಲ್ಲಿ ಸೂರ್ಯ ಮರೆಯಾದಾಗ, ಆ ಸುತ್ತಲಿನ ಹಸಿರು ಲೋಕವು ಕತ್ತಲಿನಲ್ಲಿ ನಿಧಾನ ಅದೃಶ್ಯವಾಗುವಾಗ, ನೋಡುವವರ ಮನಸ್ಸಿನಲ್ಲಿ ಒಂದು ರೀತಿಯ ವಿಷಾದ ತುಂಬಿದ ಅನುಭವ, ಆ ವಿಷಾದದಲ್ಲೂ ಸೂರ್ಯಾಸ್ತದ ಅದ್ಭುತ ನೋಟ ಕಣ್ತುಂಬಿಕೊಂಡ ತೃಪ್ತಭಾವ.

ಕುಚ್ಚೂರು ಮನೆಗೆ ನಾನು ಹಲವು ಬಾರಿ ಹೋಗಿದ್ದರೂ, ನಾಲ್ಕನೆಯ ತರಗತಿಯಲ್ಲಿದ್ದಾಗ ಕಂಡ ದೃಶ್ಯ ನಿಜಕ್ಕೂ ವಿಶೇಷ. ಹಲವು ಕೊಠಡಿಗಳಿದ್ದ ಕುಚ್ಚೂರು ಮನೆಯಲ್ಲಿ 1970ರ ದಶಕದ ತನಕ 100ರಿಂದ 150 ಜನ ವಾಸಿಸುತ್ತಿದ್ದರು! ಅಲ್ಲೊಂದು ಅವಿಭಕ್ತ ಕುಟುಂಬ ಹಲವು ತಲೆಮಾರುಗಳಿಂದ ಬದುಕನ್ನು ಕಟ್ಟಿಕೊಂಡಿತ್ತು. ಮನೆಯಲ್ಲಿದ್ದ ಮಕ್ಕಳ ಸಂಖ್ಯೆಯೇ ಸುಮಾರು 30. ಕುಚ್ಚೂರು ಮನೆಯವರ ಒಡೆತನದ ಜಾಗದಲ್ಲೇ, ಮನೆಯಿಂದ ಅನತಿ ದೂರದಲ್ಲಿ, ಶಾಲಾ ಕಟ್ಟಡವಿತ್ತು. ಆ ಮನೆಯವರಿಗಾಗಿಯೇ ಆ ಶಾಲೆಯನ್ನು ತೆರೆದಿದ್ದಾರೆ ಅನಿಸುವ ಸನ್ನಿವೇಶ. ಏಕೆಂದರೆ, ಆ ಶಾಲೆಯ ಉಪಾಧ್ಯಾಯರಿಗೆಂದೇ, ಕುಚ್ಚೂರು ಮನೆಯಲ್ಲಿ ಒಂದು ಕೊಠಡಿ ಮೀಸಲಾಗಿತ್ತು. ಅದೊಂದು ಏಕೋಪಾಧ್ಯಾಯ, ಸರಕಾರಿ ಶಾಲೆ; ಶಾಲೆಯ ಮೇಷ್ಟ್ರು ಮನೆಯ ಸದಸ್ಯರಾಗಿಯೂ ಪರಿವರ್ತನೆಯಾ ಗಬೇಕಾದ ಅನಿವಾರ್ಯ ಸನ್ನಿವೇಶ ಅದು! ಆ ಉಪಾಧ್ಯಾಯರಿಗೆ ಊಟ, ತಿಂಡಿ ಎಲ್ಲವೂ ಅದೇ ಮನೆಯಲ್ಲಿ!

ಏಕೆಂದರೆ, ಆ ದಿನಗಳಲ್ಲಿ ಹೆಬ್ರಿಯಿಂದ 8 ಕಿ.ಮೀ. ನಡೆದುಕೊಂಡೇ ಬರಬೇಕಾಗಿದ್ದ ಊರು ಕುಚ್ಚೂರು. ಕಾಡಿನ ನಡುವೆ ಸಾಗುವ, ಮರಕಡಿದು ಸಾಗಿಸಲು ಮಾಡಿದ್ದ ಕಚ್ಚಾ ರಸ್ತೆಯಲ್ಲಿ ನಡಿಗೆ. ಆ ಮಹಾ ಕುಟುಂಬದಲ್ಲಿ ನಡೆದ ಒಂದು ಮದುವೆಗೆ, ನಮ್ಮ ಅಮ್ಮಮ್ಮ ನನ್ನನ್ನು ಕರೆದುಕೊಂಡು ಹೊರಟಿದ್ದರು. ಹೆಬ್ರಿ ಸನಿಹದ ಬಚ್ಚಪ್ಪು ಎಂಬ ಕುಗ್ರಾಮದಲ್ಲಿ ಬಸ್ ಇಳಿದು, ಕಾಡಿನ ನಡುವೆ ರಸ್ತೆಯಲ್ಲಿ ನಡೆಯ ತೊಡಗಿದೆವು. ಎದುರಿಗೆ ಸಿಕ್ಕವರೆಲ್ಲರೂ, ಪರಿಚಯ ಇರಲಿ ಬಿಡಲಿ, 'ದೂರ ಹೊರಟದ್ದು?' ಎಂದು ನಸುನಗುತ್ತಾ ವಿಚಾರಿಸುತ್ತಿದ್ದರು. ನಾವು ಕುಚ್ಚೂರು ಮನೆಗೆ ಹೊರಟದ್ದು ಎಂದು ಗೊತ್ತಾದಾಕ್ಷಣ, ಯಾರ ಕಡೆಯ ಬಂಧುಗಳು ಎಂದು ಗುರುತಿಸಿ, ಮಾತನಾಡಿಸಿ ಮುಂದೆ ಹೋಗುತ್ತಿದ್ದರು. ಎಲ್ಲರಿಗೂ ಎಲ್ಲರೂ ಪರಿಚಯವಿರುವ ಗ್ರಾಮೀಣ ಪ್ರದೇಶ ಕುಚ್ಚೂರು.

ನಡುದಾರಿಯಲ್ಲಿ ನನಗೆ ಸುಸ್ತು; ಅಲ್ಲೊಂದು ಪುಟ್ಟ ಹೊಟೇಲ್. ಅಲ್ಲಿ ಕಾರದ ಕಡ್ಡಿ ಕೊಡಿಸಿ, ಪುಸಲಾಯಿಸಿ, ಇನ್ನಷ್ಟು ದೂರ ನನ್ನನ್ನು ನಡೆಸಿಕೊಂಡೇ ಹೊರಟರು ನಮ್ಮ ಅಮ್ಮಮ್ಮ. ಆ ಹೊಟೇಲ್‌ನಲ್ಲಿ ಪುಟ್ಟದೊಂದು ಪಂಜರ; ಅಲ್ಲೊಂದು ಗಿಣಿ ಸಾಕಿದ್ದರು! ಅದು ಚಿಲಿಪಿಲಿ ಎನ್ನುತ್ತಿತ್ತು! ದಟ್ಟವಾಗಿ ಬೆಳೆದಿದ್ದ ಮರಗಳ ನೆರಳಿನಲ್ಲಿ ಸಾಗಿತ್ತು ನಮ್ಮ ನಡಿಗೆ. ಆ ಆರೆಂಟು ಕಿ.ಮೀ. ದೂರದ ದಾರಿಯುದ್ದಕ್ಕೂ ಅಲ್ಲಲ್ಲಿ ಸಾಕಷ್ಟು ಮನೆಗಳಿದ್ದವು; ಪ್ರತಿ ಮನೆಗೆ ಒಂದೊಂದು ಹೆಸರು– ಪರ್ಲ, ಗುಬ್ಬಿಮಾರು, ಕೊಂಕಣರ ಬೆಟ್ಟು, ಬಾಯರಬೆಟ್ಟು, ಜಾರನ ಬೆಟ್ಟು, ಸಂಪಿಗೆ, ಖಜನೆ, ಕೊರ್ತಬೈಲು, ಕೆಪ್ಪನಮಕ್ಕಿ, ಕೆಳಮಠ, ಕಾಜಗಲ್ಲು– ಪ್ರತಿ ಮನೆಗೆ ಒಂದು ಹೆಸರಿತ್ತು ಎಂಬಷ್ಟು ಸ್ಥಳನಾಮ ವೈವಿಧ್ಯ!

ನಮ್ಮ ದಾರಿಗಡ್ಡಲಾಗಿ ಒಂದು ಹೊಳೆ ಬಂತು; ಕಲ್ಲುಗಳ ನಡುವೆ ರಭಸದಿಂದ ಹರಿವ ನೊರೆಯುಕ್ಕುವ ನೀರು. ಹೊಳೆಯನ್ನು ದಾಟಲು, ಸುಮಾರು 80 ಅಡಿ ಉದ್ದದ ಸೇತುವೆ; ವಿಶೇಷವೆಂದರೆ ಅದು ಬೆತ್ತ ಮತ್ತು ಬಿಳಲುಗಳಿಂದ ತಯಾರಿಸಿದ ಸೇತುವೆ! ಅದರ ಮೇಲೆ ನಡೆಯುತ್ತಾ ಹೋದರೆ, ಮಧ್ಯ ಭಾಗಕ್ಕೆ ಬಂದಾಗ ಇಡೀ ಸೇತುವೆ ಜೋಲಾಡುತ್ತದೆ. ಮೇಘಾಲಯದಲ್ಲಿ ಅಲ್ಲೆಲ್ಲೋ ಕೆಲವು ಕಡೆ, ತೂಗಾಡುವ ಬಿಳಲು ಸೇತುವೆಗಳು ಇನ್ನೂ ಇವೆಯಂತೆ. ಅಂಥದ್ದೇ ಬಿಳಲು ಸೇತುವೆಯನ್ನು ದಾಟುವಾಗ, ಅಮ್ಮಮ್ಮ ನನ್ನ ಕೈ ಹಿಡಿದಿದ್ದರೂ, ನಡುಮಧ್ಯ ಭಾಗಕ್ಕೆ ಬಂದಾಗ, ಆ ಬಿಳಲಿನ ಸೇತುವೆ ಓಲಾಟಕ್ಕೆ ನನಗೆ ಭಯವಾಯಿತು! ಕೆಳಗೆ ರಭಸವಾಗಿ ಹರಿಯುವ ನೀರು ಬೇರೆ!

ಬಂಧುಗಳ ಮದುವೆಗೆಂದು ಹೋಗಿದ್ದ ನಾವು, ಮೂರು ದಿನ ಅಲ್ಲೇ ಠಿಕಾಣಿ ಹೂಡಿ, ಮಲೆನಾಡಿನ ಬದುಕಿನ ಒಂದು ಝಲಕನ್ನು ಅನುಭವಿಸಿದೆವು. ಜಿಗಣೆ, ಇಂಬಳ, ಉಂಬುಳು ಎಂದೆಲ್ಲಾ ಕರೆಸಿಕೊಳ್ಳುವ, ಲೋಳೆ ದೇಹದ, ಕಪ್ಪನೆಯ ಪುಟ್ಟ ಜೀವಿಯನ್ನು ನಾನು ಮೊದಲು ನೋಡಿದ್ದು ಇಲ್ಲೇ! ಕುಚ್ಚೂರು ಮನೆಯ ಎದುರಿನಲ್ಲೇ, ತಗ್ಗಿನ ಜಾಗದಲ್ಲಿ ಅಡಕೆ ತೋಟವಿದೆ; ಅಲ್ಲೊಂದು ಪುಟ್ಟ ತೋಡು – ಆ ತೋಡಿನಲ್ಲಿ ಜುಳು ಜುಳು ಹರಿವ ನೀರು; ಅಲ್ಲೆಲ್ಲಾ ಏಲಕ್ಕಿ ಗಿಡಗಳಿದ್ದವು. ಜತೆಗೆ, ಆ ತಂಪು ಜಾಗದಲ್ಲಿ ಸುರುಳಿಹೂವಿನ ಗಿಡಗಳಿದ್ದವು. ತೀಕ್ಷ್ಣ ಸುಗಂಧದ ಬಿಳಿ ಬಣ್ಣದ ಸುರುಳಿ ಹೂವನ್ನು ಕೊಯ್ಯಲೆಂದು, ಆ ಮನೆಯ ಮಕ್ಕಳ ಜತೆ ನಾನೂ ಹೊರಟೆ. ಸದಾ ತೇವ ಇರುವ ತೋಡಿನ ಬಳಿ ಇಂಬಳ ನನಗೆ ಕಚ್ಚಿತು! 'ಅಯ್ಯೋ ಉಂಬುಳ ಕಿತ್ತು ಬಿಸಾಕೂ' ಎಂದು ಆ ಮನೆಯ ಹುಡುಗನೊಬ್ಬ ಹೇಳಿದ; ಬೆರಳಿನಲ್ಲಿ ಹಿಡಿದರೆ ಜಾರಿ ಹೋಗುವ ಇಂಬಳವನ್ನು ಕೀಳಲು, ನನ್ನಿಂದ ಹೇಗೆ ತಾನೆ ಸಾಧ್ಯ? ಪ್ರತಿ ದಿನ ಎಂಬಂತೆ ಇಂಬಳವನ್ನು ನೋಡಿದ್ದ, ಅದರೊಂದಿಗೆ ಸಹಬಾಳ್ವೆ ನಡೆಸುತ್ತಿದ್ದ ಆ ಮನೆಯ ಹುಡುಗನೇ ಇಂಬಳವನ್ನು ನಾಜೂಕಿನಿಂದ ಕಿತ್ತೆಸೆದ. ದೂರಕ್ಕೆ ಹಾರಿ ಬಿದ್ದ ಆ ಇಂಬಳವನ್ನು ಕಂಡು, ಜತೆಗೆ ನನ್ನ ಪೇಚಾಟವನ್ನು ಕಂಡು, ಎಲ್ಲಾ ಮಕ್ಕಳೂ ನಕ್ಕದ್ದೇ ನಕ್ಕದ್ದು. ಸಣ್ಣ ಸಣ್ಣ ವಿಷಯಕ್ಕೂ ನಕ್ಕು, ಸಂತಸದಿಂದಿರುತ್ತಿದ್ದರು, ಕುಚ್ಚೂರು ಮನೆಯ ಮಕ್ಕಳು!

100ರಿಂದ 150 ಜನ ವಾಸವಿದ್ದ ಆ ಮನೆಯ ದಿನಚರಿ ಹೇಗಿತ್ತು? ಅದೊಂದು ಪ್ರತ್ಯೇಕ ಗ್ರಾಮ ವಿದ್ದಂತೆ. ಬೆಳಗಿನ ತಿಂಡಿ ದೋಸೆ ಎಂದಾದರೆ, ಸೌದೆ ಒಲೆಯ ಮುಂದೆ ಎರಡು ದೋಸೆಕಲ್ಲುಗಳನ್ನಿಟ್ಟುಕೊಂಡು ಇಬ್ಬರು ಮಹಿಳೆಯರು ದೋಸೆ ಹೊಯ್ಯಲು ಆರಂಭಿಸುತ್ತಿದ್ದರು. ಎಲ್ಲರಿಗೂ ದೋಸೆ ಮಾಡಿ

ಕೊಡುವುದೇ ಆ ಮಹಿಳೆಯರ ಬೆಳಗಿನ ಕೆಲಸ. ಮೊದಲಿಗೆ ಮಕ್ಕಳ ಸಾಲು; ಅವರದ್ದು ಮುಗಿದ ನಂತರ ದೊಡ್ಡವರಿಗೆ. ಸಾಲಾಗಿ ಎಲ್ಲರೂ ಊಟಕ್ಕೆ ಕುಳಿತಾಗ, ಬಡಿಸಲು ಇಬ್ಬರು ಬೇಕು! ಆ ಮನೆಯಲ್ಲೇ ಒಂದು ಪುಟ್ಟ ದೇಗುಲವಿದೆ; ಪ್ರತಿ ವರ್ಷ ನವರಾತ್ರಿಯಲ್ಲಿ ಸಂಭ್ರಮದ ಆಚರಣೆ ನಡೆಯುತ್ತಿದೆ. ಇಂದಿಗೂ ಕುಚ್ಚೂರು ಮನೆಯಲ್ಲಿನ ಆ ದೇಗುಲದಲ್ಲಿ, ನವರಾತ್ರಿ ಆಚರಣೆ ಎಂದರೆ ವಿಶೇಷ ಸಂಭ್ರಮ.

ಕುಚ್ಚೂರು ಮನೆಯ ಅನತಿ ದೂರದಲ್ಲಿ ಒಂದು 'ದೊಂಬೆ' ಇತ್ತು. ದಪ್ಪನೆಯ ಅಡಿಕೆ ಮರದ ಕಾಂಡವನ್ನು ಸೀಳಿ, ನೀರು ಹರಿದು ಹೋಗಲು ಅನುಕೂಲವಾಗುವಂತೆ ಚೊಕ್ಕಟ ಮಾಡಿದ ಕಾಂಡವೇ ದೊಂಬೆ. ಅದನ್ನು ಎತ್ತರದ ಒಂದು ಒರತೆಯ ಭಾಗಕ್ಕೆ ಜೋಡಿಸಿ, 30 ಅಡಿ ಕೆಳಗೆ ನೀರು ಬೀಳುವಂತೆ ಮನೆಯವರೇ ಮಾಡಿದ್ದರು. ನೀರು ಬೀಳುವ ಜಾಗದಲ್ಲಿ ಕಲ್ಲಿನ ಚಪ್ಪಡಿ ಮತ್ತು ವಿಶಾಲವಾದ ಜಾಗ. ಸದಾ ನೀರು ಬೀಳುತ್ತಿದ್ದ ಆ ದೊಂಬೆಯ ಅಡಿ ನಿಂತರೆ, ದಬದಬನೆ ತಲೆಯ ಮೇಲೆ ಸುರಿವ ಜಲಧಾರೆಯ ಸ್ನಾನ. ಪ್ರತಿದಿನ ಜಲಪಾತಕ್ಕೆ ತಲೆಯೊಡ್ಡುವ ಅದೃಷ್ಟ ಆ ಮನೆಯವರಿಗೆ. ಆ ಪ್ರದೇಶದ ಸುತ್ತಲೂ ಹಲವು ಮೈಲುಗಳ ತನಕ ಕಾಡು, ಮಲೆಗಳೇ ಇದ್ದುದರಿಂದ, ಆ ನೀರಿನ ಧಾರೆ ಬೇಸಗೆಯಲ್ಲೂ ಬತ್ತುವುದಿಲ್ಲ! , ಅಲ್ಲಿನ ಅಡುಗೆಮನೆ, ಬಚ್ಚಲು ಮನೆಗಳಲ್ಲಿ ಇಂತಹುದೇ ದೊಂಬೆಗಳಿಂದ ಸದಾ ಕಾಲ ಸುರಿವ ನೀರು! ದಿನ ಇಪ್ಪತ್ತನಾಲ್ಕು ಗಂಟೆಯೂ ನಿಸರ್ಗವೇ ನೀಡಿದ ನಿರಂತರ ನಲ್ಲಿ ನೀರು! ಆಧುನಿಕತೆ ಕುಚ್ಚೂರಿಗೂ ಬಂದ ನಂತರ, ಅಡಿಕೆ ಮರದ ಕಾಂಡ ಸೀಳಿ ಮಾಡಿದ ದೊಂಬೆಯ ಬದಲು, ಪ್ಲಾಸ್ಟಿಕ್ ಪೈಪುಗಳ ಮೂಲಕ ಈಗಲೂ ನೀರು ಬಂದು ಮನೆಯೊಳಗೇ ಸುರಿಯುತ್ತದೆ, ದಿನದ ಇಪ್ಪತ್ತನಾಲ್ಕು ಗಂಟೆಯೂ! ನಂತರವೂ ಹಲವು ಬಾರಿ ಕಬ್ಬಿನಾಲೆ ಮತ್ತು ಕುಚ್ಚೂರಿಗೆ ಹೋಗಿದ್ದುಂಟು. ಆದರೆ ಮೊದಲ ಭೇಟಿಯ ಬೆರಗು ಇನ್ನೂ ಮಾಸಿಲ್ಲ.

ಮೊದಲ ಬಾರಿ ಹೋದಾಗ ಕಂಡ ಮದುವೆಯ ಸಂಭ್ರಮ ನೆನಪಿದೆ. ಮನೆಯ ಅಂಗಳದಲ್ಲೇ ಚಪ್ಪರ ಹಾಕಿ, ಧಾರೆ ಮಂಟಪವನ್ನು ನಿರ್ಮಿಸಿದ್ದರು. ಕನಿಷ್ಟ ಆರು ಕಿ.ಮೀ. ನಡೆದು ಬರಬೇಕಾದ ಆ ಮದುವೆಗೆ, ನೂರಾರು ಜನ ಅತಿಥಿಗಳು ಸೇರಿದ್ದರು. ಕುಚ್ಚೂರು ಮನೆಯ ಅವಿಭಕ್ತ ಕುಟುಂಬವು, ನಂತರದ ದಶಕಗಳಲ್ಲಿ ಭಾಗವಾಯಿತು; ಜಮೀನು, ತೋಟ ಎಲ್ಲವೂ ಭಾಗವಾಗಿ, ಸುತ್ತು ಮುತ್ತಲಿನ ಜಾಗಗಳಲ್ಲಿ ಎಲ್ಲರೂ ಪ್ರತ್ಯೇಕ ಮನೆ ಕಟ್ಟಿಕೊಂಡರು. ಎಲ್ಲಾ ಮನೆಗಳ ಸುತ್ತಲೂ ಮರಗಿಡಗಳು; ಒಂದು ಮನೆಯವರು ಹರಿಯುವ ತೊರೆಯ ಮೇಲೆಯೇ ಅಟ್ಟಣಿಗೆ ಕಟ್ಟಿಕೊಂಡು, ಮನೆಯ ಒಂದು ಕೊಠಡಿಯನ್ನು ನಿರ್ಮಿಸಿಕೊಂಡಿದ್ದರು. ಕಾಡಿನ ನಡುವಿನ ಬದುಕು ಕಷ್ಟ; ಶಾಲೆಗಾಗಿ ಮಕ್ಕಳು ಮೈಲಿಗಟ್ಟಲೆ ನಡೆಯಬೇಕು; ಆದ್ದರಿಂದ ಹಲವರು, ಪಟ್ಟಣಗಳತ್ತ ಸಾಗಿದರು. ಕ್ರಮೇಣ ಅಲ್ಲಿದ್ದ ಏಕೋಪಾಧ್ಯಾಯ ಸರಕಾರಿ ಶಾಲೆ ಮುಚ್ಚಿಹೋಯಿತು!

ಕುಚ್ಚೂರಿನಿಂದ ಕಾಣಿಸುವ ಸೂರ್ಯಾಸ್ತ ನೋಡಲೆಂದೇ ಹಲವು ಬಾರಿ ನಾನು ಅಲ್ಲಿಗೆ ಹೋಗಿದ್ದುಂಟು. ಕಾಡಿನ ನಡುವೆ, 2000 ಅಡಿ ಎತ್ತರದ ಕುಚ್ಚೂರಿನಲ್ಲಿ ತಂಗುವುದೆಂದರೆ, ಪ್ರಕೃತಿ ನಡುವೆ ಕಾಲ ಕಳೆಯುವ ಅಪೂರ್ವ ಅವಕಾಶ. ಆ ಮನೆಯಿಂದ ಇನ್ನೂ ಮುಂದೆ ಸಾಗಿದರೆ, ದಟ್ಟ ಕಾಡು ಮತ್ತು ಮಲೆಗಳ ನಡುವೆ ಸಾಗುವ ಮಣ್ಣು ರಸ್ತೆ, ತಿಂಗಳ ಮಕ್ಕಿ, ತೆಂಕಮಾರು ಮೊದಲಾದ ಇನ್ನೂ ಏಕಾಂಗಿ ಹಳ್ಳಿಗಳಿಗೆ ಕರೆದೊಯ್ಯುತ್ತದೆ. ಅದೇ ಕಾಡು ದಾರಿಯಲ್ಲಿ ಸಾಗಿದರೆ ಕೂಡ್ಲುತೀರ್ಥ ಜಲಪಾತಕ್ಕೂ ಹೋಗಬಹುದು. ನಾನೊಮ್ಮೆ ಅದೇ ದಾರಿಯಾಗಿ ಕೂಡ್ಲುತೀರ್ಥಕ್ಕೆ ಚಾರಣ ಮಾಡಿದ್ದೆ. ಅಲ್ಲಿಂದ ಮುಂದೆ ಸಾಗಿದರೆ, ಕಿಗ್ಗ, ಶೃಂಗೇರಿಗೂ ದಾರಿಯಿದೆ! ಅವೆಲ್ಲಾ ದಟ್ಟ ಕಾಡಿನ ನಡುವೆ ಸಾಗುವ ನಿಗೂಢ ಅನುಭವ ನೀಡುವ ಕಾಡುದಾರಿಗಳು. ಆ ಮನೆಯ ಹಿಂಭಾಗದಲ್ಲಿ ಏರಿಹೋಗಿದ್ದ ಒಂದು ಬೆಟ್ಟದ ಮಗ್ಗುಲಿನ ತುದಿಗೆ ನಾಯಿಬೆರಿ ಬೆಟ್ಟ ಎಂಬ ಹೆಸರು. ಅಲ್ಲಿಗೂ ಚಾರಣ ಮಾಡಿದ್ದೆ. ದಟ್ಟ ಕಾಡಿನ ನಡುವೆ ಸಾಗುವ ದಾರಿಯು, ತುದಿಯಲ್ಲಿ ಹುಲ್ಲುಗಾವಲಿಗೆ ತೆರೆದುಕೊಳ್ಳುತ್ತದೆ.

ಇಪ್ಪತ್ತೊಂದನೆಯ ಶತಮಾನವು ಎಲ್ಲೆಡೆ ಬದಲಾವಣೆ ತಂದಿರುವಂತೆ, ಕಬ್ಬಿನಾಲೆ–ಕುಚ್ಚೂರಿನಲ್ಲೂ ಬದಲಾವಣೆಗಳನ್ನು ತಂದಿದೆ. ಈಗ ಅರ್ಧ ದೂರದ ತನಕ ಬಸ್ ರಸ್ತೆಯಿದೆ; ಕಾರುಗಳು ಸಂಚರಿಸಬಹುದಾದ ಟಾರು ರಸ್ತೆಯಿದೆ. ವಿದ್ಯೆ ಕಲಿತ ಹಲವರು ಕೆಲಸದ ನಿಮಿತ್ತ ನಗರಗಳನ್ನೂ ಸೇರಿದ್ದಾರೆ; ಹಲವರು ಅಲ್ಲೇ ಉಳಿದಿದ್ದಾರೆ. ಆ ದಟ್ಟಕಾಡಿನ ನಡುವೆ, ಅಡಿಕೆ ತೋಟಗಳ ಮಡಿಲಲ್ಲಿ ಹೋಂಸ್ಟೇಗಳೂ ಆರಂಭವಾಗಿವೆ. ಪ್ರಕೃತಿಯ ಮಡಿಲಲ್ಲಿರುವ ಸುಂದರ ಗ್ರಾಮ ಕಬ್ಬಿನಾಲೆ ಮತ್ತು ಕುಚ್ಚೂರುಗಳು ಇಂದಿಗೂ ಸುಂದರ ತಾಣಗಳಾಗಿ ಉಳಿದುಕೊಂಡಿವೆ; ಮತ್ತೊಮ್ಮೆ ಅಲ್ಲಿಗೆ ಹೋಗಿ, ಮಳೆಗಾಲದಲ್ಲಿ ನಾಲ್ಕಾರು ದಿನ ತಂಗಬೇಕು ಎಂಬ ಆಸೆ ಮೂಡಿಸುತ್ತಿವೆ.

ಒದುಗರ ಓಣಿ

ಒದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ವಿಶ್ವ- ಬ್ರಹ್ಮ ಆನಂದ!

ಸಂಪಾದಕ ವಿಶ್ವೇಶ್ವರ ಭಟ್ಟರ ಹಾಗೂ ಪ್ರಸಿದ್ಧ ತೆಲುಗು ಹಾಸ್ಯ ನಟ ಬ್ರಹ್ಮಾನಂದಂ ಭೇಟಿಯ ಕುರಿತ ಲೇಖನ ಓದಿದೆ (ನೂರೆಂಟು ವಿಶ್ವ, ಜೂ.11). ಆಂಧ್ರದ ಸಣ್ಣ ಗ್ರಾಮದಲ್ಲಿ ಬಡ ಮನೆತನದಲ್ಲಿ ಹುಟ್ಟಿ ಕಷ್ಟದಲ್ಲಿ ಓದಿ ಶಿಕ್ಷಕರಾಗಿ ವೃತ್ತಿ ಆರಂಭಿಸಿದ ಅವರು ಯಾರ ಸಹಾಯವಿಲ್ಲದೆ ಸಿನಿಮಾ ಎಂಬ ಮಾಯಾಲೋಕ ಸೇರಿದ್ದು ವಿಶೇಷ. 1300 ಸಿನಿಮಾಗಳಲ್ಲಿ ನಟಿಸಿ, ಪ್ರೇಕ್ಷಕರನ್ನು ನಗಿಸಿ ಅವರ ಮನದಲ್ಲಿ ಶಾಶ್ವತ ಸ್ಥಾನ ಗಳಿಸಿದ್ದು, ಸಿನಿಮಾ ಕಥೆಗಿಂತ ಭಿನ್ನವಾಗಿಲ್ಲ! ಭಟ್ಟರು, ಬ್ರಹ್ಮಾನಂದಂ ಅವರ ಆತ್ಮಕಥೆಯನ್ನು ಕನ್ನಡಕ್ಕೆ ಅನುವಾದಿಸಿ ಮೊದಲ ಪ್ರತಿಯನ್ನು ಅವರ ಮನೆಗೆ ಹೋಗಿ ಕೊಟ್ಟು ಬಂದದ್ದು, ಅಲ್ಲಿ ತಮಗೆ ದೊರೆತ ಪ್ರೀತ್ಯಾದರ, ಸನ್ಮಾನ, ಆತ್ಮೀಯತೆ ಕುರಿತು ಓದಿ ನಿಜಕ್ಕೂ ಸಂತೋಷವಾಯಿತು. ಆನಂದ ಬ್ರಹ್ಮ- ವಿಶ್ವದ ಈಶ್ವರ ಎಂಬಿಬ್ಬರ ಸಮಾಗಮ ಒಂದು ಸಂಭ್ರಮ ತೆಲುಗು ಮತ್ತು ಕನ್ನಡ ಭಾಷಿಕರಿಗೆ. ಈ ಬಂಧ ಹೀಗೇ ಇರಲಿ.

– ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಕಡೆಗೂ ಬಂತು ದೊಡ್ಡಣ್ಣನಿಗೆ ಬುದ್ಧಿ!

ಪಶ್ಚಿಮ ಏಷ್ಯಾ ಸಂಘರ್ಷ ತಣಿಸಲು ನಡೆಯುತ್ತಿರುವ ರಾಜತಾಂತ್ರಿಕ ಪ್ರಯತ್ನಗಳ ನಡುವೆ ಇರಾನ್ ವಿರುದ್ಧ ಸೇನಾ ಕಾರ್ಯಾಚರಣೆ ಮುಂದುವರೆಸಿದರೆ, ಇಸ್ರೇಲ್ ಏಕಾಂಗಿಯಾಗಲಿದೆ ಎಂಬ ಎಚ್ಚರಿಕೆಯನ್ನು ತನ್ನ ಜಿಗ್ರಿ ದೋಸ್ತಿ ಇಸ್ರೇಲಿಗೆ ನೀಡಿರುವ ಅಮೇರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಕಡೆಗೂ ಬುದ್ಧಿ ಬಂದ ಹಾಗಿದೆ. ಸಂಧಾನ ಮಾತುಕತೆಯನ್ನು ಹಳ್ಳ ಹಿಡಿಸುವಂತಹ ಯಾವುದೇ ಮಾತುಕತೆಗಳು ಇಸ್ರೇಲ್ ಅನ್ನು ಒಂಟಿಯಾಗಿ ಮಾಡಲಿದೆ ಎಂದು ಇಸ್ರೇಲ್ ಪ್ರಧಾನಿ ನೆತನ್ಯಾಹುಗೆ ಗಂಭೀರ ಎಚ್ಚರಿಕೆ ನೀಡಿದ್ದಾರೆ. ಆ ನೆತನ್ಯಾಹು ಮಾತು ಕೇಳಿಕೊಂಡು ಇರಾನ್ ವಿರುದ್ಧ ಯುದ್ಧ ಪ್ರಾರಂಭಿಸಿದ ಟ್ರಂಪ್‌ಗೆ ಕಡೆಗೂ ತಮ್ಮ ತಪ್ಪು ಅರಿವಾಗಿರುವುದು ಸ್ವಾಗತಾರ್ಹ. ವಿಶ್ವಾದ್ಯಂತ ತಲ್ಲಣ ಸೃಷ್ಟಿಸಿರುವ ಯುದ್ಧ ಆದಷ್ಟು ಬೇಗ ಕೊನೆಗೊಳ್ಳಲಿ.

– ಕೆ.ವಿ ವಾಸು, ಮೈಸೂರು

ಆತ್ಮಸಾಕ್ಷಿಯಂತೆ ನಡೆದುಕೊಳ್ಳಲಿ

ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅಧಿಕಾರ ಸ್ವೀಕರಿಸಿದ ಮೇಲೆ ರಾಜ್ಯದಲ್ಲಿ ಭುಗಿಲೆದ್ದಿರುವ ಸಚಿವರ ಖಾತೆ ಹಂಚಿಕೆ ಜಗಳ ಹಾಗೂ ಮಂತ್ರಿ ಪದವಿಗಾಗಿ ಆಕಾಂಕ್ಷಿ ಶಾಸಕರ ಕಿತ್ತಾಟಗಳು ಕಾಂಗ್ರೆಸ್ ನಾಯಕರಿಗೆ ದಿಗಿಲುಬಡಿಸಿವೆ. ಇದಕ್ಕೆಲ್ಲಾ ಕಾರಣ ಏನು ಎಂಬ ಬಗ್ಗೆ ಕಾಂಗ್ರೆಸ್ ನಾಯಕರು ಆತ್ಮಾವಲೋಕನ ಮಾಡಿಕೊಳ್ಳುವುದು ಅವಶ್ಯ. ಸಚಿವರಾದ ರಾಮಲಿಂಗಾರೆಡ್ಡಿ, ಮುನಿಯಪ್ಪ, ಕೃಷ್ಣಬೈರೇಗೌಡ ಅವರಿಗೆ ನಿಮ್ಮ ಬೇಡಿಕೆಗೆ ಅನುಸಾರ ಖಾತೆ ಹಂಚಲಾಗುವುದು ಎಂದು ನಾಯಕರು ಮಾತು ಕೊಟ್ಟಿದ್ದರು ಎಂದು ಹೇಳಿ ಅಧಿಕಾರ ಸ್ವೀಕರಿಸಲು ಹಿಂಜರಿಯುತ್ತಿರುವುದು ಕಾಂಗ್ರೆಸ್ ನಾಯಕರನ್ನು ಇಕ್ಕಟಿಗೆ ಸಿಲುಕಿಸಿದೆ. ಇದಕ್ಕೆಲ್ಲಾ ಕಾರಣ ಪಕ್ಷದ ನಾಯಕರಲ್ಲಿರುವ ಆತ್ಮಸಾಕ್ಷಿ ಕೊರತೆ. ಆತ್ಮಸಾಕ್ಷಿ ದಕ್ಷ ಆಡಳಿತದ ಒಂದು ಭಾಗ.

– ವಿ.ಜಿ ಇನಾಮದಾರ, ಸಾರವಾಡ

ವಿಕೃತ ಮನಸ್ಥಿತಿ

ಕಳೆದ ವಾರ ಉತ್ತರಾಖಂಡದ ಗರ್ವಾಲ್‌ನಲ್ಲಿ ಮೇಲ್ವರ್ಗದ ಬಾಲಕಿಯ ಸ್ನೇಹ ಮಾಡಿದ ತಪ್ಪಿಗಾಗಿ 18 ವರ್ಷದ ದಲಿತ ಯುವಕನೊಬ್ಬನಿಗೆ ಚಿತ್ರಹಿಂಸೆ ನೀಡಿ ಕೊಂದ ಅಮಾನುಷ ಘಟನೆ ನಡೆದಿದೆ. ಯುವಕನ ತಂದೆ ಹಿಂಸಿಸಿ ಕೊಂದಿದ್ದಾರೆ ಎಂದು ದೂರು ನೀಡಿದ್ದಾರೆ. ನಾವಿನ್ನೂ ಯಾವ ಕಾಲದಲ್ಲಿದ್ದೇವೆ? ವಿವಾಹಕ್ಕೆ ಜಾತಿ, ಮತ ಎಲ್ಲವೂ ಅಮುಖ್ಯವಾದ ಈ ಬದಲಾದ ಕಾಲಘಟ್ಟದಲ್ಲಿ ಇನ್ನೂ ನಾ ಮೇಲು, ನೀ ಕೀಳು ಎಂಬ ವಿಕೃತ ಮನೋಗತಿ ಸಾಧುವೇ? ನಾವು ಬದಲಾಗುವುದು ಯಾವಾಗ?

– ಕೆ.ಲೀಲಾ ಶ್ರೀನಿವಾಸ್. ಹರಪನಹಳ್ಳಿ

ಪಾಕಿಸ್ತಾನವೆಂಬ ಇಸ್ಲಾಮಿಕ್ ದೇಶ ಮರಣ ಹೊಂದಿದ್ದು 1971ರಲ್ಲಿ!



ಅಕ್ಬರ್‌ನಾಮಾ

ಎಂ.ಜೆ. ಅಕ್ಬರ್
vveditoped@gmail.com

ಭಾಗ 2

ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಮದ್ಯಪಾನ ತ್ಯಜಿಸಿದ್ದ ಮೋತಿಲಾಲ್ ನೆಹರೂ ಅವರು 1925ರಲ್ಲಿ ಮತ್ತೆ ತಮಗೆ ಪ್ರಿಯವಾದ ಹೇಗ್ಸ್ ಡಿಂಪಲ್ ಸ್ಕಾಚ್‌ಗೆ ಮರಳಿದರು. ಅದಕ್ಕೆ ಅವರ ಜೀವದ ಗೆಳೆಯ ಸಿಆರ್ ದಾಸರ ಸಾವೇ ನೆಪವಾಯಿತು. ಗಾಂಧೀಜಿಯವರ ಕಾರಣದಿಂದ ಕುಡಿತ ಬಿಟ್ಟಿದ್ದ ದಾಸ್ ಅವರಿಗೆ ಏಕಾಏಕಿ ದೇಹಕ್ಕೆ ಆಲ್ಕೋಹಾಲ್ ಪೂರೈಕೆ ನಿಂತಿದ್ದರಿಂದಲೇ ಸಾವು ಬಂದೆರಗಿತು ಎಂದು ಸುದ್ದಿಯಾಗಿತ್ತು. ಮೋತಿಲಾಲರು ಅದನ್ನು ಸಂಪೂರ್ಣ ನಂಬಿದ್ದರು. ಅವರಿಗೂ ತಮ್ಮ ಗೆಳೆಯನ ರೀತಿಯಲ್ಲಿ ಸಾಯಲು ಇಷ್ಟವಿರಲಿಲ್ಲ.

ಮೋತಿಲಾಲರು ಐಷಾರಾಮಿ ಮನುಷ್ಯ. ಆದರೆ ಅವರ ವಿಸ್ತರಿತ ಕುಟುಂಬಗಳಿಗೆ ಅಂತಹುದೇ ಐಷಾರಾಮಿ ಬದುಕಿನ ಮಟ್ಟವನ್ನು ಕಾಯ್ದುಕೊಳ್ಳುವುದು ಕಷ್ಟವಾಗುತ್ತಿತ್ತು. ಆದರೂ ಅವರು ಮೇಲ್ಮಟ್ಟದ ಜೀವನ ವಿಧಾನವನ್ನೇ ಅನುಸರಿಸುತ್ತಿದ್ದರು. ಬಿ.ಕೆ.ನೆಹರೂ ಅವರ ತಂದೆ ಬ್ರಜ್‌ಲಾಲ್ ಆಕ್ಸ್‌ಫರ್ಡ್‌ನ ಎಕ್ಸ್‌ಟರ್ ಕಾಲೇಜಿನಲ್ಲಿ ಎಂ.ಎ. ಪಡೆದು, ಬ್ಯಾರಿಸ್ಟರ್ ಆಗಲು ಯತ್ನಿಸಿ, ನಂತರ ಇಂಪೀರಿಯಲ್ ಸಿವಿಲ್ ಸರ್ವೀಸ್ ಆಯ್ಕೆ ಮಾಡಿಕೊಂಡು, ಬ್ರಿಟಿಷ್ ಸರಕಾರದ ಹಣಕಾಸು ಇಲಾಖೆಗೆ ನೇಮಕಗೊಂಡರು. ನಂತರ 1908ರಲ್ಲಿ ಅಲಹಾಬಾದ್‌ಗೇ ಬ್ರಿಟಿಷ್ ನೌಕರರಾಗಿ ಆಗಮಿಸಿದರು. ಅಲ್ಲಿ ಆನಂದ ಭವನದಲ್ಲಿ ಪತ್ನಿ ರಾಮೇಶ್ವರಿ ಜೊತೆ ವಾಸಿಸುತ್ತಿದ್ದರು. ಆಕೆ ಲಾಹೋರ್‌ನ ದಿವಾನ್ ನರೇಂದ್ರನಾಥರ ಮಗಳು. ಬ್ರಜ್‌ಲಾಲ್‌ಗೆ ಅತ್ಯುನ್ನತ ಶ್ರೇಣಿಯ ಸಂಬಳ ಸಿಗುತ್ತಿತ್ತು. ಆದರೂ ಅದು ಸಂಬಳವಾಗಿತ್ತೇ ಹೊರತು ವಕೀಲಿ ವೃತ್ತಿಯ ಭರ್ಜರಿ ಕಮಾಯಿ ಆಗಿರಲಿಲ್ಲ. ಇಂಗ್ಲೆಂಡ್‌ಗೆ ಓದಲು ಹೊರಟಾಗ ಅವರಿಗೆ ಉಡುಗೆ ಭತ್ಯೆಯಾಗಿ ನೂರು ಪೌಂಡ್ ಲಭಿಸಿತ್ತು. ಆದರೆ, ಮೋಜುಗಾರನಾಗಬಾರದು ಎಂಬ ಎಚ್ಚರಿಕೆಯಿಂದ ಆಕ್ಸ್‌ಬ್ರಿಜ್‌ಗೆ ಹೋಗಬಾರದೆಂದು ತಾಕೀತು ಮಾಡಲಾಗಿತ್ತು. ಉಡುಗೆಯ ಗುಣಮಟ್ಟದ ಜೊತೆಗೆ ರಾಜಿ ಮಾಡಿಕೊಳ್ಳುವ ಅಗತ್ಯವೇ ಇರಲಿಲ್ಲ. ತಲಾ 30 ಗಿನಿಯಾಗಳಿಗೆ ಒಂದರಂತೆ, ಬಹಳ ದುಬಾರಿಯಾದ ಹೆನ್ರಿ ಪೂಲ್ ಅಂಗಡಿಯಿಂದ ಮೂರು ಜೊತೆ ಅತ್ಯುತ್ತಮ ಸೂಟ್ ಖರೀದಿಸಲು ಸೂಚಿಸಲಾಗಿತ್ತು. ಆದರೆ ಸಾವೈಲ್ ರೋದಲ್ಲಿ ಅದೇ ರೀತಿ ಕಾಣಿಸುವ, ಅಷ್ಟೇ ಗುಣಮಟ್ಟದ ಸೂಟ್‌ಗಳನ್ನು ಬಹಳ ಕಡಿಮೆ ಬೆಲೆಗೆ ಹೊಲಿದು ಕೊಡುತ್ತಿದ್ದರು. ಹೀಗಾಗಿ ಆಸ್ಟಿನ್ ರೀಡ್‌ನಿಂದ ಬ್ರಜ್‌ಲಾಲ್ ಸೋವಿ ದರದ ಸೂಟ್‌ಗಳನ್ನು ಕೊಂಡರು. ಆದರೆ ಒಪೆರಾ ಹ್ಯಾಟ್ ಮತ್ತು ಲೆದರ್ ಶೂಗಳನ್ನು ದುಬಾರಿ ಬೆಲೆ ತೆತ್ತೇ ಕೊಳ್ಳಬೇಕಾಯಿತು.

ಬ್ರಜ್ ಕುಮಾರ್ ತಾಯಿಯ ಕಡೆಯವರು ಸಾಂಸ್ಕೃತಿಕವಾಗಿ ಹೆಚ್ಚು ಭಾರತೀಯರಾಗಿದ್ದರು, ಆದರೆ ರಾಜಕೀಯವಾಗಿ ಆಡಳಿತದ ಪರ ಇದ್ದರು. ಅವರ ಪೂರ್ವಜರಾದ ಪಂಡಿತ್ ಗಂಗಾರಾಮ್ ಎಂಬವರು ಕಾಶ್ಮೀರಿ ಪುರೋಹಿತರಾಗಿದ್ದರು. ಅವರು ಪಂಜಾಬ್‌ನ ಮಹಾರಾಜ ರಣಜಿತ್ ಸಿಂಗ್ ಅವರ ಸೇವೆಗಾಗಿ ಲಾಹೋರ್‌ನಲ್ಲಿ ಉಳಿದುಕೊಂಡಿದ್ದರು. 1813ರಲ್ಲಿ ಅವರಿಗೆ ರಾಜರು ಜಹಗೀರು ಬರೆದುಕೊಟ್ಟಿದ್ದರು. ಬ್ರಜ್ ಕುಮಾರ್ ಅವರ ತಾಯಿಯ ತಾತ ಲಾಹೋರ್‌ನಲ್ಲಿ ಬಹಳ ಪ್ರಸಿದ್ಧ ವ್ಯಕ್ತಿ. ಬ್ರಜ್ ಕುಮಾರ್ ಅವರ ತಂದೆ ಮತ್ತು ತಾಯಿ 1902ರಲ್ಲಿ ಮದುವೆಯಾದಾಗ ಅವರಿಗೆ ಕ್ರಮವಾಗಿ 18 ಮತ್ತು 15 ವರ್ಷ ವಯಸ್ಸು.

ದಿವಾನ್ ನರೇಂದ್ರನಾಥರನ್ನು ಭಾಯಿಜಾನ್‌ಜೀ ಎಂದೇ ಎಲ್ಲರೂ ಕರೆಯುತ್ತಿದ್ದರು. ಅಂದರೆ ಅಣ್ಣ ಎಂದರ್ಥ. ಅವರು ಅರೇಬಿಕ್ ಮತ್ತು ಪರ್ಷಿಯನ್ ಭಾಷೆಯಲ್ಲಿ ಪಂಡಿತರು. ಕುರಾನನ್ನು ಎಷ್ಟು ಚೆನ್ನಾಗಿ ಓದಿಕೊಂಡಿದ್ದರೋ ಅಷ್ಟೇ ಚೆನ್ನಾಗಿ ಸಂಸ್ಕೃತದ ಧಾರ್ಮಿಕ ಗ್ರಂಥಗಳನ್ನೂ ಓದಿಕೊಂಡಿದ್ದರು. ಅವರಿಗೆ ಇಂಗ್ಲಿಷ್ ಚೆನ್ನಾಗಿ ಗೊತ್ತಿತ್ತು. ಲಾಹೋರ್‌ನ ಸರಕಾರಿ ಕಾಲೇಜಿನಲ್ಲಿ ಪದವಿ ಪಡೆದಿದ್ದರು. ಪಂಜಾಬ್‌ನ ಭೂಮಾಲೀಕರ ಪ್ರತಿನಿಧಿಯಾಗಿ 1930 ಮತ್ತು 1931ರಲ್ಲಿ ದುಂಡು ಮೇಜಿನ ಸಭೆಗೆ ಲಂಡನ್ನಿಗೆ ಹೋಗಿದ್ದರು. ಪಂಜಾಬಿನ ಶ್ರೀಮಂತರು ಬ್ರಿಟಿಷ್ ಅಧಿಕಾರಶಾಹಿಯ ಪರವಾಗಿಯೇ ಇದ್ದಿರಬಹುದು, ಆದರೆ ಅವರು ಬ್ರಿಟಿಷರ ಮುಂದೆ ತಲೆಯೆತ್ತಿ ಮಾತನಾಡುತ್ತಿದ್ದರು. ಭಾರತದ ರಾಜರ ವಿಷಯದಲ್ಲಿ ಇದು ಯಾವಾಗಲೂ ನಿಜವಾಗಿರಲಿಲ್ಲ. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಬ್ರಜ್ ಕುಮಾರ್ ಅವರ ಪ್ರೊಫೆಸರ್ ಆಗಿದ್ದ ಹರೋಲ್ಡ್ ಲಸ್ಕಿ ಎಂಬವರು ಆ ಕಾಲಕ್ಕೆ ಸಂಬಂಧಿಸಿದ ಒಂದು ದಂತಕತೆ ಹೇಳಿದ್ದರಂತೆ. ಅದು ಆವತ್ತಿನ ಸಂದರ್ಭವನ್ನು ಚೆನ್ನಾಗಿ ಅರ್ಥ ಮಾಡಿಸುವಂತಿದೆ. ದರ್ಭಾಂಗದ ಮಹಾರಾಜರು ಒಮ್ಮೆ ಔತಣಕೂಟ ಏರ್ಪಡಿಸಿದ್ದರು. ಅದರಲ್ಲಿ ಪ್ರಧಾನಿ ರಾಮ್‌ಸೆ ಮೆಕ್‌ಡೊನಾಲ್ಡ್ ಅವರು ಮಹಾರಾಜರ ಬಲಬದಿಯಲ್ಲಿ ಹಾಗೂ ಲಸ್ಕಿಯವರು ಎಡಬದಿಯಲ್ಲಿ ಕುಳಿತಿದ್ದರು. ಮಹಾರಾಜರು ಆ ಔತಣದಲ್ಲಿ ಆಡಿದ ಒಂದೇ ಒಂದು ಮಾತೆಂದರೆ 'ನಿಮಗೆ ಊಟ ಇಷ್ಟವಾಗುತ್ತದೆ ಎಂದು ಭಾವಿಸಿದ್ದೇನೆ.' ಬ್ರಿಟಿಷ್ ವಸಾಹತುಶಾಹಿಗೆ ಭಾರತದಿಂದ ಬೇಕಿದ್ದುದು ಅಷ್ಟೆ.

ಬಿಕೆ ನೆಹರೂ ಹಿಂದಿ, ಉರ್ದು ಹಾಗೂ ಇಂಗ್ಲಿಷ್ ಭಾಷೆಗಳನ್ನು ತಾಯಿಯಿಂದ ಕಲಿತಿದ್ದರು. ಅತಿ ದೊಡ್ಡ ಪಾಪದ ಕೆಲಸವೆಂದರೆ ಸುಳ್ಳು ಹೇಳುವುದು ಎಂದು ಆ ತಾಯಿ ತನ್ನ ಮಗನಿಗೆ ಕಲಿಸಿದ್ದರು. ಗೌರವದ ಅತ್ಯುತ್ತಮ ವ್ಯಾಖ್ಯಾನವೆಂದರೆ ತುಳಸೀದಾಸರ ರಾಮಚರಿತ ಮಾನಸದಲ್ಲಿ ಹೇಳಿದ ರಘುಕುಲ ತಿಲಕನ ಬದುಕಿನ ರೀತಿಯೆಂದೂ, 'ಪ್ರಾಣ ಜಾಯೇ ಪರ್ ವಚನ್ ನ ಜಾಯೇ (ಜೀವ ಹೋದರೂ ಮಾತು ಉಳಿಸಿಕೊಳ್ಳಬೇಕು) ಎಂಬಂತೆ ಬದುಕಬೇಕೆಂದೂ ಹೇಳಿಕೊಟ್ಟಿದ್ದರು. 1925ರಲ್ಲಿ ಅವರ ಉಪನಯನ ಸಮಾರಂಭ ಅದ್ದೂರಿಯಾಗಿ, ಬಹಳ ದೀರ್ಘವಾಗಿ ನಡೆದಿತ್ತು. ದೂರದ ಊರುಗಳಿಂದ ಎಲ್ಲಾ ಸಂಬಂಧಿಕರು ಬಂದಿದ್ದರು. ರಂಗೂನ್‌ನಿಂದ ಸಲೇಹ್ ತ್ಯಾಬ್ಜಿ ಆಗಮಿಸಿದ್ದರು. ಇಡೀ ದಿನ ಪೂಜೆಗಳು ನಡೆದಿದ್ದವು. 'ಬರದಾರಿ ಔತಣ' ಅದಕ್ಕಿಂತ ದೀರ್ಘವಾಗಿ ನಡೆದಿತ್ತು. ಪುರೋಹಿತರು ಬಿಕೆ ನೆಹರೂ ಕಿವಿಯಲ್ಲಿ ಗಾಯತ್ರಿ ಮಂತ್ರವನ್ನು ರಹಸ್ಯವಾಗಿ ಉಪದೇಶಿಸಿ, ಅದನ್ನು ಯಾವುದೇ ಕಾರಣಕ್ಕೂ ಮಹಿಳೆಯರ ಅಥವಾ ಬೇರೆ ಜಾತಿಯವರ ಮುಂದೆ ಹೇಳಬಾರದೆಂದು ಸೂಚಿಸಿದ್ದರು. ಮರುದಿನವೇ ಅವರಲ್ಲಿದ್ದ ಮೂರ್ತಿಭಂಜಕನು ಜನಿವಾರದ ಬ್ರಹ್ಮಗಂಟನ್ನು ಕತ್ತರಿಸಿ ಜಾತಿ ಹಿರಿಮೆಯಿಂದ ಮುಕ್ತಿ ಹೊಂದಿದ್ದನು.

10ರಿಂದ 16ನೇ ವರ್ಷದ ನಡುವೆ ಬಿಜ್ಜುಗೆ ಅವನ ತಂದೆಯವರು ಪ್ರತಿದಿನ ಬೆಳಿಗ್ಗೆ ಶೇವಿಂಗ್ ಮಾಡಿಕೊಳ್ಳುವಾಗ ಸಾಕಷ್ಟು ವಿದ್ಯೆಗಳನ್ನು ಹೇಳಿಕೊಟ್ಟಿದ್ದರು. ಪುಟ್ಟ ಕನ್ನಡಿಯ ಮುಂದೆ ಎರಡು ಬೌಲ್‌ಗಳಲ್ಲಿ ಬಿಸಿ ನೀರು ಇರಿಸಿಕೊಂಡು ಬಹಳ ದೀರ್ಘವಾಗಿ ಶೇವಿಂಗ್ ಕಾರ್ಯಕ್ರಮ ನಡೆಯುತ್ತಿತ್ತು. ಬಾಹ್ಯಾಕಾಶದ ಅಟ್ಲಾಸ್, ರೇಖಾಗಣಿತ, ಬೀಜಗಣಿತ, ಸಾಮಾನ್ಯ ಗಣಿತ, ಟ್ರಿಗ್ನಾಮೆಟ್ರಿ, ಡೈನಾಮಿಕ್ಸ್, 19ನೇ ಶತಮಾನದ ಇಂಗ್ಲಿಷ್ ಕವಿಗಳು, ಕಾದಂಬರಿಗಳು, ಪಾಣಿನಿಯ ಸೂತ್ರಗಳು, ಹಿತೋಪದೇಶ, ಕಾಳಿದಾಸನ ರಘುವಂಶ, ಲ್ಯಾಟಿನ್, ಫ್ರೆಂಚ್, ಪರ್ಷಿಯನ್, ದಿವಾನ್ ಇ ಹಫೀಜ್ ಇವೆಲ್ಲವನ್ನೂ ಬಿಜ್ಜುಗೆ ಕಲಿಸಿದ್ದು ತಂದೆಯವರೇ. ಆ ಕಾಲದ ಶಿಕ್ಷಣವೆಂದರೆ ಹೀಗೇ ಇರುತ್ತಿತ್ತು. ಲೇಖಕರ ಪ್ರಕಾರ, ಹಿಂದೂಗಳು ಉರ್ದು ಕಲಿಯುವುದನ್ನು ನಿಲ್ಲಿಸಿದ್ದು ಮುಸ್ಲಿಂ ಲೀಗ್ ಬಂದ ನಂತರ. ಅದೊಂದು ಮೂರ್ಖತನದ ನಡೆ. ಭಾರತೀಯ ಮುಸ್ಲಿಮರ ಭಾಷೆಯಾಗಿ ಉರ್ದು ಬಳಕೆಯಾಗಲಿದೆ ಎಂದು ಭಾವಿಸಿ ಹಿಂದೂಗಳು ಉರ್ದುವನ್ನು ತ್ಯಜಿಸಿದ್ದರು. ಅವರು ಬಂಗಾಳಿ ಅಥವಾ ತಮಿಳು ಅಥವಾ ಮಲಯಾಳಿ ಮುಸ್ಲಿಮರ ಬಗ್ಗೆ ಯೋಚಿಸಲೇ ಇಲ್ಲ. ಭಾಷೆ ಕೂಡ ಸಂಸ್ಕೃತಿಯಂತೆ ಯಾವುದೇ ಧರ್ಮಕ್ಕಿಂತ ಹಳೆಯದು.

ಬಿಕೆ ನೆಹರೂ ಅವರ ತಾಯಿ ಸಮಾಜ ಸುಧಾರಕಿಯಾಗಿದ್ದರು. ಅಲಹಾಬಾದ್‌ಗೆ ಅವರು ಹೊಸ ಪ್ರತಿಭೆ ಹಾಗೂ ಸ್ಫೂರ್ತಿಯನ್ನು ಪರಿಚಯಿಸಿದ್ದರು. ಆಕೆ ಕೆಲ ಕಾಲ ಮಹಿಳೆಯರ ಹಿಂದಿ ನಿಯತಕಾಲಿಕೆ 'ಸ್ತ್ರೀ ದರ್ಪಣ'ದ ಸಂಪಾದಕಿಯಾಗಿದ್ದರು. ಮದನ ಮೋಹನರ ಹಿರಿಯ ಮಗ ರಮಾಕಾಂತ ಮಾಳವೀಯರು ಆಕೆಗೆ ಸಹಾಯ ಮಾಡುತ್ತಿದ್ದರು. ಮಾಳವೀಯರು ಅವರ ಕುಟುಂಬದ ಆಪ್ತ ಸ್ನೇಹಿತರಾಗಿದ್ದರು. ಆದರೆ ಜಾತಿಯ ಕಾರಣಕ್ಕೆ ಅವರು ಕಾಶ್ಮೀರಿ ಪಂಡಿತರ ಮನೆಯಲ್ಲಿ ಊಟ ಮಾಡುತ್ತಿರಲಿಲ್ಲ. ಬ್ರಿಟಿಷ್ ರಿವಾಜುಗಳಲ್ಲಿದ್ದ ಒಳ್ಳೆಯ ಆಚರಣೆಗಳೆಲ್ಲ ಅವರ ವ್ಯವಹಾರಗಳಲ್ಲಿ ಸೇರ್ಪಡೆಯಾಗಿದ್ದವು. ಉದಾಹರಣೆಗೆ, ಅಲಹಾಬಾದ್ ಯೂನಿವರ್ಸಿಟಿ ಯೂನಿಯನ್‌ನಲ್ಲಿ ಚುನಾಯಿತ ಪ್ರತಿನಿಧಿಯಿದ್ದರೆ ಬಿಜ್ಜು ಪ್ರಚಾರಕ್ಕೆ ಹೋಗುತ್ತಿರಲಿಲ್ಲ. ಏಕೆಂದರೆ ಆಕ್ಸ್‌ಬ್ರಿಜ್‌ನಲ್ಲಿ ಅಂತಹ ಸಂಪ್ರದಾಯವಿತ್ತು. ಅರ್ಧ ಶತಮಾನದ ಬಳಿಕ ಆಕ್ಸ್‌ಫರ್ಡ್ ಯೂನಿಯನ್‌ಗೆ ಆಯ್ಕೆಯಾದ ಖುಷಿಗೆ ಬೆನಜೀರ್ ಭುಟ್ಟೋ ಅವರು ಸ್ನೇಹಿತರಿಗೆ ಪಾರ್ಟಿ ನೀಡಿದ ಕಾರಣಕ್ಕೆ ಹೆಚ್ಚುಕಮ್ಮಿ ಸದಸ್ಯತ್ವ ಕಳೆದುಕೊಳ್ಳುವ ಅಪಾಯಕ್ಕೆ ಸಿಲುಕಿದ್ದರು ಎಂದು ಅವರು ಬರೆಯುತ್ತಾರೆ.



1930ರಲ್ಲಿ ಬ್ರಜ್ ಕುಮಾರ್ ಜೊತೆಗೆ ಓದುತ್ತಿದ್ದ ಹಂಗೇರಿಯ ಯಹೂದಿ ಯುವತಿಯ ಜೊತೆಗೆ ಪ್ರೀತಿಯಲ್ಲಿ ಬಿದ್ದಾಗ ಇನ್ನಷ್ಟು ಕುತೂಹಲಕರ ಘಟನೆಗಳು ನಡೆದವು. ಅವಳ ಹೆಸರು ಫೋರಿ. ಬಿಕೆಯ ತಾಯಿಗಿಂತ ಹೆಚ್ಚಾಗಿ ತಂದೆಯೇ ಆ ಪ್ರೀತಿಯನ್ನು ಹೆಚ್ಚು ವಿರೋಧಿಸಿದ್ದರು. ಅವರನ್ನು ಒಪ್ಪಿಸಲು ಹಲವು ವರ್ಷಗಳ ಕಾಲ 'ರಾಜತಾಂತ್ರಿಕ ಮಾತುಕತೆ'ಯನ್ನೇ ನಡೆಸಬೇಕಾಯಿತು. ಆದರೆ ನಂತರ ಬಂದಿದ್ದು ಹಿಂದೆಂದೂ ಯೋಚನೆ ಮಾಡಿರದಿದ್ದ ಸಮಸ್ಯೆ. ಮದುವೆಯನ್ನು ಯಾವ ಸಂಪ್ರದಾಯದಲ್ಲಿ ಮಾಡಬೇಕು? ವರನಾಗಲೀ, ವಧುವಾಗಲೀ ಧರ್ಮವನ್ನು ಬದಲಿಸುವ ಪ್ರಶ್ನೆಯೇ ಇರಲಿಲ್ಲ. ದೇವರೇ ಸಮಸ್ಯೆಯಾದಾಗ ಗಾಂಧೀಜಿ ನೆರವಿಗೆ ಬಂದರು. ಹಿಂದೂ ಧರ್ಮದಲ್ಲಿ ಯಾವ ಆಚರಣೆಗೂ ಮತಾಂತರ ಅಗತ್ಯವಿಲ್ಲ. ಹಾಗಾಗಿ ಹಿಂದೂ ಧರ್ಮ ಪ್ರಕಾರವೇ ಮದುವೆ ಮಾಡಬಹುದು ಎಂದರು. ನಂತರ 1942ರಲ್ಲಿ ನಡೆದ ಇದಕ್ಕಿಂತ ಹೆಚ್ಚು ಪ್ರಸಿದ್ಧ ಮದುವೆಯಲ್ಲೂ ಇದೇ ಸೂತ್ರವನ್ನು ಅನುಸರಿಸಲಾಯಿತು. ಅದು ಜವಾಹರಲಾಲ್ ಮಗಳು ಇಂದಿರಾ ಮತ್ತು ಫೇರ್ ದೂನ್ ಜಹಾಂಗೀರ್ ಫ್ಯಾಂಡಿಯ ಮಗ ಫಿರೋಜ್ ಫ್ಯಾಂಡಿ ಮದುವೆ. ಗಾಂಧೀಜಿ ಮತ್ತೊಮ್ಮೆ ಅನಿರೀಕ್ಷಿತ ರಕ್ಷಕನಾಗಿದ್ದರು.

ಇತಿಹಾಸದ ಅತ್ಯಂತ ಕ್ರೂರ ಸನ್ನಿವೇಶಗಳನ್ನು ಒಳಗೊಂಡ ವಿಭಜನೆಯ ನೋವನ್ನು ಕೂಡ ಬಿಕೆ ನೆಹರೂ ಈ ಪುಸ್ತಕದಲ್ಲಿ ಬಣ್ಣಿಸಿದ್ದಾರೆ. ಭಾರತ ಮತ್ತು ಪಾಕಿಸ್ತಾನದ ನಡುವೆ ಭೂಮಿ ಹಾಗೂ ಸಂಸ್ಕೃತಿಯನ್ನು ಬುದ್ಧಿವಂತಿಕೆ, ಜಾತ್ಯತೀತ ಸ್ಫೂರ್ತಿ ಮತ್ತು ತೀಕ್ಷ್ಣವಾದ ಕಣ್ಣುಗಳನ್ನು ಬಳಸಿ ವಿಭಜನೆ ಮಾಡಲಾಗಿತ್ತು. ಅವರ ತಲೆಮಾರಿನ ಯುವಕರ ಕನಸುಗಳನ್ನೆಲ್ಲ ಅದು ನುಚ್ಚುನೂರು ಮಾಡಿತ್ತು.

ದೇಶದ ವಿಭಜನೆಯ ಮೂಲಕ ಅಶಾಂತಿಯನ್ನು ಸೃಷ್ಟಿಸಿದ ವ್ಯಕ್ತಿ ಮೊಹಮ್ಮದ್ ಅಲಿ ಜಿನ್ನಾ. ಆತ ಒಬ್ಬ ರಾಜಕೀಯ ಮುಸ್ಲಿಂ ಆಗಿದ್ದರೇ ಹೊರತು ಇಸ್ಲಾಂ ಧರ್ಮವನ್ನು ಯಾವತ್ತೂ ನಂಬಿರಲಿಲ್ಲ. ಇಸ್ಲಾಂ ಬಗ್ಗೆ ಅವರಿಗೆ ಏನೂ ಗೊತ್ತಿರಲಿಲ್ಲ. ಒಂದು ಪುಟ್ಟ ಕತೆಯಲ್ಲಿ ಅವರ ಬಗ್ಗೆ ಬಹಳ ತಿಳಿದುಕೊಳ್ಳಬಹುದು. ಒಮ್ಮೆ ಜಿನ್ನಾ ಅವರು ಸರ್ ತೇಜ್ ಬಹದ್ದೂರ್ ಸಪ್ರು ಜೊತೆ ಹಡಗಿನಲ್ಲಿ ಇಂಗ್ಲೆಂಡಿಗೆ ಪ್ರಯಾಣಿಸುತ್ತಿದ್ದರಂತೆ. ಎಂದಿನಂತೆ ಈಜಿಪ್ಟ್‌ನಲ್ಲಿ ಹಡಗು ನಿಂತಿತ್ತು. ಇಬ್ಬರೂ ಪಿರಾಮಿಡ್ ನೋಡಲು ಹೋದರು. ಅಲ್ಲಿದ್ದವರು 'ನೀವು ಮುಸ್ಲಿಮರಾ' ಎಂದು ಕೇಳಿದರು. ಇಬ್ಬರೂ ಹೌದು ಅಂದರು. ತೇಜ್ ಬಹದ್ದೂರ್ ಅವರು ತಮಾಷೆಗೆ 'ಜಿನ್ನಾ ಸುಳ್ಳು ಹೇಳುತ್ತಿದ್ದಾರೆ' ಅಂದರು. ನಂತರ ತಾನು ಮುಸ್ಲಿಂ ಎಂಬುದನ್ನು ಸಾಬೀತುಪಡಿಸಲು 'ಇರುವುದೊಬ್ಬನೇ ಅಲ್ಲಾ, ಅವನ ಪ್ರವಾದಿ ಮೊಹಮ್ಮದ್' ಎಂದು ಸಾರುವ ಕಲ್ಮಿಯಾವನ್ನು ಪಠಿಸಿದರು. ಆದರೆ ಜಿನ್ನಾಗೆ ಕಲ್ಮಿಯಾ ಗೊತ್ತಿರಲಿಲ್ಲ. 'ಇದು ಇತಿಹಾಸದ ಕಹಿ ಚೋದ್ಯಗಳಲ್ಲಿ ಒಂದು. ಅಷ್ಟೊಂದು ಆಧುನಿಕ ವ್ಯಕ್ತಿಯಾಗಿದ್ದ, ತನ್ನದೇ ಧರ್ಮದ ನಿಯಮಗಳನ್ನು ಉಲ್ಲಂಘಿಸಿ ಜೀವಿತದ ಕೊನೆಯ ದಿನದವರೆಗೂ ವಿಸ್ಕಿ ಕುಡಿಯುತ್ತಾ, ಬೆಳಗಿನ ಉಪಾಹಾರಕ್ಕೆ ಮೊಟ್ಟೆ ಮತ್ತು ಒಣಗಿಸಿ ಉಪ್ಪು ಸವರಿದ ಹಂದಿಯ ಮಾಂಸ ಸೇವಿಸುತ್ತಾ, ಪಾಕಿಸ್ತಾನದ ಗವರ್ನರ್ ಜನರಲ್ ಆಗಿ ಅಧಿಕಾರ ನಡೆಸಿದ ವ್ಯಕ್ತಿಯು ಇಸ್ಲಾಮಿಕ್ ಮೂಲಭೂತವಾದಿ ಸಿದ್ಧಾಂತಗಳ ಮೇಲೆಯೇ ಜನಿಸಿದ ರಾಜಕೀಯ ಪಕ್ಷದ ನಾಯಕನಾಗಿ ಅಧಿಕಾರ ಚಲಾಯಿಸುವುದು ತಮಾಷೆಯಲ್ಲವೇ' ಎಂದು ಬಿಕೆ ನೆಹರೂ ಬರೆಯುತ್ತಾರೆ. 1948ರಲ್ಲಿ ಜಿನ್ನಾ ಶ್ವಾಸಕೋಶದ ಕಾಯಿಲೆಯಿಂದ ಸಾಯದೆ ಇದ್ದಿದ್ದರೆ ಪಾಕಿಸ್ತಾನದ ಮೂಲಭೂತವಾದಿ ಉಗ್ರರು ಹಂದಿ ಮಾಂಸದ ಕಾರಣಕ್ಕಾದರೂ ಖಂಡಿತ ಅವರನ್ನು ಕೊಲ್ಲುತ್ತಿದ್ದರು.

ಬಿಕೆ ನೆಹರೂ ಅವರು ಆಂಗ್ಲೀಕರಣ ಹೊಂದಿದ 'ವಿರುದ್ಧ ಸಿದ್ಧಾಂತಗಳ ಪ್ರವರ್ತಕ'ರಾದ ಜವಾಹರಲಾಲ್ ಮತ್ತು ಜಿನ್ನಾರನ್ನು ಪರಸ್ಪರ ಹೋಲಿಸಿ ನೋಡುತ್ತಾರೆ: ಜವಾಹರಲಾಲ್ ಅವರಂತೆಯೇ ಜಿನ್ನಾ ಕೂಡ ಸಾಂಸ್ಕೃತಿಕವಾಗಿ ಒಬ್ಬ ಇಂಗ್ಲಿಷ್ ಮನುಷ್ಯ. ಬಹುಶಃ ನೆಹರೂ ಅವರಂತೆ ಆತ ಕೂಡ ನಾಸ್ತಿಕ. ಪಾಕಿಸ್ತಾನದ ಗವರ್ನರ್ ಜನರಲ್ ಆದ ಮೇಲೂ ಬೆಳಗಿನ ತಿಂಡಿಗೆ ಅವರು ಮೊಟ್ಟೆ ಮತ್ತು ಹಂದಿ ಮಾಂಸ ಸೇವಿಸುತ್ತಿದ್ದರು. ಸಂಜೆ ಸ್ಕಾಚ್ ಹೀರುತ್ತಿದ್ದರು. ಅಂತಹ ಮನುಷ್ಯನಿಗೆ ತನ್ನ ದೇಶದ ಭವಿಷ್ಯ ಏನಾಗುತ್ತದೆ ಎಂಬ ಯಾವುದೇ ಕಲ್ಪನೆ ಇದ್ದಿರಲಿಕ್ಕಿಲ್ಲ. ಬಹುಶಃ ನೆಹರೂ ಅವರಿಗೂ ಅಂತಹ ಕಲ್ಪನೆ ಇದ್ದಿರಲಿಕ್ಕಿಲ್ಲ. ಏಕೆಂದರೆ ಇಬ್ಬರಿಗೂ ತಮ್ಮ ತಮ್ಮ ಅನುಯಾಯಿಗಳ ಸ್ವಭಾವ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿರಲಿಲ್ಲ.

ಭಾರತವು ನಾಗರಿಕ ರಾಷ್ಟ್ರದ ಕಲ್ಪನೆಯನ್ನು ಆಯ್ಕೆ ಮಾಡಿಕೊಂಡಿತು. ಪಾಕಿಸ್ತಾನ ಇಸ್ಲಾಂ ಧರ್ಮವೊಂದೇ ಪರಿಶುದ್ಧ ಎಂದು ನಂಬುವ ಮೂಲಭೂತವಾದಿ ಸಿದ್ಧಾಂತವನ್ನು ಆಯ್ಕೆ ಮಾಡಿಕೊಂಡಿತು. ಆದ್ದರಿಂದಲೇ 1947ರಲ್ಲಿ ಪಾಕಿಸ್ತಾನದಲ್ಲಿದ್ದ ಹಿಂದೂಗಳನ್ನು ಜನಾಂಗೀಯ ಶುದ್ಧೀಕರಣ ಪ್ರಕ್ರಿಯೆಗೆ ಒಳಪಡಿಸುವುದನ್ನು ಅಲ್ಲಿನವರು ತಮ್ಮ ರಾಷ್ಟ್ರೀಯ ಕರ್ತವ್ಯ ಎಂಬಂತೆ ಭಾವಿಸಿದರು.

ಆ ವಿಷಯದಲ್ಲೂ ಭಾಯಿಜಾನ್‌ಜೀ ಅದೃಷ್ಟವಂತರು. ಏಕೆಂದರೆ ಅವರು ದೇಶದ ವಿಭಜನೆ ನೋಡಲು ಬದುಕಿರಲಿಲ್ಲ. ಪಂಜಾಬಿಗಳು ಪರಸ್ಪರರನ್ನು ಕೊಚ್ಚಿ ಕೊಂದುಕೊಳ್ಳಬಲ್ಲರು ಎಂದು ಅವರು ಕಲ್ಪನೆ ಕೂಡ ಮಾಡಿರಲಿಲ್ಲ. ಆದರೆ ಜಿನ್ನಾ ಇಕ್ಕಿದ ವಿಷ ಪಂಜಾಬಿಗಳ ಆತ್ಮಕ್ಕೇ ನಂಜು ತುಂಬಿತ್ತು. ಭಾಯಿಜಾನ್‌ಜೀ 1945ರಲ್ಲಿ ತೀರಿಹೋದರು. ಇಲ್ಲದಿದ್ದರೆ 1947ರಲ್ಲಿ ಎದೆ ಒಡೆದುಕೊಂಡು ಜೀವ ಬಿಡುತ್ತಿದ್ದರು. ಬಿಕೆ ನೆಹರೂ ಆ ದುರಂತವನ್ನು ಒಬ್ಬ ಮಾನವತಾವಾದಿಯ ತಾತ್ವಿಕ ಶಾಂತ ಸ್ವಭಾವದಲ್ಲಿ ವಿವರಿಸುತ್ತಾರೆ. ಅವರು ಮಾತಿನಲ್ಲಾಗಲೀ ಬರವಣಿಗೆಯಲ್ಲಾಗಲೀ ಧ್ವನಿ ಎತ್ತರಿಸಿದ್ದೇ ಇಲ್ಲ.

1950ರಲ್ಲಿ ಅವರನ್ನು ವಾಷಿಂಗ್ಟನ್‌ಗೆ ವರ್ಗಾವಣೆ ಮಾಡಲಾಗಿತ್ತು. ಆ ವರ್ಷವೇ ಪಾಕಿಸ್ತಾನದ ಪ್ರಧಾನಿ ಲಿಯಾಕತ್ ಅಲಿ ಖಾನ್ ತಮ್ಮ ಮೊದಲ ಅಮೆರಿಕಾ ಭೇಟಿಗಾಗಿ ಆಗಮಿಸಿದ್ದರು. ಅವರ ಜೊತೆಗೆ ಪಾಕಿಸ್ತಾನದ ವಿದೇಶಾಂಗ ಕಾರ್ಯದರ್ಶಿ ಇಕ್ರಾಮುಲ್ಲಾ ಮತ್ತು ಗುಲಾಮ್ ಅಹ್ಮದ್ ಕೂಡ ಬಂದಿದ್ದರು. ಅವರಿಬ್ಬರೂ ಬಿಕೆ ನೆಹರೂಗೆ ಹಳೆಯ ಸ್ನೇಹಿತರು. ಗುಲಾಮ್ ಅಹ್ಮದ್ ಅವರು ಕುಖ್ಯಾತ ಹಿಂದೂ ದ್ವೇಷಿ ಅಜೀಜ್ ಅಹ್ಮದ್‌ನ ಸಹೋದರ. ಇಬ್ಬರನ್ನೂ ಬಿಕೆ ನೆಹರೂ 'ಗುಂಡು ಹಾಕಲು' ಆಹ್ವಾನಿಸಿದರು. ಬೆಳಗಿನ ಜಾವ ಮೂರು ಗಂಟೆಯ ವೇಳೆಗೆ ಮದ್ಯ ಗುಲಾಮ್ ಅಹ್ಮದ್‌ರ ನಾಲಿಗೆಯನ್ನು ಸಡಿಲಗೊಳಿಸಿತ್ತು. ಅವರು ಬಿಕೆ ನೆಹರೂಗೆ ಭಯಾನಕ ಸಲಹೆಯೊಂದನ್ನು ನೀಡಿದ್ದರು. 'ಭಾರತದಲ್ಲಿರುವ ನಾಲ್ಕು ಕೋಟಿ ಮುಸ್ಲಿಮರನ್ನು ನೀವು ನಿಭಾಯಿಸಬೇಕು ಅಂದರೆ ಒಂದಷ್ಟು ಮುಸ್ಲಿಮರನ್ನು ಕೊಲ್ಲಿ, ಇನ್ನೊಂದಷ್ಟು ಜನರನ್ನು ಅಲ್ಲಿಂದ ಓಡಿಸಿ, ಉಳಿದವರನ್ನು ಮತಾಂತರ ಮಾಡಿ. ಪಾಕಿಸ್ತಾನದಲ್ಲಿ ಉಳಿದುಕೊಂಡ ಹಿಂದೂಗಳಿಗೆ ನಾವು ಮಾಡಿದ್ದು ಇದನ್ನೇ!'

ಭಾರತೀಯರಿಗೆ ಭಾರತೀಯರನ್ನು ಕೊಲ್ಲುವುದು ಯಾವತ್ತೂ ಬೇಕಿರಲಿಲ್ಲ. ಆದರೆ ಪಾಕಿಸ್ತಾನೀಯರಿಗೆ 1947ರ ಜನಾಂಗೀಯ ಹತ್ಯೆ ಕೂಡ ಸಾಕಾಗಲಿಲ್ಲ. 1971ರಲ್ಲಿ ಮತ್ತೊಮ್ಮೆ ಅದನ್ನೇ ಮಾಡಿ ದೇಶದಲ್ಲಿದ್ದ ಲಕ್ಷಾಂತರ ಹಿಂದೂ ಮತ್ತು ಮುಸ್ಲಿಮರನ್ನು ಕೊಂದರು. ಆ ನರಮೇಧವು ಬಾಂಗ್ಲಾದೇಶದ ಜನನಕ್ಕೆ ಕಾರಣವಾಯಿತು. ಪಾಕಿಸ್ತಾನವೆಂಬ ದೇಶ ಮರಣ ಹೊಂದಿದ್ದು ಕೂಡ 1971ರಲ್ಲೇ.

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 329

ಸಮಾಚಾರ ಸಣ್ಣದಲ್ಲ

ಕೋಯಿಕ್ಕೋಡ್‌ನಲ್ಲಿ ವ್ಯಕ್ತಿಗೆ ನಿಫಾ ಸೋಂಕು ದೃಢ: ಕೇರಳ ಕಟ್ಟೆಚ್ಚರ

ತಿರುವನಂತಪುರಂ: ಕೇರಳದಲ್ಲಿ ಮತ್ತೊಮ್ಮೆ ನಿಫಾ ವೈರಸ್ ಆತಂಕ ಸೃಷ್ಟಿಸಿದ್ದು, ಕೋಯಿಕ್ಕೋಡ್ ಜಿಲ್ಲೆಯ 43 ವರ್ಷದ ವ್ಯಕ್ತಿಯೊಬ್ಬರಿಗೆ ಸೋಂಕು ತಗುಲಿರುವುದು ಪ್ರಾಥಮಿಕ ಪರೀಕ್ಷೆಯಲ್ಲಿ ದೃಢಪಟ್ಟಿದೆ. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ತುರ್ತು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದ್ದು, ರಾಜ್ಯಾದ್ಯಂತ ಕಟ್ಟೆಚ್ಚರ ಘೋಷಿಸಲಾಗಿದೆ. ಕೇರಳ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ನಡೆಸಿದ ಪ್ರಾಥಮಿಕ ಪರೀಕ್ಷೆಯಲ್ಲಿ ಸೋಂಕು ದೃಢಪಟ್ಟಿದ್ದು, ಅಂತಿಮ ದೃಢೀಕರಣಕ್ಕಾಗಿ ರೋಗಿಯ ಮಾದರಿಯನ್ನು ಪುಣೆಯ ರಾಷ್ಟ್ರೀಯ ವೈರಾಲಜಿ ಸಂಸ್ಥೆಗೆ ಕಳುಹಿಸಲಾಗಿದೆ. ಶೀಘ್ರದಲ್ಲೇ ಅಂತಿಮ ವರದಿ ಲಭ್ಯವಾಗುವ ನಿರೀಕ್ಷೆಯಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಫೆರೋಕ್ ಮೂಲದ ಉದ್ಯಮಿಯಾಗಿರುವ ಈ ವ್ಯಕ್ತಿ ಮೊದಲಿಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆರೋಗ್ಯ ಸ್ಥಿತಿ ಗಂಭೀರವಾಗಿದ್ದ ಹಿನ್ನೆಲೆಯಲ್ಲಿ ಅವರನ್ನು ಬುಧವಾರ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಸ್ಥಳಾಂತರಿಸಲಾಗಿದ್ದು, ಸದ್ಯ ವೆಂಟಿಲೇಟರ್ ಸಹಾಯದೊಂದಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಸೋಂಕು ಹರಡುವಿಕೆಯನ್ನು ತಡೆಯುವ ಉದ್ದೇಶದಿಂದ ರೋಗಿಯ ಸಂಪರ್ಕಕ್ಕೆ ಬಂದವರನ್ನು ಗುರುತಿಸಿ ಪ್ರತ್ಯೇಕಿಸುವ ಕಾರ್ಯವನ್ನು ಆರೋಗ್ಯ ಇಲಾಖೆ ತ್ವರಿತಗತಿಯಲ್ಲಿ ಆರಂಭಿಸಿದೆ. ರೋಗಿಯ ಸಂಪರ್ಕದಲ್ಲಿದ್ದ ಆರೋಗ್ಯ ಸಿಬ್ಬಂದಿ ಹಾಗೂ ಇತರರಿಗೆ ಕ್ವಾರೆಂಟೈನ್ನಲ್ಲಿ ಇರುವಂತೆ ಸೂಚಿಸಲಾಗಿದೆ.

ಗೃಹಿಣಿಗೆ ರಾಷ್ಟ್ರ ನಿರ್ಮಾಪಕಿ ಎನ್ನುವುದೇ ಸರಿ: ಸುಪ್ರೀಂ

ದೆಹಲಿ: ಗೃಹಿಣಿಯರ ಪಾತ್ರದ ಬಗ್ಗೆ ಸುಪ್ರೀಂ ಕೋರ್ಟ್ ಮತ್ತೊಮ್ಮೆ ಪ್ರಬಲ ಸಂದೇಶ ನೀಡಿದೆ. ಮನೆ ಮತ್ತು ಕುಟುಂಬದ ಜವಾಬ್ದಾರಿಗಳನ್ನು ನಿರ್ವಹಿಸುವ ಮಹಿಳೆಯರ ಕೊಡುಗೆಗಳನ್ನು ಹೆಚ್ಚಾಗಿ ಕಡೆಗಣಿಸಲಾಗುತ್ತದೆ. ಆದರೆ ಅವರ ಕೆಲಸವು ಸಮಾಜ ಮತ್ತು ರಾಷ್ಟ್ರವನ್ನು ನಿರ್ಮಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ನ್ಯಾಯಾಲಯ ಹೇಳಿದೆ. ಅವರನ್ನು ಗೃಹಿಣಿ ಎನ್ನುವ ಬದಲು ರಾಷ್ಟ್ರ ನಿರ್ಮಾಪಕರೆನ್ನಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಗೃಹಿಣಿಯೊಬ್ಬಳ ಪಾತ್ರವು ಸುವ್ಯವಸ್ಥೆ ಮತ್ತು ಬಲವನ್ನು ಕಾಪಾಡಿಕೊಳ್ಳುವಲ್ಲಿ ನಿರ್ಣಾಯಕವಾಗಿದೆ. ಅವರು ಅಡುಗೆ ಮಾಡುವುದು ಅಥವಾ ಮನೆ ಸ್ವಚ್ಛಗೊಳಿಸುವುದಕ್ಕೆ ಸೀಮಿತವಾಗಿಲ್ಲ. ಮಕ್ಕಳು, ಅವರ ಶಿಕ್ಷಣ, ವೃದ್ಧರ ಆರೈಕೆ ಮತ್ತು ಇಡೀ ಕುಟುಂಬದ ಅಗತ್ಯಗಳನ್ನು ಸಹ ನೋಡಿಕೊಳ್ಳುತ್ತಾರೆ. ಅವರ ನಿರಂತರ ಕಠಿಣ ಪರಿಶ್ರಮ ಮತ್ತು ಸಮರ್ಪಣೆಯನ್ನು ಗುರುತಿಸುವುದಿಲ್ಲ. ಅವರು ಕುಟುಂಬದ ಯಶಸ್ಸಿನ ಮೂಲ ಎಂದು ಕೋರ್ಟ್ ಹೇಳಿದೆ. ಗೃಹಿಣಿ ಭವಿಷ್ಯದ ಪೀಳಿಗೆಯನ್ನು ಸಿದ್ಧಪಡಿಸುತ್ತಾಳೆ. ಮಕ್ಕಳಲ್ಲಿ ಮೌಲ್ಯಗಳನ್ನು ಬೆಳೆಸುತ್ತಾಳೆ. ಸಮಾಜಕ್ಕೆ ಜವಾಬ್ದಾರಿಯುತ ನಾಗರಿಕರನ್ನು ಸೃಷ್ಟಿಸುವಲ್ಲಿ ಪಾತ್ರ ವಹಿಸುತ್ತಾಳೆ. ಅವರನ್ನು ಗೃಹಿಣಿ ಎನ್ನುವ ಬದಲು ರಾಷ್ಟ್ರ ನಿರ್ಮಾಪಕ ಎಂಬ ಪದ ಬಳಕೆ ಹೆಚ್ಚು ಸೂಕ್ತ ಎಂದಿದೆ.

190ಕ್ಕೆ ಏರಿದ ಭಾರತದ ಪರಮಾಣು ಸಿಡಿತಲೆ: ಇಸ್ರೇಲ್‌ಗಿಂತ ಜಾಸ್ತಿ

ದೆಹಲಿ: ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ಪೀಸ್ ರೀಸರ್ಚ್ ಇನ್‌ಸ್ಟಿಟ್ಯೂಟ್‌ನ ಮಾಹಿತಿಯ ಪ್ರಕಾರ, ಭಾರತವು ತನ್ನ ಪರಮಾಣು ಶಸ್ತ್ರಸಂಗ್ರಹವನ್ನು ಸುಮಾರು 190 ಸಿಡಿತಲೆಗಳಿಗೆ ವಿಸ್ತರಿಸಿದೆ. ಇದು ಪಾಕಿಸ್ತಾನ, ಉತ್ತರ ಕೊರಿಯಾ ಮತ್ತು ಇಸ್ರೇಲ್ ದೇಶಗಳ ಬಳಿ ಇರುವ ಪರಮಾಣು ಸಿಡಿತಲೆಗಳ ಸಂಖ್ಯೆಗಿಂತ ಹೆಚ್ಚಾಗಿದೆ. ಎಸ್‌ಐಪಿಆರ್‌ಐ ಪ್ರಕಾರ, ಬ್ಯಾಲಿಸ್ಟಿಕ್ ಕ್ಷಿಪಣಿಗಳಂತಹ ವಿತರಣಾ ವ್ಯವಸ್ಥೆಗಳಿಂದ ಪ್ರತ್ಯೇಕವಾಗಿ ಸಿಡಿತಲೆಗಳನ್ನು ಸಂಗ್ರಹಿಸುವ ದೀರ್ಘಕಾಲದ ಅಭ್ಯಾಸವನ್ನು ಮುರಿದು, ಭಾರತ ಮೊದಲ ಬಾರಿಗೆ 12 ಪರಮಾಣು ಸಿಡಿತಲೆಗಳ ನಿಯೋಜನೆ ಮಾಡಿದೆ. ಪ್ರಸ್ತುತ ಭಾರತವು 12 ನಿಯೋಜಿತ ಪರಮಾಣು ಸಿಡಿತಲೆಗಳು ಮತ್ತು 178 ಸಂಗ್ರಹಿಸಿದ ಸಿಡಿತಲೆಗಳನ್ನು ಹೊಂದಿದ್ದು, ಈ ವರ್ಷದ ಜನವರಿಯ ವೇಳೆಗೆ ಒಟ್ಟು ದಾಸ್ತಾನು 190ಕ್ಕೆ ತಲುಪಿದೆ. ಭಾರತದ ಶತ್ರು ರಾಷ್ಟ್ರ ಪಾಕಿಸ್ತಾನ 170 ಪರಮಾಣು ಸಿಡಿತಲೆಗಳನ್ನು ಹೊಂದಿದ್ದರೆ, ಮತ್ತೊಂದು ನೆರೆ ರಾಷ್ಟ್ರ ಚೀನಾ ಬಳಿ ಬರೋಬ್ಬರಿ 620 ಪರಮಾಣು ಸಿಡಿತಲೆಗಳಿವೆ. ಆದಾಗ್ಯೂ, ಭಾರತ ಇತ್ತೀಚಿನ ವರ್ಷಗಳಲ್ಲಿ ತನ್ನ ಪರಮಾಣು ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುತ್ತಿರುವುದು ಜಗತ್ತಿನ ಗಮನ ಸೆಳೆದಿದೆ.

ಬಿಷ್ಣೋಯ್ ಗ್ಯಾಂಗಿಂದ ಜಿಮ್ ಮಾಲೀಕನ ಹತ್ಯೆ

ಚಂಡೀಗಢ: ಹರಿಯಾಣದಲ್ಲಿ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನ ಸದಸ್ಯರು ಜಿಮ್ ಮಾಲೀಕನೊಬ್ಬನನ್ನು ಗುಂಡು ಹಾರಿಸಿ ಹತ್ಯೆ ಮಾಡಿದ್ದಾರೆ. ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು ಕೇವಲ 5 ಸೆಕೆಂಡುಗಳಲ್ಲಿ ಸುಮಾರು 10 ಗುಂಡು ಹಾರಿಸಿ ಈ ಕೃತ್ಯ ಎಸಗಿದ್ದಾರೆ. ಕಪಿಲ್ ರೇಧು ದುಷ್ಕರ್ಮಿಗಳ ಗುಂಡಿಗೆ ಬಲಿಯಾದ ವ್ಯಕ್ತಿ. ಈ ಕೊಲೆಯನ್ನು ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್ ತಾವೇ ಮಾಡಿರುವುದಾಗಿ ಒಪ್ಪಿಕೊಂಡಿದೆ. ಈ ಗ್ಯಾಂಗಿನ ಹರಿ ಬಾಕ್ಸರ್ ಎಂಬಾತ ಈ ಬಗ್ಗೆ ಆಡಿಯೋವೊಂದನ್ನು ಬಿಡುಗಡೆ ಮಾಡುವ ಮೂಲಕ ವಿಷಯವನ್ನು ಬಹಿರಂಗಪಡಿಸಿದ್ದಾನೆ. ಗುರುವಾರ ಮುಂಜಾನೆ 5:30ರ ಸುಮಾರಿಗೆ ಹನ್ಸಿಯ ಫವ್ವಾರಾ ಚೌಕ್ ಬಳಿ ಘಟನೆ ನಡೆದಿದೆ. ಕಪಿಲ್ ತಮ್ಮ ಜಿಮ್ ಬಳಿ ಯುವಕ, ಯುವತಿಯರಿಗೆ ತರಬೇತಿ ನೀಡುತ್ತಿದ್ದಾಗ ಹೆಲ್ಮೆಟ್ ಧರಿಸಿ ಬೈಕಿನಲ್ಲಿ ಬಂದ ಕಿಡಿಗೇಡಿಗಳು ಏಕಾಏಕಿ ಗುಂಡಿನ ದಾಳಿ ನಡೆಸಿದ್ದಾರೆ. ಬಹಳ ಹತ್ತಿರದಿಂದ ಕಪಿಲ್ ತಲೆಗೆ ಗುಂಡು ಹಾರಿಸಿದ ಪರಿಣಾಮ ತೀವ್ರವಾಗಿ ಗಾಯಗೊಂಡಿದ್ದ ಜಿಮ್ ಮಾಲೀಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮತ್ತೊಬ್ಬ ರಾಜ್ಯಸಭಾ ಸದಸ್ಯ ಪ್ರಕಾಶ್ ಚಿಕ್ ಬರೈಕ್ ರಾಜೀನಾಮೆ
ಸುಖೇಂದು ಶೇಖರ್, ಸುಷ್ಮಿತಾ ನಂತರ ಇನ್ನೊಂದು ವಿಕೆಟ್ ಪತನ

ಟಿಎಂಸಿಗೆ ಮತ್ತೊಂದು ಹೊಡೆತ

ಕೋಲ್ಕತಾ: ತೀರಾ ದುಸ್ಥಿತಿಯಲ್ಲಿರುವ ಟಿಎಂಸಿಗೆ ಗುರುವಾರ ಮತ್ತೊಂದು ಹೊಡೆತ ಬಿದ್ದಿದೆ. ಆ ಪಕ್ಷದಲ್ಲಿ ರಾಜೀನಾಮೆ ಪರ್ವ ಮುಂದುವರೆದಿದ್ದು, ಸುಖೇಂದು ಶೇಖರ್ ರಾಯ್ ಮತ್ತು ಸುಷ್ಮಿತಾ ದೇವ್ ಅವರ ನಂತರ ಗುರುವಾರ ಪ್ರಕಾಶ್ ಚಿಕ್ ಬರೈಕ್ ಅವರು ತಮ್ಮ ರಾಜ್ಯಸಭಾ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಟಿಎಂಸಿ ಕಾಂಗ್ರೆಸ್‌ನಲ್ಲಿ ವಿಲೀನವಾಗುತ್ತದೆ ಎಂಬ ವದಂತಿಗಳ ನಡುವೆಯೇ ಆ ಪಕ್ಷದ ಪರಿಸ್ಥಿತಿ ತೀರಾ ಬಿಗಡಾಯಿಸುತ್ತಿದೆ.

ಪ್ರಕಾಶ್ ಚಿಕ್ ಬರೈಕ್ ಅವರು ಗುರುವಾರ ಬೆಳಗ್ಗೆ 11 ಗಂಟೆಗೆ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರಿಗೆ ತಮ್ಮ ರಾಜೀನಾಮೆ ಪತ್ರವನ್ನು ಸಲ್ಲಿಸಿದರು. ಬರೈಕ್ ಅವರ ರಾಜೀನಾಮೆ ಬಳಿಕ ಟಿಎಂಸಿ ಸಂಸದರ ಬಲ 10ಕ್ಕೆ ಕುಸಿದಿದೆ. ನಾನು ರಾಜ್ಯಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತಿದ್ದೇನೆ, ಇದನ್ನು ದಯವಿಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಸ್ವೀಕರಿಸಬೇಕು. ರಾಜ್ಯಸಭಾ ಸದಸ್ಯನಾಗಿ ನನ್ನ ಅಧಿಕಾರಾವಧಿಯಲ್ಲಿ ಎಲ್ಲಾ ರೀತಿಯ ಸಹಾಯ ಮತ್ತು ಸಹಕಾರ ನೀಡಿದ ಗೌರವಾನ್ವಿತ ಉಪರಾಷ್ಟ್ರಪತಿಗಳು, ರಾಜ್ಯಸಭಾ ಸಚಿವಾಲಯದ ಎಲ್ಲಾ ಕಾರ್ಯಕಾರಿಣಿಗಳಿಗೆ ಕೃತಜ್ಞತೆ ಅರ್ಪಿಸುತ್ತೇನೆ ಎಂದು ಬರೈಕ್ ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ರಾಜೀನಾಮೆ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ನಾನು, ಬಂಗಾಳದ ಜನರ ಅಭಿಪ್ರಾಯ ಗೌರವಿಸಿ ರಾಜೀನಾಮೆ ಸಲ್ಲಿಸಿದ್ದೇನೆ ಎಂದು ತಿಳಿಸಿದ್ದಾರೆ. ಟಿಎಂಸಿ ನಾಯಕತ್ವದ ವಿರುದ್ಧ ಅದರಲ್ಲೂ ಮುಖ್ಯವಾಗಿ ಅಭಿಷೇಕ್ ಬ್ಯಾನರ್ಜಿ ವಿರುದ್ಧದ ಅಸಮಾಧಾನದಿಂದಾಗಿ ಸಂಸದರು ಮತ್ತು ಶಾಸಕರು ಪಕ್ಷ ತೊರೆಯುತ್ತಿದ್ದಾರೆ. ಇದನ್ನು ತಡೆಯಲು ಮಮತಾ ಬ್ಯಾನರ್ಜಿ ವಿಫಲರಾಗಿದ್ದಾರೆ.

ಇತ್ತೀಚೆಗೆ ನಡೆದಿದ್ದ ಬಂಗಾಳದ ಚುನಾವಣೆಯಲ್ಲಿ ಸೋಲು ಕಂಡ ಬಳಿಕ ಟಿಎಂಸಿ ಪಕ್ಷದಲ್ಲಿನ ಬಂಡಾಯ ಭುಗಿಲೆದ್ದಿದೆ. 58 ಜನ ಟಿಎಂಸಿ ಬಂಡಾಯ ಶಾಸಕರು ಋತುಬ್ರತಾ ಬ್ಯಾನರ್ಜಿಯವರಿಗೆ ಬೆಂಬಲ ನೀಡಿ ವಿಪಕ್ಷ ನಾಯಕನನ್ನಾಗಿ ಆಯ್ಕೆ ಮಾಡಿಕೊಂಡಿದ್ದರು. ಇತ್ತ 20 ಸಂಸದರು ಪಕ್ಷದಿಂದ ಹೊರಬಂದು ಸಂಸತ್ತಿನಲ್ಲಿ ತಮಗೆ ಪ್ರತ್ಯೇಕ ಆಸನದ ವ್ಯವಸ್ಥೆ ಮಾಡಿ ಕೊಡಬೇಕೆಂದು ಲೋಕಸಭಾ ಸ್ಪೀಕರ್‌ಗೆ ಮನವಿ ಮಾಡಿದ್ದಾರೆ. ಈ ಎಲ್ಲಾ ಬೆಳವಣಿಗೆಗಳು ಮಮತಾ ಬ್ಯಾನರ್ಜಿಯವರಿಗೆ ತಲೆ ನೋವಾಗಿ ಪರಿಣಮಿಸಿದೆ. ಪಕ್ಷದ ಮೇಲಿನ ಸಂಪೂರ್ಣ ಹಿಡಿತ ಕಳೆದುಕೊಂಡಿರುವ ಮಮತಾ ಬ್ಯಾನರ್ಜಿ ತಾನೇ ಕಟ್ಟಿ ಬೆಳೆಸಿದ ಪಕ್ಷದಲ್ಲಿ ಮೂಲೆ ಗುಂಪಾಗಿದ್ದಾರೆ.

ದೀದಿ ನಿಮಗೆ ಅಭಿಷೇಕ್ ಬೇಕೋ, ನಾವು ಬೇಕೋ?: ಮಮತಾ ವಿರುದ್ಧ ಸಂಸದ ಕಲ್ಯಾಣ್ ಬ್ಯಾನರ್ಜಿ ಗರಂ

ಕೋಲ್ಕತಾ: ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್

ಪಕ್ಷದಲ್ಲಿನ ಆಂತರಿಕ ಕಲಹ ಮತ್ತಷ್ಟು ತೀವ್ರಗೊಂಡಿದೆ. ಟಿಎಂಸಿಯ ಸಂಸದ ಕಲ್ಯಾಣ್ ಬ್ಯಾನರ್ಜಿಯವರು ತಮ್ಮ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ವಿರುದ್ಧ ಬಹಿರಂಗವಾಗಿಯೇ ಅಸಮಾಧಾನ ಹೊರಹಾಕಿದ್ದು, ದೀದಿ ನಿಮಗೆ ಅಭಿಷೇಕ್ ಬೇಕೋ ಅಥವಾ ನಾವು ಬೇಕೋ ಆಯ್ಕೆಮಾಡಿ ಎಂದಿದ್ದಾರೆ. ಕೋಲ್ಕತಾ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿರುವ ಶಾಸಕರ ನಕಲಿ ಸಹಿ ಸಂಗ್ರಹ ಪ್ರಕರಣದಲ್ಲಿ ಅಭಿಷೇಕ್ ಬ್ಯಾನರ್ಜಿ ಪರ ವಕೀಲರಾಗಿದ್ದ ಕಲ್ಯಾಣ್ ಬ್ಯಾನರ್ಜಿ ಅವರನ್ನು ಕೈಬಿಟ್ಟಿರುವುದು ಅಸಮಾಧಾನಕ್ಕೆ ಕಾರಣವಾಗಿದೆ. ಈ ಬಗ್ಗೆ ಮಾತನಾಡಿರುವ ಅವರು ಅಭಿಷೇಕ್ ಬ್ಯಾನರ್ಜಿಯ ಈ ನಡೆ ತೀರಾ ಅವಮಾನಕರ ಎಂದು ಆಕ್ರೋಶ ಹೊರಹಾಕಿದ್ದಾರೆ. ಗುರುವಾರ ಕೋಲ್ಕತಾ ಹೈಕೋರ್ಟ್ ನಕಲಿ ಸಹಿ ಸಂಗ್ರಹ ಪ್ರಕರಣದಲ್ಲಿ ಅಭಿಷೇಕ್ ಬ್ಯಾನರ್ಜಿ ಬಂಧನದಿಂದ ಮಧ್ಯಂತರ ರಕ್ಷಣೆ ನೀಡಿದೆ. ಇಂದು ಸಂಜೆ 6 ಗಂಟೆಯೊಳಗೆ ಬಂಗಾಳದ ಸಿಐಡಿ ಮುಂದೆ ಹಾಜರಾಗುವಂತೆ ಸೂಚಿಸಿದೆ. ಇದರ ಹೊರತಾಗಿಯೂ ಅಭಿಷೇಕ್ ಅವರು ಕಲ್ಯಾಣ್ ಬ್ಯಾನರ್ಜಿಯವರನ್ನು ಬದಲಾಯಿಸಿದ್ದಾರೆ.

ಕಲ್ಯಾಣ್ ಬ್ಯಾನರ್ಜಿ ಹೇಳಿದ್ದೇನು?: ತುರ್ತು ವಿಚಾರಣೆಯ ಹಿನ್ನೆಲೆ ರಾತ್ರಿಯಿಡೀ ತಯಾರಿ ನಡೆಸಿ ನ್ಯಾಯಾಧೀಶರ ಮುಂದೆ ವಾದ ಮಂಡಿಸಿದ್ದೆ. ಆದರೆ ಇಂದು ಅದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಅರ್ಜಿ ಸಲ್ಲಿಕೆಯಾಗಿದ್ದು, ಬೇರೊಬ್ಬ ವಕೀಲರು ಪ್ರಕರಣವನ್ನು ನಿಭಾಯಿಸುವ ಮಾಹಿತಿ ದೊರಕಿದೆ ಎಂದು ಕಲ್ಯಾಣ್ ಬ್ಯಾನರ್ಜಿ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಬೇರೆಯವರಿಗೆ ಗೌರವ ನೀಡದಿರುವ ಅಭಿಷೇಕ್ ಬ್ಯಾನರ್ಜಿ ಸ್ವಭಾವ ಇನ್ನೂ ಕೂಡ ಬದಲಾಗಿಲ್ಲ. ಅವರು ಪ್ರತಿಯೊಬ್ಬರನ್ನೂ ಕೀಳಾಗಿ ಭಾವಿಸುತ್ತಾರೆ. ಆದರೆ ನಾವು ಈ ವೃತ್ತಿಯಲ್ಲಿ 45 ವರ್ಷಗಳನ್ನು ಪೂರೈಸಿದ್ದೇವೆ. ಅಭಿಷೇಕ್ ಬ್ಯಾನರ್ಜಿ ಅತ್ಯಂತ ಅಹಂಕಾರಿಯಾಗಿದ್ದು, ಯಾರಿಗೂ ಗೌರವ ನೀಡುವುದಿಲ್ಲ. ಇದೇ ಕಾರಣಕ್ಕೆ ಪಕ್ಷದಿಂದ ನಾಯಕರೆಲ್ಲರೂ ದೂರವಾಗುತ್ತಿರುವುದು. ಇಂದು ಬೆಳಗ್ಗೆ ದೀದಿಗೆ ನೇರವಾಗಿ ನಾನು ಅಥವಾ ಅಭಿಷೇಕ್ ಬ್ಯಾನರ್ಜಿ ಇಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳಿ ಎಂದು ತಿಳಿಸಿರುವುದಾಗಿ ಹೇಳಿದ್ದಾರೆ.

ಮಮತಾ ಬಿಟ್ಟು ಹೋಗಲ್ಲ: ಟಿಎಂಸಿ ಸಂಸದ ಶತ್ರುಘ್ನ ಸಿನ್ಹಾ

ಕಷ್ಟಕಾಲದಲ್ಲಿರುವ ಪಶ್ಚಿಮ ಬಂಗಾಳ ಮಾಜಿ ಮುಖ್ಯಮಂತ್ರಿಗೆ, ಟಿಎಂಸಿ ಸಂಸದ ಮತ್ತು ಬಾಲಿವುಡ್

ನಟ, ಮಾಜಿ ಬಿಜೆಪಿ ನಾಯಕ ಶತ್ರುಘ್ನ ಸಿನ್ಹಾ ಬೆಂಬಲ ಘೋಷಿಸಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಅಸ್ತಿತ್ವಕ್ಕಾಗಿ ಹೋರಾಡುತ್ತಿರುವ ಮಮತಾ ಬ್ಯಾನರ್ಜಿ ಅವರನ್ನು ಯಾವುದೇ ಕಾರಣಕ್ಕೂ ಕೈಬಿಡುವುದಿಲ್ಲ ಎಂದು ಶತ್ರುಘ್ನ ಸಿನ್ಹಾ ಸ್ಪಷ್ಟಪಡಿಸಿದ್ದಾರೆ. ಮಾಜಿ ಬಿಜೆಪಿ ನಾಯಕನಾಗಿರುವ ಶತ್ರುಘ್ನ ಮೋದಿ ಪ್ರಧಾನಿಯಾಗಿ 12 ವರ್ಷ ಪೂರೈಸಿದ ಸಂದರ್ಭದಲ್ಲಿ ಟ್ವೀಟ್ ಮಾಡಿ ಹೊಗಳಿದ್ದರಿಂದ ಅವರ ಮೇಲೆ ಅನುಮಾನ ಶುರುವಾಗಿತ್ತು. ಇಷ್ಟು ಮಾತ್ರವಲ್ಲದೇ ಲೋಕಸಭೆಯಲ್ಲಿ ಎನ್‌ಡಿಎ ಮೈತ್ರಿಕೂಟವನ್ನು ಬೆಂಬಲಿಸುವ ಪತ್ರಕ್ಕೆ ಸಹಿ ಹಾಕಿದ 20 ಸಂಸದರ ಪೈಕಿ ಶತ್ರುಘ್ನ ಸಿನ್ಹಾ ಕೂಡ ಒಬ್ಬರು ಎಂದು ಹೇಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸ್ಪಷ್ಟನೆ ನೀಡಿರುವ ಪಶ್ಚಿಮ ಬಂಗಾಳದ ಅಸನ್ಸೋಲ್ ಲೋಕಸಭಾ ಕ್ಷೇತ್ರದ ಟಿಎಂಸಿ ಸಂಸದ ಶತ್ರುಘ್ನ ಸಿನ್ಹಾ, ಯಾವುದೇ ಕಾರಣಕ್ಕೂ ಮಮತಾ ಬ್ಯಾನರ್ಜಿ ಮತ್ತು ತೃಣಮೂಲ ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಹೋಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಸಂಸದ ಕಾಕೋಲಿ ಘೋಷ್ ದಸ್ತಿದಾರ್ ನೇತೃತ್ವದ ಬಂಡಾಯ ಗುಂಪಿನಲ್ಲಿ ನಾನು ಇಲ್ಲ. ನನ್ನ ಬಗ್ಗೆ ಇಲ್ಲಸಲ್ಲದ ವರದಿಗಳನ್ನು ಬಿತ್ತರಿಸುತ್ತಿದ್ದಾರೆ. ಕೆಲವರು ನಾನು ಬಂಡಾಯ ಗುಂಪಿನ ಭಾಗ ಎಂದು ಹೇಳುತ್ತಿದ್ದಾರೆ. ಆದರೆ ಇದು ನಿಜವಲ್ಲ ಎಂದು ಅಸನ್ಸೋಲ್ ಟಿಎಂಸಿ ಸಂಸದ ಸ್ಪಷ್ಟಪಡಿಸಿದ್ದಾರೆ. ಕಷ್ಟದ ಸಮಯದಲ್ಲಿ ಮಮತಾ ಬ್ಯಾನರ್ಜಿ ನನ್ನೊಂದಿಗೆ ನಿಂತಿದ್ದಾರೆ. ಈಗ ಅವರ ಕಠಿಣ ಸಮಯದಲ್ಲಿ ನಾನು ಅವರೊಂದಿಗೆ ನಿಲ್ಲುತ್ತೇನೆ. ಮಮತಾ ಬ್ಯಾನರ್ಜಿ ಜನರೊಂದಿಗೆ ಸಂಪರ್ಕ ಹೊಂದಿರುವ ನಾಯಕಿಯಾಗಿ ತಮ್ಮನ್ನು ತಾವು ಸ್ಥಾಪಿಸಿಕೊಂಡಿದ್ದಾರೆ. ಇಂದಿಗೂ ಟಿಎಂಸಿ ಪಶ್ಚಿಮ ಬಂಗಾಳದಲ್ಲಿ ಶೇ. 41ರಷ್ಟು ಮತಗಳನ್ನು ಪಡೆದುಕೊಂಡಿದ್ದು, ಅಪಾರ ಸಾರ್ವಜನಿಕ ಬೆಂಬಲವನ್ನು ಹೊಂದಿದೆ. ಸದ್ಯಕ್ಕೆ ನನಗೆ ಪಕ್ಷ ಬದಲಾಯಿಸುವ ಅಥವಾ ಬೇರೆ ಯಾವುದೇ ದಿಕ್ಕಿನಲ್ಲಿ ಚಲಿಸುವ ಉದ್ದೇಶವಿಲ್ಲ ಎಂದು ಶತ್ರುಘ್ನ ಸಿನ್ಹಾ ಹೇಳಿದ್ದಾರೆ.

---

3 ದಿನದಲ್ಲಿ, 3 ಭಾರತೀಯ ಹಡಗಿನಮೇಲೆಅಮೆರಿಕ ದಾಳಿ

ಒಮಾನ್ ಕರಾವಳಿಯಲ್ಲಿ ಅಮೆರಿಕ ಪಡೆ ದಾಳಿ

ಟೆಹ್ರಾನ್: ಒಮಾನ್ ಕರಾವಳಿ ಬಳಿ ಭಾರತೀಯ ಹಡಗುಗಳ ಮೇಲೆ ನಡೆಯುತ್ತಿ ರುವ ದಾಳಿಗಳ ಬಗ್ಗೆ ಭಾರತ ತೀವ್ರ ಕಳವಳ ವ್ಯಕ್ತಪಡಿಸಿದೆ. ಒಮಾನ್‌ನಲ್ಲಿ 3 ದಿನಗಳಲ್ಲಿ ಮೂರು ಹಡಗುಗಳ ಮೇಲೆ ಆಕ್ರಮಣ ಮಾಡಲಾಗಿದ್ದು, ಇನ್ನೆರಡು ಹಡಗುಗಳು ಸಹ ಅಮೆರಿಕದಿಂದ ದಾಳಿಗೊಳಗಾಗಿವೆ.

ಭಾರತೀಯ ಸಿಬ್ಬಂದಿ ಇದ್ದ ವ್ಯಾಪಾರಿ ಹಡಗು ಮೇಲೆ ಅಮೆರಿಕ ದಾಳಿ ನಡೆಸುತ್ತಿರುವುದು ಇದು ಮೂರನೇ ವರದಿಯಾಗಿದೆ. ಎಲ್ಲಾ ಸಿಬ್ಬಂದಿ ಇಲ್ಲಿಯವರೆಗೆ ಸುರಕ್ಷಿತವಾಗಿದ್ದಾರೆ ಎಂದು ತಿಳಿಸಲಾಗಿದೆ. ಗಿನಿಯಾ-ಬಿಸ್ಸೌ ಧ್ವಜ ಹೊಂದಿರುವ ಟ್ಯಾಂಕರ್ ಜಲವೀರ್ ಹಡಗನ್ನು ಗುರುತಿಸಲಾಗಿದೆ. ಜೂನ್ 8ರಂದು ಮೊದಲ ಬಾರಿಗೆ ಎಂಟಿ ಮಾರಿವೆಕ್ಸ್ ಹಡಗಿನಲ್ಲಿ ಬೆಂಕಿ ಕಾಣಿಸಿಕೊಂಡಿತು. ಹಡಗಿನಲ್ಲಿದ್ದ ಎಲ್ಲಾ 24 ಭಾರತೀಯ ಸಿಬ್ಬಂದಿ ಸುರಕ್ಷಿತವಾಗಿದ್ದಾರೆ ಎಂದು ವರದಿಯಾಗಿದೆ.

ಎರಡನೇ ಘಟನೆಯಲ್ಲಿ, ಜೂನ್ 10ರಂದು ಒಮಾನ್ ಕೊಲ್ಲಿಯಲ್ಲಿ ಎಂಟಿ ಸೆಟ್ಟೆಲ್ಲೊ ಟ್ಯಾಂಕರ್ ಮೇಲೆ ದಾಳಿ ನಡೆಸಲಾಯಿತು. ಹಡಗಿನಲ್ಲಿ 24 ಭಾರತೀಯ ಸಿಬ್ಬಂದಿ ಇದ್ದರು. 21 ಜನರನ್ನು ರಕ್ಷಿಸಲಾಗಿದೆ. ಕಾಣೆಯಾಗಿದ್ದ ಮೂವರು ಭಾರತೀಯ ನಾವಿಕರು ಸಾವನ್ನಪ್ಪಿದ್ದಾರೆ ಎಂದು ಕೇಂದ್ರ ಹಡಗು ಸಚಿವ ಸರ್ಬಾನಂದ ಸೋನೋವಾಲ್ ತಿಳಿಸಿದ್ದಾರೆ. ಈ ವಾರದ ಆರಂಭದಲ್ಲಿ, ಇರಾನ್ ತೈಲ ವ್ಯಾಪಾರದಲ್ಲಿ ಭಾಗಿಯಾಗಿದೆ ಎಂದು ಶಂಕಿಸಲಾದ ಖಾಲಿ ಟ್ಯಾಂಕರ್ ಮಾರಿವೆಕ್ಸ್ ಮೇಲೆ ಅಮೆರಿಕ ಪಡೆಗಳು ಗುಂಡು ಹಾರಿಸಿದವು. ಹಡಗಿನಲ್ಲಿದ್ದ ಎಲ್ಲಾ 24 ಭಾರತೀಯ ಸಿಬ್ಬಂದಿಯನ್ನು ರಕ್ಷಿಸಲಾಯಿತು.

ದಾಳಿಗೆ ಭಾರತ ಆಕ್ರೋಶ, ಅಮೆರಿಕದಿಂದ ಸಮರ್ಥನೆ

ನ್ಯೂಯಾರ್ಕ್: ಮಧ್ಯಪ್ರಾಚ್ಯದಲ್ಲಿ ಉಲ್ಬಣಗೊಳ್ಳುತ್ತಿರುವ ಸಂಘರ್ಷದ ನಡುವೆ ವ್ಯಾಪಾರ ಹಡಗುಗಳು ಮತ್ತು ಸಮುದ್ರ ಮಾರ್ಗಗಳ ಮೇಲಿನ ದಾಳಿಗಳನ್ನು ತಕ್ಷಣ ನಿಲ್ಲಿಸಬೇಕು ಎಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಯಲ್ಲಿ ಭಾರತ ಬಲವಾದ ಧ್ವನಿಯಲ್ಲಿ ಆಗ್ರಹಿಸಿದೆ. ಈ ಪ್ರದೇಶದಲ್ಲಿ ನಡೆದ ದಾಳಿಗಳಿಂದ ಕೆಲ ಭಾರತೀಯರು ನಾಪತ್ತೆಯಾಗಿದ್ದಾರೆ ಎಂದು ಭಾರತ ಕಳವಳ ವ್ಯಕ್ತಪಡಿಸಿದೆ.

ಅಮೆರಿಕ ಸೇನೆಯ ಸೂಚನೆಗಳನ್ನು ಪಾಲಿಸದೇ ಒಮಾನ್ ಕೊಲ್ಲಿಯ ಮೂಲಕ ಇರಾನ್‌ನ ತೈಲ ಸಾಗಾಟ ಮಾಡಲು ಪ್ರಯತ್ನಿಸಲಾಗುತ್ತಿತ್ತು. ಹೀಗಾಗಿ ಗಿನಿಯಾ-ಬಿಸ್ಸೌ ಎಂ/ಟಿ ಜಲವೀರ್ ವಿರುದ್ಧ ಯುಎಸ್ ಸೆಂಟ್ರಲ್ ಕಮಾಂಡ್ ಕ್ರಮ ಕೈಗೊಂಡಿದೆ. ಹಡಗಿನಲ್ಲಿದ್ದ ಸಿಬ್ಬಂದಿ ಪದೇಪದೇ ಅಮೆರಿಕ ಸೇನೆಯ ನಿರ್ದೇಶನಗಳನ್ನುಕಡೆಗಣಿಸಿದ್ದರಿಂದ ದಾಳಿ ನಡೆಸಲಾಗಿದೆ. ಹಡಗಿನ ಎಂಜಿನ್ ಕೋಣೆಯನ್ನು ಗುರಿಯಾಗಿಸಿ 2 ಹೆಲ್‌ಫೈರ್‌ನ ಕ್ಷಿಪಣಿಗಳನ್ನು ಹಾರಿಸುವ ಮೂಲಕ ದಾಳಿ ನಡೆಸಲಾಗಿದೆ ಎಂದು ಅಮೆರಿಕ ಹೇಳಿಕೊಂಡಿದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ನಡೆದ ಅಂತಾರಾಷ್ಟ್ರೀಯ ಶಾಂತಿ ಮತ್ತು ಭದ್ರತೆ ಕಾಪಾಡುವಿಕೆ ಕುರಿತ ಮುಕ್ತಚರ್ಚೆಯಲ್ಲಿ ಮಾತನಾಡಿದ ವಿಶ್ವಸಂಸ್ಥೆಯಲ್ಲಿನ ಭಾರತದ ಶಾಶ್ವತ ಪ್ರತಿನಿಧಿ ಹರೀಶ್ ಪರ್ವತನೇನಿ, ಇರಾನ್ ಮತ್ತು ಗಲ್ಫ್ ಪ್ರದೇಶದಲ್ಲಿ ಹೆಚ್ಚುತ್ತಿರುವ ಸಂಘರ್ಷದ ಬಗ್ಗೆ ಕಳವಳ ವ್ಯಕ್ತಪಡಿಸಿದರು. ರಂಜಾನ್ ಪವಿತ್ರ ಮಾಸದ ವೇಳೆ ಆರಂಭವಾದ ಈ ಸಂಘರ್ಷ ಆತಂಕಕಾರಿ ಬೆಳವಣಿಗೆಯಾಗಿದೆ. ಎಲ್ಲಾ ದೇಶಗಳು ಸಂಯಮ ಪಾಲಿಸಬೇಕು, ಉದ್ವಿಗ್ನತೆಯನ್ನು ಹೆಚ್ಚಿಸುವ ಕ್ರಮಗಳನ್ನು ತಪ್ಪಿಸಬೇಕು ಹಾಗೂ ನಾಗರಿಕರ ಸುರಕ್ಷತೆಗೆ ಆದ್ಯತೆ ನೀಡಬೇಕು. ವ್ಯಾಪಾರಿ ಹಡಗುಗಳು ಮತ್ತು ಸಮುದ್ರ ಸಂಪರ್ಕ ಮಾರ್ಗಗಳ ಮೇಲಿನ ದಾಳಿಗಳನ್ನು ಭಾರತ ತೀವ್ರವಾಗಿ ವಿರೋಧಿಸುತ್ತದೆ ಎಂದು ಹರೀಶ್ ಹೇಳಿದರು. ಇದಕ್ಕೂ ಮುನ್ನ ಒಮಾನ್ ಕರಾವಳಿ ಬಳಿ 24 ಭಾರತೀಯ ಸಿಬ್ಬಂದಿಯನ್ನು ಹೊತ್ತೊಯ್ಯುತ್ತಿದ್ದ 'ಸೆಟ್ಟೆಲ್ಲೊ' ವಾಣಿಜ್ಯ ಟ್ಯಾಂಕರ್ ಮೇಲಿನ ದಾಳಿಗೆ ಸಂಬಂಧಿಸಿದಂತೆ ಭಾರತ ಸರಕಾರ ಅಮೆರಿಕದ ರಾಯಭಾರ ಕಚೇರಿಯ ಹಿರಿಯ ಅಧಿಕಾರಿಯನ್ನು ಕರೆಸಿ ತೀವ್ರ ಪ್ರತಿಭಟನೆ ದಾಖಲಿಸಿತ್ತು. ಈ ದಾಳಿಯಲ್ಲಿ ಮೂವರು ಭಾರತೀಯ ಸಿಬ್ಬಂದಿ ನಾಪತ್ತೆಯಾಗಿದ್ದಾರೆ ಎಂದು ವರದಿಯಾಗಿದೆ.

ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಮತ್ತೊಮ್ಮೆ ರಕ್ತಪಾತ: ಪಾಕ್ ಸೇನೆ ದಾಳಿಗೆ 16 ಬಲಿ

37 ಮಂದಿಗೆ ಗಾಯ | ಘಟನೆಯನ್ನು ಮುಚ್ಚಿಡಲು ಪಾಕ್ ಸರಕಾರ ಯತ್ನ
ಅಂತರ್ಜಾಲ ಬಂದ್, ಮೊಬೈಲ್ ಸಂಪರ್ಕ ಕಡಿತ, ಭಾರತ ತೀವ್ರ ವಿರೋಧ

ಮುಜಫ್ಫರಾಬಾದ್: ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಉಂಟಾಗಿರುವ ಆರ್ಥಿಕ ಬಿಕ್ಕಟ್ಟು, ಅತಿಯಾದ ಹಣದುಬ್ಬರ, ಹಿಂಸಾತ್ಮಕ ದಬ್ಬಾಳಿಕೆ ಮತ್ತು ಮೂಲಭೂತ ಹಕ್ಕುಗಳ ನಿರಾಕರಣೆಯನ್ನು ವಿರೋಧಿಸಿ ಸ್ಥಳೀಯ ನಾಗರಿಕರು ದೀರ್ಘಕಾಲದಿಂದ ಬೃಹತ್ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ. ಸುಮಾರು 60ರಿಂದ 70000 ಮಂದಿ ನೆರೆದಿದ್ದ ಈ ಗುಂಪಿನ ಮೇಲೆ ಪಾಕ್ ಸೇನೆ ಮತ್ತೆ ಮನಬಂದಂತೆ ಗುಂಡಿನ ದಾಳಿ ನಡೆಸಿದೆ. ಇದರಿಂದ ಇಡೀ ಪ್ರದೇಶ ರಣರಂಗವಾಗಿ ಮಾರ್ಪಟ್ಟಿದೆ. ಈ ದಾಳಿಯಿಂದ 16 ಜನರು ಸಾವನ್ನಪ್ಪಿದ್ದಾರೆ ಮತ್ತು 37ಕ್ಕೂ ಹೆಚ್ಚು ಜನರು ತೀವ್ರವಾಗಿ ಗಾಯಗೊಂಡಿದ್ದಾರೆ.

ಪಿಒಕೆಯಲ್ಲಿನ ಸ್ಥಳೀಯ ಜನರು ಪಾಕಿಸ್ತಾನ ಸರ್ಕಾರದ ವಿರುದ್ಧ ಕೆಲವು ಪ್ರಮುಖ ಕಾರಣಗಳಿಗಾಗಿ ರಸ್ತೆಗಿಳಿದು ಹೋರಾಟ ಮಾಡುತ್ತಿದ್ದಾರೆ. ತಮಗೆ ಸಿಗಬೇಕಾದ ನೈಸರ್ಗಿಕ ಸಂಪನ್ಮೂಲಗಳನ್ನು ಪಾಕಿಸ್ತಾನ ಬಳಸಿಕೊಳ್ಳುತ್ತಿದ್ದರೂ, ಸ್ಥಳೀಯರಿಗೆ ಅತಿಯಾದ ವಿದ್ಯುತ್ ಬಿಲ್ ಬರುತ್ತಿದೆ. ಗೋಧಿ ಹಿಟ್ಟಿನ ಬೆಲೆಯನ್ನು ವಿಪರೀತವಾಗಿ ಹೆಚ್ಚಿಸಲಾಗಿದೆ ಎಂದು ಜನ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇಡೀ ಪ್ರದೇಶವನ್ನು ಪಾಕಿಸ್ತಾನಿ ಸೇನೆ ತನ್ನ ಸಂಪೂರ್ಣ ನಿಯಂತ್ರಣದಲ್ಲಿಟ್ಟುಕೊಂಡು ಸ್ಥಳೀಯರ ಧ್ವನಿಯನ್ನು ಹತ್ತಿಕ್ಕುತ್ತಿರುವುದಕ್ಕೆ ತೀವ್ರ ವಿರೋಧ ವ್ಯಕ್ತವಾಗಿದೆ. ವಿಶ್ವಸಂಸ್ಥೆಯಲ್ಲೂ ಪಾಕ್ ವಿರುದ್ಧ ಭಾರತ ಕೆಂಡಕಾರಿದೆ.

ಸ್ಥಳೀಯ ಹಕ್ಕುಗಳ ಒಕ್ಕೂಟದ ನೇರ ನಾಯಕತ್ವದಲ್ಲಿ ಸಾವಿರಾರು ನಿರಸ್ತ್ರ ನಾಗರಿಕರು, ಮಹಿಳೆಯರು ಮತ್ತು ಯುವಕರು ಮುಜಫ್ಫರಾಬಾದ್ ಕಡೆಗೆ ಬೃಹತ್ ಮೆರವಣಿಗೆ ನಡೆಸುತ್ತಿದ್ದರು. ಪ್ರತಿಭಟನಾಕಾರರನ್ನು ಚದುರಿಸಲು ಮೊದಲು ಅಶ್ರುವಾಯು ಮತ್ತು ಲಾಠಿ ಚಾರ್ಜ್ ಮಾಡಿದ ಪಾಕಿಸ್ತಾನಿ ಅರೆಸೇನಾ ಪಡೆ ಮತ್ತು ಸೇನೆಯು, ನಂತರ ನೇರವಾಗಿ ಪ್ರತಿಭಟನಾಕಾರರ ಮೇಲೆ ಗುಂಡಿನ ಮಳೆಗರೆದಿದೆ.

ಈ ಪ್ರದೇಶದಲ್ಲಿ ಪಾಕಿಸ್ತಾನದ ನಿರಂತರ ಆಕ್ರಮಣ ಮತ್ತು ನೀತಿಗಳ ವಿರುದ್ಧ ಘೋಷಣೆಗಳನ್ನು ಕೂಗಲು ಸುಮಾರು 60,000ದಿಂದ 70,000ಕ್ಕೂ

ಹೆಚ್ಚು ಜನರು ರಾವಲಕೋಟ್‌ನಲ್ಲಿ ಜಮಾಯಿಸಿದ್ದರು. ಕಳೆದ ಮಂಗಳವಾರ ಪಿಒಕೆಯಲ್ಲಿ ಪ್ರತಿಭಟನಾಕಾರರು ಮತ್ತು ಭದ್ರತಾ ಪಡೆಗಳ ನಡುವೆ ನಡೆದ ಭೀಕರ ಘರ್ಷಣೆಯಲ್ಲಿ ಮೃತಪಟ್ಟ 30 ಜನರಿಗೆ ನ್ಯಾಯ ಒದಗಿಸಬೇಕು ಹಾಗೂ ಗಾಯಗೊಂಡ 200ಕ್ಕೂ ಹೆಚ್ಚು ಜನರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಪ್ರತಿಭಟನಾಕಾರರು ಈ ಸಂದರ್ಭದಲ್ಲಿ ಒತ್ತಾಯಿಸಿದರು.

ಸೇನೆಯ ಬರ್ಬರ ದಾಳಿಗೆ ಸಿಲುಕಿ 16 ನಿಶಸ್ತ್ರ ನಾಗರಿಕರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಗಾಯಗೊಂಡಿರುವ 37ಕ್ಕೂ ಹೆಚ್ಚು ಜನರನ್ನು ಸ್ಥಳೀಯ ಆಸ್ಪತ್ರೆಗಳಿಗೆ ದಾಖಲಿಸಲಾಗಿದ್ದು, ಹಲವರ ಸ್ಥಿತಿ ಗಂಭೀರವಾಗಿರುವುದರಿಂದ ಸಾವಿನ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಭೀತಿ ಇದೆ. ಈ ಭೀಕರ ಹತ್ಯಾಕಾಂಡದ ನಂತರ ಇಡೀ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಪರಿಸ್ಥಿತಿ ಕೈಮೀರಿ ಹೋಗಿದೆ. ಈ ಘಟನೆಯ ಭೀಕರ ದೃಶ್ಯಗಳು ಜಗತ್ತಿಗೆ ತಿಳಿಯಬಾರದು ಎಂಬ ಕಾರಣಕ್ಕೆ ಪಾಕಿಸ್ತಾನ ಸರ್ಕಾರವು ಇಡೀ ಪಿಒಕೆ ವಲಯದಲ್ಲಿ ಅಂತರ್ಜಾಲ ಮತ್ತು ಮೊಬೈಲ್ ಸೇವೆಗಳನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿದೆ. ಪ್ರಮುಖ ನಗರಗಳಲ್ಲಿ ಕಠಿಣ ಕರ್ಫ್ಯೂ ಹೇರಲಾಗಿದ್ದರೂ, ಆಕ್ರೋಶಗೊಂಡಿರುವ ಸಾರ್ವಜನಿಕರು ಮಿಲಿಟರಿ ವಾಹನಗಳಿಗೆ ಬೆಂಕಿ ಹಚ್ಚಿ ಆಕ್ರೋಶ ಹೊರಹಾಕುತ್ತಿದ್ದಾರೆ.

ಬಿಜೆಪಿ ಮಾಜಿ ಸಂಸದ ಬ್ರಜಭೂಷಣ್ ಶರಣ್ ಸಿಂಗ್ ಆರೋಪ
ಅವರು ಬಲಾಢ್ಯರು, ಸತ್ಯ ಹೇಳಿದರೆ ಸಂಕಷ್ಟ; ನಿಗೂಢ ನುಡಿ

ರಾಮಮಂದಿರ ದೇಣಿಗೆ ಹಣ ಅಕ್ರಮ ಬಳಕೆಯಾಗಿದೆ: ಬ್ರಿಜ್

ದೆಹಲಿ/ಲಖನೌ: ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕೋಟ್ಯಂತರ ರುಪಾಯಿ ದೇಣಿಗೆ ವಿಶ್ವದೆಲ್ಲೆಡೆಯಿಂದ ಹರಿದು ಬಂದಿತ್ತು. ಆ ಹಣ ದುರುಪಯೋಗವಾಗಿದೆ ಎನ್ನುವ ಬಲವಾದ ಸುದ್ದಿಯ ನಡುವೆ, ಬಿಜೆಪಿ ಮಾಜಿ ಸಂಸದರೊಬ್ಬರ ಹೇಳಿಕೆ, ಈ ಅಕ್ರಮದ ಸಂಶಯವನ್ನು ಇನ್ನಷ್ಟು

ಗಟ್ಟಿಯಾಗುವಂತೆ ಮಾಡಿದೆ. ದೇಣಿಗೆ ಹಣ ಏನಾಯಿತು, ಎಷ್ಟು ಹಣ ದುರುಪಯೋಗವಾಗಿದೆ ಎನ್ನುವ ಸಂಪೂರ್ಣ ಮಾಹಿತಿ ನನಲ್ಲಿದೆ. ಆದರೆ, ಸದ್ಯಕ್ಕೆ ಅದ್ಯಾವು ದನ್ನೂ ಬಹಿರಂಗಪಡಿಸುವ ಪರಿಸ್ಥಿತಿ ಯಲ್ಲಿ ನಾನಿಲ್ಲ ಎಂದು ಬಿಜೆಪಿಯ ಮಾಜಿ ಸಂಸದ ಬ್ರಜಭೂಷಣ್ ಶರಣ್ ಸಿಂಗ್, ಬಾಂಬ್ ಸಿಡಿಸಿದ್ದಾರೆ. ಆ ಮೂಲಕ, ಭಕ್ತರು ಕೊಟ್ಟ ದೇಣಿಗೆ ಹಣ ದುರುಪಯೋಗ ಆಗಿದೆ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ.

ಅಯೋಧ್ಯೆಯ ರಾಮಮಂದಿರಕ್ಕೆ ಸಂಬಂಧಿಸಿದಂತೆ, ಬಂದಿರುವ ದೇಣಿಗೆಯಲ್ಲಿ ದುರುಪಯೋಗ ಮತ್ತು ವಂಚನೆ ನಡೆದಿದೆ ಎನ್ನುವ ಆರೋಪಗಳು ಕೇಳಿ ಬಂದಿವೆ. ಈ ಬಗ್ಗೆ ನನಗೆ ಸಾಕಷ್ಟು ಮಾಹಿತಿಯಿದೆ. ಆದರೆ ಈ ಬಗ್ಗೆ ಸದ್ಯಕ್ಕಂತೂ ಏನನ್ನೂ ಹೇಳುವ ಪರಿಸ್ಥಿತಿಯಲ್ಲಿ ನಾನಿಲ್ಲ. ಯಾಕೆಂದರೆ, ಅವರಂತಹ ಬಲಿಷ್ಠರ ಮುಂದೆ ನಾನು ತುಂಬಾ ಸಣ್ಣವನು. ಮುಂದೊಂದು ದಿನ ಈ ಬಗ್ಗೆ ಮಾತನಾಡುವೆ ಎಂದು ಉತ್ತರಪ್ರದೇಶದ ಕೇಸರ್ ಗಂಜ್ ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಮತ್ತು ಬಿಜೆಪಿ ನಾಯಕ, ಬ್ರಜಭೂಷಣ್ ಹೇಳಿದ್ದಾರೆ. ದೆಹಲಿಯಲ್ಲಿ ಹತ್ತು ದಿನಗಳ ಕಾಲ ತಂಗಿ, ವಿಷ್ಣೋಹರಪುರದಲ್ಲಿನ ತಮ್ಮ ನಿವಾಸಕ್ಕೆ ವಾಪಸ್ ಆದ ನಂತರ ಬ್ರಜಭೂಷಣ್ ಈ ಹೇಳಿಕೆ ನೀಡಿದರು.

ಬ್ರಜಭೂಷಣ್ ತಮ್ಮ ಪತ್ರಿಕಾಗೋಷ್ಠಿಯಲ್ಲಿ ಪದೇಪದೇ 'ಅವರು ಬಲಿಷ್ಠರು' ಎನ್ನುವ ಪದವನ್ನು ಬಳಸಿದ್ದಾರೆ. ಆದರೆ, ಆ 'ಅವರು' ಯಾರು ಎನ್ನುವುದರ ಬಗ್ಗೆ ಸುಳಿವನ್ನು ಬ್ರಜಭೂಷಣ್ ನೀಡಿಲ್ಲ. ಸತ್ಯ ಹೇಳಿದರೆ ಸಂಕಷ್ಟಕ್ಕೆ ಸಿಲುಕುವೆ ಎಂದು ಹೇಳುವ ಮೂಲಕ, ಅಯೋಧ್ಯೆ ರಾಮಮಂದಿರ ದೇಣಿಗೆ ದುರ್ಬಳಕೆ ಆಗಿದೆ ಎನ್ನುವ ಸುದ್ದಿಗೆ ಹೊಸ ತಿರುವನ್ನು ಕೊಟ್ಟಂತಾಗಿದೆ. ದೇಣಿಗೆಯಲ್ಲಿ ಅಕ್ರಮ ನಡೆದಿದೆ ಎಂದು ದೇಶಾದ್ಯಂತ ಭಾರೀ ಚರ್ಚೆ ನಡೆಯುತ್ತಿರುವ ಹೊತ್ತಿನಲ್ಲಿ ಬಿಜೆಪಿ ನಾಯಕನ ಹೇಳಿಕೆ ಹೊಸ ತಿರುವನ್ನು ನೀಡುವ ಸಾಧ್ಯತೆಯಿದೆ.

ಲೈಂಗಿಕ ಕಿರುಕುಳ ಆರೋಪಿ: ಬ್ರಜಭೂಷಣ್ ಮೇಲೆ ಮಹಿಳಾ ಕುಸ್ತಿಪಟುಗಳ ವಿರುದ್ಧ ಲೈಂಗಿಕ ಕಿರುಕುಳದ ಆರೋಪವಿದೆ. ಈ ಹಿನ್ನೆಲೆಯಲ್ಲಿ ಕಳೆದ ಲೋಕಸಭಾ (2024) ಚುನಾವಣೆಯಲ್ಲಿ ಅವರಿಗೆ ಟಿಕೆಟ್ ಸಿಗಲಿಲ್ಲ. ಅವರ ಬದಲಿಗೆ ಅವರ ಪುತ್ರ ಕರಣ್ ಭೂಷಣ್ ಸಿಂಗ್ ಅವರಿಗೆ ಬಿಜೆಪಿ ಟಿಕೆಟ್ ಅನ್ನು ನೀಡಿತ್ತು, ಇವರು ತಮ್ಮ ಸಮಾಜವಾದಿ ಪಾರ್ಟಿಯ ಪ್ರತಿಸ್ಪರ್ಧಿ ರಾಮ್ ಭಗತ್ ಮಿಶ್ರಾ ವಿರುದ್ಧ 1,48,843 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು.

ಎಐ ಕುರಿತು ಎಐ ಎಚ್ಚರಿಕೆ

ಅಮೆರಿಕ: ಅಮೆರಿಕದ ಪ್ರಮುಖ ಕೃತಕ ಬುದ್ಧಿಮತ್ತೆ ಕಂಪನಿಗಳಾದ ಓಪನ್ ಎಐ ಮತ್ತು ಆಂಥ್ರೋಪಿಕ್, ವೇಗವಾಗಿ ಅಭಿವೃದ್ಧಿಯಾಗುತ್ತಿರುವ ಎಐ ತಂತ್ರಜ್ಞಾನದ ಅಪಾಯಗಳ ಬಗ್ಗೆ ಗಂಭೀರ ಎಚ್ಚರಿಕೆ ನೀಡುತ್ತಿವೆ. ಆದರೆ, ಇದೇ ಸಮಯದಲ್ಲಿ ಇವುಗಳು ವಾಲ್ ಸ್ಟ್ರೀಟ್ ಹೂಡಿಕೆದಾರರನ್ನು ಸೆಳೆಯಲು ತಮ್ಮ ವ್ಯವಹಾರ ವಿಸ್ತರಣೆಯತ್ತ ಗಮನ ಹರಿಸುತ್ತಿವೆ. ಎಐ ತಂತ್ರಜ್ಞಾನವು ನಿಯಂತ್ರಣ ವ್ಯವಸ್ಥೆಗಳಿಗಿಂತ ತುಂಬಾ ವೇಗವಾಗಿ ಬೆಳೆಯುತ್ತಿ ರುವುದರಿಂದ, ಭವಿಷ್ಯದಲ್ಲಿ ದೊಡ್ಡ ಮಟ್ಟದ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು ಎದುರಾಗುವ ಸಾಧ್ಯತೆ ಇದೆ ಎಂದು ಕಂಪನಿಗಳು ಹೇಳಿವೆ.

ಆಂಥ್ರೋಪಿಕ್ ಕಂಪನಿ, ಎಐ ಅಭಿವೃದ್ಧಿಗೆ ತಾತ್ಕಾಲಿಕ ವಿರಾಮ ಅಥವಾ ನಿಧಾನಗತಿಯ ಅಗತ್ಯವಿದೆ ಎಂದು ಸೂಚಿಸಿದ್ದು, ಸರಕಾರಗಳು ಮತ್ತು ಜಾಗತಿಕ ಸಂಸ್ಥೆಗಳು ನಿಯಂತ್ರಣ ರೂಪಿಸುವವರೆಗೆ ಎಚ್ಚರಿಕೆಯಿಂದ ನಡೆದುಕೊ ಳ್ಳಬೇಕು ಎಂದು ಅಭಿಪ್ರಾಯಪಟ್ಟಿದೆ.

ಇದೇ ವೇಳೆ ಓಪನ್ ಎಐ ಕೂಡ ಅಂತಾರಾಷ್ಟ್ರೀಯ ಮಟ್ಟದಲ್ಲಿ ಎಐ ಸುರಕ್ಷತೆಗಾಗಿ ಸಂಯೋಜಿತ ವ್ಯವಸ್ಥೆ ನಿರ್ಮಿಸುವ ಅಗತ್ಯವಿದೆ ಎಂದು ಒತ್ತಾಯಿಸಿದೆ. ಆದರೆ ಈ ಎಚ್ಚರಿಕೆಗಳ ನಡುವೆಯೇ, ಎರಡೂ ಕಂಪನಿಗಳು ಹೆಚ್ಚು ಶಕ್ತಿಶಾಲಿ ಎಐ ಮಾದರಿಗಳನ್ನು ಬಿಡುಗಡೆ ಮಾಡುತ್ತಿವೆ ಎಂದು ವಿಶ್ಲೇಷಕರು ಹೇಳುತ್ತಾರೆ.

ಜಿನೀವಾ ಕಾರ್ಮಿಕ ಸಮಾವೇಶದಲ್ಲಿ ಕೇಂದ್ರ ಸಚಿವೆ ಶೋಭಾ ಭಾಷಣ

ಜಿನೀವಾ: ಸ್ವಿಜರ್ಲೆಂಡ್‌ನ ಜಿನೀವಾದಲ್ಲಿ ನಡೆದ 114ನೇ ಅಂತಾರಾಷ್ಟ್ರೀಯ ಕಾರ್ಮಿಕ ಸಮಾವೇ ಶದಲ್ಲಿ ಕೇಂದ್ರ ಸಹಾಯಕ ಕಾರ್ಮಿಕ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿದರು. ನರೇಂದ್ರ ಮೋದಿಯವರ ನಾಯ ಕತ್ವದಲ್ಲಿ ಕಾರ್ಮಿಕ ಇಲಾಖೆಯಲ್ಲಿ ಮಾಡ ಲಾದ ಪರಿವರ್ತನೆಗಳ ಕುರಿತು ಅವರು ಮಾಹಿತಿ ನೀಡಿದರು. ಒಟ್ಟು 29 ಕಾರ್ಮಿಕ ಕಾನೂ ನುಗಳನ್ನು ಏಕೀಕರಣಗೊಳಿಸಿ 4 ಕಾರ್ಮಿಕ ನೀತಿಗಳನ್ನಾಗಿ ಬದಲಾಯಿಸಲಾಗಿದೆ. ಶೇ.6ರಷ್ಟಿದ್ದ ನಿರುದ್ಯೋಗದ ಪ್ರಮಾಣವನ್ನು 3.1ಕ್ಕೆ ಇಳಿಸಲಾಗಿದೆ.

ಮಹಿಳಾ ಉದ್ಯೋಗಿಗಳ ಸಂಖ್ಯೆ ಶೇ.38.8ಕ್ಕೇರಿದೆ. 'ಈಶ್ರಮ' ಪೋರ್ಟಲ್ ಮೂಲಕ ಡಿಜಿಟಲ್ ರೂಪದಲ್ಲಿ ಕಾರ್ಮಿಕರ ಅಂಕಿಸಂಖ್ಯೆಗಳನ್ನು ಸಂಗ್ರಹಿಸಲಾಗಿದೆ. 31.5 ಕೋಟಿ ಕಾರ್ಮಿಕರು ಇದರಲ್ಲಿ ಹೆಸರು ನೋಂದಾಯಿಸಿಕೊಂಡಿದ್ದು, ಇದು ವಿಶ್ವದ ಅತಿದೊಡ್ಡ ಉದ್ಯೋಗಿಗಳ ಮಾಹಿತಿಯಾಗಿದೆ ಎಂದು ಹೇಳಿದ್ದಾರೆ.

ಆಂಧ್ರಪ್ರದೇಶದ ಯುವಕನ 'ಸ್ನೇಕ್ ಸ್ಟಿಕ್' ಪ್ರಾಜೆಕ್ಟ್‌ಗೆ ಜಾಗತಿಕ ಗೌರವ

ಆಂಧ್ರಪ್ರದೇಶ: ಆಂಧ್ರಪ್ರದೇಶದ ಯುವ ಪರಿಸರ ಸಂರಕ್ಷಣಾ ಕಾರ್ಯಕರ್ತ ಸಂಪತ್ ಮಹಾಂತಿ ನಡೆಸುತ್ತಿರುವ 'ಸ್ನೇಕ್ ಸ್ಟಿಕ್' ಪ್ರಾಜೆಕ್ಟ್‌ಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ. ಈ ಯೋಜನೆ ನ್ಯಾಷನಲ್ ಜಿಯಾಗ್ರಫಿಕ್ ಸ್ಲಿಂಗ್‌ಶಾಟ್ ಚಾಲೆಂಜ್‌ನಲ್ಲಿ ವಿಶ್ವದ ಟಾಪ್ 50 ಆಯ್ಕೆಗಳಲ್ಲಿ ಸ್ಥಾನ ಪಡೆದಿದೆ. ಪರಿಸರ ಸಂರಕ್ಷಣೆಗೆ ಮಾದರಿಯಾಗಿರುವ ಈ ಯೋಜನೆ ಯುವಕರಿಂದಲೂ ಪರಿಸರ ಸಮಸ್ಯೆಗಳಿಗೆ ಪರಿಣಾಮಕಾರಿ ಪರಿಹಾರಗಳು ಸಾಧ್ಯವೆಂಬುದನ್ನು ತೋರಿಸುತ್ತದೆ. ಸ್ಥಳೀಯ ಮಟ್ಟದಲ್ಲಿ ಪ್ರಾರಂಭವಾದ ಪ್ರಯತ್ನ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ.

ಪ್ರಾಜೆಕ್ಟ್‌ನ ವಿಶೇಷತೆ?

- 'ಸ್ನೇಕ್ ಸ್ಟಿಕ್' ಪ್ರಾಜೆಕ್ಟ್ ಮಾನವ-ಹಾವುಗಳ ನಡುವಿನ ಸಂಘರ್ಷವನ್ನು ಕಡಿಮೆ ಮಾಡುವುದನ್ನು ಗುರಿಯಾಗಿಸಿಕೊಂಡಿದೆ.
- ಗ್ರಾಮೀಣ ಪ್ರದೇಶಗಳಲ್ಲಿ ಹಾವುಗಳ ಬಗ್ಗೆ ಇರುವ ಭಯ ಮತ್ತು ತಪ್ಪು ಕಲ್ಪನೆಗಳನ್ನು ದೂರ ಮಾಡುವ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.
- ಹಾವುಗಳನ್ನು ಕೊಲ್ಲುವುದಕ್ಕಿಂತ ಅವುಗಳನ್ನು ಸುರಕ್ಷಿತವಾಗಿ ರಕ್ಷಿಸಿ ಮರಳಿ ಕಾಡಿಗೆ ಬಿಡುವ ಮಹತ್ವವನ್ನು ಯೋಜನೆ ಮೂಲಕ ತಿಳಿಸಲಾಗುತ್ತಿದೆ.

ಸಮಾಚಾರ ಸಣ್ಣದಲ್ಲ

ಶಾಸಕ ನಾಡಗೌಡಗೆ ಸಚಿವ ಸ್ಥಾನ ನೀಡಿ

ಮುದ್ದೇಬಿಹಾಳ: ಶಾಸಕ ಅಪ್ಪಾಜಿ ನಾಡಗೌಡರು 6 ಬಾರಿ ಶಾಸಕರಾಗಿದ್ದು, ಹಿರಿತನದಲ್ಲಿ ಬೆರಳೆಣಿಕೆಯಷ್ಟು ಜನರು

ಉಳಿದುಕೊಂಡಿದ್ದಾರೆ. ಒಂದು ಬಾರಿ, ಎರಡು ಬಾರಿ ಶಾಸಕರಾದವರಿಗೆ ಸಚಿವ ಸ್ಥಾನ ನೀಡಿ ಮಣೆ ಹಾಕುವುದು ಎಷ್ಟು ಸರಿ. ಶಾಸಕ ನಾಡಗೌಡರು ಸಚಿವ ಸ್ಥಾನ ನಿಭಾಯಿಸಬಲ್ಲ ಸಾಮರ್ಥ್ಯವನ್ನು ಹೊಂದಿದ್ದಾರೆ. ರಾಜ್ಯದ ಜನರ ನಾಡಿಮಿಡಿತ ಅರಿತ ಅಪ್ಪಾಜಿ ನಾಡಗೌಡ ರಾಜ್ಯದಲ್ಲಿ ಕಾಂಗ್ರೆಸ್ ಬಲವರ್ಧನೆಯಲ್ಲಿ ಪಕ್ಷದ ನಾಯಕರುಗಳೊಂದಿಗೆ ಪ್ರಭಾವಿ ನಾಯಕರು ಆಗಿದ್ದಾರೆ. ಅವರಿಗೆ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನ ನೀಡಿ ಪಕ್ಷದ ಹಾಗೂ ರಾಜ್ಯದ ಜನರ ಸೇವೆ ಮಾಡುವ ಅವಕಾಶ ಒದಗಿಸಿಕೊಡಬೇಕು. ಅವರ ಅಭಿಮಾನಿಗಳ ಆಸೆಯನ್ನು ಇಡೇರಿಸಬೇಕು. ಇಲ್ಲದಿದ್ದರೆ ಕಾಂಗ್ರೆಸ್ ಕಾರ್ಯಕರ್ತರ ಸಾಮೂಹಿಕ ರಾಜೀನಾಮೆ ಪರ್ವ ಮುದ್ದೇಬಿಹಾಳ ಮತಕ್ಷೇತ್ರದಿಂದ ಪ್ರಾರಂಭಗೊಳ್ಳಲಿದೆ ಎಂದು ಕಾಂಗ್ರೆಸ್ ಹೈ ಕಮಾಂಡ್‌ಗೆ ಮಾಜಿ ಪುರಸಭೆ ಸದಸ್ಯ ಸಂತೋಷ ನಾಯ್ಕ.ಡಿ ಎಚ್ಚರಿಕೆ ನೀಡಿದ್ದಾರೆ.

ಜೂನ್ 15ರಂದು ಅಪ್ರೆಂಟಿಸ್ ಮೇಳ

ವಿಜಯಪುರ: ನಗರದ ಬಿ.ಎಲ್.ಡಿ.ಇ ಕೈಗಾರಿಕೆ ತರಬೇತಿ ಸಂಸ್ಥೆ(ಐಟಿಐ)ಯಲ್ಲಿ ಜೂನ್ 15ರಂದು ಅಪ್ರೆಂಟಿಸ್ ಮೇಳ ಆಯೋಜಿಸಲಾಗಿದೆ. ಜಾನ್ಸನ್ ಲಿಫ್ಟ್ ಅಂಡ್ ಎಸ್ಕಲೇಟರ್ಸ್ ಕಂಪನಿ ಈ ಕ್ಯಾಂಪಸ್ ಸಂದರ್ಶನ ಆಯೋಜಿಸಿದೆ. ಐಟಿಐ ನ ನಾನಾ ಟ್ರೇಡುಗಳಲ್ಲಿ ಪಾಸಾದ ಮತ್ತು ದ್ವಿತೀಯ ವರ್ಷದಲ್ಲಿ ತರಬೇತಿ ಪಡೆಯುತ್ತಿರುವ 18 ರಿಂದ 25 ವರ್ಷದೊಳಗಿನ ತರಬೇತುದಾರರಿಗೆ ಲಿಖಿತ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನ ನಡೆಯಲಿದೆ. ಆಸಕ್ತ ತರಬೇತಿದಾರರು ಸೂಕ್ತ ದಾಖಲೆಗಳೊಂದಿಗೆ ಸಂದರ್ಶನದಲ್ಲಿ ಭಾಗವಹಿಸಬೇಕು ಎಂದು ತರಬೇತಿ ಸಂಸ್ಥೆಯ ಪ್ರಭಾರಿ ಪ್ರಾಚಾರ್ಯ ಸಂತೋಷ ಕರಿಗಾರ ಮಾಧ್ಯಮ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9880716694 ಮತ್ತು 9916853605 ಸಂಪರ್ಕಿಸಬಹುದಾಗಿದೆ.

ಸಕಾಲಕ್ಕೆ ಪ್ರಮಾಣ ಪತ್ರ ವಿತರಿಸಿ: ಡಿಸಿ ಡಾ.ಆನಂದ

ವಿಜಯಪುರ: ವಿವಿಧ ಪ್ರಮಾಣ ಪತ್ರಗಳನ್ನು ಸಾರ್ವಜನಿಕರಿಗೆ ಸಕಾಲಕ್ಕೆ ವಿತರಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅಧಿಕಾರಿಗಳಿಗೆ ಸೂಚಿಸಿದರು. ಬಬಲೇಶ್ವರ ತಾಲೂಕಿನ ಮಮದಾಪುರ ನಾಡಕಚೇರಿಯ ಅಟಲ್ ಜನಸ್ನೇಹಿ ಕೇಂದ್ರದಲ್ಲಿ ನೀಡಲಾಗುವ ವಿವಿಧ ಪ್ರಮಾಣ ಪತ್ರಗಳ ಹಾಗೂ ಪಿಂಚಣಿ ಯೋಜನೆಗಳನ್ನು ಪರಿಶೀಲಿಸಿದ ಬಳಿಕ ಮಾತನಾಡಿದರು. ಅಟಲ್ ಜನಸ್ನೇಹಿ ಕೇಂದ್ರದಲ್ಲಿ ನೀಡಲಾಗುವ ವಿವಿಧ ಪ್ರಮಾಣ ಪತ್ರಗಳನ್ನು ಸಾರ್ವಜನಿಕರಿಗೆ ಸಕಾಲಕ್ಕೆ ವಿತರಿಸಬೇಕು ಎಂದು ಸೂಚಿಸಿದ ಅವರು, ಬಳಿಕ ಸಾರ್ವಜನಿಕರ ಅಹವಾಲುಗಳನ್ನು ಆಲಿಸಿದರು. ಇದಕ್ಕೂ ಮೊದಲು ಗ್ರಾಮದಲ್ಲಿ ಅರಣ್ಯ ಇಲಾಖೆಯವರು ಆಯೋಜಿಸಿದ್ದ ಹಸರೀಕರಣ ಮತ್ತು ಸಸಿ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಸಿ ನೆಟ್ಟು, ಸಸಿಗೆ ನೀರುಣಿಸಿದರು

ಪಲ್ಸ್ ಪೋಲಿಯೋ ಅಭಿಯಾನ ಜೂ.28ಕ್ಕೆ

ಬೆಂಗಳೂರು: ರಾಜ್ಯದಲ್ಲಿ 0 ಇಂದ 5 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಲಸಿಕೆ ನೀಡುವ ಉದ್ದೇಶದಿಂದ 2026 ರ ಜೂನ್ 28 ರ ಭಾನುವಾರದಂದು 'ರಾಷ್ಟ್ರೀಯ ಲಸಿಕಾ ದಿನ (ಪಲ್ಸ್ ಪೋಲಿಯೋ)'' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರಕಾರದ ಪ್ರಧಾನ ಕಾರ್ಯದರ್ಶಿಗಳಾದ ರಿತ್ವಿಕ್ ಪಾಂಡೆ ತಿಳಿಸಿದ್ದಾರೆ. ಭಾರತವು ಕಳೆದ 14 ವರ್ಷಗಳಿಗೂ ಮೇಲ್ಪಟ್ಟು ಪೋಲಿಯೋ ಮುಕ್ತ ರಾಷ್ಟ್ರವಾಗಿದ್ದರೂ, ಜಗತ್ತಿನ ಕೆಲವು ಭಾಗಗಳಲ್ಲಿ ಹಾಗೂ ಭಾರತದ ನೆರೆ ರಾಷ್ಟ್ರಗಳಲ್ಲಿ ವೈಲ್ಡ್ ಪೋಲಿಯೋ ವೈರಸ್ ಹರಡುವಿಕೆ ಇನ್ನೂ ಇರುವುದರಿಂದ ಈ ಮುನ್ನೆಚ್ಚರಿಕೆ ಕ್ರಮ ಅತ್ಯಗತ್ಯವಾಗಿದೆ. ಭಾರತ ತಜ್ಞ ಸಲಹಾ ಗುಂಪಿನ ಶಿಫಾರಸ್ಸಿನ ಅನ್ವಯ ಈ ಅಭಿಯಾನವನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಅಧಿಸೂಚನೆಗೆ ಹೋರಾಟ ಸಭೆ ಜೂ. 16ಕ್ಕೆ

ವಿಜಯಪುರ: ನ್ಯಾ, ಬ್ರಿಜೇಶ್‌ಕುಮಾರ ನೇತೃತ್ವದ 2ನೇ ನ್ಯಾಯಾಧೀಕರಣದ ಐ ತೀರ್ಪಿನಂತೆ ಅಧಿಸೂಚನೆ ಹೊರಡಿಸಲು ಕೇಂದ್ರ ಸರಕಾರದ ಮೇಲೆ ಒತ್ತಡ ಹೇರಲು ಮುಂದಿನ ಹೋರಾಟದ ರೂಪರೇಷ ತಯಾರಿಸುವದು ಮತ್ತು ಹೋರಾಟ ಸಮಿತಿ ರಚಿಸುವುದರ ಕುರಿತು ಪೂರ್ವಭಾವಿ ಸಭೆಯನ್ನು ವಿಜಯಪುರ ನಗರದ ಅಂಬೇಡ್ಕರ ವೃತ್ತದ ಬಳಿ ಇರುವ ಡಾ. ಬಿ.ಆರ್.ಅಂಬೇಡ್ಕರ ಸಭಾ ಭವನದಲ್ಲಿ ಜೂನ್ 16 ರಂದು ಮಂಗಳವಾರದಂದು ಬೆಳಗ್ಗೆ 10-30ಗಂಟೆಗೆ ಪೂರ್ವಭಾವಿ ಸಭೆ ಕರೆಯಲಾಗಿದೆ.

{ಸತೀಶ್ ಜಾರಕಿಹೊಳಿ} ಸಚಿವ

ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೂ, ಸಿಎಂ ಸ್ಥಾನಕ್ಕೂ ಸಂಬಂಧ ಇಲ್ಲ. ಅಧ್ಯಕ್ಷ ಆಗಿಯೇ ಪಕ್ಷದ ಕೆಲಸ ಮಾಡಬೇಕು ಅಂತೇನೂ ನಿಯಮವಿಲ್ಲ. ರಾಮಕೃಷ್ಣ ಹೆಗಡೆ ಸರಕಾರದ ಬಳಿಕ ಇದುವರೆಗೆ ಒಂದು ಸರಕಾರ ರಿಪೀಟ್ ಆಗಿಲ್ಲ. ದುಡಿದರೆ ಕೂಲಿ ಸಿಕ್ಕಿಯೇ ಸಿಗುತ್ತದೆ. ಡಿಕೆ ಶಿವಕುಮಾರ್‌ನೇತೃತ್ವದಲ್ಲಿ ಕೆಲಸ ಮಾಡಿದ್ದೇವೆ ಅಂತ ಅವರಿಗೆ ಅಧಿಕಾರ ಕೊಟ್ಟರು. ಯಾರು ಪಕ್ಷಕ್ಕೆ ದುಡಿಯುತ್ತಾರೆ ಅವರಿಗೆ ಅಧಿಕಾರ ಸಿಗಲೇಬೇಕು.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ | ರಾಜಕೀಯ ಪಕ್ಷ ಮುಖಂಡರ ಸಭೆ | ವಿಜಯ ಮೆಕ್ಕಳಕಿ

ಎಸ್‌ಐಆರ್‌ಗೆ ಏಜೆಂಟರ ನೇಮಕಕ್ಕೆ ಸೂಚನೆ

ವಿಶ್ವವಾಣಿ ಸುದ್ದಿಮನೆ ವಿಜಯಪುರ

ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕುರಿತಂತೆ ಆಯಾ ರಾಜಕೀಯ ಪಕ್ಷದವರು ತಮ್ಮ ಮತಗಟ್ಟೆ ಮಟ್ಟದ ಏಜೆಂಟರನ್ನು ಕೂಡಲೇ ನೇಮಕ ಮಾಡಿಕೊಳ್ಳಬೇಕು ಎಂದು ವಿಜಯಪುರ ನಗರ ಮತಕ್ಷೇತ್ರದ ಮತದಾರರ ನೋಂದಣಾಧಿಕಾರಿಗಳಾದ ಮಹಾನಗರ ಪಾಲಿಕೆ ಆಯುಕ್ತ ವಿಜಯ ಮೆಕ್ಕಳಕಿ ಹೇಳಿದರು.

ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ ಐಆರ್) ಕಾರ್ಯ ಕೈಗೊಳ್ಳುವ ಕುರಿತಂತೆ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಇತ್ತೀಚಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಗರ ಮತಕ್ಷೇತ್ರದಲ್ಲಿ 2026ರ ಮೇ 26 ರಂತೆ ಒಟ್ಟು 2,92,179 ಮತದಾರರಿದ್ದಾರೆ. ಒಟ್ಟು 285 ಮತಗಟ್ಟೆಗಳಿದ್ದು 285 ಜನ ಮತಗಟ್ಟೆ ಮಟ್ಟದ ಅಧಿಕಾರಿಗಳು ಹಾಗೂ 28 ಜನ ಮತಗಟ್ಟೆ ಮಟ್ಟದ ಮೇಲ್ವಿಚಾರಕರು ಕಾರ್ಯ ನಿರ್ವಹಿಸುತ್ತಿದ್ದಾರೆ.

ವಿಜಯಪುರ ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ ಐಆರ್) ಕಾರ್ಯ ಕೈಗೊಳ್ಳುವ ಕುರಿತಂತೆ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಇತ್ತೀಚಿಗೆ ನಡೆದ ಸಭೆಯಲ್ಲಿ ಮಹಾನಗರ ಪಾಲಿಕೆ ಆಯುಕ್ತ ವಿಜಯ ಮೆಕ್ಕಳಕಿ ಮಾತನಾಡಿದರು.

ರಾಜಕೀಯ ಪಕ್ಷದವರು ತಮ್ಮ ಮತಗಟ್ಟೆ ಮಟ್ಟದ ಏಜೆಂಟ್ ರನ್ನು ಕೂಡಲೇ ನೇಮಕ ಮಾಡಿಕೊಳ್ಳಬೇಕು ಎಂದು ಹೇಳಿದರು.

ನಗರ ಮತಕ್ಷೇತ್ರ ಸಂಬಂಧಿಸಿದಂತೆ ಮತದಾರರ ಪಟ್ಯ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಮತದಾರರ ನೋಂದಣಾಧಿಕಾರಿಗಳು, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಚುನಾವಣಾ ಆಯೋಗದ ಎಲ್ಲ ಹಂತಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಒಳಗೊಂಡಿರುವ ಪಾರದರ್ಶಕ ಪ್ರಕ್ರಿಯೆಯಾಗಿದೆ ಎಂದು ರಾಜಕೀಯ ಪಕ್ಷಗಳಿಗೆ ತಿಳಿಸಿದರು.

ಆ.5 ರಂದು ಕರಡು ಮತದಾರರ ಪಟ್ಟಿ ಪ್ರಕಟಿಸಲಾಗುವುದು. ಒಂದು ವೇಳೆ ಕರಡು ಮತದಾರರ ಪಟ್ಟಿಯಲ್ಲಿ ನ್ಯೂನ್ಯತೆಗಳು ಕಂಡು ಬಂದಲ್ಲಿ ನೈಜ ಮತದಾರರಿಗೆ ತಮ್ಮ ಹಕ್ಕು ಮತ್ತು ಆಕ್ಷೇಪಣೆ ಅರ್ಜಿಗಳನ್ನು ಸೆಪ್ಟೆಂಬರ್ 4ರೊಳಗಾಗಿ ಸಲ್ಲಿಸಲು ಅವಕಾಶವಿದೆ ಎಂದರು.

ಆ.5 ರಿಂದ ಅ.3 ರವರೆಗೆ ನೋಟಿಸ್ ಹಂತ ಹಾಗೂ ಹಕ್ಕು ಮತ್ತು ಆಕ್ಷೇಪಣೆಗಳ ವಿಲೇವಾರಿ ಕಾರ್ಯ ಕೈಗೊಳ್ಳಲಾಗುವುದು. ಈ ಹಂತದಲ್ಲಿ ಆಕ್ಷೇಪಣೆ ಸಲ್ಲಿಸಿದ ಮತದಾರರು ಭಾರತ ಚುನಾವಣಾ ಆಯೋಗವು ನಿಗದಿಪಡಿಸಿದ 12 ದಾಖಲೆಗಳ ಪೈಕಿ ಸೂಕ್ತ ದಾಖಲೆಗಳನ್ನು ಸಲ್ಲಿಸಬಹುದು ಎಂದು ತಿಳಿಸಿದರು.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ ಸಂಬಂಧಿಸಿದಂತೆ ಪರಿಷ್ಕರಣೆ ಕಾರ್ಯದಲ್ಲಿ ಮತದಾರರು ಸುಗಮವಾಗಿ ಭಾಗವಹಿಸಲು ಸಾಧ್ಯವಾಗುವಂತೆ ಬಿಎಲ್‌ಒ ಫೆಸಿಲಿಟೇಶನ್ ಕ್ಯಾಂಪ್ ಹಾಗೂ ವೋಟರ್ ಫೆಲಿಸಿಟೇಶನ್ ಕ್ಯಾಂಪ್ ಗಳನ್ನು ಸ್ಥಾಪಿಸಲಾಗುವುದು ಎಂದು ತಿಳಿಸಿದರು.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಮತಗಟ್ಟೆ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಗಣತಿ ನಮೂನೆಗಳನ್ನು ವಿತರಣೆ ಹಾಗೂ ಸಂಗ್ರಹಿಸುವ ಸಂದರ್ಭದಲ್ಲಿ ಎಲ್ಲ ಮತದಾರರು, ಸಾರ್ವಜನಿಕರು ಸಂಪೂರ್ಣ ಸಹಕಾರ ನೀಡುವಂತೆ ಹೇಳಿದರು.

ಜೂ.30 ರಿಂದ ಜು.29 ರವರೆಗೆ ಮನೆ-ಮನೆ ಭೇಟಿ

ಭಾರತದ ಚುನಾವಣಾ ಆಯೋಗದ ನಿರ್ದೇಶನದಂತೆ ಜೂ.30 ರಿಂದ ಜು.29 ರವರೆಗೆ ಮತಗಟ್ಟೆ ಮಟ್ಟದ ಅಧಿಕಾರಿಗಳಿಂದ ಮನೆ-ಮನೆ ಭೇಟಿ ಪ್ರಕ್ರಿಯೆಗಳು ನಡೆಯಲಿವೆ. ಈ ಅವಧಿಯಲ್ಲಿ ಮತಗಟ್ಟೆ ಮಟ್ಟದ ಅಧಿಕಾರಿಗಳು ಮನೆಗೆ ಭೇಟಿ ನೀಡಿದಾಗ ಮತದಾರರ ಗಣತಿ ನಮೂನೆ ದ್ವಿ-ಪ್ರತಿಯಲ್ಲಿ ನೀಡಲಿದ್ದಾರೆ. ತಮ್ಮ ನೈಜ ಮಾಹಿತಿಯನ್ನು ಭರ್ತಿ ಮಾಡಿ ಒಂದು ಪ್ರತಿಯನ್ನು ಮತದಾರರು ಇರಿಸಿಕೊಂಡು ಸಹಿ ಮಾಡಿದ ಇನ್ನೊಂದು ಪ್ರತಿಯನ್ನು ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ನೀಡಬೇಕು.

ಕ್ಷೀರ ಪೈಲಟ್'' ಯೋಜನೆಗೆ ಸಚಿವ ಎಂ.ಬಿ.ಪಾಟೀಲ ಚಾಲನೆ

ವಿಜಯಪುರ ರೈತರ ಹೈನುಗಾರಿಕೆ ತರಬೇತಿ ಪ್ರವಾಸ

ವಿಜಯಪುರ: ಜಿಲ್ಲೆಯ ಬಬಲೇಶ್ವರ ಹಾಗೂ ತಿಕೋಟಾ ತಾಲೂಕಿನ ಆಯ್ದ 20 ಜನ ರೈತರ ತಂಡವು ತುಮಕೂರು ಜಿಲ್ಲೆಯ ತಿಪಟೂರಿನಲ್ಲಿರುವ ಅಕ್ಷಯ ಕಲ್ಪ ಕ್ಯಾಂಪಸ್‌ಗೆ ತರಬೇತಿಗೆ ತೆರಳಿದೆ.

ಬುಧವಾರ ಸಂಜೆ ತಿಪಟೂರು ಅಕ್ಷಯಕಲ್ಪ ಕ್ಯಾಂಪಸ್ ಗೆ ತೆರಳುತ್ತಿರುವ ರೈತರಿಗೆ ಶುಭಕೋರಿದ ಬಿ.ಎಲ್.ಡಿ.ಇ ಡೀಮ್ಡ್ ವಿವಿ ಸಮ ಕುಲಾಧಿಪತಿ ಡಾ.ವೈ.ಎಂ.ಜಯರಾಜ ಅವರು, ವಿಜಯಪುರ ಜಿಲ್ಲೆಯಲ್ಲಿ ಸುಸ್ಥಿರ ಹೈನುಗಾರಿಕೆ ಮತ್ತು ತೋಟಗಾರಿಕೆಯನ್ನು ಉತ್ತೇಜಿಸಲು ಬಿ.ಎಲ್.ಡಿ.ಇ ಸಂಸ್ಥೆ, ಕೃಷಿಕಲ್ಪ ಫೌಂಡೇಶನ್ ಹಾಗೂ ಅಕ್ಷಯಕಲ್ಪ ಫೌಂಡೇಶನ್‌ಗಳ ಜಂಟಿ ಆಶ್ರಯದಲ್ಲಿ ಸಚಿವ ಎಂ.ಬಿ.ಪಾಟೀಲರ ಮಾರ್ಗದರ್ಶನದಲ್ಲಿ ಈ 'ಕ್ಷೀರ ಪೈಲಟ್' ಯೋಜನೆಗೆ ಚಾಲನೆ ನೀಡಲಾಗಿತ್ತು. ಇದರನ್ವಯ ಬಬಲೇಶ್ವರ ತಾಲೂಕಿನ ನಿಡೋಣಿ, ಕುಮಠೆ ಹಾಗೂ ನಾಗರಾಳ ಮತ್ತು ತಿಕೋಟಾ ತಾಲೂಕಿನ ಜಾಲಗೇರಿ, ಡೋಕಳವಾಡಿ ಗ್ರಾಮಗಳ ಉತ್ಸಾಹಿ ರೈತರು ಈ ತರಬೇತಿಗಾಗಿ ತೆರಳಿದ್ದಾರೆ. ವೈಜ್ಞಾನಿಕ ಮತ್ತು ಸಾವಯವ ಹೈನುಗಾರಿಕೆಯಲ್ಲಿ ದೇಶದಲ್ಲೇ ಮಾದರಿ ಎನಿಸಿಕೊಂಡಿರುವ ಅಕ್ಷಯ ಕಲ್ಪ ಸಂಸ್ಥೆಯ ಆವರಣದಲ್ಲಿ ರೈತರು ಸುಧಾರಿತ ತಂತ್ರಜ್ಞಾನಗಳ ನೇರ ಪ್ರಾತ್ಯಕ್ಷಿಕೆ ಹಾಗೂ ತರಬೇತಿಯನ್ನು ಪಡೆಯಲಿದ್ದಾರೆ ಎಂದರು.

ವಿಜಯಪುರ ಅಕ್ಷಯಕಲ್ಪ ಕ್ಯಾಂಪಸ್ ಗೆ ತೆರಳುತ್ತಿರುವ ರೈತರಿಗೆ ಬಿ.ಎಲ್.ಡಿ.ಇ ಡೀಮ್ಡ್ ವಿವಿ ಸಮಕುಲಾಧಿಪತಿ ಡಾ.ವೈ.ಎಂ.ಜಯರಾಜ ಶುಭಕೋರಿ ಚಾಲನೆ ನೀಡಿದರು.

ಬಿ.ಎಲ್.ಡಿ.ಇ ಡೀಮ್ಡ್ ವಿವಿ ರಜಿಸ್ಟ್ರಾರ್ ಡಾ. ಆರ್.ವಿ.ಕುಲಕರ್ಣಿ ಮಾತನಾಡಿ, ರೈತರು ತರಬೇತಿಯಲ್ಲಿ ವೈಜ್ಞಾನಿಕ ಕೊಟ್ಟಿಗೆ ನಿರ್ವಹಣೆಯಲ್ಲಿ ಹಸುಗಳ ಆರೋಗ್ಯ, ಸ್ವಚ್ಛತೆ ಮತ್ತು ಆಧುನಿಕ ತಂತ್ರಜ್ಞಾನದ ಮೂಲಕ ಹೈನುಗಾರಿಕೆಯನ್ನು ಲಾಭದಾಯಕವಾಗಿಸುವುದು ಹೇಗೆ ಎಂಬುದನ್ನು ಮತ್ತು ಸಾವಯವ ಹಾಲು ಉತ್ಪಾದನೆಯಲ್ಲಿ ರಾಸಾಯನಿಕ ಮುಕ್ತ ಹಾಗೂ ಗುಣಮಟ್ಟದ ಹಾಲಿನ ಉತ್ಪಾದನೆಗೆ ಪೂರಕವಾದ ತರಬೇತಿ ಪಡೆದು, ತಿಪಟೂರು ಭಾಗದ ರೈತರು ಅಕ್ಷಯ ಕಲ್ಪ ಮಾದರಿಯನ್ನು ಅಳವಡಿಸಿಕೊಂಡು ಆರ್ಥಿಕವಾಗಿ ಸಬಲರಾದಂತೆ, ವಿಜಯಪುರ ಜಿಲ್ಲೆಯಲ್ಲೂ ಶ್ವೇತ ಕ್ರಾಂತಿ ಸೃಷ್ಟಿಸುವುದು ಹೇಗೆ ಎಂಬುದನ್ನು ಮಾಹಿತಿ ಪಡೆಯಲಿದ್ದಾರೆ ಎಂದರು.

ಪ್ರಸ್ತುತ ತರಬೇತಿಗೆ ತೆರಳಿರುವ 20 ರೈತರು ಅಲ್ಲಿನ ತಂತ್ರಜ್ಞಾನ, ಶೆಡ್ ನಿರ್ಮಾಣ, ಹಸುಗಳ ಆಹಾರ ಕ್ರಮ ಮೇವು ನಿರ್ವಹಣೆ, ಕರು, ಕೋಳಿ ಸಾಕಾಣಿಕೆ ಮತ್ತು ಸಾವಯುವ ಪದ್ಧತಿಯಲ್ಲಿ ವಿವಿಧ ತರಕಾರಿ ಬೆಳೆ ಬೆಳೆಯುವ ಕುರಿತು ಅಧ್ಯಯನ ಮಾಡಿ ಬರಲಿದ್ದಾರೆ. ಈ ತರಬೇತಿಯು ಜಿಲ್ಲೆಯ ಹೈನುಗಾರಿಕಾ ಕ್ಷೇತ್ರಕ್ಕೆ ಹೊಸ ದಿಕ್ಸೂಚಿ ನೀಡಲಿದ್ದು, ಮುಂಬರುವ ದಿನಗಳಲ್ಲಿ ಯುವಕರು ಸ್ವಾವಲಂಬಿ ಉದ್ಯೋಗ ಕೈಗೊಳ್ಳಲು ಪ್ರೇರಣೆಯಾಗಲಿದೆ ಎಂದರು.

ಈ ಸಂದರ್ಭದಲ್ಲಿ ಸಹಾಯಕರಜಿಸ್ಟ್ರಾರ್ ಸತೀಶ ಪಾಟೀಲ, ಕೃಷಿಕಲ್ಪ ಫೌಂಡೇಶನ್ ನ ಸಂತೋಷ ಬಿರಾದಾರ ಉಪಸ್ಥಿತರಿದ್ದರು.

ಶಾಸಕ ಯಶಂವಂತರಾಯಗೌಡಗೆ ಸಚಿವ ಸ್ಥಾನ ನೀಡಿ

ಇಂಡಿ: ಅಥಣಿ ಶಾಸಕ ಲಕ್ಷ್ಮಣ ಸವದಿ ಹಾಗೂ ಇಂಡಿ ಶಾಸಕ ಯಶಂವಂತರಾಯಗೌಡ ಪಾಟೀಲ ಅವರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ ಗಾಣಿಗ ಸಮಾಜದ ಮುಖಂಡರು ಬುಧವಾರ ಸುದ್ದಿಗೋಷ್ಠಿ ನಡೆಸಿ ಮನವಿ ಮಾಡಿಕೊಂಡಂರು.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಗಾಣಿಗ ಸಮಾಜದ ತಾಲೂಕಾ ಅಧ್ಯಕ್ಷ ಎ.ಎಸ್. ಗಾಣಿಗೇರ ಮಾತನಾಡಿ, ಗಾಣಿಗ ಸಮುದಾಯದ ರಾಜ್ಯಮಟ್ಟದ ನಾಯಕರು ಹಾಗೂ ಬೆಳಗಾವಿಯ ಹಿರಿಯ ಶಾಸಕರಾದ ಲಕ್ಷ್ಮಣ ಸವದಿ ಅವರು ಕಾಂಗ್ರೆಸ್ ಪಕ್ಷಕ್ಕೆ ಬಂದಿದ್ದರ ಪರಿಣಾಮವಾಗಿ ಬೆಳಗಾವಿ, ವಿಜಯಪುರ, ಬಾಗಲಕೋಟೆ, ಚಿಕ್ಕೋಡಿ ಭಾಗಗಳಲ್ಲಿ 25ಕ್ಕೂ ಹೆಚ್ಚು ಸ್ಥಾನವನ್ನು ಕಾಂಗ್ರೆಸ್ ಪಕ್ಷ ಗೆಲ್ಲಲು ಸಾಧ್ಯವಾಗಿದೆ. ಬಿಜೆಪಿ ತೊರೆದು ಕಾಂಗ್ರೆಸ್ ಸೇರುವ ಸಂದರ್ಭದಲ್ಲಿ ಡಿ.ಕೆ. ಶಿವಕುಮಾರ ಅವರು ನಮ್ಮ ಸರಕಾರ ರಚನೆಯಾಗುವ ಸಂದರ್ಭದಲ್ಲಿ ಉನ್ನತ ಸ್ಥಾನಮಾನ ನೀಡುವುದಾಗಿ ತಿಳಿಸಿದ್ದರು. ಹೀಗಾಗಿ ಈಗ ಅವರು ಕೊಟ್ಟ ಮಾತಿನಂತೆ ನಡೆದುಕೊಂಡು ಅವರನ್ನು ಬರುವ ಸಂಪುಟ ಪುನರ್ ರಚನೆ ಸಂದರ್ಭದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು.

ಇಂಡಿ ಮತಕ್ಷೇತ್ರದ ಶಾಸಕರಾದ ಯಶವಂತರಾಯಗೌಡ ಪಾಟೀಲ ಅವರು ಸತತವಾಗಿ ಮೂರು ಬಾರಿ ಆಯ್ಕೆಯಾಗಿದ್ದು, ಜಾತ್ಯತೀತ ನಾಯಕರಾಗಿದ್ದಾರೆ. ಅವರ ಹಿರಿತನ ಹಾಗೂ ಅವರ ದೂರ ದೃಷ್ಟಿ, ಅಭಿವೃದ್ಧಿಗೆ ಕಾರ್ಯಗಳು, ಇವೆಲ್ಲವುಗಳನ್ನು ಮನಗಂಡು ಅವರಿಗೆ ಈ ಬಾರಿ ಸಚಿವ ಸಂಪುಟದಲ್ಲಿ ಸೂಕ್ತ ಸ್ಥಾನಮಾನ ನೀಡಬೇಕು. ಎಂದರು.

ಸಮಾಜದ ಮುಖಂಡ ಸುಭಾಸ ಹಿಟ್ನಳ್ಳಿ, ಬಿ.ಎಸ್.ಅವಜಿ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಅಪ್ಪು ಕಲ್ಲೂರ, ಮಲಕಣ್ಣ ಜಂಬಗಿ, ಭೀಮನಗೌಡ ಪಾಟೀಲ, ಪ್ರದೀಪ ಉಟಗಿ ಇದ್ದರು.

ಸುದ್ದಿಗೋಷ್ಠಿಯಲ್ಲಿ ಗಾಣಿಗ ಸಮಾಜದ ತಾಲೂಕಾ ಅಧ್ಯಕ್ಷ ಎ.ಎಸ್. ಗಾಣಿಗೇರ ಮಾತನಾಡಿದರು.

ಶಾಸಕ ಸಿ.ಎಸ್.ನಾಡಗೌಡರಿಗೆ ಮಂತ್ರಿ ಮಾಡಿ| ಇಲ್ಲವೇ ರಾಜೀನಾಮೆ ಪಡೆದುಕೊಳ್ಳಿ

ಹೈಕಮಾಂಡ್‌ಗೆ ಕೈ ಕಾರ್ಯಕರ್ತರ ಎಚ್ಚರಿಕೆ

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಬ್ಲಾಕ್ ಕಾಂಗ್ರೆಸ್‌ನಿಂದ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ವಿಪಿಎಂಸಿ ಮಾಜಿ ಉಪಾಧ್ಯಕ್ಷ ವೈ.ಎಚ್.ವಿಜಯಕರ್ ಮಾತನಾಡಿದರು.

ಮುದ್ದೇಬಿಹಾಳ: ಹಿರಿತನದ ವಿಷಯ ಬಂದಾಗ ಉತ್ತರ ಕರ್ನಾಟಕದಲ್ಲಿ ಎಚ್.ಕೆ.ಪಾಟೀಲ ಅವರು ಬಿಟ್ಟರೆ ನಾಡಗೌಡರೆ ಎರಡನೆಯವರು. ಅವರನ್ನು ಕಾಂಗ್ರೆಸ್ ಹೈಕಮಾಂಡ್ ಮಂತ್ರಿ ಮಾಡಬೇಕು. ಇಲ್ಲದಿದ್ದಲ್ಲಿ ಮುದ್ದೇಬಿಹಾಳ ಮತಕ್ಷೇತ್ರದಲ್ಲಿ ಭವಿಷ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ನೆಲಕ್ಕಚ್ಚುವಂತೆ ಮಾಡುವ ಶಕ್ತಿ ಕಾರ್ಯಕರ್ತರಿಗಿದೆ ಎಂದು ಖಡಕ್ ಸಂದೇಶವನ್ನು ಇಲ್ಲಿಯ ಕಾರ್ಯಕರ್ತರು ಹೈಕಮಾಂಡ್‌ಗೆ ರವಾನಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಬ್ಲಾಕ್ ಕಾಂಗ್ರೆಸ್‌ನಿಂದ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಪಿಎಂಸಿ ಮಾಜಿ ಉಪಾಧ್ಯಕ್ಷ ವೈ.ಎಚ್. ವಿಜಯಕರ್ ಅವರು, ಶರಣ ತತ್ವದಲ್ಲಿ ನಂಬಿಕೆ ಇರಿಸಿಕೊಂಡು ಪಕ್ಷನಿಷ್ಠರಾಗಿರುವ ನಾಡಗೌಡರಿಗೆ ಸಚಿವ ಸ್ಥಾನ ನೀಡಬೇಕು. ಇಲ್ಲದಿದ್ದಲ್ಲಿ ಭವಿಷ್ಯದಲ್ಲಿ ಪಕ್ಷದ ಕಾರ್ಯಕರ್ತರು ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಹೇಳಿದರು. ಕಾಂಗ್ರೆಸ್ ಪಕ್ಷದ ಮಹಿಳಾ ಘಟಕದ ಅಧ್ಯಕ್ಷೆ ಅಕ್ಷತಾ ಶರಣಬಸ್ಸು ಚಲವಾದಿ ಮಾತನಾಡಿ, ಮತಕ್ಷೇತ್ರದಲ್ಲಿ ನೀರಾವರಿ, ಮೂಲ ಸೌಕಯ್ಯ ಸೇರಿದಂತೆ ಹಲವು ಕೆಲಸಗಳಲ್ಲಿ ಅಭಿವೃದ್ಧಿಗೆ ಆದ್ಯತೆ ಕೊಟ್ಟಿರುವ ಶಾಸಕ ನಾಡಗೌಡರಿಗೆ ಮಂತ್ರಿ ಸ್ಥಾನ ನೀಡಬೇಕು. ನಷ್ಟದಲ್ಲಿದ್ದ ಕೆಎಸ್ ಡಿಎಲ್ ನಿಗಮವನ್ನು ಲಾಭದತ್ತ ತಂದು ನಿಲ್ಲಿಸಿದ ಕೀರ್ತಿ ಅಪ್ಪಾಜಿ ನಾಡಗೌಡರಿಗೆ ಸಲ್ಲುತ್ತದೆ. ಈ ಬಾರಿ ಸಂಪುಟ ವಿಸ್ತರಣೆಯಲ್ಲಿ ನಾಡಗೌಡರಿಗೆ ಮಂತ್ರಿ ಮಾಡಬೇಕು. ಅವರು ಹಿರಿಯ ಅನುಭವಿ ರಾಜಕಾರಣಿ ಯಾಗಿದ್ದು ಸಿಎಂ ಅವರು ಶಾಸಕ ನಾಡಗೌಡರನ್ನು ಮಂತ್ರಿ ಮಾಡಬೇಕು ಎಂದು ಒತ್ತಾಯಿಸಿದರು.

ಪುರಸಭೆ ಮಾಜಿ ಅಧ್ಯಕ್ಷ ಮಹೆಬೂಬ ಗೊಳಸಂಗಿ ಮಾತನಾಡಿದರು.ಮಹಿಳಾ ನಾಯಕಿ ಸರಸ್ವತಿ ಪೀರಾಪೂರ, ಪಕ್ಷದ ಮುಖಂಡ ಸತೀಶ ಓಸ್ವಾಲ್, ರಾಯನಗೌಡ ತಾತರಡ್ಡಿ, ಸುರೇಶಗೌಡ ಪಾಟೀಲ ಇಂಗಳಗೇರಿ, ಹೆಸ್ಕಾಂ ಸಲಹಾ ಸಮಿತಿ ನಾಮ ನಿರ್ದೇಶಿತ ಸದಸ್ಯೆ ಸಿಕಂದರ್ ಜಾನ್ವೇಕರ, ಕೆ.ಯು.ಸಿ ಬ್ಯಾಂಕ್ ಉಪಾಧ್ಯಕ್ಷ ಶ್ರೀ ಕಾಂತ ಚಲವಾದಿ, ಶರಣು ದೇಗಿನಾಳ, ಲಕ್ಷ್ಮಣ ಲಮಾಣಿ, ಸಂಗನಗೌಡ ಚಲವಾದಿ, ಗುತ್ತಿಗೆದಾರ ಪಾಟೀಲ, ಯಲ್ಲಪ್ಪ ರಾಜು ನಾಯಕ, ಸಂಗನಗೌಡ ಬಿರಾದಾರ(ಜಿಟಿಸಿ), ಯಲ್ಲಪ್ಪ ನಾಯ್ಕಮಕ್ಕಳ, ಗುರುಸ್ವಾಮಿ ಬೂದಿಹಾಳಮಠ, ಸಂತೋಷ ನಾಕ್ಕೋಡಿ, ನಾಗೇಶ ಭಜಂತ್ರಿ, ಸಂಗಣ್ಣ ಮೇಲಿನಮನಿ, ಮುಖಂಡ ಶರಣಬಸ್ಸು ಚಲವಾದಿ, ಮಹ್ಮದರಫೀಕ ಶಿರೋಳ, ನೀಲಮ್ಮ ಚಲವಾದಿ, ಮಾಬುಬಿ ಬಾಗವಾನ, ರಾಮಣ್ಣ ರಾಜನಾಳ ಇದ್ದರು.

ಎಕ್ಸ್‌ಲೆಂಟ್ ಕಾಲೇಜಿನ ಗಂಗಾಧರ ವೆಟರ್ನರಿ ಸೈನ್ಸ್‌ನಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ

ವಿಜಯಪುರ: ಪ್ರತಿ ವರ್ಷವೂ ಒಂದಲ್ಲ ಒಂದು ರ‍್ಯಾಂಕ್ ಮೂಲಕ ಗುರುತಿಸಿಕೊಂಡಿರುವ ಎಕ್ಸಲಂಟ್ ವಿಜ್ಞಾನ ಪದವಿ ಪೂರ್ವ ಕಾಲೇಜು ಈ ಬಾರಿ ವೆಟರ್ನರಿ ಸೈನ್ಸ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ರ‍್ಯಾಂಕ್ ನೀಡುವ ಮೂಲಕ ಶೈಕ್ಷಣಿಕ ಕ್ಷೇತ್ರದಲ್ಲಿ ಜಿಲ್ಲೆಗೆ ಮತ್ತೊಂದು ಗರಿ ಮೂಡುವಂತೆ ಮಾಡಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಕರ್ನಾಟಕ ಸಾಮಾನ್ಯ ಅರ್ಹತಾ ಪರೀಕ್ಷೆಯಲ್ಲಿ ಗಂಗಾಧರ ಮುತ್ತಗಿ ವೆಟರ್ನರಿ ಸೈನ್ಸನಲ್ಲಿ(ಪ್ರಾ) 0.5 ರ‍್ಯಾಂಕ್ ಹಾಗೂ ಬಿಎಸ್‌ಸಿ ಅಗ್ರಿಯಲ್ಲಿ 3.5 ರ‍್ಯಾಂಕ್ ಪಡೆದುಕೊಂಡಿದ್ದಾರೆ. ಇತ್ತೀಚೆಗೆ ಪ್ರಕಟಗೊಂಡ 2025-26 ನೇ ಕೆ-ಸಿಇಟಿ ಪರೀಕ್ಷೆಯ ಫಲಿತಾಂಶದಲ್ಲಿ ತಾಂತ್ರಿಕ ದೋಷಗಳಿಂದಾಗಿ ಕೆಲವು ವಿದ್ಯಾರ್ಥಿಗಳ ಫಲಿತಾಂಶವನ್ನು ಪ್ರಕಟಿಸಲು ಸಾಧ್ಯವಾಗದೇ ಉಳಿದಿದ್ದವು.

ಅಂಥಹ ಸಂದರ್ಭದಲ್ಲಿ ಸ್ಪಾಟ್ ರ‍್ಯಾಂಕಿಂಗ್‌ನ್ನು ನೀಡುವ ಪ್ರತೀತಿ ಕೆಇಎ ಅಳವಡಿಸಿಕೊಂಡಿದ್ದು ಅದರ ಆಧಾರದ ಮೇಲೆ ರ‍್ಯಾಂಕ್ ನೀಡಲಾಗಿದ್ದು ಗಂಗಾಧರ ಮುತ್ತಗಿ 0.5 ರ‍್ಯಾಂಕ್ ಪಡೆಯುವ ಮೂಲಕ ಜಿಲ್ಲೆಯ ಇತಿಹಾಸದಲ್ಲಿಯೇ ಮೊದಲನೇ ರ‍್ಯಾಂಕ್‌ಗಿಂತಲೂ ಹೆಚ್ಚಿನ ರ‍್ಯಾಂಕ್‌ನ್ನು ಪಡೆದುಕೊಂಡಿದ್ದು ಹೆಮ್ಮೆಯ ವಿಷಯವಾಗಿದೆ.

ಇದರ ಕುರಿತು ಸಂತೋಷವನ್ನು ಹಂಚಿಕೊಂಡ ಎಕ್ಸಲಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಚೇರ್ಮನ್ ಬಸವರಾಜ್ ಕೌಲಗಿ ಕಳೆದ ಬಾರಿಯೂ ಸಹ ಅತ್ಯುತ್ತಮ ಫಲಿತಾಂಶವನ್ನು ನೀಡಿ ಎಲ್ಲರ ಮೆಚ್ಚುಗ್ಗೆಗೆ ಪಾತ್ರವಾಗಿರುವ ಎಕ್ಸಲಂಟ್ ವಿಜ್ಞಾನ ಪದವಿ ಪೂರ್ವ ಕಾಲೇಜು ಇಂದು ಐತಿಹಾಸಿಕ ಸಾಧನೆಗೆ ಸಾಕ್ಷಿಯಾಗಿದ್ದು ಸಂತಸ ತಂದಿದೆ. ಎಂದು ಹೇಳಿದರು.

ವಿಜಯಪುರ ನಗರದ ಎಕ್ಸಲಂಟ್ ವಿಜ್ಞಾನ ಪದವಿ ಪೂರ್ವ ಕಾಲೇಜು.

ಅಪ್ಪ ಗೋಡೆ ಕಟ್ಟುವವರ ಕೈಯಲ್ಲಿ ಕೆಲಸಕ್ಕೆ ಹೋಗುತ್ತಿದ್ದು ನನ್ನನ್ನು ಓದಿಸಬೇಕು ಎಂದು ಎಕ್ಸಲಂಟ್ ಗೆ ತಂದು ಸೇರಿಸಿದರು. ಅವರ ಕಷ್ಟದ ಬಗ್ಗೆ ಅರಿವಿದ್ದ ನಾನು ಇಷ್ಟ ಪಟ್ಟು ಓದುತ್ತಿದ್ದೆ. ಕಾಲೇಜಿನ ಸರ್ವರೂ ನನಗೆ ಸದಾ ಬೆಂಬಲಿಸುತ್ತಲಿದ್ದರು. ಈ ಕಾರಣದಿಂದಾಗಿಯೇ ನಾನು ಹೆಚ್ಚು ಹೆಚ್ಚು ಓದಲು ಅರಿತುಕೊಳ್ಳಲು ಸಾಧ್ಯವಾಯಿತು.

- ಗಂಗಾಧರ ಮುತ್ತಗಿ, ವಿದ್ಯಾರ್ಥಿ

ಪರಿಸರ ಸಂರಕ್ಷಣೆ ನಾಗರಿಕರ ಹೊಣೆ

ವಿಜಯಪುರ : ಪರಿಸರ ರಕ್ಷಣೆಯನ್ನೇ ಉಸಿರಾಗಿಸಿಕೊಂಡಿದ್ದ ಪರಿಸರ ಪ್ರೇಮಿ ದಿ.ಉದಯ ನಾವಲಗಿ ಅವರ ಸ್ಮರಣೆ ಹಾಗು ಪರಿಸರ ದಿನಾಚರಣೆಯನ್ನು ನನ್ನ ಗಿಡ-ನನ್ನ ಭೂಮಿ ಸಂಸ್ಥೆಯ ವತಿಯಿಂದ ಅರ್ಥಪೂರ್ಣವಾಗಿ ಆಚರಣೆ ಮಾಡುತ್ತಾ ಮುನ್ನಡೆದಿದ್ದು, ಈ ಅಭಿಯಾನದ ಅಂಗವಾಗಿ ಮಾತೋಶ್ರೀ ರಮಾಬಾಯಿ ಅಂಬೇಡ್ಕರ್‌ಪದವಿ ಮಹಾವಿದ್ಯಾಲಯದ ಆವರಣದಲ್ಲಿ 333 ಸಸಿಗಳನ್ನು ಏಕಕಾಲಕ್ಕೆ ನೆಡಲಾಯಿತು.

ಡೊಮನಾಳದಲ್ಲಿ ಹಸಿರು ಕ್ರಾಂತಿಯನ್ನೇ ಮಾಡಿ ಆ ಪ್ರದೇಶವನ್ನು ಹಸಿರು ಸಿರಿಯನ್ನಾಗಿ ಮಾಡಿರುವ ಎನ್.ಡಿ. ಪಾಟೀಲ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಪರಿಸರ ರಕ್ಷಣೆ ಸಂದೇಶ ಸಾರಿದ ಅವರು, ಪರಿಸರದ ಉಳಿವಿನಲ್ಲಿ ನಮ್ಮ ಉಳಿವು ಅಡಗಿದೆ, ಪರಿಸರ ರಕ್ಷಣೆ ಒಂದು ಕರ್ತವ್ಯ ಅಷ್ಟೇ ಅಲ್ಲ ಅದು ನಮ್ಮ ಜೀವನದ ಅವಿಭಾಜ್ಯ ಅಂಗವಾಗಬೇಕು, ಪರಿಸರ ರಕ್ಷಣೆ ಹಾಗೂ ಸಸಿ ನೆಡುವುದು ಅಪೂರ್ವ ಕಾರ್ಯ, ಈ ಕಾರ್ಯ ಕೈಗೊಂಡು ನೋಡಿ ಆತ್ಮತೃಪ್ತಿ ದೊರಕುತ್ತದೆ ಎಂದರು.

ನನ್ನ ಗಿಡ ನನ್ನ ಭೂಮಿ ಸಂಘಟನೆ ಸಂಚಾಲಕ ಬಸವರಾಜ ಬೈಚಬಾಳ ಮಾತನಾಡಿ, ನಮ್ಮ ಸಂಘಟನೆಯ ಹೆಸರಿನಂತೆಯೇ ಭೂಮಿ ಹಾಗೂ ಪರಿಸರ ರಕ್ಷಣೆ ಕಾರ್ಯವನ್ನು ನಿತ್ಯ ಕೈಗೊಳ್ಳಲಾಗುತ್ತಿದೆ, ಪರಿಸರ ರಕ್ಷಣೆಗೆ ಇನ್ನೊಂದು ಹೆಸರಾಗಿದ್ದ ದಿ.ಉದಯ ನಾವಲಗಿ ಅವರ ಸ್ಮರಣಾರ್ಥ ನೂರಾರು ಸಸಿಗಳನ್ನು ನೆಡುವ ಸಂಕಲ್ಪ ಮಾಡಲಾಗಿದೆ ಎಂದರು. ಯುವ ಮುಖಂಡ ಉಮೇಶ ಕಾರಜೋಳ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ತುಕಾರಾಮ ಚಂಚಲಕರ, ವಲಯ ತಹಸೀಲ್ದಾರ ಚನಗೊಂಡ, ಭಾಗ್ಯವಂತ, ಆರ್.ಎಫ್.ಓ ಸಂತೋಷ ಆಜೂರ, ಮಾಜಿ ಅಧ್ಯಕ್ಷ ಮಿಲಿಂದ ಚಂಚಲಕರ, ಜಿಲ್ಲಾ ಯುವ ಪರಿಷತ್ ಅಧ್ಯಕ್ಷ ಶರಣು ಸಬರದ, ಪ್ರಮುಖ ರಾಜು ಬಿರಾದಾರ,

ಗುರುರಾಜ ಕರಂಭಟನಾಳ, ಎಸ್.ಎಲ್.ಇಂಗಳೇಶ್ವರ, ಜಯರಾಮ, ಆರತಿ ಪಾಟೀಲ,ಸುಜಾತಾ ಹಿರೇಮಠ, ಚಿದಾನಂದ ಔರಂಗಾಬಾದ್, ವಿಜಯ ಭೋಸಲೆ, ಶಶಿಧರ ರೂಢಗಿ, ವಿನಾಯಕ ಕಾಳೆ, ಅಶ್ವಥ್ ರೇಬಿನಾಳ, ಯಲ್ಲಪ್ಪ ಮಾಳಿ, ಸಂಜು ಗುನ್ನಾಪೂರ, ಶಿವಪುತ್ರ ಬಣಜಿಗೇರ,ಶಿವಯೋಗಿ ವಾಲೀಕಾರ, ಶ್ರೀಶೈಲ ವಾಘಮೋರೆ, ಸಂಗಮೇಶ ಔದಿ, ಬಾಬು ಶಿರಶ್ಯಾಡ, ಡಾ.ಡಿ.ಎನ್. ಧರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿರೇಶ ಮುದುಕಾಮಠ ಸ್ವಾಗತಿಸಿದರು. ಬಸವರಾಜ ಯಾದವಾಡ ಕಾರ್ಯಕ್ರಮ ನಿರೂಪಿಸಿದರು.

ರೌಡಿಗಳ ಮನೆಗೆ ಪೊಲೀಸರ ದಿಢೀರ್‌ಭೇಟಿ| ಅಕ್ರಮ ವಾಹನ, ಮಾರಕಾಸ್ತ್ರ ಜಪ್ತಿ!

161 ರೌಡಿ ಶೀಟರ್‌ಗಳ ಮನೆ ತಪಾಸಣೆ

ವಿಶ್ವವಾಣಿ ಸುದ್ದಿಮನೆ ವಿಜಯಪುರ

ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಹಾಗೂ ರೌಡಿಸಂಗೆ ಸಂಪೂರ್ಣ ಬ್ರೇಕ್ ಹಾಕುವ ನಿಟ್ಟನಲ್ಲಿ ವಿಜಯಪುರ ಜಿಲ್ಲಾ ಪೊಲೀಸ್ ಇಲಾಖೆಯ ಅಧಿಕಾರಿಗಳು ಭರ್ಜರಿ ಕಾರ್ಯಾಚರಣೆ ನಡೆಸಿದರು.

ಜಿಲ್ಲೆಯ ಒಟ್ಟು 24 ಕಾನೂನು ಸುವ್ಯವಸ್ಥೆ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಏಕಕಾಲಕ್ಕೆ ರೌಡಿಶೀಟರ್‌ಗಳ ಮನೆಗಳ ಮೇಲೆ ವಿಶೇಷ ಪರಿಶೀಲನಾ ಭೇಟಿ ನಡೆಸಿ ಶಾಕ್ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಅವರ ಸೂಚನೆ ಮೇರೆಗೆ, ಜಿಲ್ಲೆಯ ಎಲ್ಲ ಠಾಣೆ ಮತ್ತು ವೃತ್ತ ಮಟ್ಟದಲ್ಲಿ ರಚಿಸಲಾಗಿರುವ ರೌಡಿ ನಿಗ್ರಹ ದಳ ಕಾರ್ಯಾಚರಣೆಯನ್ನು ನಡೆಸಿದರು. ರೌಡಿಗಳ ಪ್ರಸ್ತುತ ಚಟುವಟಿಕೆಗಳ ಮೇಲೆ ನಿರಂತರ ನಿಗಾ ಇಡುವ ಭಾಗವಾಗಿ ಈ ದಾಳಿ ನಡೆಸಿದ್ದರು.

ಜಿಲ್ಲಾದ್ಯಂತ ಒಟ್ಟು 161 ರೌಡಿಶೀಟರ್‌ಗಳ ಮನೆಗಳಿಗೆ ಭೇಟಿ ನೀಡಿ ಅವರ ಪ್ರಸ್ತುತ ಸ್ಥಿತಿಗತಿ ಪರಿಶೀಲಿಸಲಾಗಿದೆ. ಪರಿಶೀಲನೆ ವೇಳೆ 3 ರೌಡಿಶೀಟರ್‌ಗಳ ಬಳಿ ಮಾರಕಾಸ್ತ್ರಗಳು ಪತ್ತೆಯಾಗಿದ್ದು, ಅವುಗಳನ್ನು ವಶಪಡಿಸಿಕೊಳ್ಳಲಾಗಿದೆ. ಸೂಕ್ತ ವಿವರಣೆ ಹಾಗೂ ಅಗತ್ಯ ದಾಖಲೆಗಳಿಲ್ಲದೆ ಅಕ್ರಮವಾಗಿ ಬಳಸುತ್ತಿದ್ದ 11 ದ್ವಿಚಕ್ರ ಮತ್ತು ನಾಲ್ಕು ಚಕ್ರ ವಾಹನಗಳನ್ನು ರೌಡಿಶೀಟರ್‌ಗಳಿಂದ ವಶಕ್ಕೆ ಪಡೆಯಲಾಗಿದೆ. ಕಾನೂನು ಕ್ರಮಗಳ ಭಾಗವಾಗಿ ಒಬ್ಬ ರೌಡಿಶೀಟರ್‌ನ ಆಸ್ತಿ ಮುಟ್ಟುಗೋಲು/ವಶಪಡಿಸಿಕೊಳ್ಳುವಿಕೆ ಪ್ರಕ್ರಿಯೆಗೆ ಒಳಪಡಿಸಲಾಗಿದೆ, ತಪಾಸಣೆಗೊಳಪಟ್ಟವರಲ್ಲಿ ಸದ್ಯ 143 ರೌಡಿಶೀಟರ್ಗಳು ಸನ್ಮಾರ್ಗದಲ್ಲಿ ಅಂದರೆ ಬೇರೆ ಬೇರೆ ಉದ್ಯೋಗ/ಕೆಲಸಗಳಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

ದಾಳಿ ವೇಳೆ ಪತ್ತೆಯಾದ ಅನಧಿಕೃತ ವಸ್ತುಗಳು ಹಾಗೂ ಸೂಕ್ತ ದಾಖಲೆಗಳಿಲ್ಲದ ವಾಹನಗಳ ವಿರುದ್ಧ ಕಾನೂನು ನಿಯಮಾನುಸಾರ ಮುಂದಿನ ಕಠಿಣ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ. ಸಾರ್ವಜನಿಕರ ಶಾಂತಿ ಮತ್ತು ನೆಮ್ಮದಿಗೆ ಭಂಗ ತರುವ ರೌಡಿ ಚಟುವಟಿಕೆಗಳ ವಿರುದ್ಧ ಇಲಾಖೆಯ ಈ ನಿರಂತರ ನಿಗಾ ಮುಂದುವರೆಯಲಿದೆ ಎಂದು ಪ್ರತಿಕ್ರಿಯೆ ನೀಡಿದ್ದಾರೆ.

ವಿಜಯಪುರ ಜಿಲ್ಲಾ ಪೊಲೀಸ್ ಇಲಾಖೆಯ ಅಧಿಕಾರಿಗಳು ಭರ್ಜರಿ ಕಾರ್ಯಾಚರಣೆ ನಡೆಸಿ ರೌಡಿಶೀಟರ್‌ಗಳ ಮನೆಗಳ ಮೇಲೆ ವಿಶೇಷ ಪರಿಶೀಲನಾ ಭೇಟಿ ನಡೆಸಿ ಶಾಕ್ ನೀಡಿದರು.

ದೀರ್ಘಕಾಲದಿಂದ ಬಾಕಿ ಇದ್ದ ನ್ಯಾಯಾಲಯದ ಜಾಮೀನು ರಹಿತ ವಾರಂಟ್ ಹೊಂದಿದ್ದ 6 ರೌಡಿಶೀಟರ್‌ಗಳನ್ನು ಪತ್ತೆಹಚ್ಚಲಾಗಿದೆ, ಶಾಂತಿ ಕಾಪಾಡುವ ಒಪ್ಪಂದದ ಬಾಂಡ್ ಓವರ್‌ನಿಯಮ ಉಲ್ಲಂಘಿಸಿದ ಒಬ್ಬ ರೌಡಿಶೀಟರ್‌ವಿರುದ್ಧ ಕ್ರಮ ಜರುಗಿಸಲಾಗಿದೆ.

-ಲಕ್ಷ್ಮಣ ನಿಂಬರಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಸಮಾಚಾರ ಸಣ್ಣದಲ್ಲ

ಆಗುಂಬೆ ಘಾಟಿಯಲ್ಲಿ ಭಾರಿ ವಾಹನಗಳ ನಿಷೇಧ 15ರಿಂದ



ಶಿವಮೊಗ್ಗ: ರಾಷ್ಟ್ರೀಯ ಹೆದ್ದಾರಿ169ಎ ಆಗುಂಬೆ ಘಾಟಿಯಲ್ಲಿ ಭಾರಿ ವಾಹನಗಳ (ಜಲ್ಲಿ ಮತ್ತು ಸರಕು ಸಾಗಾಣೆ ತುಂಬಿದ ವಾಹನಗಳ) ಸಂಚಾರವನ್ನು ಜೂನ್ 15 ರಿಂದ ಮಳೆಗಾಲ ಮುಗಿಯುವವರೆಗೂ ನಿಷೇಧಿಸಿ ಪರ್ಯಾಯ ಮಾರ್ಗದಲ್ಲಿ ಸಂಚರಿಸಲು ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ಆದೇಶಿಸಿದ್ದಾರೆ. ಶಿವಮೊಗ್ಗದಿಂದ ಹೊಸನಗರ-ಮಾಸ್ತಿಕಟ್ಟೆ ಮಾರ್ಗವಾಗಿ ಕುಂದಾಪುರ ಮತ್ತು ಉಡುಪಿಗೆ ಸಂಪರ್ಕ ಕಲ್ಪಿಸುವ ಹುಲಿಕಲ್ ಘಾಟಿಯಲ್ಲಿ ಭೂಕುಸಿತ ಸಂಭವಿಸಿದ ನಂತರ ತಾತ್ಕಾಲಿಕ ರಕ್ಷಣಾತ್ಮಕ ಕಾಮಗಾರಿ ಪೂರ್ಣಗೊಳ್ಳದಿರುವುದರಿಂದ ರಾಷ್ಟ್ರೀಯ ಹೆದ್ದಾರಿ 169ಎ ತೀರ್ಥಹಳ್ಳಿ-ಮಲ್ಪೆ-ಉಡುಪಿ ರಸ್ತೆಯ ಆಗುಂಬೆ ಘಾಟಿಯಲ್ಲಿ ಭಾರಿ ವಾಹನಗಳ ಹೆಚ್ಚಿನ ಓಡಾಟವಿದ್ದು, ಮುಂದಿನ ದಿನಗಳಲ್ಲಿಯೂ ಇದು ಮುಂದುವರಿದಲ್ಲಿ ಅಲ್ಲಲ್ಲಿ ರಸ್ತೆಯ ಬದಿಯ ಭೂಕುಸಿತ ಆಗುವ, ಅಫಘಾತವಾಗುವ ಮತ್ತು ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುವ ಸಂಭವವಿದೆ. ಅರೋಗ್ಯ ಸಮಸ್ಯೆಯ ಕುರಿತು ಮಣಿಪಾಲ್, ಉಡುಪಿ, ಮಂಗಳೂರಿಗೆ ಹೋಗುವ ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಮತ್ತು ಹಾವೇರಿ ಜಿಲ್ಲೆಯ ನಾಗರಿಕರಿಗೆ ಇರುವ ಸಂಪರ್ಕ ಬಂದಾದರೆ ನಾಲ್ಕು ಜಿಲ್ಲೆಯ ನಾಗರೀಕರಿಗೆ ತುಂಬಾ ತೊಂದರೆಯಾಗುವ ಹಿನ್ನಲೆಯಲ್ಲಿ ಈ ಆದೇಶ ಹೊರಡಿಸಲಾಗಿದೆ. ಪರ್ಯಾಯ ಸಂಚಾರ ಮಾರ್ಗಗಳಾದ ತೀರ್ಥಹಳ್ಳಿ-ಉಡುಪಿ ಕಡೆಗೆ ಹೋಗುವ ವಾಹನಗಳು ತೀರ್ಥಹಳ್ಳಿ-ನಗರ-ನಾಗೋಡಿ-ಕೊಲ್ಲೂರು-ಕುಂದಾಪುರ-ಉಡುಪಿ ಮತ್ತು ತೀರ್ಥಹಳ್ಳಿ-ಶೃಂಗೇರಿ-ಕೆರೆಕಟ್ಟೆ-ಬಜಗೋಳಿ-ಕಾರ್ಕಳ-ಉಡುಪಿ ಮಾರ್ಗವಾಗಿ ಸಂಚರಿಸುವುದು. ಉಡುಪಿ-ತೀರ್ಥಹಳ್ಳಿ ಕಡೆಗೆ ಹೋಗುವ ವಾಹನಗಳು ಉಡುಪಿ- ಕುಂದಾಪುರ-ಕೊಲ್ಲೂರು-ನಾಗೋಡಿ-ನಗರ - ತೀರ್ಥಹಳ್ಳಿ ಮತ್ತು ಕಾರ್ಕಳ-ಬಜಗೋಳಿ-ಕೆರೆಕಟ್ಟೆ-ಶೃಂಗೇರಿ-ತೀರ್ಥಹಳ್ಳಿ ಮಾರ್ಗವಾಗಿ ಸಂಚರಿಸುವಂತೆ ಆದೇಶದಲ್ಲಿ ಸೂಚಿಸಲಾಗಿದೆ.

ಕರ್ನಾಟಕದ ಅಭಿವೃದ್ಧಿಗಾಗಿ ಮನವಿಯಲ್ಲಿರುವ ಯೋಜನೆಗಳಿಗೆ ಅನುಮೋದನೆ ನೀಡಲು ಪಿಎಂಗೆ ಸಿಎಂ ಒತ್ತಾಯ

ಮೋದಿ ಮುಂದೆ 18 ಅಂಶಗಳ ಮನವಿ ಸಲ್ಲಿಸಿದ ಡಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದೆಹಲಿ ಪ್ರವಾಸದಲ್ಲಿರುವ ಸಿಎಂ ಡಿ.ಕೆ. ಶಿವಕುಮಾರ್ ಅವರು ಪ್ರಧಾನಿ ನರೇಂದ್ರ ಅವರನ್ನು ಭೇಟಿಯಾಗಿ 18 ಅಂಶ ಗಳಿಗೆ ಕೇಂದ್ರ ಸರಕಾರ ಕೂಡಲೇ ಪ್ರತಿಕ್ರಿಯಿಸಬೇಕು. ಕರ್ನಾಟಕದ ಅಭಿವೃದ್ಧಿಗೆ ಈ ಯೋಜನೆ ಗಳಿಗೆ ಅನುಮೋದನೆ ನೀಡಬೇಕು ಎಂದು ಮನವಿ ಸಲ್ಲಿಸಿದ್ದಾರೆ.

ಮೊದಲ ಬಾರಿ ಭೇಟಿಯಾದ ಸಮಯದಲ್ಲಿ 18 ಅಂಶಗಳನ್ನು ಪ್ರಸ್ತಾಪಿಸಿರುವ ಅವರು, ರಾಜ್ಯದ ನೀರಾವರಿ, ಮೂಲಸೌಕರ್ಯ, ಸಾರಿಗೆ, ಆರೋಗ್ಯ ಮತ್ತು ಪ್ರಾದೇಶಿಕ ಅಭಿವೃದ್ಧಿ ಯೋಜನೆಗಳಿಗೆ ಅಗತ್ಯ ಅನುಮೋದನೆ ಹಾಗೂ ಆರ್ಥಿಕ ನೆರವು ನೀಡುವಂತೆ ಮನವಿ ಮಾಡಿದ್ದಾರೆ. ಪತ್ರದಲ್ಲಿ ಮೇಕೆದಾಟು ಯೋಜನೆಗೆ ಶೀಘ್ರ ಅನುಮೋದನೆ ನೀಡುವಂತೆ ಒತ್ತಾಯಿಸಿರುವ ಮುಖ್ಯಮಂತ್ರಿ, ಕೃಷ್ಣಾ ಜಲ ವಿವಾದ ನ್ಯಾಯಮಂಡಳಿ-2 ತೀರ್ಪನ್ನು ಕೇಂದ್ರ ಸರಕಾರ ಗಜೆಟ್‌ನಲ್ಲಿ ಪ್ರಕಟಿಸದಿರುವುದರಿಂದ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ. ಆದ್ದರಿಂದ ಕೂಡಲೇ ಗೆಜೆಟ್ ಹೊರಡಿಸಲು ಮನವಿ ಮಾಡಿದ್ದಾರೆ.

ಇದರೊಂದಿಗೆ 2023-24ರ ಕೇಂದ್ರ ಬಜೆಟ್‌ನಲ್ಲಿ ಘೋಷಿಸಲಾಗಿದ್ದ 5,300 ಕೋಟಿ ಮೊತ್ತದ ಭದ್ರಾ ಮೇಲ್ದಂಡೆ ಯೋಜನೆಗೆ ಇದುವರೆಗೆ ಅನುದಾನ ಬಿಡುಗಡೆಯಾಗಿಲ್ಲ ಎಂದು ಗಮನ ಸೆಳೆದಿದ್ದಾರೆ. ಮಹದಾಯಿ ನದಿ ತಟದ ಕಳಸಾ-ಬಂಡೂರಿ ನಾಲಾ ಯೋಜನೆಗೆ ಅರಣ್ಯ ಮತ್ತು ವನ್ಯಜೀವಿ ಅನುಮತಿ ನೀಡುವಂತೆ ಕೂಡ ಮನವಿ ಮಾಡಿದ್ದಾರೆ. ಬೆಂಗಳೂರು ನಗರಕ್ಕೆ ವಿಶೇಷ ಅನುದಾನವಾಗಿ 26,000 ಕೋಟಿ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಕರ್ನಾಟಕವು ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದರೂ, ವಿವಿಧ ಯೋಜನೆಗಳ ಅನುಮೋದನೆ ಮತ್ತು ಅನುದಾನ ಬಿಡುಗಡೆಗಳಲ್ಲಿ ಆಗುತ್ತಿರುವ ವಿಳಂಬದಿಂದ ರಾಜ್ಯದ ಅಭಿವೃದ್ಧಿಗೆ ಅಡ್ಡಿಯಾಗುತ್ತಿದೆ ಎಂದು ಮುಖ್ಯಮಂತ್ರಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಕೇಂದ್ರ ಸರಕಾರ ಈ ಬೇಡಿಕೆಗಳನ್ನು ಸಕಾರಾತ್ಮಕ ವಾಗಿ ಪರಿಗಣಿಸಿ ಸಹಕಾರ ನೀಡಿದರೆ ಸಹಕಾರಿ ಒಕ್ಕೂಟ ವ್ಯವಸ್ಥೆ ಮತ್ತಷ್ಟು ಬಲಗೊಳ್ಳಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪ್ರಧಾನಮಂತ್ರಿ ನರೇಂದ್ರ ಅವರನ್ನು ಭೇಟಿಯಾದರು.

18 ಸಾವಿರ ಕೋಟಿ ನೆರವಿಗೆ ನಿರ್ಮಲಾಗೆ ಮನವಿ

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾಗಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಕರ್ನಾಟಕಕ್ಕೆ 2026-27ನೇ ಸಾಲಿನಲ್ಲಿ ಹೆಚ್ಚುವರಿ 18,800 ಕೋಟಿ ರು. ನೆರವು ನೀಡುವಂತೆ ಮನವಿ ಮಾಡಿದ್ದಾರೆ. 16ನೇ ಹಣಕಾಸು ಆಯೋಗದ ಶಿಫಾರಸುಗಳ ಅನ್ವಯ ಕರ್ನಾಟಕದ ತೆರಿಗೆ ಹಂಚಿಕೆ ಪಾಲು ಶೇ.3.647ರಿಂದ ಶೇ.4.131ಕ್ಕೆ ಏರಿಕೆಯಾಗಿರುವುದು ಸ್ವಾಗತಾರ್ಹ. ಜಿಎಸ್‌ಟಿ ವಂಚನೆ ತಡೆ ಕ್ರಮಗಳಿಂದ 278 ಕೋಟಿ ನಕಲಿ ಐಟಿಸಿ ಹಾಗೂ 4,250 ಕೋಟಿ ಕೃತಕ ವಹಿವಾಟು ಪತ್ತೆಯಾಗಿದೆ ಎಂದು ತಿಳಿಸಿದ್ದಾರೆ. ರಾಜ್ಯದ ಮೂಲಸೌಕರ್ಯ ಅಭಿವೃದ್ಧಿಗೆ 5,000 ಕೋಟಿ, ಯುಐಡಿಎಫ್ ಯೋಜನೆಯಲ್ಲಿ 5,000 ಕೋಟಿ ಹಾಗೂ ಆರ್‌ಐಡಿಎಫ್‌ನಲ್ಲಿ 3,500 ಕೋಟಿ ಹೆಚ್ಚುವರಿ ಅನುದಾನ ಕೋರಿದ್ದಾರೆ.

ಮನವಿಯಲ್ಲಿರುವ 18 ಅಂಶಗಳು

1. ಮೇಕೆದಾಟು ಯೋಜನೆಗೆ ಅನುಮೋದನೆ ನೀಡಿ
2. ಕೃಷ್ಣಾ ಜಲ ವಿವಾದ ನ್ಯಾಯಮಂಡಳಿ-2 ತೀರ್ಪು ಗಜೆಟ್ ಪ್ರಕಟಿಸಲು ಕ್ರಮವಹಿಸಿ
3. ಭದ್ರಾ ಮೇಲ್ದಂಡೆ ಯೋಜನೆಗೆ ಘೋಷಿತ 5,300 ಕೋಟಿ ಶೀಘ್ರ ಬಿಡುಗಡೆಗೊಳಿಸಿ
4. ಮಹದಾಯಿ ಕಳಸಾ-ಬಂಡೂರಿ ನಾಲಾ ಯೋಜನೆಗೆ ಅರಣ್ಯ ಮತ್ತು ವನ್ಯಜೀವಿ ಅನುಮತಿ ನೀಡಿ
5. ಪಿಎಂಕೆಎಸ್‌ಐ, ಎಫ್‌ಎಂಬಿಎಪಿ ಯೋಜನೆಯಲ್ಲಿ 11,122 ಕೋಟಿ ಮೌಲ್ಯದ ನೀರಾವರಿ ಯೋಜನೆಗಳಿಗೆ ಅನುಮೋದನೆ ನೀಡಿ
6. ನದಿ ಜೋಡಣೆ ಯೋಜನೆಗಳಲ್ಲಿ ಕರ್ನಾಟಕಕ್ಕೆ 40-45 ಟಿಎಂಸಿ ನೀರಿನ ನ್ಯಾಯಯುತ ಪಾಲು ಸಿಗುವಂತೆ ಕ್ರಮವಹಿಸಬೇಕು
7. 15ನೇ ಹಣಕಾಸು ಆಯೋಗದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಾಕಿಯಿರುವ 2,860 ಕೋಟಿ ಬಿಡುಗಡೆ
8. ಬೆಂಗಳೂರಿಗೆ 26,000 ಕೋಟಿ ವಿಶೇಷ ಅನುದಾನ ಒದಗಿಸಿ
9. ಬೆಂಗಳೂರು ಉಪಗ್ರಹ ನಗರ ರಿಂಗ್ ರಸ್ತೆ ಯೋಜನೆಗೆ ಕೇಂದ್ರ ಸಚಿವ ಸಂಪುಟದ ಅನುಮೋದನೆಗೆ ಮನವಿ
10. ಬೆಂಗಳೂರು ಉಪನಗರ ರೈಲು ಯೋಜನೆಗೆ ನಿಧಿ ಬಿಡುಗಡೆ ಹಾಗೂ ಬೆಂಗಳೂರು-ಮುಂಬೈ ಹೈಸ್ಪೀಡ್ ರೈಲು ಮಾರ್ಗಕ್ಕೆ ಅನುಮೋದನೆ
11. ಬೆಂಗಳೂರು ಮೆಟ್ರೋ ಹಂತ-3 ಹಾಗೂ ಡಬಲ್ ಡೆಕ್ಕರ್ ಫ್ಲೈಓವರ್ ಯೋಜನೆಗೆ ಅನುಮೋದನೆ ನೀಡಿ
12. ಬೆಂಗಳೂರು ಮೆಟ್ರೋ ಹಂತ-2 ಯೋಜನೆಯ ಪರಿಷ್ಕೃತ ವೆಚ್ಚಕ್ಕೆ ಒಪ್ಪಿಗೆಗೆ ಕ್ರಮವಹಿಸಿ
13. ಮೆಟ್ರೋ ಹಂತ-3ಎ (ಸರ್ಜಾಪುರ-ಹೆಬ್ಬಾಳ) ಯೋಜನೆಗೆ ಶೀಘ್ರ ಅನುಮೋದನೆ.
14. ಬಾಕಿಯಿರುವ ರಾಷ್ಟ್ರೀಯ ಹೆದ್ದಾರಿ ಯೋಜನೆಗಳಿಗೆ ಅನುಮೋದನೆ ಮತ್ತು ಉನ್ನತೀಕರಣ.
15. 2,000 ಮೆಗಾವ್ಯಾಟ್ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಅರಣ್ಯ, ಪರಿಸರ ಮತ್ತು ವನ್ಯಜೀವಿ ಅನುಮತಿ.
16. ಕಲ್ಯಾಣ ಕರ್ನಾಟಕಕ್ಕೆ ವಾರ್ಷಿಕ 25,000 ಕೋಟಿ ರು. ವಿಶೇಷ ಆರ್ಥಿಕ ನೆರವು
17. ತ್ತರ ಕರ್ನಾಟಕದ ಪ್ರತಿ ಜಿಲ್ಲೆಯಲ್ಲಿ ಒಂದು ಸಾರ್ವಜನಿಕ ವಲಯದ ಸಂಸ್ಥೆ ಸ್ಥಾಪನೆಗೆ ಮನವಿ
18. ರಾಯಚೂರಿನಲ್ಲಿ ಏಮ್ಸ್ ಸ್ಥಾಪಿಸುವ ಮೂಲಕ ಕಲ್ಯಾಣ ಕರ್ನಾಟಕದ ಆರೋಗ್ಯ ಸೇವೆ ಸುಧಾರಣೆಗೆ ಒತ್ತಡ

ಮಧ್ಯಾಹ್ನ 12ರಿಂದ ಸಂಜೆ 5ರವರೆಗೆ ಸಾರ್ವಜನಿಕರಿಗೆ ಮೂಕಾಂಬಿಕೆ ದರ್ಶನ ರದ್ದು

ಕೊಲ್ಲೂರಿಗೆ ಸಿಎಂ ವಿಜಯ್ ಭೇಟಿ ಇಂದು

ಉಡುಪಿ: ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಶುಕ್ರವಾರ ಕೊಲ್ಲೂರು ದೇವಸ್ಥಾನಕ್ಕೆ ಭೇಟಿ ನೀಡುತ್ತಿರುವ ಹಿನ್ನೆಲೆ ಮಧ್ಯಾಹ್ನ 12ರಿಂದ ಸಂಜೆ 5 ಗಂಟೆ ಯವರೆಗೆ ಭಕ್ತರಿಗೆ ದರ್ಶನ ನಿಷೇಧಿಸಲಾಗಿದೆ.

ಜೂನ್ 12ರಂದು ತಮಿಳುನಾಡು ಸಿಎಂ ವಿಜಯ್ ಕೊಲ್ಲೂರು ಮೂಕಾಂಬಿಕೆ ದೇವಿಯ ದರ್ಶನ ಪಡೆಯಲಿದ್ದಾರೆ. ಈ ಹಿನ್ನೆಲೆ ಮುಖ್ಯಮಂತ್ರಿಗಳು ಸಂಚರಿಸುವ ಮಾರ್ಗದಲ್ಲಿ, ದೇವಸ್ಥಾನದ ಸುತ್ತಮುತ್ತ ಬಿಗಿ ಬಂದೋಬಸ್ತ್ ಕಲ್ಪಿಸಲಾಗಿದೆ. ವಿಜಯ್ ದೇವಸ್ಥಾನ ಭೇಟಿ ಬಳಿಕ ಹಿಂತಿರುಗಲಿದ್ದಾರೆ. ಯಾವುದೇ ಸಾರ್ವಜನಿಕ ಭೇಟಿಯ ಕಾರ್ಯಕ್ರಮ ಇಲ್ಲ ಎಂದು ಪೊಲೀಸ್ ಇಲಾಖೆ ತಿಳಿಸಿದೆ.

ವಾಹನ ಸಂಚಾರದ ಕಾನ್ವಾಯ್ ಹಾದಿ, ಪ್ರವೇಶ ದ್ವಾರ ಅಥವಾ ದೇವಸ್ಥಾನದ ಆವರಣದಲ್ಲಿ ಗುಂಪು ಸೇರಬಾರದು, ಜನಸಂದಣಿ ಮಾಡಬಾರದು. ವಿಶೇಷ ಬಂದೋಬಸ್ತ್ ಇರುವುದರಿಂದ ಮಧ್ಯಾಹ್ನ 12ರಿಂದ ಸಂಜೆ 5ರವರೆಗೆ ಭಕ್ತಾದಿಗಳು ದರ್ಶನ ತಪ್ಪಿಸುವುದು ಸೂಕ್ತ.

ತಮಿಳುನಾಡು ಸಿಎಂ ಭೇಟಿ ಹಿನ್ನೆಲೆ ದರ್ಶನದ ವೇಳೆ ಅನಾನುಕೂಲವಾಗ ಬಹುದು ಎಂದು ಉಡುಪಿ ಜಿಲ್ಲಾ ಪೊಲೀಸ್ ಇಲಾಖೆ ಪ್ರಕಟಣೆ ಹೊರಡಿಸಿದೆ.

ಅಪ್ರಾಪ್ತೆ ಮೇಲೆ ದೌರ್ಜನ್ಯ: ನಾಲ್ವರ ಬಂಧನ

ಚಿಕ್ಕಮಗಳೂರು: ಬ್ಲ್ಯಾಕ್‌ಮೇಲ್ ಮಾಡಿ ಅತ್ಯಾಚಾರ ಎಸಗಿದ ಆರೋಪದ ಮೇಲೆ ಐವರ ವಿರುದ್ಧ ಪ್ರಕರಣ ದಾಖಲಾಗಿದ್ದು, ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ. ಮತ್ತೊಬ್ಬ ಆರೋಪಿ ನ್ಯಾಯಾಲಯದ ಎದುರು ಶರಣಾಗಿದ್ದಾನೆ. ಈ ಘಟನೆ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಗೋಣಿಬೀಡು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬೆಳಕಿಗೆ ಬಂದಿದೆ.

ಪೊಲೀಸರ ಮಾಹಿತಿ ಪ್ರಕಾರ, ಪದವಿ ಪೂರ್ವ ಕಾಲೇಜಿಗೆ ತೆರಳುತ್ತಿದ್ದ ವಿದ್ಯಾರ್ಥಿನಿಯನ್ನು ಪುಸಲಾಯಿಸಿ ಬೇಲೂರು ಮೂಲದ ಯುವಕನೊಬ್ಬ ಅತ್ಯಾಚಾರ ನಡೆಸಿದ್ದ. ಈ ಸಂಬಂಧ ಆತನ ವಿರುದ್ಧ ಈ ಹಿಂದೆಯೇ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದು, ಆತ ಜೈಲು ಸೇರಿದ್ದಾನೆ. ಅತ್ಯಾಚಾರಕ್ಕೊಳಗಾದ ಅಪ್ರಾಪ್ತೆ ಬಳಿಕ ಗಂಡು ಮಗುವಿಗೆ ಜನ್ಮ ನೀಡಿದ್ದಳು. ಈ ನಡುವೆ, ಜೈಲು ಸೇರಿರುವ ಯುವಕ ಹಾಗೂ ಅಪ್ರಾಪ್ತೆಯ ಫೋಟೋಗಳನ್ನು ಮೊಬೈಲ್‌ನಲ್ಲಿ ಸಂಗ್ರಹಿಸಿಕೊಂಡಿದ್ದ ಮೂಡಿಗೆರೆ ತಾಲೂಕಿನ ಗ್ರಾಮವೊಂದರ ಐವರು ಆರೋಪಿಗಳು, ಆ ಫೋಟೊಗಳನ್ನು ದುರುಪಯೋಗಪಡಿಸಿಕೊಂಡು ಅಪ್ರಾಪ್ತೆಯನ್ನು ಬ್ಲ್ಯಾಕ್‌ಮೇಲ್ ಮಾಡಿದ್ದಾರೆ. ಬಳಿಕ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವುದಾಗಿ ಅಪ್ರಾಪ್ತೆ ತನ್ನ ದೂರಿನಲ್ಲಿ ಆರೋಪಿಸಿದ್ದಾಳೆ.

ಅರ್ಚಕ, ಸಿಬ್ಬಂದಿ ಸೇರಿ ಐವರ ವಿರುದ್ಧ ಪ್ರಕರಣ ದಾಖಲು | ಭಕ್ತರಲ್ಲಿ ಆತಂಕ

ಮೇಲುಕೋಟೆ ದೇಗುಲದಲ್ಲಿ ಕಳ್ಳತನ

ಮಂಡ್ಯ: ಐತಿಹಾಸಿಕ ಹಾಗೂ ಪ್ರಸಿದ್ಧ ಪುಣ್ಯ ಕ್ಷೇತ್ರವಾದ ಮಂಡ್ಯ ಜಿಲ್ಲೆಯ ಮೇಲು ಕೋಟೆಯ ಯೋಗನರಸಿಂಹಸ್ವಾಮಿ ದೇವಸ್ಥಾನದಲ್ಲಿ ಕಳ್ಳತನ ನಡೆದಿರುವ ಶಂಕೆ ವ್ಯಕ್ತವಾಗಿದೆ. ದೇವಸ್ಥಾನದ ಅರ್ಚಕರು ಹಾಗೂ ಸಿಬ್ಬಂದಿ ವಿರುದ್ಧವೇ ಮೇಲುಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೇವಸ್ಥಾನದ ಹುಂಡಿಯಲ್ಲಿದ್ದ ಚಿನ್ನ, ಬೆಳ್ಳಿ ಹಾಗೂ ನಗದು ಕಳ್ಳತನವಾಗಿದೆ ಎಂದು ಆರೋಪಿಸಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಶೀಲಾ ಅವರು ಪೊಲೀಸರಿಗೆ ದೂರು ನೀಡಿದ್ದಾರೆ. ಹಿಂದೆ ನಡೆದಿದ್ದ ಪ್ರಸಿದ್ಧ ವಜ್ರಾಂಗಿ ಆಭರಣ ಕಳ್ಳತನದ ಬಳಿಕ, ಇಷ್ಟೊಂದು ದೊಡ್ಡ ಪ್ರಮಾಣದ ಕಳ್ಳತನದ ಶಂಕೆ ವ್ಯಕ್ತವಾಗಿರುವುದು ಭಕ್ತರಲ್ಲಿ ತೀವ್ರ ಆತಂಕ ಮೂಡಿಸಿದೆ.

ಸಿಸಿ ಕ್ಯಾಮೆರಾ ರಹಸ್ಯ: ದೇವಾಲಯದಲ್ಲಿ ಕಿಡಿಗೇಡಿಗಳು ಪದೇ ಪದೇ ಸಿಸಿ ಕ್ಯಾಮೆರಾ ಗಳನ್ನು ಕೆಡಿಸುತ್ತಿದ್ದ ಹಿನ್ನೆಲೆ ಆಡಳಿತ ಮಂಡಳಿಯು ಅತ್ಯಂತ ಗೌಪ್ಯವಾಗಿ ರಹಸ್ಯ ಸಿಸಿ ಕ್ಯಾಮೆರಾಗಳನ್ನು ಅಳವಡಿಸಿತ್ತು. ಈ ರಹಸ್ಯ ಕ್ಯಾಮೆರಾಗಳನ್ನು ಅಳವಡಿಸಿರುವ ವಿಚಾರ ಕೇವಲ ದೇವಾಲಯದ ಆಡಳಿತ ಸಿಬ್ಬಂದಿಗೆ ಮಾತ್ರ ತಿಳಿದಿತ್ತು. ಆದರೆ, 2026 ರ ಜನವರಿ 12 ರಂದು ಈ ರಹಸ್ಯ ಸಿಸಿ ಕ್ಯಾಮೆರಾವನ್ನು ಸಹ ಕಿಡಿಗೇಡಿಗಳು ಕೆಡಿಸಿದ್ದಾರೆ. ಆಡಳಿತ ಮಂಡಳಿಗೆ ಮಾತ್ರ ಗೊತ್ತಿದ್ದ ಈ ರಹಸ್ಯ ಕ್ಯಾಮೆರಾ ಹಾಳು ಮಾಡಿರುವುದು, ಕಳ್ಳತನದ ಉದ್ದೇಶದಿಂದಲೇ ದೇವಸ್ಥಾನದ ಒಳಗಿನ ಸಿಬ್ಬಂದಿ ಹಾಗೂ ಅರ್ಚ ಕರೇ ಈ ಕೃತ್ಯ ಎಸಗಿದ್ದಾರೆ ಎಂಬ ಬಲವಾದ ಶಂಕೆಗೆ ಕಾರಣವಾಗಿದೆ.

ತಡವಾಗಿ ಬೆಳಕಿಗೆ ಬಂದ ದೂರು: ಜನವರಿ 12 ರಂದು ಈ ಕೃತ್ಯ ನಡೆದ ಬೆನ್ನಲ್ಲೇ ದೇವಸ್ಥಾನದ ಇಒ ಶೀಲಾ ಅವರು ಸಂಬಂಧಪಟ್ಟ ಸಿಬ್ಬಂದಿಗೆ ನೋಟಿಸ್ ಜಾರಿ ಮಾಡಿ ವಿವರಣೆ ಕೇಳಿದ್ದರು. ಆದರೆ, ನೋಟಿಸ್‌ಗೆ ಸಿಬ್ಬಂದಿ ಕಡೆಯಿಂದ ಯಾವುದೇ ಸರಿಯಾದ ಉತ್ತರ ಬಾರದ ಹಿನ್ನೆಲೆಯಲ್ಲಿ, ಇಒ ಅವರು ತಡವಾಗಿ ಮೇಲುಕೋಟೆ ಪೊಲೀಸರಿಗೆ ಅಧಿಕೃತ ದೂರು ನೀಡಿದ್ದಾರೆ. ಸದ್ಯ ಮೇಲುಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಯನ್ನು ತೀವ್ರಗೊಳಿಸಿದ್ದಾರೆ. ಒಳಗಿನವರೇ ಈ ಕೃತ್ಯದಲ್ಲಿ ಭಾಗಿಯಾಗಿದ್ದಾರಾ ಅಥವಾ ಇದರ ಹಿಂದೆ ಬೇರೆ ಜಾಲವಿದೆಯಾ ಎಂಬುದು ತನಿಖೆಯಿಂದ ಹೊರಬರಬೇಕಿದೆ.



ಯಾರ‍್ಯಾರ ವಿರುದ್ಧ ಕೇಸ್?

ದೇಗುಲದ ಹುಂಡಿ ಹಣ, ಆಠಭರಣಗಳ ಕಳವು ಆರೋಪದಲ್ಲಿ ದೇವಸ್ಥಾನದ ಇಒ ಶೀಲಾ ಅವರ ದೂರಿನನ್ವಯ ಪೊಲೀ ಸರು ಐವರು ಪ್ರಮುಖರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಶ್ರೀಧರ್ (ಪಾರು ಪತ್ತೆಗಾರ), ನಾರಾ ಯಣ ಭಟ್ಟ (ಅರ್ಚಕ), ತಿರುವೆಂಗಡ ಚಾರ್ (ಪರಿಚಾರಕ), ಗಂಗಾ ಧರ್ ಮತ್ತು ಬಸವರಾಜ್ (ಕಾವಲು ಗಾರರು) ವಿರುದ್ಧ ಕೇಸ್ ದಾಖಲಾಗಿದೆ.

ವಿಬಿಜಿ-ರಾಮ್‌ಜಿಯಲ್ಲಿ ವೇತನ ಅನುಪಾತ ಕನಿಷ್ಠ 80:20ಕ್ಕೆ ಹೆಚ್ಚಿಸಿ: ಖಂಡ್ರೆ

ಉದ್ಯೋಗಕ್ಕೆ 60 ದಿನದ ಬಿಡುವು ಸರಿಯಲ್ಲ

ಬೆಂಗಳೂರು: ಗ್ರಾಮೀಣ ಜನರಿಗೆ ಉದ್ಯೋಗ ಖಾತ್ರಿ ಒದಗಿ ಸುವ ವಿ ಬಿ ಜಿ ರಾಮ್ ಜಿ ವೇತನ ಅನುಪಾತವನ್ನು ಕನಿಷ್ಠ 80:20ಕ್ಕಾದರೂ ಹೆಚ್ಚಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯುಪಿಎ ಸರಕಾರ 2006ರಲ್ಲಿ ಜಾರಿ ಮಾಡಿದ ನರೇಗಾದಲ್ಲಿ ಒದಗಿಸಲಾಗುವ ಉದ್ಯೋಗಕ್ಕೆ ನೀಡುವ ಕೂಲಿಯ 90ರಷ್ಟು ಹಣವನ್ನು ಕೇಂದ್ರ ಸರಕಾರ ನೀಡುತ್ತಿತ್ತು, ರಾಜ್ಯ ಸರಕಾರಗಳು ಕೇವಲ 10ರಷ್ಟು ಭರಿಸುತ್ತಿದ್ದವು. ಆದರೆ ಈಗ ಬಿಜೆಪಿ ಸರಕಾರ ಜಾರಿ ಮಾಡುತ್ತಿರುವ ವಿಬಿ ಜಿ ರಾಮ್ ಜಿಯಲ್ಲಿ ಕೇಂದ್ರ ಸರಕಾರ 60:40 ಅನುಪಾತದಲ್ಲಿ ಹಣ ಒದಗಿಸುತ್ತಿದ್ದು, ಇದು ರಾಜ್ಯ ಸರಕಾರಗಳಿಗೆ ಹೊರೆಯಾಗುತ್ತದೆ. ಆದ್ದರಿಂದ ಈ ಅನುಪಾತವನ್ನು ಈ ಹಿಂದಿನಂತೆ 90:10 ಮುಂದುವರಿಸಬೇಕು ಅಥವಾ 80:20ಕ್ಕಾದರೂ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಇದರೊಂದಿಗೆ ವರ್ಷದಲ್ಲಿ 60 ದಿನಗಳ ಕಾಲ ಉದ್ಯೋಗ ನೀಡುವುದಿಲ್ಲ ಎಂಬ ಕೇಂದ್ರ ಸರಕಾರದ ನಿಲುವು ಸರಿಯೂ ಅಲ್ಲ, ಸಮರ್ಥನೀಯವೂ ಅಲ್ಲ. ಆಧುನಿಕ ಯುಗದಲ್ಲಿ ಕೃಷಿ ಕಾರ್ಯಕ್ಕೆ ಯಂತ್ರೋಪಕರಣಗಳು ಬಂದಿದ್ದು, ಬಹುತೇಕ ಗ್ರಾಮೀಣ ಭೂರಹಿತ ಕೂಲಿ ಕಾರ್ಮಿಕರಿಗೆ ಉದ್ಯೋಗ ಸಿಗುತ್ತಿಲ್ಲ, ಹೀಗಾಗಿ ಅವರಿಗೆ ಆಸರೆಯಾಗಿರುವ ಉದ್ಯೋಗ ಖಾತ್ರಿಗೆ ರಜೆ ನೀಡುವ ಪ್ರಸ್ತಾಪ ಕೈಬಿಡಬೇಕು ಎಂದರು. 28 ಮತ್ತು 29ರಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅಧ್ಯಕ್ಷತೆಯಲ್ಲಿ ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರ ಸಭೆ ನಡೆಯಲಿದ್ದು, ಈ ಸಭೆಯಲ್ಲಿ ತಾವು ವೇತನ ಅನುಪಾತ ಹೆಚ್ಚಿಸುವಂತೆ ಹಾಗೂ 60 ದಿನಗಳ ಬಿಡುವು ಪ್ರಸ್ತಾಪ ಕೈಬಿಡುವಂತೆ ಆಗ್ರಹಿಸುವುದಾಗಿ ತಿಳಿಸಿದರು.

ಹೈಕಮಾಂಡ್ ಬಾಗಿಲಿನಲ್ಲಿ ಕಾಡಿ, ಬೇಡಿ, ಅತ್ತು ಕರೆದು ಸಿಎಂ ಸೀಟು ಗಿಟ್ಟಿಸಿಕೊಂಡ ಡಿಕೆಶಿ

ಹನಿಮೂನ್ ಪೀರಿಯಡ್ ಕೂಡ ಕೊಡುತ್ತಿಲ್ಲ

ಬೆಂಗಳೂರು: ಕಸದ ಟೆಂಡರ್‌ನಲ್ಲಿ 10 ಸಾವಿರ ಕೋಟಿ ಕಿಕ್ ಬ್ಯಾಕ್ ಆರೋಪ ವಿಚಾರ ಸಂಬಂಧ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಹಾಗೂ ಸಿಎಂ ಡಿ.ಕೆ.ಶಿವಕುಮಾರ್ ನಡುವಣ ವಾಕ್ಸಮರ ತೀವ್ರಗೊಂಡಿದೆ.

ಅಶೋಕ ಕಸ ಮಾಫಿಯಾ ಗ್ಯಾಂಗ್‌ನ ವಕ್ತಾರ. ನಾನು ಸಿಎಂ ಆಗಿರುವುದನ್ನು ಸಹಿಸಲಾಗದೇ ಅಸೂಯೆ ರಾಜಕೀಯ ಮಾಡ್ತಿದ್ದಾರೆ ಎಂದು ಮುಖ್ಯಮಂತ್ರಿ ಹೇಳಿರುವ ಸಂಬಂಧ ಆರ್. ಅಶೋಕ ತಿರುಗೇಟು ನೀಡಿದ್ದಾರೆ. ಹೈಕಮಾಂಡ್ ಬಾಗಿಲಿನಲ್ಲಿ ಕಾಡಿ-ಬೇಡಿ, ಅತ್ತು- ಕರೆದು ಸಿಎಂ ಸೀಟು ಗಿಟ್ಟಿಸಿಕೊಂಡ ಡಿಕೆಶಿಗೆ ವಿರೋಧ ಪಕ್ಷಗಳು ಕನಿಷ್ಠ ಹನಿಮೂನ್ ಪೀರಿ ಯಡ್ ಕೂಡ ಕೊಡ್ತಿಲ್ಲ ಅಂತಾ ಲೇವಡಿ ಮಾಡಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅಶೋಕ, ಸಿಎಂ ಡಿ.ಕೆ.ಶಿವಕುಮಾರ್ ಅವರೇ, ಹೌದು, ನಾನು ಏಜೆಂಟ್ ಆಗಿಯೇ ಮಾತನಾಡುತ್ತಿದ್ದೇನೆ! ಆದರೆ ನಿಮ್ಮ ತರಹ ಯಾವುದೋ ಮಾಫಿಯಾ ಹಿತಾಸಕ್ತಿ ಕಾಯುವ ಕಮಿಷನ್ ಏಜೆಂಟ್ ಆಗಿ ಅಲ್ಲ. ಕರ್ನಾಟಕದ ಏಳೂವರೆ ಕೋಟಿ ಕನ್ನಡಿಗರ ಹಕ್ಕಿಗಾಗಿ, ಬೆಂಗಳೂರಿನ ಒಂದೂವರೆ ಕೋಟಿ ನಾಗರಿಕರ ಧ್ವನಿಯಾಗಿ ನಿಂತಿರುವ ಜನತಾ ಏಜೆಂಟ್ ನಾನು. ವಿಪಕ್ಷ ನಾಯಕನಾಗಿ ನಿಮ್ಮ ಲೂಟಿ-ದಂಧೆ ಪ್ರಶ್ನಿಸುವುದು ನನ್ನ ಸಂವಿಧಾನಬದ್ಧ ಕರ್ತವ್ಯ, ಅದಕ್ಕೆ ಯಾರ ಅಪ್ಪಣೆಯೂ ಬೇಕಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹೈಮಾಂಡ್ ಬಾಗಿಲಲ್ಲಿ ಕಾಡಿ-ಬೇಡಿ ಸಿಎಂ ಸೀಟು: ಹೈಕಮಾಂಡ್ ಬಾಗಿಲಲ್ಲಿ ಕಾಡಿ-ಬೇಡಿ, ಅತ್ತು-ಕರೆದು, ಕೊನೆಗೂ ಸಿಎಂ ಸೀಟು ಗಿಟ್ಟಿಸಿಕೊಂಡಿರುವ ತಮಗೆ ಪ್ರತಿಪಕ್ಷಗಳು ಕನಿಷ್ಠ 'ಹನಿಮೂನ್ ಪೀರಿಯಡ್' ಕೂಡ ಕೊಡ್ತಿಲ್ಲವಲ್ಲ ಅನ್ನೋ ಹತಾಶೆ, ಭಯ, ಆತಂಕ ನನಗೆ ಅರ್ಥವಾಗುತ್ತದೆ. ಆದರೆ ನಿಮ್ಮ ಸ್ವಂತ ಪಕ್ಷದ ಶಾಸಕರೇ ದಿನಬೆಳಗಾದರೆ ಮಾಧ್ಯಮಗಳ ಮುಂದೆ ನಿಮ್ಮ ವಿರುದ್ಧ ಅಸಮಾಧಾನದ ಜಾಗಟೆ ಬಾರಿಸುತ್ತಾ, ದೆಹಲಿಗೆ ದಂಡೆತ್ತಿ ಹೋಗುತ್ತಿರುವಾಗ ನಿಮಗೆ ಹನಿಮೂನ್ ಪೀರಿಯಡ್ ಎಲ್ಲಿಂದ ಸಿಗಬೇಕು ಡಿ.ಕೆ.ಶಿವಕುಮಾರ್ ಅವರೇ? ನಿಮ್ಮ ಮನೆಯಲ್ಲೇ ಬೆಂಕಿ ಉರಿಯುತ್ತಿರುವಾಗ ನನ್ನ ಮೇಲೆ ರಾಜಕೀಯ ಗೂಬೆ ಕೂರಿಸಬೇಡಿ ಎಂದಿದ್ದಾರೆ.

ಇಬ್ಬರು ಗ್ರಾಂಡ್‌ಮಾಸ್ಟರ್‌ಗಳನ್ನು ರೂಪಿಸಿದ ಪಾಡಿಯ ತಾಯಿ-ತಂದೆಯರ ತ್ಯಾಗದ ಕಥೆ

ದಂತಕಥೆಗಳ ಹಿಂದೆ ಕಥೆಯಾದವರು!

ಸಾಧಾರಣ ಕುಟುಂಬದಿಂದ ಬಂದ ಒಬ್ಬ ಬಾಲಕ ಇಂದು ಭಾರತೀಯ ಚೆಸ್ ಲೋಕದ ಮುಖವಾಗಿ ಹೊರಹೊಮ್ಮಿದ್ದಾನೆ. ಆ ಬಾಲಕನೇ **ಆರ್. ಪ್ರಜ್ಞಾನಂದ.** ಅವನ ಸಾಧನೆಗಳು ಕೇವಲ ವೈಯಕ್ತಿಕ ಗೆಲುವುಗಳಲ್ಲ, ಭಾರತೀಯ ಚೆಸ್ ಆರ್ಥಿಕತೆಯನ್ನೇ ಬದಲಾಯಿಸಿದ ಮೈಲುಗಲ್ಲುಗಳಾಗಿವೆ.

5. ಜೀವನ ಬದಲಿಸಿದ ತಿರುವು. ಆ ಸಹಾಯದಿಂದ ಚೆಸ್ ಪ್ರಯಾಣ ಮುಂದುವರಿದು, ಅಪಾರ ಜಾಗತಿಕ ಮನ್ನಣೆ ದೊರೆಯಿತು
4. ಸಿಮೆಂಟ್ ಕಂಪನಿಯಿಂದ ನೆರವು. ಕುಟುಂಬ ಚೆಸ್ ನಿಲ್ಲಿಸಲು ತೀರ್ಮಾನಿಸಿ ದಾಗ ಆರ್ಥಿಕ ಸಹಾಯಕ್ಕೆ ಮುಂದಾಯಿತು
3. ತಾಯಿಯ ಏಕಾಂಗಿ ಹೋರಾಟ. ನಾಗಲಕ್ಷ್ಮೀ ಪ್ರತಿದಿನ 1ಕಿಮೀ ನಡೆದು, 2 ಗಂಟೆ ಬಸ್ ಪ್ರಯಾಣ ಮಾಡಿ ಮಕ್ಕಳನ್ನು ಕೋಚಿಂಗ್‌ಗೆ ಕರೆದೊಯ್ಯುತ್ತಿದ್ದರು.
2. ಆರ್ಥಿಕ ಸಮಸ್ಯೆ. ತಂದೆಯ ಆದಾಯ ತರಬೇತಿ, ಪ್ರವಾಸ, ಟೂರ್ನಮೆಂಟ್‌ಗಳ ವೆಚ್ಚಕ್ಕೆ ಸಾಲುತ್ತಿರಲ್ಲಿಲ್ಲ.
1. 2016ರಲ್ಲಿ ಪ್ರಜ್ಞಾನಂದ ಚೆಸ್ ವೃತ್ತಿ ಜೀವನವನ್ನು ನಿಲ್ಲಿಸುವ ನಿರ್ಧಾರ.

ಪ್ರಮುಖ ಸಾಧನೆಗಳು

- 7ನೇ ವಯಸ್ಸಿನಲ್ಲಿ ರಾಷ್ಟ್ರೀಯ ಚೆಸ್ ಚಾಂಪಿಯನ್
- ಏಷ್ಯನ್ ಅಂಡರ್-8 ಚಾಂಪಿಯನ್ (ಶ್ರೀಲಂಕಾ)
- 10 ವರ್ಷ 10 ತಿಂಗಳು: ಇಂಟರ್‌ನ್ಯಾಷನಲ್ ಮಾಸ್ಟರ್
- 12 ವರ್ಷ 10 ತಿಂಗಳು: ಗ್ರ್ಯಾಂಡ್ ಮಾಸ್ಟರ್ (ವಿಶ್ವದ ಕಿರಿಯರಲ್ಲಿ ಒಬ್ಬ)
- ಗರಿಷ್ಠ ರೇಟಿಂಗ್: 2785
- ಅದಾನಿ ಗುಂಪಿನ ಜತೆ ದೀರ್ಘಾವಧಿ ಒಪ್ಪಂದ
- ವಾರ್ಷಿಕ ಆದಾಯ: ₹ 5-7 ಕೋಟಿ
- ಜುಡಿತ್ ಪೋಲ್ಗರ್ ಅವರ ಇಪ್ಪತ್ತೇಳು ವರ್ಷಗಳ ದಾಖಲೆ ಮುರಿದರು

ಚೆಸ್ ಆಟಗಾರರ ಆದಾಯ ದರ ಕಾರ್ಡ್ ಭಾರತ

ದೊಮ್ಮರಾಜು ಗುಕೇಶ್
(ಟಾಪ್ ಗ್ರ್ಯಾಂಡ್‌ಮಾಸ್ಟರ್)
ವಾರ್ಷಿಕ ಪಾಲುದಾರಿಕೆ
₹1 - ₹2 ಕೋಟಿ
ಸಾಮಾಜಿಕ ಮಾಧ್ಯಮ ರೀಲ್ಸ್
₹3 - ₹6 ಲಕ್ಷ

ಆರ್. ಪ್ರಜ್ಞಾನಂದ
ವಾರ್ಷಿಕ ಪಾಲುದಾರಿಕೆ
₹1 - ₹2 ಕೋಟಿ
(ಟಾಪ್ ಗ್ರ್ಯಾಂಡ್‌ಮಾಸ್ಟರ್)
ರೀಲ್ಸ್: ₹1.5 - ₹3 ಲಕ್ಷ

ದಿವ್ಯಾ ದೇಶಮುಖ್
(ಮಹಿಳಾ ಪ್ರತಿಭೆ, ನಾಗಪುರ)
ವಾರ್ಷಿಕ ಆದಾಯ
₹40 - ₹70 ಲಕ್ಷ
ರೀಲ್ಸ್: ₹2 - ₹4 ಲಕ್ಷ

ಮಧ್ಯಮ ಶ್ರೇಯಾಂಕದ ಗ್ರ್ಯಾಂಡ್‌ಮಾಸ್ಟರ್‌ಗಳು
ವಾರ್ಷಿಕ ಆದಾಯ
₹10 - ₹25 ಲಕ್ಷ

ಬೆನ್ನೆಲುಬಾದ ಪೋಷಕರು

ಭಾರತೀಯ ಚೆಸ್ ಇತಿಹಾಸದಲ್ಲಿ ಆರ್. ಪ್ರಜ್ಞಾನಂದ ಮತ್ತು ವೈಶಾಲಿ ಅವರು ಸೃಷ್ಟಿಸಿರುವ ಅಲೆ ಸಾಮಾನ್ಯವಾದುದಲ್ಲ. ಇವರ ಈ ಅಪ್ರತಿಮ ಸಾಧನೆಯು ಕೇವಲ ಪ್ರತಿಭೆಯ ಫಲವಲ್ಲ, ಬದಲಾಗಿ ಇವರ ಪೋಷಕರಾದ ರಮೇಶ್ ಬಾಬು ಮತ್ತು ನಾಗಲಕ್ಷ್ಮಿ ಅವರ ಜೀವನಪೂರ್ತಿ ಮಾಡಿದ ಅಗಾಧ ತ್ಯಾಗದ ಪ್ರತೀಕವಾಗಿದೆ. ಮಧ್ಯಮ ವರ್ಗದ ಕುಟುಂಬದ ಸಂಕಷ್ಟಗಳ ನಡುವೆಯೂ, ಮಕ್ಕಳ ಕನಸನ್ನು ನನಸಾಗಿಸಲು ಈ ದಂಪತಿಗಳು ನಡೆಸಿದ ಹೋರಾಟವು ಪ್ರತಿಯೊಬ್ಬರಿಗೂ ಸ್ಫೂರ್ತಿಯಾಗಿದೆ. ತಂದೆ ರಮೇಶ್ ಬಾಬು ಅವರು ಸಹಕಾರಿ ಬ್ಯಾಂಕ್‌ನಲ್ಲಿ ಉದ್ಯೋಗಿಯಾಗಿದ್ದರೂ, ಬಾಲ್ಯದಲ್ಲಿ ತಮಗೆ ಬಾಧಿಸಿದ್ದ ಪೋಲಿಯೋದಿಂದಾಗಿ ಅವರು ದೈಹಿಕ ಮಿತಿಗಳನ್ನು ಹೊಂದಿದ್ದರು. ಆರ್ಥಿಕವಾಗಿ ಸವಾಲಿನ ಪರಿಸ್ಥಿತಿಯಲ್ಲಿದ್ದರೂ, ಮಕ್ಕಳ ಪ್ರತಿಭೆಯನ್ನು ಗುರುತಿಸಿದ ಅವರು, ಆರ್ಥಿಕ ಮುಗ್ಗಟ್ಟು ತಮ್ಮ ಮಕ್ಕಳ ಭವಿಷ್ಯಕ್ಕೆ ಅಡ್ಡಿಯಾಗದಂತೆ ನೋಡಿಕೊಂಡರು. ಮತ್ತೊಂದೆಡೆ, ತಾಯಿ ನಾಗಲಕ್ಷ್ಮಿ ಅವರ ಪಾತ್ರ ಅತೀವವಾದದ್ದು. ಅವರು ಚೆಸ್ ಆಟದ ತಾಂತ್ರಿಕ ಅಂಶಗಳನ್ನು ಅಥವಾ ಕಾಯಿಗಳ ಚಲನೆಯನ್ನು ಅರಿಯದಿದ್ದರೂ, ಮಕ್ಕಳ ತರಬೇತಿಯಲ್ಲಿನ ಅಗತ್ಯಗಳನ್ನು ಪೂರೈಸುವಲ್ಲಿ ಅವರು ಎಂದಿಗೂ ಹಿಂದೆ ಬೀಳಲಿಲ್ಲ.

ಚೆಸ್ ಆರಂಭದ ಕಥೆ

ಹಿರಿಯ ಸಹೋದರಿ ವೈಶಾಲಿ ಕಾರ್ಟೂನ್ ಚಾನೆಲ್‌ಗಳ ಗೀಳನ್ನು ಹೊಂದಿದ್ದಳು. ಅವಳನ್ನು ಅದರಿಂದ ದೂರವಿಡಲು ಪೋಷಕರು ಅವಳನ್ನು ಚೆಸ್, ಚಿತ್ರಕಲೆ ಮತ್ತು ಯೋಗ ತರಗತಿಗಳಿಗೆ ಸೇರಿಸಿದರು. ಚದುರಂಗ ಫಲಕ ಕೆಲಸ ಮಾಡಿತು. ಅದು ಹೊಸ ಸಮಸ್ಯೆಯನ್ನೂ ಕೂಡ ಸೃಷ್ಟಿ ಸಿತು. ಕೇವಲ 2 ವರ್ಷ ವಯ ಸ್ಸಿನ ಅವಳ ಕಿರಿಯ ಸಹೋದರ ನೆಲದ ಮೇಲೆ ತೆವಳುತ್ತಾ ಹೋಗಿ ತರಗತಿಗಳನ್ನು ಅಡ್ಡಿಪಡಿಸುತ್ತಿದ್ದ. ಸ್ಥಳೀಯ ತರ ಬೇತುದಾರ ತ್ಯಾಗರಾಜನ್ ವೈಶಾಲಿ ಜತೆ ಪ್ರಜ್ಞಾನಂದನಿಗೂ ತರಬೇತಿ ನೀಡಲು ಆರಂಭಿಸಿ ದರು. ಆಟವಾಡುತ್ತಲೇ ಚೆಸ್‌ಬೋರ್ಡ್ ಮೇಲೆ ಪಾರಮ್ಯ ಸಾಧಿಸಿದ ಅಕ್ಕ-ತಮ್ಮ ಈಗ ವಿಶ್ವವನ್ನೇ ನಿಬ್ಬೆರಗಾಗಿಸಿದ್ದಾರೆ.

ಜಾಹೀರಾತು ರಾಯಭಾರಿ

ಲಂಕಾದಲ್ಲಿ ನಡೆಯಲಿದ್ದ ಏಷ್ಯನ್ ಅಂಡರ್-8 ಚಾಂಪಿಯನ್‌ಶಿಪ್‌ಗೆ ಹೋಗಲು ಪ್ರಜ್ಞಾನಂದ ಪೋಷಕರ ಬಳಿ ಹಣವಿರಲಿಲ್ಲ. ಸಿಮೆಂಟ್ ಕಂಪೆನಿಯೊಂದರ ನೆರವಿನಿಂದ ಈ ಟೂರ್ನಮೆಂಟ್‌ನಲ್ಲಿ ಭಾಗವಹಿಸಿದ್ದ ಪ್ರಜ್ಞಾನಂದ ಚಾಂಪಿಯನ್ ಆದರು. ಮುಂದೆ ಐಟಿಸಿ ಕಂಪೆನಿ ತನ್ನ ಶೈಕ್ಷಣಿಕ ಉತ್ಪನ್ನಗಳಿಗೆ ಪ್ರಜ್ಞಾನಂದ ಮತ್ತು ಅವರ ಸಹೋದರಿ ವೈಶಾಲಿ ಅವರನ್ನು ರಾಯಭಾರಿಗಳಾಗಿ ನೇಮಿಸಿಕೊಂಡಿತು. ಈಗ ಅದಾನಿ ಗುಂಪಿನ ಜತೆ ದೀರ್ಘಾವಧಿ ಒಪ್ಪಂದಕ್ಕೆ ಸಹಿ ಹಾಕಿರುವ ಪ್ರಜ್ಞಾನಂದ ತಮ್ಮ ಚೆಸ್ ಬದುಕು ಮತ್ತು ಅದರ ಮಾರುಕಟ್ಟೆಗಾಗಿಯೇ ವಿಶೇಷ ತಂಡವನ್ನು ಹೊಂದಿದ್ದಾರೆ.

ವಿಶ್ವವಾಣಿ ಬೆಂಗಳೂರು 12-06-2026 ಶುಕ್ರವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಭಾವುಕತೆ

ಕೋಪದ ಮಡಿಕೆ

ಒಬ್ಬ ಯುವಕನಿಗೆ ಅತಿಯಾದ ಕೋಪ. ಸಣ್ಣ ವಿಷಯಕ್ಕೂ ಸಿಡಿದೇಳುತ್ತಿದ್ದ. ನಂತರ ತನ್ನ ಕೋಪದ ಬಗ್ಗೆ ಪಶ್ಚಾತ್ತಾಪಪಡುತ್ತಿದ್ದ. ಈ ಸ್ವಭಾವದಿಂದ ಬೇಸತ್ತು, ಒಬ್ಬ ಜೆನ್ ಗುರುವಿನ ಬಳಿ ಬಂದು, ಗುರುಗಳೇ, ನನ್ನ ಕೋಪ ನಿಯಂತ್ರಿಸಲು ನನಗೊಂದು ದಾರಿ ತೋರಿಸಿ ಎಂದು ಬೇಡಿಕೊಂಡ. ಗುರು ಅವನಿಗೆ ಒಂದು ಮಣ್ಣಿನ ಪಾತ್ರೆ ಕೊಟ್ಟು, ಇಂದಿನಿಂದ ನಿನಗೆ ಕೋಪ ಬಂದಾಗ ಯಾರ ಮೇಲೂ ಕಿರುಚಬೇಡ. ತಕ್ಷಣ ನಿನ್ನ ಕೋಣೆಗೆ ಹೋಗಿ, ಈ ಪಾತ್ರೆಯೊಳಗೆ ಜೋರಾಗಿ ಕೂಗಿ ನಿನ್ನ ಕೋಪ ಹೊರಹಾಕು. ಆಮೇಲೆ ಬಂದು ನನ್ನನ್ನು ನೋಡು ಎಂದ.

ಮರುದಿನ ಯುವಕನಿಗೆ ತಾಯಿಯ ಮೇಲೆ ತೀವ್ರ ಕೋಪ ಬಂತು. ಅವನು ಆ ಮಣ್ಣಿನ ಪಾತ್ರೆಯೊಳಗೆ ಜೋರಾಗಿ ಕೂಗಿದ. ಹಾಗೆ ಕೂಗಿದ ನಂತರ ಅವನ ಮನಸ್ಸು ಹಗುರವಾಯಿತು. ಓಡುತ್ತಾ ಗುರುವಿನ ಬಳಿ ಬಂದು, ಗುರುಗಳೇ, ನಿಮ್ಮ ಉಪಾಯ ಕೆಲಸ ಮಾಡಿತು!ಎಂದ. ಗುರು ಮುಗುಳ್ನಕ್ಕು ಆ ಪಾತ್ರೆಯನ್ನು ತೆಗೆದುಕೊಂಡು ಕೆಳಗೆ ಹಾಕಿ ಒಡೆದುಹಾಕಿದ. 'ನೋಡು ನಿನ್ನ ಕೋಪ ನಾಶವಾಯಿತು' ಎಂದ. ಕೋಪ, ಆತಂಕಗಳೆಲ್ಲ ಮನಸ್ಸಿನ ತಾತ್ಕಾಲಿಕ ಸ್ಥಿತಿ. ಆ ಭಾವನೆಯಿಂದ ದೂರ ನಿಂತು ಗಮನಿಸಿದರೆ, ಅವು ತಾವಾಗಿಯೇ ಕರಗಿ ಹೋಗುತ್ತವೆ.

ಸುತ್ತಮುತ್ತ

ಅತೀ ಎತ್ತರದ ಮರ

ಭೂಮಿಯ ಮೇಲಿನ ಅತ್ಯಂತ ಎತ್ತರದ ಮರ ಎಲ್ಲಿದೆ ನಿಮಗೆ ಗೊತ್ತೆ? ಹೈಪರಿಯನ್ ಎಂದು ಕರೆಯಲ್ಪಡುವ ಈ ಮರ ಕ್ಯಾಲಿಫೋರ್ನಿಯಾದ ರೆಡ್‌ವುಡ್ ರಾಷ್ಟ್ರೀಯ ಉದ್ಯಾನವನದಲ್ಲಿ ಇದೆ. ಆದರೆ ಇದು ನೋಡುಗರಿಗೆ ಲಭ್ಯವಿಲ್ಲ. ಹೈಪರಿಯನ್ ಮರವನ್ನು ಹುಡುಕುತ್ತ ಈ ಪ್ರದೇಶಕ್ಕೆ ಭೇಟಿ ನೀಡಿರುವ ಸಂಶೋಧಕರು ಈಗಾಗಲೇ ಅದರ ಸುತ್ತಲಿನ ಸಸ್ಯವರ್ಗವನ್ನು ಹಾನಿಗೊಳಿಸಿದ್ದಾರೆ. ಅದರ ಆವಾಸಸ್ಥಾನದೊಂದಿಗೆ ಈ ಮರವನ್ನು ರಕ್ಷಿಸುವ ಮಾರ್ಗವಾಗಿ ಹೈಪರಿಯನ್ ಸ್ಥಾನವನ್ನು ರಹಸ್ಯವಾಗಿಡಲಾಗಿದೆ. ಕ್ಯಾಲಿಫೋರ್ನಿಯಾ ಸ್ಟೇಟ್ ಪಾರ್ಕ್ ಪ್ರಕಾರ, ಕರಾವಳಿ ರೆಡ್‌ವುಡ್ ಜಾತಿಯ ಈ ಮರ ಎತ್ತರ ಅಂದಾಜು 379 ಅಡಿ. ಬೃಹತ್ ಆದರೂ ಇದು ಸಾಕಷ್ಟು ದುರ್ಬಲ. ಯಾಕೆಂದರೆ ಇದರ ಬೇರುಗಳು ಆಳವಿಲ್ಲ.

ಹನಿ ಹನಿ ಕವಿತೆ

ಅಮ್ಮನ ಗೆರೆಗಳು

ಅಮ್ಮಾ ನಿನ್ನ ಹೊಟ್ಟೆಯ ಮೇಲೆ
ಗೆರೆಗಳ ಮಾಲೆ
ಏನಿದು ಅಂದಳು ಬಾಲೆ
ಮಾತೆ ಹೇಳಿದಳು ಮಗೂ
ಇದು ನಿನ್ನ ಚಿತ್ತಾರದ ಮಾಲೆ
ತಾಯ್ತನದ ಓಲೆ

• ಸಿದ್ದೇಶ್ ಸಿದ್ದನಮಠ

ಮಾತುಗೀತೆ

ಶ್ರದ್ಧೆಯಿಲ್ಲದ ಕೆಲಸ

ಯಾವ ಕೆಲಸ ಮಾಡಿದರೂ ಶ್ರದ್ಧೆಯಿಂದ ಮಾಡಬೇಕು. ಶ್ರದ್ಧೆ ಇಲ್ಲದೆ ಮಾಡಿದರೆ ಏನಾಗುತ್ತದೆ ಎಂಬುದನ್ನು ಭಗವದ್ಗೀತೆಯಲ್ಲಿ ಶ್ರೀಕೃಷ್ಣ ತಿಳಿಸುತ್ತಾನೆ- 'ಅಶ್ರದ್ಧಯಾ ಹುತಂ ದತ್ತಂ ತಪಸ್ತಪ್ತಂ ಕೃತಂ ಚ ಯತ್, ಅಸದಿತ್ಯುಚ್ಯತೇ ಪಾರ್ಥ ನ ಚ ತತ್ಪ್ರೇತ್ಯ ನೋ ಇಹ'. ಅಂದರೆ, ಅಶ್ರದ್ಧೆಯಿಂದ ಮಾಡಿದ ಹವನ, ದಾನ, ತಪಸ್ಸು, ಸ್ತುತಿ, ನಮಸ್ಕಾರ ಮೊದಲಾದ ಕ್ರಿಯೆಗಳು ಅಸತ್ ಯೋಗ್ಯವಾದದ್ದು. ಅಂತಹ ಕರ್ಮಕ್ಕೆ ಪರದಲ್ಲಿಯೂ ಫಲವಿಲ್ಲ, ಇಹದಲ್ಲಿಯೂ ಇಲ್ಲ. ಅರೆ ಮನಸ್ಸಿನಿಂದ ಮಾಡಿದ ಕೆಲಸಕ್ಕೆ ಫಲವಾದರೂ ಎಲ್ಲಿಂದ ಬಂದೀತು? ಫಲವಿಲ್ಲದ ಕೆಲಸಕ್ಕೆ ಬಾಸ್ ಯಾಕೆ ತಾನೆ ಸಂಬಳ ಕೊಡುತ್ತಾನೆ?

ಮಡಿಕೆಯಂತೆ ಗೂಡುಕಟ್ಟುವ

ಕುಂಬಾರ ಕಣಜ

ಹೆಣ್ಣು ಕಣಜವು ತನ್ನ ದವಡೆಗಳು ಮತ್ತು ಮುಂಭಾಗದ ಕಾಲುಗಳಿಂದ ಮಣ್ಣನ್ನು ಕೆರೆದು, ನೀರು ಮತ್ತು ತನ್ನ ಬಾಯಿಯ ಲಾಲಾರಸದೊಂದಿಗೆ ಬೆರೆಸಿ ಮಣ್ಣಿನ ಚೆಂಡನ್ನು ನಿರ್ಮಿಸುತ್ತವೆ.

• ಸಂತೋಷ್ ರಾವ್ ಪೆರ್ಮುಡ

ನಮ್ಮ ಹಳ್ಳಿಗಳ ಮತ್ತು ತೋಟದ ಮನೆಗಳ ಗೋಡೆಗಳಲ್ಲಿ ಅಲ್ಲಲ್ಲಿ ಸಣ್ಣ ಉಂಡೆಯಾಕಾರದ ಗೂಡುಗಳು ಅಲ್ಲಲ್ಲಿ ಕಾಣಲು ಸಿಗುತ್ತವೆ. ಇವುಗಳನ್ನು ಸ್ಥಳಿಯ ಭಾಷೆಯಲ್ಲಿ ಕುಲ್ಡಿಗೂಡು ಎಂದು ಕರೆಯುತ್ತಾರೆ. ಪ್ರಾದೇಶಿಕವಾಗಿ ತಾಯಂದಿರು ತಮ್ಮ ಮಕ್ಕಳಿಗೆ ಇವುಗಳ ಗೂಡನ್ನು ತೋರಿಸಿ ಕುಲ್ಡಿಯ ಗೂಡು (ಕುಲ್ಡಿ ಗೂಡು) ಎಂದೂ ಕರೆಯುತ್ತಾರೆ. ಹಳ್ಳಿಗಳಲ್ಲಿ ಇವು ಹೇರಳವಾಗಿ ಎಲ್ಲೆಡೆ ಕಾಣಲು ಸಿಗುತ್ತವೆ. ಪಟ್ಟಣಗಳಲ್ಲಿ ಇವು ಕಾಣಸಿಗುವುದು ತುಸು ಅಪರೂಪ. ಇವುಗಳನ್ನು ಕುಂಬಾರ ಕಣಜ ಎಂದೂ ಕರೆಯುತ್ತಾರೆ. ಇವುಗಳನ್ನು ಆಂಗ್ಲ ಭಾಷೆಯಲ್ಲಿ ಪಾಟರ್ ಕಣಜ, ಮೇಸನ್ ಕಣಜ ಎನ್ನುತ್ತಾರೆ.

ಕುಂಬಾರ ಕಣಜಗಳು (Potter wasp) ಮಣ್ಣು ಮತ್ತಿತರ ವಸ್ತುಗಳನ್ನು ಉಪಯೋಗಿಸಿಕೊಂಡು ಸುಂದರವಾದ ಮಡಿಕೆಯ ಆಕಾರದಲ್ಲಿ ಗೂಡನ್ನು ರಚಿಸುತ್ತವೆ. ಈ ಗೂಡನ್ನು ಹತ್ತಿರದಿಂದ ನೋಡಿದರೆ ಕುಂಬಾರನು ಕೈಚಳಕ ತೋರಿ ತಯಾರಿಸಿದ ಸಣ್ಣ ಮಡಿಕೆಯ ಆಕಾರದಲ್ಲಿ ಇರುತ್ತದೆ. ಕುಂಬಾರ ಕಣಜಗಳು ವೆಸ್ಪಿಡೇ ಕುಟುಂಬ ಮತ್ತು ಯುಮೆನಿನೇ ಉಪಕುಟುಂಬದ ಹೈಮೆನೊಪ್ಟೆರಾ ವರ್ಗಕ್ಕೆ ಸೇರಿವೆ. ಪ್ರಪಂಚದಾದ್ಯಂತ ಇವುಗಳ ಸುಮಾರು 3794 ಜಾತಿಗಳಿದ್ದರೆ, ನಮ್ಮ ದೇಶದಲ್ಲಿ 189 ಜಾತಿಯ ಕುಂಬಾರ ಕಣಜಗಳು ಕಂಡುಬರುತ್ತವೆ. ಇವು ಮನೆಯ ಗೋಡೆ ಅಥವಾ ಛಾವಣಿ, ಕಿಟಕಿ ಇತ್ಯಾದಿ ಎಲ್ಲೆಂದರಲ್ಲಿ ತಮ್ಮ ಸಂತಾನೋತ್ಪತ್ತಿಗಾಗಿ ಮತ್ತು ಮಕ್ಕಳ ಪಾಲನೆಗಾಗಿ ಸಣ್ಣ ಮಣ್ಣಿನ ಮಡಿಕೆಗಳನ್ನು ಅಂಟಿಸಿದಂತೆ ರಚಿಸುವುದರಿಂದ ಇವುಗಳನ್ನು ಕುಂಬಾರ ಕಲೆಯಿರುವ ಕಣಜದ ಹುಳು ಎಂದು ಕರೆಯುತ್ತಾರೆ.

ಮಕ್ಕಳನ್ನು ಅಪಹರಿಸುವ ಕುಲ್ಡಿ

ಹಳ್ಳಿಗಳಲ್ಲಿ ಅಜ್ಜಿಯಂದಿರು ತಮ್ಮ ಮರಿಮಕ್ಕಳಿಗೆ ಇವುಗಳ ಬಗ್ಗೆ ವಿಭಿನ್ನವಾದ ಕಥೆಯನ್ನು ಹೆಣೆದಿದ್ದಾರೆ. ಮಕ್ಕಳಿಗೆ ಈ ಹುಳುಗಳನ್ನು ಅಜ್ಜಿಯು ಕುಲ್ಡಿ ಎಂದೇ ಪರಿಚಯಿಸುತ್ತಾಳೆ. ಕುಲ್ಡಿಗೆ ಸ್ವಂತ ಮಕ್ಕಳು ಇಲ್ಲದ ಕಾರಣ ಬೇರೆಯವರ ಮಕ್ಕಳನ್ನು ಈಕೆ ತಂದು ತನ್ನ ಗೂಡಿನಲ್ಲಿ ಸಾಕುತ್ತಾಳೆ ಎಂದು ಈಗಲೂ ಹೇಳುತ್ತಾರೆ. ವಾಸ್ತವವಾಗಿ ಕುಲ್ಡಿಯು ತನ್ನ ಮರಿಗಳು ತಿನ್ನಲು ವಿವಿಧ ಜಾತಿಯ ನಂತರ ಪತಂಗದ ಲಾರ್ವಾಗಳನ್ನು (ಮರಿಗಳನ್ನು) ಹುಡುಕಿ ಕದ್ದು ತಂದು ತನ್ನ ಗೂಡಿನಲ್ಲಿ ಇರಿಸುತ್ತದೆ. ಕುಲ್ಡಿಯು, ಈ ಲಾರ್ವಾಗಳು ಚಲಿಸದಂತೆ ಮಾಡಲು ತನ್ನ ಕುಟುಕಿನ ವಿಷದಿಂದ ಅವುಗಳನ್ನು ಪಾರ್ಶ್ವವಾಯುಗೊಳಿಸಿ (Paralysed) ತನ್ನ ಮಡಿಕೆಯಾಕಾರದ ಗೂಡಿಗೆ ತುಂಬುತ್ತದೆ. ನಂತರ ಕುಲ್ಡಿಯು ಗೂಡಿನೊಳಗೆ ಮೊಟ್ಟೆಯಿಡುತ್ತಾಳೆ. ಕುಲ್ಡಿಯ ಮರಿಗಳು ಹೊರ ಬಂದು ಪತಂಗದ ಲಾರ್ವಾಗಳನ್ನು ತಿಂದು ಬೆಳೆಯುತ್ತವೆ. ಈ ಕುಲ್ಡಿ ಕೀಟವನ್ನೇ Potter wasp ಅಥವಾ ಕುಂಬಾರ ಕಣಜ ಎನ್ನುತ್ತಾರೆ. ಕೀಟಗಳ ನಿಯಂತ್ರಣದಲ್ಲಿ ಕುಂಬಾರ ಕಣಜಗಳ ಪಾತ್ರವೂ ಮಹತ್ವದ್ದು.

ಸಾಮಾನ್ಯವಾಗಿ ಕುಂಬಾರ ಕಣಜಗಳು ಒಂಟಿ ಜೀವಿಗಳಾದರೂ ಸಂತಾನೋತ್ಪತ್ತಿ ಸಂದರ್ಭದಲ್ಲಿ ಇವು ಜತೆಯಾಗಿ ವಾಸಿಸುತ್ತವೆ. ತನ್ನ ಮೇಲೆ ದಾಳಿ ಮಾಡುವವರ ಮೇಲಷ್ಟೇ ತ್ವರಿತವಾಗಿ ದಾಳಿ ಮಾಡುವ ಅವುಗಳ ವಿರಳವಾಗಿ ಕುಟುಕುತ್ತವೆ. ಇವು ಗಾತ್ರದಲ್ಲಿ ಒಂದು ಇಂಚಿಗಿಂತ ಸ್ವಲ್ಪ ಕಡಿಮೆ ಉದ್ದವಿರುತ್ತವೆ ಮತ್ತು ಹೆಚ್ಚಾಗಿ ಕಪ್ಪು ಮತ್ತು ಕೇಸರಿ, ಟ್ಯಾಂಗರಿನ್ ಅಥವಾ ಆಬರ್ನ್ ಗುರುತುಗಳಿಂದ ಅಲಂಕರಿಸಲ್ಪಟ್ಟಿರುತ್ತವೆ. ಅವು ನೋಡಲು ಹಾರುವ ಡಂಬೆಲ್ ಆಕಾರದಲ್ಲಿ ಕಾಣುತ್ತವೆ, 'ಪೆಟಿಯೋಲ್' ಎಂಬ ಕಿರಿದಾದ ಸೊಂಟವು ಅವುಗಳ ಪ್ರಮುಖ ಎದೆ ಮತ್ತು ಹೊಟ್ಟೆಯನ್ನು ಪರಸ್ಪರ ಜೋಡಿಸುತ್ತದೆ. ಹೆಚ್ಚಿನ ಕುಂಬಾರ ಕಣಜಗಳ ದೇಹವು ಚಿಕ್ಕದಾಗಿದ್ದು, ಹೊಟ್ಟೆ ಮತ್ತು ಎದೆಯ ಮೇಲೆ ಹಳದಿ ಗುರುತುಗಳೊಂದಿಗೆ ಕಪ್ಪು ಬಣ್ಣವಿರುತ್ತದೆ. ಕಪ್ಪು ಅಥವಾ ಕಂದು ಬಣ್ಣದ್ದಾಗಿದ್ದು, ಸಾಮಾನ್ಯವಾಗಿ ಹಳದಿ, ಬಿಳಿ, ಕಿತ್ತಳೆ ಅಥವಾ ಕೆಂಪು ಬಣ್ಣವಿದ್ದರೆ, ಉಷ್ಣವಲಯ ಪ್ರದೇಶಗಳ ಗಾಢ ನೀಲಿ ಅಥವಾ ಹಸಿರು ಲೋಹೀಯ ಬಣ್ಣ ಗಳಿಂದಲೂ ಕೂಡಿರುತ್ತವೆ. ವಿಶ್ರಾಂತಿ ಪಡೆಯುವಾಗ ಇವುಗಳ ಒಂದು ಜೋಡಿ ರೆಕ್ಕೆಗಳು ದೇಹದುದ್ದಕ್ಕೂ ಅರ್ಧ ಮಡಚಿಕೊಳ್ಳುತ್ತವೆ. ಪ್ರಬುದ್ಧ ಕುಂಬಾರ ಕಣಜ ಗಳು ಹೂವುಗಳ ಮಕರಂದ ತಿನ್ನುತ್ತಾ ಹೂಬಿಡುವ ಸಸ್ಯಗಳ ಪರಾಗಸ್ಪರ್ಶ ಮಾಡಿದರೆ, ಇವುಗಳ ಮರಿಗಳು ಪಕ್ಕಾ ಮಾಂಸಾಹಾರಿಗಳು.

ಮಣ್ಣಿನಿಂದಲೇ ಗೂಡು

ಇವು ಜೇಡಿಮಣ್ಣಿನಿಂದ ವಿವಿಧ ಆಕಾರಗಳ ಕಲಾತ್ಮಕ ಗೂಡುಗಳನ್ನು ನಿರ್ಮಿಸುವುದರಿಂದ ಈ ಕಣಜಗಳಿಗೆ ಪಾಟರ್ ಕಣಜ. ಕುಂಬಾರ ಕಣಜ ಎಂಬ ಹೆಸರು ಬಂದಿದೆ. ಇವು ವಿವಿಧೆಡೆ ಇರುವ ಕುಳಿಗಳನ್ನು, ಕಟ್ಟಡಗಳ ಇಟ್ಟಿಗೆ ಗೋಡೆಗಳಲ್ಲಿ, ಬಾಗಿಲಿನ ಕೀಲಿ ರಂಧ್ರಗಳು, ಮರದಲ್ಲಿನ ಜೀರುಂಡೆ ಸುರಂಗಗಳು, ಇತರ ಕೀಟಗಳು ತ್ಯಜಿಸಿರುವ ಗೂಡುಗಳು, ಟೊಳ್ಳಾದ ಕೊಂಬೆಗಳು, ಅಥವಾ ಹಳೆಯ ಸಣ್ಣ ರಂಧ್ರಗಳು ಮತ್ತು ಎಲೆಕ್ಟ್ರಾನಿಕ್ ಸಾಧನಗಳಲ್ಲಿನ ಸ್ಕ್ರೂಶಾಫ್ಟ್‌ಗಳಂತಹ ಮಾನವ ನಿರ್ಮಿತ ರಂಧ್ರಗಳನ್ನು ಬಳಸಿಕೊಂಡು ಮಣ್ಣಿನ ಗೂಡುಗಳನ್ನು ಹಲವಾರು ಡಿಗ್ರಿ ಕೋನಗಳಲ್ಲಿ ನಿರ್ಮಿಸುತ್ತವೆ. ಅಷ್ಟೇ ಅಲ್ಲದೇ ಇವು ವಿಭಿನ್ನವಾದ ಭೂಗತ ಅಥವಾ ತೆರೆದ ಗೂಡುಗಳನ್ನು ನಿರ್ಮಿಸುತ್ತವೆ.

ಈ ಗೂಡುಗಳಲ್ಲಿ ಒಂದು ಅಥವಾ ಹಲವಾರು ಪ್ರತ್ಯೇಕ ಸಣ್ಣ ವಿಭಾಗಗಳು (ಕೋಣೆಗಳು) ಇರುತ್ತವೆ. ಇವುಗಳು ಗೂಡನ್ನು ನಿರ್ಮಿಸಲು ಹೆಚ್ಚಾಗಿ ಹುಡಿ ಮಣ್ಣು ಮತ್ತು ನೀರನ್ನು ಬಳಸಿದರೆ, ಕೆಲವು ಪ್ರಭೇಧಗಳು ಸಸ್ಯಜನ್ಯ ವಸ್ತುಗಳನ್ನೂ ಗೂಡು ನಿರ್ಮಿಸಲು ಬಳಸುತ್ತವೆ.

ಹೆಣ್ಣು ಕಣಜವು ತನ್ನ ದವಡೆಗಳು ಮತ್ತು

ಮುಂಭಾಗದ ಕಾಲುಗಳಿಂದ ಮಣ್ಣನ್ನು ಕೆರೆದು, ನೀರು ಮತ್ತು ತನ್ನ ಬಾಯಿಯ ಲಾಲಾರಸದೊಂದಿಗೆ ಬೆರೆಸಿ ಮಣ್ಣಿನ ಚೆಂಡನ್ನು ನಿರ್ಮಿಸುತ್ತವೆ. ನಂತರ ಅವುಗಳು ನಿರ್ಮಾಣ ಹಂತದಲ್ಲಿ ಇರುವ ತನ್ನ ಗೂಡಿಗೆ ಈ ಚೆಂಡುಗಳನ್ನು ಕಚ್ಚಿಕೊಂಡು ಸಾಗಿಸುತ್ತವೆ. ಕೆಲವೊಮ್ಮೆ ಹೂದಾನಿ ಅಥವಾ ನೀರಿನ ಜಗ್ ರೀತಿಯ ಮಣ್ಣಿನ ಗೂಡುಗಳನ್ನು ಮರಗಳ ಕೊಂಬೆಗಳಿಗೆ ಅಥವಾ ಇತರ ವಸ್ತುಗಳಿಗೆ ಅಂಟಿಕೊಂಡಿರುವ ರೀತಿ ನಿರ್ಮಿಸುತ್ತವೆ.

ವೈಜ್ಞಾನಿಕ ಕಾರಣ

ಒಂದು ಖಾಲಿ ಗೂಡು ತಯಾರಾದಾಗ, ವಯಸ್ಕ ಕಣಜವು ಸಾಮಾನ್ಯವಾಗಿ ಜೀರುಂಡೆಯ ಲಾರ್ವಾಗಳು, ಸಣ್ಣ ಗಾತ್ರದ ಜೇಡಗಳು ಅಥವಾ ಮರಿಹುಳುಗಳನ್ನು ಸಂಗ್ರಹಿಸಿ ಈ ಗೂಡಿಗೆ ತರುತ್ತವೆ. ನಂತರ ಅವುಗಳಿಗೆ ಕುಟುಕಿ ಪಾರ್ಶ್ವವಾಯುವಿಗೆ ಒಳಪಡಿಸಿ ಗೂಡಿನ ಒಳಗಿಡುತ್ತದೆ. ನಂತರ ಹೆಣ್ಣು ಕಣಜದ ಹುಳು ಈ ಗೂಡಿನ ಒಳಭಾಗದ ಮೇಲ್ಮೈಯಲ್ಲಿ ಒಂದೇ ಮೊಟ್ಟೆಯನ್ನು ಇಟ್ಟು ಗೂಡನ್ನು ಪೂರ್ತಿಯಾಗಿ ಮಣ್ಣಿನಿಂದ ಮುಚ್ಚಿಬಿಡುತ್ತದೆ. ಈ ಮೊಟ್ಟೆ ಮುಂದೆ ಬೆಳೆದು ಲಾರ್ವಾ ಆದಾಗ ಅದಕ್ಕೆ ಆಹಾರ ಗೂಡಿನಲ್ಲೇ ದೊರೆಯಲಿ ಎಂಬ ಮುಂದಾಲೋಚನೆಯ ಕಾರಣಕ್ಕೆ ಇವು ಇತರ ಹುಳುಗಳನ್ನು ತಮ್ಮ ಗೂಡಿನ ಒಳಗೆ ತಂದಿರಿಸುತ್ತದೆ. ಕಣಜದ ಮೊಟ್ಟೆ ಒಡೆದು ಅದರಿಂದ ಲಾರ್ವಾಗಳು ಹೊರಬಂದಾಗ, ಅದು ಗೂಡಿನ ಒಳಗೆ ತಾಯಿ ಕಣಜವು ಇಟ್ಟಿದ್ದ ಬೇಟೆಯನ್ನು ಕೆಲವು ವಾರಗಳ ಕಾಲ ತಿನ್ನಲು ಪ್ರಾರಂಭಿಸುತ್ತದೆ ಮತ್ತು ನಂತರ ಅವು ಬೆಳೆದು ಪ್ಯೂಪಾ ಆಗುತ್ತದೆ. ಮೊಟ್ಟೆಯಿಂದ ಅವುಗಳ ಸಂಪೂರ್ಣ ಜೀವನಚಕ್ರವು ಕೆಲವು ವಾರಗಳಿಂದ ಹಿಡಿದು ಒಂದು ವರ್ಷಕ್ಕೂ ಹೆಚ್ಚು ಕಾಲ ಇರುತ್ತದೆ. ಹೆಣ್ಣು ಕಣಜಗಳು ತಮ್ಮ ಗೂಡುಗಳನ್ನು ರಕ್ಷಿಸುವುದಿಲ್ಲ, ಆದ್ದರಿಂದ ಗೂಡುಗಳನ್ನು ಮೇಲ್ಮೈಗಳಿಂದ ಕೆರೆದು ಲಾರ್ವಾ ಅಥವಾ ಪ್ಯೂಪಲ್ ಹಂತದ ತನ್ನ ಮರಿಗಳನ್ನು ಹೊರತರುತ್ತದೆ.

ಪ್ರಕೃತಿಯು ಸದಾ ಅದ್ಭುತಗಳ ಆಗರ, ಮತ್ತು ಅದರ ಅನೇಕ ವಿಚಿತ್ರ ಹಾಗೂ ವಿಲಕ್ಷಣ ರೂಪಗಳು ನಮಗೆ ಆಶ್ಚರ್ಯ ಉಂಟುಮಾಡುತ್ತವೆ. ಪ್ರಕೃತಿಯ ವಿಚಿತ್ರ ಎಂದರೆ ದೈತ್ಯಾಕಾರದ, ವಿರೂಪ ಅಥವಾ ಅಸಹಜ ಜೀವಿಗಳ ಅಸ್ತಿತ್ವ. ಈ ರೀತಿಯ ವೈವಿಧ್ಯಮಯ ಮತ್ತು ಅನಿರೀಕ್ಷಿತ ವಿದ್ಯಮಾನಗಳು ಪ್ರಕೃತಿಯನ್ನು ಮತ್ತಷ್ಟು ನಿಗೂಢವನ್ನಾಗಿ ಮಾಡುತ್ತವೆ. ಹಾಗಾಗಿ ಈ ಪ್ರಕೃತಿಯ ಪ್ರತಿಯೊಂದು ಜೀವಿಯೂ ಜೀವವೈವಿಧ್ಯದ ಪ್ರಮುಖ ಕೊಂಡಿಯೆಂದೇ ಹೇಳಬಹುದು. ಇವುಗಳನ್ನು ಉಳಿಸಿ ಕಾಪಾಡಬೇಕಾದ್ದು ಪ್ರತಿಯೊಬ್ಬ ಮನುಷ್ಯನ ಜವಾಬ್ದಾರಿಯಾಗಿದೆ.

ಮಾನಸಿಕ ಒತ್ತಡ ನಲುಗದಿರಲಿ ಮನಸ್ಸು

• ಡಾ. ಮೈತ್ರಿ ಭಟ್, ವಿಟ್ಲ

ಮುಂಜಾನೆಯ ಮಂಜು ಹಸಿರು ಎಲೆಯ ಮೇಲೆ ಗಾಳಿಗೆ ಅತ್ತಿತ್ತ ಸರಿಯುವಂತೆ ಇಂದು ಮನುಷ್ಯನ ಮನಸ್ಸು ಬದುಕಿನ ಒತ್ತಡಗಳ ನಡುವೆ ನಲುಗುತ್ತಿದೆ. ಹೊರಗೆ ಎಲ್ಲವೂ ಸರಿಯಾಗಿರುವಂತೆ ಕಾಣಿಸಿದರೂ ಒಳಗೆ ಆತಂಕ, ಅನಿಶ್ಚಿತತೆ, ಸ್ಪರ್ಧೆ ಮತ್ತು ನಿರೀಕ್ಷೆಗಳ ಸುಳಿಗಾಳಿ ಬೀಸುತ್ತಲೇ ಇರುತ್ತದೆ. ಆ ಸುಳಿಗಾಳಿಯ ಹೆಸರೇ ಮಾನಸಿಕ ಒತ್ತಡ. ಅದನ್ನು ನಿರ್ಲಕ್ಷಿಸಿದರೆ ಅದು ಆರೋಗ್ಯ ಕದಡುತ್ತದೆ, ಅರ್ಥಮಾಡಿಕೊಂಡು ನಿರ್ವಹಿಸಿದರೆ ಬದುಕಿಗೆ ಸಮತೋಲನವನ್ನು ಒದಗಿಸುತ್ತದೆ.

ಬದುಕಿನ ಓಟದಲ್ಲಿ ನಾವು ಅನೇಕ ಬಾರಿ ಸಮಸ್ಯೆಗಳನ್ನು ಪರಿಹರಿಸುವ ಬದಲಾಗಿ ಅವುಗಳ ಬಗ್ಗೆಯೇ ಚಿಂತಿಸುತ್ತಾ ಮನಸ್ಸಿನಲ್ಲಿ ಭಾರವನ್ನು ಹೊತ್ತುಕೊಳ್ಳುತ್ತೇವೆ. ಇದೇ ಭಾರ ಕ್ರಮೇಣ ಮಾನಸಿಕ ಒತ್ತಡವಾಗಿ ರೂಪುಗೊಳ್ಳುತ್ತದೆ. ಈ ಒತ್ತಡ ಅರ್ಥಮಾಡಿಕೊಂಡು ಸಮರ್ಥವಾಗಿ ನಿರ್ವಹಿಸುವುದು ಇಂದಿನ ಅಗತ್ಯ ಜೀವನ ಕೌಶಲ್ಯವಾಗಿದೆ.

ಇಂದಿನ ವೇಗದ ಬದುಕಿನಲ್ಲಿ ಮಾನಸಿಕ ಒತ್ತಡ ಎಂಬುದು ಬಹುತೇಕ ಎಲ್ಲರ ಜೀವನದ ಭಾಗವಾಗಿದೆ. ವಿದ್ಯಾರ್ಥಿಯಿಂದ ಹಿಡಿದು ಉದ್ಯೋಗಿಯವರೆಗೆ, ರೈತನಿಂದ ಹಿಡಿದು ಉದ್ಯಮಿಯವರೆಗೆ, ಗೃಹಿಣಿಯಿಂದ ಹಿಡಿದು ಮಕ್ಕಳವರೆಗೆ ಪ್ರತಿಯೊಬ್ಬರೂ ಒತ್ತಡವನ್ನು ಅನುಭವಿಸುತ್ತಿದ್ದಾರೆ. ಸರಿಯಾಗಿ ನಿಯಂತ್ರಿಸದ ಒತ್ತಡ ದೈಹಿಕ ಆರೋಗ್ಯ, ಮಾನಸಿಕ ಸಮತೋಲನ, ಕುಟುಂಬ ಸಂಬಂಧಗಳು ಹಾಗೂ ವೃತ್ತಿಜೀವನದ ಮೇಲೆ ಗಂಭೀರ ಪರಿಣಾಮವನ್ನು ಬೀರಬಹುದು.

ಒತ್ತಡವೆಂದರೆ, ಒಬ್ಬ ವ್ಯಕ್ತಿಯ ಸಾಮರ್ಥ್ಯಕ್ಕಿಂತ ಹೆಚ್ಚಿನ ಬೇಡಿಕೆಗಳು, ನಿರೀಕ್ಷೆಗಳು ಅಥವಾ ಸವಾಲುಗಳು ಎದುರಾದಾಗ ಮನಸ್ಸು ಮತ್ತು ದೇಹ ತೋರಿಸುವ ಪ್ರತಿಕ್ರಿಯೆಯೇ ಒತ್ತಡ. ಸ್ವಲ್ಪ ಪ್ರಮಾಣದ ಒತ್ತಡ ವ್ಯಕ್ತಿಯನ್ನು ಹೆಚ್ಚು ಜಾಗೃತನನ್ನಾಗಿ ಮಾಡಬಹುದು. ಆಯಾಸ, ಸುಸ್ತು, ತಲೆನೋವು, ನಿದ್ರಾ ಹೀನತೆ, ಕೋಪ, ಅಸಹನೆ, ಆತಂಕ, ಏಕಾಗ್ರತೆಯ ಕೊರತೆ, ಹಸಿವಿಲ್ಲದಿರುವುದು, ರಕ್ತದೊತ್ತಡ ಮುಂತಾದ ಲಕ್ಷಣಗಳು ಒತ್ತಡದ ಸೂಚನೆಗಳಾಗಿವೆ. ಒತ್ತಡದಿಂದ ಹೊರಬರುವ ಮೊದಲ ಹೆಜ್ಜೆಯೇ ಅದರ ಮೂಲವನ್ನು ಗುರುತಿಸುವುದು.

ಕೆಲವರಿಗೆ ಆರ್ಥಿಕ ಸಮಸ್ಯೆ, ಕೆಲವರಿಗೆ ಉದ್ಯೋಗದ ಒತ್ತಡ, ಕೆಲವರಿಗೆ ಶೈಕ್ಷಣಿಕ ಸ್ಪರ್ಧೆ, ಮತ್ತೊಬ್ಬರಿಗೆ ಕುಟುಂಬ ದ ಕಲಹಗಳು ಒತ್ತಡದ ಕಾರಣವಾಗಿರಬಹುದು. ಸಂದರ್ಭ ಯಾವುದೇ ಇರಲಿ, ಸಮಸ್ಯೆಯನ್ನು ನಿರಾಕರಿಸುವ ಬದಲು ಅದರ ಬಗ್ಗೆ ಪ್ರಾಮಾಣಿಕವಾಗಿ ಯೋಚಿಸುವುದು ಅಗತ್ಯ. ನನಗೆ ಒತ್ತಡ ಏಕೆ ಉಂಟಾಗುತ್ತಿದೆ? ಎಂಬ ಪ್ರಶ್ನೆಯನ್ನು ನಮಗೆ ನಾವೇ ಕೇಳಿಕೊಳ್ಳಬೇಕು. ಕಾರಣತಿಳಿದಾಗ ಪರಿಹಾರದ ದಾರಿ ಸುಲಭ.



ಎಲ್ಲ ಕೆಲಸಗಳನ್ನೂ ಒಂದೇ ಸಮಯದಲ್ಲಿ ಮಾಡುವ ಪ್ರಯತ್ನ ಮನಸ್ಸಿನ ಮೇಲೆ ಅನಗತ್ಯ ಒತ್ತಡವನ್ನು ಉಂಟುಮಾಡುತ್ತದೆ. ಇಂದು ಮಾಡ ಬೇಕಾದದ್ದು ಏನು?, ನಾಳೆಗೆ ಮುಂದೂಡಬಹುದಾದದ್ದು ಏನು? ಎಂಬ ಸ್ಪಷ್ಟತೆ ಇದ್ದರೆ ಆತಂಕ ಕಡಿಮೆಯಾಗುತ್ತದೆ. ಆರೋಗ್ಯಕರ ದೇಹವು ಆರೋಗ್ಯಕರ ಮನಸ್ಸಿಗೆ ಆಧಾರ. ಸಮರ್ಪಕ ನಿದ್ರೆ, ಸಮತೋಲಿತ ಆಹಾರ ಮತ್ತು ನಿಯಮಿತ ವ್ಯಾಯಾಮವು ಒತ್ತಡ ನಿರ್ವಹಣೆಯ ಪ್ರಮುಖ ಅಂಶಗಳಾಗಿವೆ. ವ್ಯಾಯಾಮದ ಸಮಯದಲ್ಲಿ ದೇಹದಲ್ಲಿ ಬಿಡುಗಡೆಯಾಗುವ ರಾಸಾಯನಿಕ ಗಳು ಮನಸ್ಸಿಗೆ ನೆಮ್ಮದಿ ನೀಡುತ್ತವೆ.

ಭಾರತೀಯ ಪರಂಪರೆಯ ಅಮೂಲ್ಯ ಕೊಡುಗೆಯಾದ ಯೋಗ ಮತ್ತು ಧ್ಯಾನ ಒತ್ತಡ ನಿರ್ವಹಣೆಗೆ ಅತ್ಯಂತ ಪರಿಣಾಮಕಾರಿ ಸಾಧನಗಳಾಗಿವೆ. ಧ್ಯಾನ ಮನಸ್ಸಿನ ಚಂಚಲತೆಯನ್ನು ಕಡಿಮೆ ಮಾಡಿ ಏಕಾಗ್ರತೆಯನ್ನು ಹೆಚ್ಚಿಸುತ್ತದೆ. ಉಸಿರಾಟದ ವ್ಯಾಯಾಮಗಳು ಆತಂಕವನ್ನು ನಿಯಂತ್ರಿಸಲು ನೆರವಾಗುತ್ತವೆ. ಪ್ರತಿದಿನ ಕೆಲವೇ ನಿಮಿಷಗಳ ಧ್ಯಾನವೂ ಮನಸ್ಸಿಗೆ ಹೊಸ ಶಕ್ತಿಯನ್ನು ನೀಡಬಲ್ಲದು. ಔಷಧಿಗಳಿಲ್ಲದೆ ಮನಸ್ಸನ್ನು ಸಮತೋಲನಗೊಳಿಸುವ ಸರಳ ವಿಧಾನಗಳಲ್ಲಿ ಯೋಗ ಪ್ರಮುಖವಾಗಿದೆ.

ಒತ್ತಡದ ಸಮಯದಲ್ಲಿ ಅನೇಕರು ಏಕಾಂಗಿತನವನ್ನು ಆಯ್ಕೆ ಮಾಡುತ್ತಾರೆ. ಆದರೆ, ಸಮಸ್ಯೆಗಳನ್ನು ಹಂಚಿಕೊಳ್ಳುವುದು ಒತ್ತಡವನ್ನು ಕಡಿಮೆ ಮಾಡುವ ಪರಿಣಾಮಕಾರಿ ಮಾರ್ಗವಾಗಿದೆ. ಕೆಲವೊಮ್ಮೆ ಪರಿಹಾರ ಕ್ಕಿಂತ ಹೆಚ್ಚಾಗಿ ಯಾರಾದರೂ ನಮ್ಮ ಮಾತನ್ನು ಕೇಳುವುದೇ ಮನಸ್ಸಿಗೆ ದೊಡ್ಡ ಸಮಾಧಾನವನ್ನು ನೀಡುತ್ತದೆ.

ಇಂದಿನ ಡಿಜಿಟಲ್ ಯುಗದಲ್ಲಿ ಸಾಮಾಜಿಕ ಮಾಧ್ಯಮಗಳು ಅನೇಕ ಜನರ ಒತ್ತಡಕ್ಕೆ ಕಾರಣವಾಗಿವೆ. ಇತರರ ಸಾಧನೆಗಳು, ಐಷಾರಾಮಿ ಜೀವನಶೈಲಿ ಅಥವಾ ಯಶಸ್ಸನ್ನು ನಿರಂತರವಾಗಿ ನೋಡುವುದು ಹೋಲಿಕೆಯ ಮನೋಭಾವವನ್ನು ಬೆಳೆಸುತ್ತದೆ. ಮುಖ್ಯವಾಗಿ ನಾವು ಪ್ರತಿಯೊಬ್ಬರ ಜೀವನವೂ ವಿಭಿನ್ನವಾಗಿದೆ ಎಂಬುದನ್ನು ಅರಿತುಕೊಳ್ಳಬೇಕು. ಸಾಮಾಜಿಕ ಮಾಧ್ಯಮಗಳನ್ನು ಮಾಹಿತಿ ಮತ್ತು ಸಂವಹನದ ಸಾಧನವಾಗಿ ಬಳಸಬೇಕು, ಜೀವನದ ಮಾನದಂಡವಾಗಿ ಅಲ್ಲ.

ಪರಿಪೂರ್ಣತೆಯ ನಿರೀಕ್ಷೆ ಅನಗತ್ಯ ಒತ್ತಡವನ್ನು ಸೃಷ್ಟಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲೂ ವೈಫಲ್ಯಗಳು ಸಹಜ. ಸೋಲನ್ನು ಅಂತ್ಯವೆಂದು ನೋಡುವ ಬದಲು ಪಾಠವೆಂದು ಪರಿಗಣಿಸಬೇಕು. ಜೀವನದಲ್ಲಿ ಎಲ್ಲವೂ ನಮ್ಮ ಯೋಜನೆಯಂತೆ ನಡೆಯುವುದಿಲ್ಲ. ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವ ಮನೋಭಾವ ಬೆಳೆಸಿಕೊಂಡಾಗ ಒತ್ತಡದ ತೀವ್ರತೆ ಕಡಿಮೆಯಾಗುತ್ತದೆ. ಕೆಲವೊಮ್ಮೆ ಒತ್ತಡವು ಸಾಮಾನ್ಯ ಮಟ್ಟವನ್ನು ಮೀರಿ ದೈನಂದಿನ ಜೀವನವನ್ನೇ ಅಸ್ತವ್ಯಸ್ತಗೊಳಿಸಬಹುದು. ಅಂತಹ ಸಂದರ್ಭಗಳಲ್ಲಿ ಮನೋವೈದ್ಯರು ಅಥವಾ ಆಪ್ತಸಮಾ ಲೋಚಕರ ನೆರವು ಪಡೆಯುವುದು ದುರ್ಬಲತೆಯಲ್ಲ, ಅದು ಜವಾಬ್ದಾರಿಯುತ ನಿರ್ಧಾರವಾಗಿದೆ. ಏಕೆಂದರೆ ಮಾನಸಿಕ ಆರೋಗ್ಯವೂ ದೈಹಿಕ ಆರೋಗ್ಯದಷ್ಟೇ ಮುಖ್ಯ.

ಒಟ್ಟಿನಲ್ಲಿ ಮಾನಸಿಕ ಒತ್ತಡವನ್ನು ಸಂಪೂರ್ಣವಾಗಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅದನ್ನು ತಪ್ಪಿಸುವುದಲ್ಲ, ನಿರ್ವಹಿಸುವುದೇ ಬದುಕಿನ ಕಲೆ.

ಉಸಿರಿಗಾಗಿ ಚಡಪಡಿಸಿದಂತೆ...

ಒಬ್ಬ ಶಿಷ್ಯ ಸದಾ 'ಯಶಸ್ಸು, ಯಶಸ್ಸು' ಕನವರಿಸುತ್ತಿದ್ದ. ಒಂದು ದಿನ ಗುರು ಕೇಳಿದರು- 'ನಿನಗೆ ಯಶಸ್ಸು ಬೇಕೇ?' ಶಿಷ್ಯ ಹೇಳಿದ, 'ಹೌದು ಗುರುಗಳೇ, ತುಂಬಾ ಬೇಕು.' ಗುರು ಅವನನ್ನು ನದಿಯ ಬಳಿ ಕರೆದುಕೊಂಡು ಹೋದರು. ಅವನ ತಲೆಯನ್ನು ಗಟ್ಟಿಯಾಗಿ ಹಿಡಿದು ನೀರಿನೊಳಗೆ ಮುಳುಗಿಸಿದರು. ಶಿಷ್ಯನು ಉಸಿರಿಗಾಗಿ ಒದ್ದಾಡಲು ಶುರು ಮಾಡಿದ. ಆಗ ಗುರು ಅವನನ್ನು ಹೊರಗೆಳೆದು ಕೇಳಿದರು- 'ನೀನು ನೀರಿನೊಳಗೆ ಇದ್ದಾಗ ಏನು ಬೇಕೆಂದು ಅನಿಸಿತು?' ಶಿಷ್ಯ ಹೇಳಿದ, 'ಗುರುಗಳೇ ಉಸಿರು ಮಾತ್ರ ಬೇಕೆಂದು ಅನಿಸಿತು.' ಗುರು ನಗುತ್ತಾ ಹೇಳಿದರು, 'ಯಶಸ್ಸು ಕೂಡ ಹೀಗೇ'.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1	■	2		■	3	4	■	5
6			■	■	■	7		
	■	8		9			■	
10	11	■	■		■	■	12	
■	13			■	14			■
15		■	■	16	■	■	17	18
	■	19				20	■	
21			■	■	■	22		
	■	23		■	24		■	

ಎಡದಿಂದ ಬಲಕ್ಕೆ

2. ಮಾಡುವ ಕೆಲಸಕ್ಕೆ ಉಂಟಾದ ವಿಘ್ನ (2)
3. ಬೇಸಗೆಯಲ್ಲಿ ಹೆಚ್ಚಾಗಿ ಅನುಭವಕ್ಕೆ ಬರುವ ಬಾಯಾರಿಕೆ (2)
6. ಮಾವನ ಮನೆಗೆ ಬಂದಿರುವ ನರ (3)
7. ಬಿಡುವಿದ್ದಾಗ ಕಂಡ ಮೇಲುಹೊದಿಕೆ ಹತ್ತಿಯಿಂದ ಮಾಡಿದ್ದು (3)
8. ಅಲ್ಲಗಳೆ ಎನ್ನುವುದರಲ್ಲಿ ಮತ್ತೊಂದು ಆನೆಯೂ ಇದೆ (5)
10. ವಿರಹದಲ್ಲಿ ಬಂದ ಸೂರ್ಯ (2)
12. ಭೂಮಿ ಉಳಲು ಬಳಸುವ ನೇಗಿಲು (2)
13. ಧಾನ್ಯಗಳನ್ನು ಹಸನು ಮಾಡಲು ಬಳಸುವ ಸಾಧನ (3)
14. ಕೊಡವರ ಸುಗ್ಗಿ ಹಬ್ಬ (3)
15. ದೇಹದ ಮೇಲಾದ ವ್ರಣ (2)
17. ತಿರುಗಿ ಬಂದಿರುವ ಸಣ್ಣ ದೋಣಿ (2)
19. ಸಾಗರದಲ್ಲಿ ಮಾಡುವ ಪ್ರಯಾಣ (5)
21. ಗೆದ್ದವರಿಗೆ ಸಿಗುವ ಬಿಲ್ಲೆ(3)
22. ಆಡಳಿತ ನಡೆಸು ಅಥವಾ ರಕ್ಷಿಸು ಎನ್ನುವುದು ಇಲ್ಲಿ ತಿರುಗಿ ಬಂದಿದೆ (3)
23. ಮನುಷ್ಯ ಸಹಜವಾಗಿ ಇರುವ ನಾಚಿಕೆ (2)
24. ಕೊರತೆಯೂ ಆಗಬಲ್ಲ ವ್ಯಂಗೋಕ್ತಿ (2)

ಮೇಲಿಂದ ಕೆಳಕ್ಕೆ

1. ಪ್ರಸಕ್ತ ಚಾಲ್ತಿಯಲ್ಲಿರುವ ಸುದ್ದಿಯು ಮತ್ತೊಂದು ಹಾರದ ನಡುವೆ ಇದೆ (4)
2. ಭೂಮಿಯ ಮತ್ತೊಂದು ಹೆಸರು (3)
4. ಆಶೀರ್ವದಿಸು ಎನ್ನುವದರಲ್ಲಿ ಮತ್ತೊಬ್ಬ ಶಿವನೂ ಇದ್ದಾನೆ (3)
5. ನಳಿಕೆಯಲ್ಲಿ ಹಾಕಿದರೂ ಡೊಂಕಾಗಿಯೇ ಇರುವುದು (4)
9. ದುಡಿತಕ್ಕೆ ಹೆಸರಾದ ಪ್ರಾಣಿ (2)
11. ಗೆಲುವಿಗೆ ಇನ್ನೊಂದು ಹೆಸರಿದು (3)
12. ಇದೊಂದು ಬಗೆಯ ಸೊಪ್ಪು ತರಕಾರಿ (3)
15. ಪಟಪಟನೆ ಹಾರಾಡುವ ಆಟದ ಪಟ (4)
16. ಭಯಂಕರನಾಗಿ ಕಂಡ ಶಿವ (2)
18. ಶೋಚನೀಯ ಸ್ಥಿತಿಯನ್ನು ವಿವರಿಸುವಾಗ ನಿಷ್ಠೆಗೆ ಹೆಸರಾದ ಪ್ರಾಣಿಯೂ ಬಂದಿದೆ (4)
19. ಸಂಪೂರ್ಣವಾದ ಅಥವಾ ಸಮಗ್ರವಾದ ಎಂದರ್ಥ (3)
20. ಮುಸುಕಾಗಿ ಕಂಡಿದೆ ಬೆಳಗಿನ ಜಾವ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: [illegible]

ಮೇಲಿಂದ ಕೆಳಕ್ಕೆ: [illegible]

ತಾಯಂದಿರ ಆರೋಗ್ಯಕ್ಕಾಗಿ ಮಿಡಿದ ಮಾತೃ ಹೃದಯಿ ರಾಣಿ ನಿಲೂಫರ್

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಆಕೆಯ ಹೆಸರು ನಿಲೂಫರ್. ಒಟ್ಟೋಮನ್ ರಾಜಕುಮಾರಿ, ರಾಜಕೀಯ ಒಪ್ಪಂದದ ಭಾಗವಾಗಿ 1931ರಲ್ಲಿ ಹೈದರಾಬಾದ್‌ನ ನಿಜಾಮನ ಎರಡನೇ ಮಗನಾದ ಮುಜಾಜ್ಜಮ್ ಜಾ ಅವರನ್ನು ವಿವಾಹವಾಗಿ ಭಾರತಕ್ಕೆ ಬಂದರು. ಅರಮನೆಯ ವೈಭವ, ಪತಿಯ ಅಪಾರ ಪ್ರೀತಿ ಎಲ್ಲವೂ ಇತ್ತಾದರೂ, ಸಾಂಪ್ರದಾಯಿಕ ಸಮಾಜ ಅವರಿಂದ ಒಂದು ವಾರಸುದಾರನನ್ನು ಬಯಸುತ್ತಿತ್ತು. ಆದರೆ, ದುರದೃಷ್ಟವಶಾತ್ ತಾನು ಎಂದಿಗೂ ತಾಯಿಯಾಗಲಾರೆ ಎಂಬ ಕಟು ಸತ್ಯ ತಿಳಿದಾಗ ನಿಲೂಫರ್ ಅಕ್ಷರಶಃ ಮುರಿದುಬಿದ್ದರು. ಆದರೆ, ಕಮಲದ ಹೂವು ಕೆಸರಿನಲ್ಲಿದ್ದರೂ ಮೇಲಕ್ಕೆದ್ದು ಸೌಂದರ್ಯ ಪಸರಿಸುವಂತೆ, ನಿಲೂಫರ್ ಕಣ್ಣೀರನ್ನು ಒರೆಸಿಕೊಂಡು ಸಮಾಜ ಮುಖಿ ಕೆಲಸಗಳ ಕಡೆಗೆ ತನ್ನ ಇಡೀ ಬದುಕನ್ನು ಮುಡುಪಾಗಿಟ್ಟರು.

ಅರಮನೆಯ ನಾಲ್ಕು ಗೋಡೆಗಳ ಮಧ್ಯೆ ಐಷಾರಾಮಿ ಜೀವನ ನಡೆಸುವ ಬದಲು ನಿಲೂಫರ್ ಹೈದರಾಬಾದ್‌ನ ಸಾಮಾನ್ಯ ಜನರ ಕಷ್ಟಗಳಿಗೆ ಸ್ಪಂದಿಸಲು ಶುರು ಮಾಡಿದರು. ಒಂದು ದಿನ ಆಕೆಯ ಅರಮನೆಯಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರ್ತಿ ಹೆರಿಗೆಯ ಸಮಯದಲ್ಲಿ ಸೂಕ್ತ ವೈದ್ಯಕೀಯ ಸೌಲಭ್ಯ ಸಿಗದೆ, ತೀವ್ರ ರಕ್ತಸ್ರಾವದಿಂದ ಮೃತಪಟ್ಟಳು. ಹುಟ್ಟಿದ ಮಗುವೂ ಬದುಕುಳಿಯಲಿಲ್ಲ.

ಈ ಘಟನೆ ನಿಲೂಫರ್ ಅವರ ಹೃದಯವನ್ನು ಹಿಂಡಿಹಾಕಿತು. ತನಗೆ ಮಗುವಾಗಲಿಲ್ಲ ಎಂಬ ನೋವಿಗಿಂತ, ಬಡತನ ಮತ್ತು ಸೂಕ್ತ ಆಸ್ಪತ್ರೆಗಳಿಲ್ಲದೆ ನೂರಾರು ತಾಯಂದಿರು ಹಾಗೂ ಶಿಶುಗಳು ಮರಣ ಹೊಂದುತ್ತಿರುವುದು ಆಕೆಯನ್ನು ಹೆಚ್ಚು ಕಾಡಿತು. ಅಂದೇ ಆಕೆ ಒಂದು ಪಣ ತೊಟ್ಟರು- ಈ ಸಾಮ್ರಾಜ್ಯದಲ್ಲಿ ಯಾವೊಬ್ಬ ತಾಯಿಯೂ ಹೆರಿಗೆಯ ನೋವಿನಿಂದ ಸಾಯಬಾರದು.

ತನ್ನ ನೋವನ್ನೇ ಶಕ್ತಿಯನ್ನಾಗಿ ಮಾಡಿಕೊಂಡ ರಾಜಕುಮಾರಿ, ಹೈದರಾಬಾದ್‌ನಲ್ಲಿ ಮಹಿಳೆಯರು ಮತ್ತು ಮಕ್ಕಳಿಗಾಗಿ ಪ್ರತ್ಯೇಕ ಹಾಗೂ ಅತ್ಯಾಧುನಿಕ ಆಸ್ಪತ್ರೆಯನ್ನು ನಿರ್ಮಿಸಲು ನಿರ್ಧರಿಸಿದರು. ಅದಕ್ಕಾಗಿ ತಮ್ಮ ವೈಯಕ್ತಿಕ ಒಡವೆಗಳು, ಹಣ ಮತ್ತು ರಾಯಲ್ ಪ್ರಭಾವವನ್ನು ಬಳಸಿದರು. 1949ರಲ್ಲಿ ಆಕೆಯ ಕನಸಿನ ಕೂಸಾದ ನಿಲೂಫರ್ ಹಾಸ್ಪಿಟಲ್ ಫಾರ್ ವುಮೆನ್ ಅಂಡ್ ಚಿಲ್ಡ್ರನ್ ತಲೆಯೆತ್ತಿತು. ನಿಲೂಫರ್ ಕೇವಲ ಹಣ ನೀಡಿ ಸುಮ್ಮನಾಗಲಿಲ್ಲ; ಸ್ವತಃ ತಾನೇ ಆಸ್ಪತ್ರೆಗೆ ಭೇಟಿ ನೀಡಿ ರೋಗಿಗಳ ಯೋಗಕ್ಷೇಮ ವಿಚಾರಿಸುತ್ತಿದ್ದರು. ಬಡ ಹೆಣ್ಣುಮಕ್ಕಳಿಗೆ ಉಚಿತ ಚಿಕಿತ್ಸೆ, ಉನ್ನತ ಗುಣಮಟ್ಟದ ಹೆರಿಗೆ ಸೌಲಭ್ಯ ಸಿಗುವಂತೆ ನೋಡಿಕೊಂಡರು.

ನನಗೆ ಸ್ವಂತ ಮಗುವಿಲ್ಲದಿರಬಹುದು. ಆದರೆ, ನನ್ನ ಆಸ್ಪತ್ರೆಯಲ್ಲಿ ಜನ್ಮ ತಳೆಯುವ ಪ್ರತಿಯೊಂದು ಮಗುವೂ ನನ್ನದೇ ಎಂದು ಆಕೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು.

ನಿಲೂಫರ್ ಕೇವಲ ವೈದ್ಯಕೀಯ ಕ್ಷೇತ್ರಕ್ಕೆ ಸೀಮಿತವಾಗಲಿಲ್ಲ. ಆಕೆ ಭಾರತದ ಸ್ವಾತಂತ್ರ್ಯದ ಕಾಲಘಟ್ಟದಲ್ಲಿ ಸಾಮಾಜಿಕ ಬದಲಾವಣೆಯ ಮುಂಚೂಣಿಯಲ್ಲಿದ್ದರು. ಮಹಿಳಾ ಹಕ್ಕುಗಳು

ಮತ್ತು ನಾಗರಿಕ ಹಕ್ಕುಗಳ ಪರವಾಗಿ ಧ್ವನಿ ಎತ್ತಲು ಆಕೆ ಮಹಾತ್ಮಾ ಗಾಂಧೀಜಿಯವರನ್ನು ಭೇಟಿಯಾದರು. ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರಿಗೆ ದೇಶದ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸುವ ಕುರಿತು ಕಳಕಳಿಯ ಪತ್ರಗಳನ್ನು ಬರೆದರು. ಅಂದಿನ ಕಾಲದಲ್ಲಿ ಮುಸ್ಲಿಂ ಮಹಿಳೆಯರು ಪರದೆಯ (ಬುರ್ಖಾ) ಹಿಂದೆ ಇರಬೇಕೆಂಬ ನಿಯಮವಿತ್ತು. ಆದರೆ, ನಿಲೂಫರ್ ಅದನ್ನು ಮುರಿದು ಹೊರಬಂದರು. ಮುಸುಕು ಧರಿಸದೆ ಸಾರ್ವಜನಿಕವಾಗಿ ಓಡಾಡಿದ ಮೊದಲ ರಾಯಲ್ ಮಹಿಳೆ ಆಕೆ. ಹೆಣ್ಣುಮಕ್ಕಳಿಗೆ ಶಿಕ್ಷಣ ಸಿಗಬೇಕು, ಅವರು ಸ್ವಾವಲಂಬಿಗಳಾಗಬೇಕು ಎಂದು ಆಕೆ ನಿರಂತರವಾಗಿ ಶ್ರಮಿಸಿದರು.

ವಾರಸುದಾರನಿಲ್ಲ ಎಂಬ ಕಾರಣಕ್ಕೆ ಪತಿ 1948ರಲ್ಲಿ 2ನೇ ಮದುವೆಯಾದಾಗ, ನಿಲೂಫರ್ ತನ್ನ ಸ್ವಾಭಿಮಾನವನ್ನು ಬಿಟ್ಟುಕೊಡಲಿಲ್ಲ. ಆಕೆ ಭಾರತವನ್ನು ತೊರೆದು ಯುರೋಪ್‌ಗೆ ಮರಳಿದರೂ, ತಾವು ಹೈದರಾಬಾದ್‌ನಲ್ಲಿ ಬಿತ್ತಿದ ಸೇವೆಯ ಬೀಜವನ್ನು ಮರೆಯಲಿಲ್ಲ. ಫ್ರಾನ್ಸ್ ಮತ್ತು ಅಮೆರಿಕದಲ್ಲಿದ್ದಾಗಲೂ ಅವರು ಅಂತಾರಾಷ್ಟ್ರೀಯ ಚಾರಿಟಿ ಸಂಸ್ಥೆಗಳೊಂದಿಗೆ ಸೇರಿ ಹಿಂದುಳಿದ ಮಹಿಳೆಯರ ಕಲ್ಯಾಣಕ್ಕಾಗಿ ನಿಧಿ ಸಂಗ್ರಹಿಸಿದರು. 1989 ರಲ್ಲಿ ನಿಲೂಫರ್ ಪ್ಯಾರಿಸ್‌ನಲ್ಲಿ ನಿಧನರಾದರು.

ಕೆಲವೊಮ್ಮೆ ಸಮಾಜದಲ್ಲಿ ನಾವು ಅಂದುಕೊಂಡದ್ದನ್ನು ಮಾಡಲು ಹಣಕ್ಕಿಂತ ಇಚ್ಛಾ ಶಕ್ತಿ ಬಹಳ ಮುಖ್ಯವಾಗುತ್ತದೆ. ಮಾಡುವ ಪ್ರತಿ ಕೆಲಸಕ್ಕೂ ನೂರಾರು ಅಡಚಣೆಗಳು ಇದ್ದದ್ದೇ, ಆದರೆ ಅದರ ಆಚೆ ಗಟ್ಟಿಯಾಗಿ ಅಂದುಕೊಂಡದ್ದನ್ನ ಮಾಡುವ ಛಲ ಬೆಳೆಸಿಕೊಂಡಾಗ ಒಳಿತಿನ ದಾರಿಗಳು ಒಂದಲ್ಲ ನೂರಾಗುತ್ತವೆ.

ನೀವೂ ಬರೆಯಬಹುದು

ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಏಕದಿನ: ಭಾರತದ ಅಗ್ರಸ್ಥಾನ ಅಬಾಧಿತ

ದುಬೈ: ಭಾರತ ಐಸಿಸಿ ಪುರುಷರ ಏಕದಿನ ತಂಡ ಮತ್ತೊಮ್ಮೆ ಅಗ್ರಸ್ಥಾನ ಉಳಿಸಿಕೊಂಡಿದೆ, ಆದರೆ ನ್ಯೂಜಿಲೆಂಡ್‌ಗಿಂತ ಭಾರತದ ಮುನ್ನಡೆ ಎಂಟರಿಂದ ಐದು ಅಂಕಗಳಿಗೆ ಇಳಿದಿದೆ. ಈ ನವೀಕರಣದ ನಂತರ, ಭಾರತವು 119 ರಿಂದ 118 ರೇಟಿಂಗ್ ಪಾಯಿಂಟ್‌ಗಳಿಗೆ ಕುಸಿದಿದೆ. ನ್ಯೂಜಿಲೆಂಡ್ ಎರಡು ಅಂಕಗಳ ಪ್ರಗತಿಯೊಂದಿಗೆ 113 ಕ್ಕೆ ಏರಿದೆ. ಹಾಲಿ ಏಕದಿನ ವಿಶ್ವಕಪ್ ಚಾಂಪಿಯನ್ ಆಸ್ಟ್ರೇಲಿಯಾ 109 ರೇಟಿಂಗ್‌ನೊಂದಿಗೆ ಬದಲಾಗದೆ ಮೂರನೇ ಸ್ಥಾನದಲ್ಲಿದೆ. ಅಗ್ರ 10ರಲ್ಲಿನ ಏಕೈಕ ಬದಲಾವಣೆಯೆಂದರೆ, ದಕ್ಷಿಣ ಆಫ್ರಿಕಾ ತಂಡ ಪಾಕಿಸ್ತಾನವನ್ನು ಹಿಂದಿಕ್ಕಿ ನಾಲ್ಕನೇ ಸ್ಥಾನಕ್ಕೆ ತಲುಪಿದೆ. ದಕ್ಷಿಣ ಆಫ್ರಿಕಾ ಈಗ 102 ಅಂಕಗಳೊಂದಿಗೆ ಮುಂದುವರಿದಿದ್ದರೆ, ಪಾಕಿಸ್ತಾನ 98 ಅಂಕಗಳೊಂದಿಗೆ ಐದನೇ ಸ್ಥಾನಕ್ಕೆ ಕುಸಿದಿದೆ. ಈ ಬದಲಾವಣೆ ಒಂಬತ್ತನೇ ಸ್ಥಾನದಲ್ಲಿರುವ ಬಾಂಗ್ಲಾದೇಶ ಮತ್ತು ವೆಸ್ಟ್ ಇಂಡೀಸ್ ನಡುವಿನ ಅಂತರವನ್ನು ಹೆಚ್ಚಿಸಿದೆ, ಎರಡೂ ತಂಡಗಳು ಈಗ 10 ರೇಟಿಂಗ್ ಪಾಯಿಂಟ್‌ಗಳಿಂದ ಬೇರ್ಪಟ್ಟಿವೆ.

ಎ ತಂಡಗಳ ತ್ರಿಕೋನ ಸರಣಿ: ಭಾರತದ ವಿರುದ್ಧ ಆಫ್ಘನ್‌ಗೆ ಮಳೆ ಜಯ

ದಂಬುಲ್ಲಾ (ಶ್ರೀಲಂಕಾ): ಭಾರತ ಎ ತಂಡದ ವಿರುದ್ಧ ಗುರುವಾರ ನಡೆದ ತ್ರಿಕೋನ ಏಕದಿನ ಸರಣಿಯ ಪಂದ್ಯದಲ್ಲಿ ಅಫ್ಘಾನಿಸ್ತಾನ ಎ ತಂಡಕ್ಕೆ ಅಚ್ಚರಿಯ ಗೆಲುವು ಲಭಿಸಿದೆ. ಮಳೆ ಕಾಡಿದ ಹಿನ್ನೆಲೆಯಲ್ಲಿ ಭಾರತದ ಇನಿಂಗ್ಸ್ 49 ಓವರ್‌ಗಳಿಗೆ ಸೀಮಿತವಾಗಿತ್ತು. ತಂಡ 9 ವಿಕೆಟ್‌ಗೆ 349 ರನ್ ಗಳಿಸಿತ್ತು. ಇದನ್ನು ಬೆನ್ನತ್ತಿ ಹೊರಟ ಅಫ್ಘಾನಿಸ್ತಾನಕ್ಕೂ ಮಳೆ ಎದುರಾಯಿತು. ಹೀಗಾಗಿ ಎರಡೆರಡು ಬಾರಿ ಗುರಿ ಪರಿಷ್ಕರಣೆಗೊಂಡಿತು. ಮೊದಲು ಅಫ್ಘಾನಿಸ್ತಾನಕ್ಕೆ 38 ಓವರ್‌ಗಳಲ್ಲಿ 294 ರನ್ ಗಳಿಸುವ ಗುರಿ ನೀಡಲಾಗಿತ್ತು. ಆದರೆ ಇದನ್ನು ಆಫ್ಘನ್ ಬೆನ್ನತ್ತುವಾಗ ಮತ್ತೆ ಮಳೆ ಶುರುವಾಯಿತು. ಆ ಹೊತ್ತಿಗೆ ಆಫ್ಘನ್ 25.5 ಓವರ್‌ಗಳಲ್ಲಿ 2 ವಿಕೆಟ್ ಗಳಿಗೆ 177 ರನ್ ಗಳಿಸಿತ್ತು. ಡಿಎಲ್‌ಎಸ್ ಪ್ರಕಾರ ಆಫ್ಘನ್ 3 ರನ್‌ಗಳಿಂದ ಮುಂದಿತ್ತು. ಒಟ್ಟಾರೆ ಅಫ್ಘಾನಿಸ್ತಾನವನ್ನು 4 ರನ್‌ಗಳಿಂದ ವಿಜಯೀ ಎಂದು ಘೋಷಿಸಲಾಯಿತು. ಆಡಿದ ಮೊದಲ ಪಂದ್ಯದಲ್ಲೇ ಆಫ್ಘನ್ ಗೆಲುವು ಸಾಧಿಸಿತು. ಭಾರತದ ಪರ ಪ್ರಭಸಿಮ್ರಾನ್ ಸಿಂಗ್ 84, ಋತುರಾಜ್ ಗಾಯಕ್ವಾಡ್ 66, ತಿಲಕ್ ವರ್ಮಾ 66 ರನ್ ಚಚ್ಚಿದರು. ಆಫ್ಘನ್ ಪರ ಇಮ್ರಾನ್ 75, ಬಹಿರ್ ಶಾ 51 ರನ್ ಗಳಿಸಿದರು.

ವಿಶ್ವಕಪ್ ಮಹಾಸಮರ ಆರಂಭ

ಇತಿಹಾಸದಲ್ಲೇ ಮೊದಲ ಬಾರಿ 48 ತಂಡಗಳು ಭಾಗಿ | 3 ರಾಷ್ಟ್ರಗಳಿಂದ ಆಯೋಜನೆ

ಮೆಕ್ಸಿಕೋ ನಗರ: ಇತಿಹಾಸದಲ್ಲೇ ಮೊದಲ ಬಾರಿಗೆ ಮೂರು ರಾಷ್ಟ್ರಗಳಾದ ಅಮೆರಿಕ, ಕೆನಡಾ ಮತ್ತು ಮೆಕ್ಸಿಕೋ ಜಂಟಿಯಾಗಿ ಫುಟ್‌ಬಾಲ್ ವಿಶ್ವಕಪ್ ಕೂಟವನ್ನು ಆಯೋಜಿಸಿವೆ. ಗುರುವಾರ ತಡರಾತ್ರಿ ನಡೆದ ಮೆಕ್ಸಿಕೋ-ದ.ಆಫ್ರಿಕಾ ಪಂದ್ಯಗಳ ಮೂಲಕ ಕೂಟ ಉದ್ಘಾಟನೆಯಾಗಿದೆ. ವರ್ಣರಂಜಿತ ಉದ್ಘಾಟನಾ ಸಮಾರಂಭದ ಯೋಜನೆ ಮೊದಲೇ ಸೋರಿಕೆಯಾಗಿದ್ದು ಕುತೂಹಲ ಸೃಷ್ಟಿಸಿದೆ. ಮೆಕ್ಸಿಕೋ ನಗರದ ಐತಿಹಾಸಿಕ ಅಜ್ಟೆಕಾ ಕ್ರೀಡಾಂಗಣದಲ್ಲಿ ಅದ್ಧೂರಿ ಉದ್ಘಾಟನಾ ಸಮಾರಂಭ ನಡೆದಿದೆ.

ಇದುವರೆಗೆ ಕೇವಲ 32 ತಂಡಗಳು ಮಾತ್ರ ಭಾಗವಹಿಸುತ್ತಿದ್ದ ವಿಶ್ವಕಪ್‌ನಲ್ಲಿ, ಈ ಬಾರಿ ದಾಖಲೆಯ 48 ರಾಷ್ಟ್ರಗಳು ಕಣಕ್ಕಿಳಿಯುತ್ತಿವೆ. ಹೀಗಾಗಿ ಪಂದ್ಯಗಳ ರೋಮಾಂಚನ ದುಪ್ಪಟ್ಟಾಗಲಿದೆ. ಒಟ್ಟು 39 ದಿನಗಳ ಕಾಲ ನಡೆಯಲಿರುವ ಈ ಟೂರ್ನಿಯಲ್ಲಿ ಕಪ್‌ಗಾಗಿ 104 ಪಂದ್ಯಗಳು ಜರುಗಲಿವೆ. ಜು.19ರಂದು ನ್ಯೂಜೆರ್ಸಿಯಲ್ಲಿ ಅತ್ಯಂತ ಮಹತ್ವದ ಫೈನಲ್ ಪಂದ್ಯ ನಡೆಯಲಿದೆ.

ತಂಡಗಳನ್ನು ತಲಾ ನಾಲ್ಕರಂತೆ 12 ಗುಂಪುಗಳಾಗಿ ವಿಂಗಡಿಸಲಾಗಿದೆ. ಪ್ರತಿ ಗುಂಪಿನ ಅಗ್ರ ಎರಡು ತಂಡಗಳು ಹಾಗೂ ಮೂರನೇ ಸ್ಥಾನ ಪಡೆಯುವ 8 ಅತ್ಯುತ್ತಮ ತಂಡಗಳು ನಾಕೌಟ್ (ರೌಂಡ್ ಆಫ್ 32) ಹಂತಕ್ಕೆ ಲಗ್ಗೆ ಇಡಲಿವೆ.

ಫುಟ್‌ಬಾಲ್ ಲೋಕದ ಶ್ರೇಷ್ಠ ಆಟಗಾರರಾದ ಲಯೋನೆಲ್ ಮೆಸ್ಸಿ (ಅರ್ಜೆಂಟೀನಾ) ಮತ್ತು ಕ್ರಿಸ್ಟಿಯಾನೊ ರೊನಾಲ್ಡೊ (ಪೋರ್ಚುಗಲ್) ಆಡಲಿರುವ ಕೊನೆಯ ವಿಶ್ವಕಪ್ ಇದಾಗಿರಲಿದೆ. ಚಾಂಪಿಯನ್ ಅರ್ಜೆಂಟೀನಾ ತನ್ನ ಪ್ರಶಸ್ತಿಯನ್ನು ಉಳಿಸಿಕೊಳ್ಳಲು ಹೋರಾಡಿದರೆ, ಕಳೆದ ಬಾರಿ ರನ್ನರ್‌ಅಪ್ ಫ್ರಾನ್ಸ್ ಪ್ರಶಸ್ತಿ ಗೆಲ್ಲುವ ಕನಸಿನೊಂದಿಗೆ ಹೋರಾಟಕ್ಕೆ ಸಜ್ಜಾಗಿದೆ. ಬ್ರೆಜಿಲ್, ಸ್ಪೇನ್, ಕೊಲಂಬಿಯಾ, ಜರ್ಮನಿ, ಉರುಗ್ವೆ, ಇಟಲಿ ಸೇರಿದಂತೆ ಪ್ರಮುಖ ತಂಡಗಳು ಪ್ರಬಲ ಪೈಪೋಟಿ ನೀಡಲು ಸಜ್ಜಾಗಿವೆ.

ವಿಜೇತ ತಂಡಕ್ಕೆ 417 ಕೋಟಿ ರು. ನಗದು

ಇಡೀ ಕೂಟದಲ್ಲಿ ಒಟ್ಟು ₹6,238.42 ಕೋಟಿ ರುಪಾಯಿ ಬಹುಮಾನದ ಹಣವನ್ನು ಫಿಫಾ ನೀಡಲಿದೆ. ವಿಶ್ವಕಪ್ ಚಾಂಪಿಯನ್ ತಂಡಕ್ಕೆ ಸಿಗಲಿದೆ ಬರೋಬ್ಬರಿ ₹417.50 ಕೋಟಿ. ವಿಶ್ವಕಪ್‌ನಲ್ಲಿ ಭಾಗವಹಿಸುವ ತಂಡಗಳ ಇತರೆ ಖರ್ಚುಗಳನ್ನು ಸೇರಿಸಿದರೆ, ಒಟ್ಟು ಮೊತ್ತ ₹7,400 ಕೋಟಿ ರು.ಗೂ ಹೆಚ್ಚು ಆಗಲಿದೆ. ಈ ಬಾರಿ ವಿಶ್ವ ಚಾಂಪಿಯನ್ ಆಗುವ ತಂಡಕ್ಕೆ ಬರೋಬ್ಬರಿ ₹417.50 ಕೋಟಿ ರುಪಾಯಿ ಬಹುಮಾನ ಸಿಗಲಿದೆ. ಇದು ಕಳೆದ ಬಾರಿ ಚಾಂಪಿಯನ್ ಆಗಿದ್ದ ಅರ್ಜೆಂಟೀನಾಗೆ ಸಿಕ್ಕಿದ್ದಕ್ಕಿಂತ ₹76 ಕೋಟಿ ಹೆಚ್ಚು. ಇನ್ನು ಎರಡನೇ ಸ್ಥಾನ ಪಡೆಯುವ ತಂಡಕ್ಕೆ ₹288 ಕೋಟಿ, ಮೂರನೇ ಸ್ಥಾನಕ್ಕೆ ₹254.675 ಕೋಟಿ ಮತ್ತು ನಾಲ್ಕನೇ ಸ್ಥಾನಕ್ಕೆ ₹237 ಕೋಟಿ ರುಪಾಯಿ ಸಿಗಲಿದೆ.

ಇಂದಿನಿಂದ ಮಹಿಳಾ ಟಿ20 ವಿಶ್ವಕಪ್ ಶುರು

12 ತಂಡಗಳ ಕೂಟ | ಲಂಕಾ-ಇಂಗ್ಲೆಂಡ್ ಮೊದಲ ಪಂದ್ಯ

ಲಂಡನ್: ಒಂದೆಡೆ ವಿಶ್ವಾದ್ಯಂತ ಕೋಟ್ಯಂತರ ಅಭಿಮಾನಿಗಳು ಕಾತುರದಿಂದ ಕಾಯುತ್ತಿರುವ ಫಿಫಾ ವಿಶ್ವಕಪ್ ಆರಂಭವಾಗಿದೆ. ಇದೇ ವೇಳೆ ಕ್ರಿಕೆಟ್ ಅಭಿಮಾನಿಗಳು ಕೂಡ ಮಹಿಳಾ ಟಿ20 ವಿಶ್ವಕಪ್‌ನತ್ತ ಕುತೂಹಲದ ನೋಟ ಬೀರಿದ್ದಾರೆ. ಮಹಿಳಾ ವಿಶ್ವಕಪ್ ಜೂ. 12ರಿಂದ ಆರಂಭವಾಗಲಿದೆ. ಮೊದಲ ಪಂದ್ಯ ಇಂಗ್ಲೆಂಡ್-ಶ್ರೀಲಂಕಾ ನಡುವೆ ಭಾರತ ಕಾಲಮಾನ ಶುಕ್ರವಾರ ರಾತ್ರಿ 11ರಿಂದ ಆರಂಭವಾಗಲಿದೆ.

ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಐಸಿಸಿ ಮಹಿಳಾ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಈ ಬಾರಿ ತಂಡಗಳ ಸಂಖ್ಯೆ 10 ರಿಂದ 12ಕ್ಕೆ ಏರಿಕೆಯಾಗಿದೆ. ನೆದರ್ಲೆಂಡ್ ತಂಡವು ತನ್ನ ಚೊಚ್ಚಲ ಪ್ರವೇಶವನ್ನು ಮಾಡಿದೆ. ಇಂಗ್ಲೆಂಡ್ ಈ ಬಾರಿ ಟೂರ್ನಿಯ ಆತಿಥ್ಯವಹಿಸಿಕೊಂಡಿದೆ. ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ತಂಡವು ತನ್ನ ಕಿರೀಟವನ್ನು ಉಳಿಸಿಕೊಳ್ಳಲು ಉತ್ಸುಕವಾಗಿದೆ. ಟೂರ್ನಿಯ ಇತಿಹಾಸದಲ್ಲಿ ಅತ್ಯಂತ ಯಶಸ್ವಿ ತಂಡವಾದ ಆಸ್ಟ್ರೇಲಿಯಾ, ದಾಖಲೆಯ ಏಳನೇ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿದೆ. ಭಾರತ ಚೊಚ್ಚಲ ಟ್ರೋಫಿ ಗೆಲ್ಲುವ ವಿಶ್ವಾಸದಲ್ಲಿದೆ.

ಈ ಬಾರಿಯ ತಂಡಗಳು: ಈ ಬಾರಿ ಹನ್ನೆರಡು ತಂಡಗಳು ಭಾಗವಹಿಸಲಿವೆ. ಅವುಗಳೆಂದರೆ ಇಂಗ್ಲೆಂಡ್, ಭಾರತ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ನ್ಯೂಜಿಲೆಂಡ್, ಪಾಕಿಸ್ತಾನ, ಶ್ರೀಲಂಕಾ, ಬಾಂಗ್ಲಾದೇಶ, ವೆಸ್ಟ್‌ಇಂಡೀಸ್, ಸ್ಕಾಟ್ಲೆಂಡ್, ಐರ್ಲೆಂಡ್ ಮತ್ತು ನೆದರ್ಲೆಂಡ್.

ಜೂನ್ 12ರಿಂದ ಜುಲೈ 5ರವರೆಗೆ ಒಟ್ಟು 33 ಪಂದ್ಯಗಳು ನಡೆಯಲಿವೆ. 12 ತಂಡಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಎ ಮತ್ತು ಬಿ ಗುಂಪಿನಲ್ಲಿ ತಲಾ ಆರು ತಂಡಗಳಿವೆ. ತಂಡದ ಒಂದು ಗೆಲುವಿಗೆ ಎರಡು ಅಂಕಗಳನ್ನು ಮತ್ತು ಫಲಿತಾಂಶವಿಲ್ಲದ ಪಂದ್ಯಕ್ಕೆ ತಲಾ ಒಂದು ಅಂಕವನ್ನು ಗಳಿಸುತ್ತವೆ. ಪ್ರತಿ ಗುಂಪಿನಿಂದ ಅಗ್ರ ಎರಡು ತಂಡಗಳು ಸೆಮಿಫೈನಲ್‌ಗೆ ಮುನ್ನಡೆಯುತ್ತವೆ. ಗ್ರೂಪ್ ಎ ವಿಜೇತರು ಗ್ರೂಪ್ ಬಿಯಿಂದ ಎರಡನೇ ಸ್ಥಾನ ಪಡೆದ ತಂಡವನ್ನು ಎದುರಿಸುತ್ತಾರೆ. ಆದರೆ ಗ್ರೂಪ್ ಬಿ ವಿಜೇತರು ಗ್ರೂಪ್ ಎ ಯಿಂದ ರನ್ನರ್-ಅಪ್ ತಂಡವನ್ನು ಎದುರಿಸುತ್ತಾರೆ.

ದಿಲ್ಲಿ ಹುಡುಗ ನಿಖಿಲ್ ಆಸೀಸ್ ಟಿ20 ತಂಡಕ್ಕೆ ಆಯ್ಕೆ

ಕೋವಿಡ್ ಕಾರಣಕ್ಕೆ ಆಸ್ಟ್ರೇಲಿಯಾದಲ್ಲೇ ಸಿಲುಕಿದ್ದ ಕ್ರಿಕೆಟಿಗ | 60 ವರ್ಷದಲ್ಲೇ ಮೊದಲು: ಭಾರತೀಯನಿಗೆ ಸ್ಥಾನ

ಮೆಲ್ಬರ್ನ್: ಭಾರತ ಮೂಲದ ಕ್ರಿಕೆಟಿಗರು ಆಸ್ಟ್ರೇಲಿಯಾ ರಾಷ್ಟ್ರೀಯ ಪುರುಷರ ತಂಡದಲ್ಲಿ ಕಾಣಿಸಿಕೊಳ್ಳುತ್ತಿರುವುದು ಹೊಸತೇನಲ್ಲ. ಆದರೆ ಇದೀಗ ಭಾರತದಲ್ಲೇ ಹುಟ್ಟಿದ್ದ ಕ್ರಿಕೆಟಿಗನೊಬ್ಬ ಮೊದಲ ಬಾರಿಗೆ ಆಸೀಸ್ ತಂಡದಲ್ಲಿ ಕಾಣಿಸಿ ಕೊಂಡಿದ್ದಾರೆ. ದಿಲ್ಲಿಯಲ್ಲಿ ಹುಟ್ಟಿದ ನಿಖಿಲ್ ಚೌಧರಿ ಇದೀಗ ಬಾಂಗ್ಲಾದೇಶ ವಿರುದ್ಧದ ಮುಂಬರುವ ಟಿ20 ಸರಣಿ ಆಡಲಿರುವ ಆಸ್ಟ್ರೇಲಿ ಯಾ ತಂಡಕ್ಕೆ ಆಯ್ಕೆಯಾಗಿದ್ದಾರೆ. ಕೋವಿಡ್ ಲಾಕ್ ಡೌನ್ ವೇಳೆ ಆಸ್ಟ್ರೇಲಿಯಾದ ಕ್ವೀನ್ಸ್ ಲ್ಯಾಂಡ್‌ನಲ್ಲೇ ಉಳಿದುಕೊಂಡಿದ್ದ ಅವರು ಬಳಿಕ ಅಲ್ಲೇ ತಮ್ಮ ಕ್ರಿಕೆಟ್ ಜೀವನ ಮುಂದುವರಿಸಲು ನಿರ್ಧರಿಸಿದರು.

ವೈಯಕ್ತಿಕ ರಜೆಯ ಕಾರಣದಿಂದಾಗಿ ತಾರಾ ಆಟಗಾರ ಟ್ರಾವಿಸ್ ಹೆಡ್ ಸರಣಿಯಿಂದ ಹೊರಗುಳಿದ ಹಿನ್ನೆಲೆಯಲ್ಲಿ, 30 ವರ್ಷದ ನಿಖಿಲ್ ಅವರಿಗೆ ಆಸೀಸ್ ತಂಡದಲ್ಲಿ ಸ್ಥಾನ ಲಭಿಸಿದೆ. ಇದರೊಂದಿಗೆ, ಕಳೆದ 60ಕ್ಕೂ ಹೆಚ್ಚು ವರ್ಷಗಳ ಇತಿಹಾಸದಲ್ಲಿ ಆಸ್ಟ್ರೇಲಿಯಾ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾದ ಭಾರತದಲ್ಲಿ ಜನಿಸಿದ ಏಕೈಕ ಆಟಗಾರ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ.

ಹೋಬರ್ಟ್ ಹರಿಕೇನ್ಸ್ ತಂಡದ ಆಲ್‌ರೌಂಡರ್ ನಿಖಿಲ್ ಐಪಿಎಲ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಭಾಗವಾಗಿದ್ದಾರೆ. ಒಂದು ವೇಳೆ ಬಾಂಗ್ಲಾದೇಶ ವಿರುದ್ಧದ ಪಂದ್ಯದ ಪ್ಲೇಯಿಂಗ್ ಇಲೆವೆನ್‌ನಲ್ಲಿ (ಅಂತಿಮ 11ರ ಬಳಗ) ಸ್ಥಾನ ಪಡೆದರೆ, 1964ರಲ್ಲಿ ಆಸೀಸ್ ಪರ ಆಡಿದ್ದ ಲೆಗ್ ಸ್ಪಿನ್ನರ್ ರೆಕ್ಸ್ ಸೆಲ್ಲರ್ಸ್ ಅವರ ನಂತರ ಆಸ್ಟ್ರೇಲಿಯಾವನ್ನು ಪ್ರತಿನಿಧಿಸಿದ ಭಾರತ ಮೂಲದ ಮೊದಲ ಕ್ರಿಕೆಟಿಗ ಎಂಬ ಇತಿಹಾಸ ವನ್ನು ನಿಖಿಲ್ ಬರೆಯಲಿದ್ದಾರೆ.

ಕೋವಿಡ್‌ನಿಂದ ಬದಲಾದ ಜೀವನ: ದೆಹಲಿಯಲ್ಲಿ ಜನಿಸಿದ ನಿಖಿಲ್, ಕಳೆದ ದಶಕದ ಆರಂಭದಲ್ಲಿ ಆಸ್ಟ್ರೇಲಿಯಾಕ್ಕೆ ವಲಸೆ ಹೋಗಿದ್ದರು. ಅವರು ಈ ಹಿಂದೆ ಭಾರತದ ದೇಶಿ ಕ್ರಿಕೆಟ್‌ನಲ್ಲಿ ಪಂಜಾಬ್ ತಂಡದ ಪರ ಹರ್ಭಜನ್ ಸಿಂಗ್, ಶುಭಮನ್ ಗಿಲ್ ಮತ್ತು ಅಭಿಷೇಕ್ ಶರ್ಮಾ ಅವರಂತಹ ದಿಗ್ಗಜರೊಂದಿಗೆ 14 ಪಂದ್ಯಗಳನ್ನು ಆಡಿದ್ದಾರೆ. ಕೋವಿಡ್ ಸಂಕಷ್ಟದ ಸಮಯದಲ್ಲಿ ಆಸ್ಟ್ರೇಲಿಯಾದ ಕ್ವೀನ್ಸ್ ಲ್ಯಾಂಡ್‌ನಲ್ಲಿದ್ದ ತಮ್ಮ ಸೋದರ ಮಾವನ ಮನೆಗೆ ನಿಖಿಲ್ ಭೇಟಿ ನೀಡಿದ್ದರು. ಅನಿವಾರ್ಯವಾಗಿ ಅಲ್ಲೇ ಉಳಿದುಕೊಂಡರು.

ಭಾರತ ಅ-19 ತಂಡ: ದ್ರಾವಿಡ್ ಪುತ್ರ ಆಯ್ಕೆ

ದೆಹಲಿ: ಭಾರತೀಯ ಕ್ರಿಕೆಟ್‌ನ ದಿಗ್ಗಜ ಹಾಗೂ ಟೀಮ್ ಇಂಡಿಯಾ ಮಾಜಿ ಹೆಡ್ ಕೋಚ್ ರಾಹುಲ್ ದ್ರಾವಿಡ್ ಅವರ ಪುತ್ರ ಅನ್ವಯ್ ದ್ರಾವಿಡ್ ಶ್ರೀಲಂಕಾ ಪ್ರವಾಸದ ಭಾರತ ಅಂಡರ್-19 ಏಕದಿನ ತಂಡಕ್ಕೆ ಆಯ್ಕೆಯಾಗಿದ್ದಾರೆ. ಲಂಕಾ ವಿರುದ್ಧ ಏಕದಿನ ಸರಣಿಯ ತಂಡದಲ್ಲಿ ಅನ್ವಯ್ ವಿಕೆಟ್ ಕೀಪರ್-ಬ್ಯಾಟರ್ ಆಗಿ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಅನ್ವಯ್ ದ್ರಾವಿಡ್ ಅವರ ಹಿರಿಯ ಸಹೋದರ ಸುಮಿತ್ ದ್ರಾವಿಡ್ ಈಗಾಗಲೇ ಭಾರತ ಅಂಡರ್-19 ತಂಡದ ಪರ ಆಡಿದ್ದಾರೆ. ಸುಮಿತ್ ಈಗಾಗಲೇ ಕರ್ನಾಟಕ ಮಹಾರಾಜ ಟ್ರೋಫಿ ಟೂರ್ನಿಯಲ್ಲಿ ಮೈಸೂರು ವಾರಿಯರ್ಸ್ ತಂಡದ ಪರ 2024ರಲ್ಲಿ ಆಡಿದ್ದಾರೆ.

ಅನ್ವಯ್ ದ್ರಾವಿಡ್ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ಆಗಿದ್ದಾರೆ. ಬಲಗೈ ಬ್ಯಾಟ್ಸ್ ಮನ್ ಆಗಿರುವ ಅವರು ಈಗಾಗಲೇ ಕಿರಿಯರ ಕ್ರಿಕೆಟ್‌ನಲ್ಲಿ ಗಮನ ಸೆಳೆದಿದ್ದಾರೆ. ಅಂಡರ್-19 ತಂಡಕ್ಕೆ ಆಯ್ಕೆಯಾಗಿರುವ ದ್ರಾವಿಡ್ ಪುತ್ರ , ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಹೇಗೆ ಪ್ರದರ್ಶನವನ್ನು ತೋರುತ್ತಾರೆಂಬುದು ಕುತೂಹಲವನ್ನು ಕೆರಳಿಸಿದೆ.

ಅನ್ವಯ್ ಕೇವಲ ಏಕದಿನ ಭಾರತ ಅಂಡರ್-19 ತಂಡಕ್ಕೆ ಮಾತ್ರ ಆಯ್ಕೆಯಾಗಿದ್ದಾರೆ. ಅವರನ್ನು ಹಲವು ದಿನಗಳ ಪಂದ್ಯಗಳ ತಂಡಕ್ಕೆ ಆಯ್ಕೆ ಮಾಡಲಾಗಿಲ್ಲ. ಇನ್ನೂ ಎರಡೂ ಸ್ವರೂಪಗಳ ತಂಡವನ್ನು ಯಶ್‌ವರ್ಧನ್ ಸಿಂಗ್ ಚೌಹಾಣ್ ಮುನ್ನಡೆಸಲಿದ್ದಾರೆ. ಉಪ ನಾಯಕನ ಸ್ಥಾನವನ್ನು ಲಕ್ಷ್ಯ ರಾಯ್‌ಚಾಂದನಿಗೆ ನೀಡಲಾಗಿದೆ. ಜುಲೈ 4 ರಂದು ಭಾರತ ತಂಡದ ಲಂಕಾ ಪ್ರವಾಸ ಆರಂಭವಾಗಲಿದೆ. ಮೊದಲಿಗೆ ಮೂರು ಪಂದ್ಯಗಳ ಏಕದಿನ ಸರಣಿ ನಡೆಯಲಿದೆ.

ತಂಡ: ಸಾಗರ್ ವಿರ್ಕ್, ಲಕ್ಷ್ಯ ರಾಯ್ ಚಾಂದನಿ (ಉಪ ನಾಯಕ), ಯಶ್‌ವರ್ಧನ್ (ನಾಯಕ), ವಿನೀತ್ ವಿಕೆ, ಅರ್ಜುನ್ ರಜಪೂತ್, ಕುಶಾಗ್ರಾ ಓಜಾ, ರಜತ್ ಬಂಘೇಲಾ (ವಿಕೆಟ್ ಕೀಪರ್), ಅನ್ವಯ್ ದ್ರಾವಿಡ್ (ವಿಕೆಟ್ ಕೀಪರ್), ಅನ್ಮೋಲ್ ಜೀತ್ ಸಿಂಗ್, ವುತ್ಕುರಿ ಯಶ್‌ವೀರ್ ಗೌಡ್.

ಭಾವನಾತ್ಮಕ ಕಥೆಯ ಕ್ಷಮೆಯಿರಲಿ ತಂದೆ

ಮೂರು ದಶಕಗಳಿಂದ ರಂಗಭೂಮಿ, ಕಿರುತೆರೆ, ಹಿರಿತೆರೆ ಕಲಾವಿದರಾಗಿ ಜನಪ್ರಿಯತೆ ಪಡೆದಿರುವ ಎಂ.ಎನ್.ಸುರೇಶ್ ಈಗ ಕನ್ನಡ ಚಿತ್ರರಂಗದಲ್ಲಿ ಹೊಸ ಹೆಜ್ಜೆ ಇಟ್ಟಿದ್ದಾರೆ. ಕ್ಷಮೆಯಿರಲಿ ತಂದೆ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿದ್ದಾರೆ. ಚಿತ್ರದಲ್ಲಿ ಕೌಟುಂಬಿಕ ಕಥೆ ಇದ್ದು ಅದು ಭಾವನಾತ್ಮಕವಾಗಿ ಸಾಗುತ್ತದೆ. ತಂದೆ ಮಗ, ತಾಯಿ ಮಗನ ಬಾಂಧವ್ಯ ಇದೆಲ್ಲವೂ ಚಿತ್ರದಲ್ಲಿ ಹಾಸು ಹೊಕ್ಕಾಗಿದೆ.

> ನಾನು ಈ ಹಿಂದೆ ಕೆಲವು ಚಿತ್ರಗಳಿಗೆ ಸಹ ನಿರ್ಮಾಪಕನಾಗಿದ್ದೆ. ಈಗ ಕ್ಷಮೆಯಿರಲಿ ತಂದೆ ಸಿನಿಮಾದ ಮೂಲಕ ಸ್ವತಂತ್ರ ನಿರ್ಮಾಪಕನಾಗಿ ಗುರುತಿಸಿಕೊಳ್ಳುತ್ತಿದ್ದೇನೆ. ಇದು ನನ್ನ ಮೊದಲ ನಿರ್ದೇಶನದ ಚಿತ್ರ. ಶೀರ್ಷಿಕೆಯೇ ತಿಳಿಸುವಂತೆ ಇಲ್ಲಿ ತಂದೆ, ಮಗನ ಬಾಂಧವ್ಯದ ಕಥೆಯಿದೆ. ಇದು ಎಲ್ಲಾ ಕಾಲಕ್ಕೂ ಹೊಂದುವ, ಎಲ್ಲರನ್ನೂ ಸೆಳೆಯುವ ಸಿನಿಮಾವಾಗಿದೆ.
> -ಎಂ.ಎನ್.ಸುರೇಶ್ ನಿರ್ದೇಶಕ, ನಿರ್ಮಾಪಕ

ನಮ್ಮ ನಡುವಿನ ಕಥೆ ಇಲ್ಲಿ ತಂದೆ ತಾಯಿ ಮಗನ ಬಾಂಧವ್ಯದ ಕಥನಾ ಮನಸೂರೆಗೊಳ್ಳುತ್ತದೆ. ಮಧ್ಯಮ ವರ್ಗದ ಕುಟುಂಬ, ಸರಕಾರಿ ನೌಕರಿಯಿಂದ ಬರುವ ಅಷ್ಟು ಇಷ್ಟು ವೇತನದಲ್ಲಿ ಮನೆಯನ್ನು ನಿರ್ವಹಿಸುವ ತಂದೆ. ಮನೆಯ ಸದ್ಯರ ಆಕಾಂಕ್ಷೆಗಳನ್ನು ಈಡೇರಿಸಲು ಶ್ರಮ ಪಡುವ ಕುಟುಂಬದ ಯಜಮಾನ. ತನ್ನ ಜವಾಬ್ದಾರಿ ನಿರ್ವಹಿಸಲು ಆತನ ಶ್ರಮ ಹೇಗಿರುತ್ತದೆ ಎಂಬುದನ್ನು ಎಲ್ಲರ ಮನಕ್ಕೆ ಮುಟ್ಟುವಂತೆ ಕಟ್ಟಿಕೊಡಲಾಗಿದೆ. ನಮ್ಮ ಸುತ್ತಮುತ್ತಲೇ ನಡೆಯುವ, ನಡೆಯುತ್ತಿರುವ ಸ್ಟೋರಿ ಇಲ್ಲಿದ್ದು ಅದು ಎಲ್ಲರ ಕನೆಕ್ಟ್ ಆಗಲಿದೆ ಎನ್ನುತ್ತಾರೆ ಸುರೇಶ್.

ಮನಮುಟ್ಟಿದ ಶೀರ್ಷಿಕೆ ಇಲ್ಲಿ ಎಮೋಷನ್‌ಗೆ ಹೆಚ್ಚು ಒತ್ತು ನೀಡಲಾಗಿದೆ. ಕಥೆಯಲ್ಲಿ ಕ್ಷಮೆಯೇ ಮುಖ್ಯವಾಗಿರುವಾಗ ಅಂತಹದ್ದೇ ಟೈಟಲ್ ಹುಡುಕುತ್ತಿದ್ದವು. ಆಗ ಕ್ಷಮೆಯಿರಲಿ ತಂದೆ ಶೀರ್ಷಿಕೆ ಸಿಕ್ಕಿತು. ಅದು ಕಥೆಗೂ ಪೂರಕವಾಗಿತ್ತು. ಜೀವನದಲ್ಲಿ ಇರುವ ಜವಾಬ್ದಾರಿ, ಈ ನಡುವೆ ಅರಿತೊ ಅರಿಯದೆಯೋ ಆಗುವ ತಪ್ಪು, ಅದಕ್ಕೆ ಸಿಗುವ ಕ್ಷಮೆ ಏನು ಎಂಬುದನ್ನು ಚಿತ್ರದಲ್ಲಿಯೇ ನೋಡಬೇಕಂತೆ. ಮಂಜುನಾಥ್ ಹೆಗ್ಡೆ, ರೇಣುಕಾ ಬಾಲಿ, ಶ್ರೀಮಂತ, ವಿನ್ಯಾ ಶೆಟ್ಟಿ ಮುಂತಾದ ಕಲಾವಿದರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಎಂ.ಎನ್.ಸುರೇಶ್ ಕೂಡ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ. ಸೂರ್ಯಕಾಂತ್ ಛಾಯಾಗ್ರಹಣ, ಮುತ್ತುರಾಜ್ ಸಂಕಲನ ಹಾಗೂ ಪುಣ್ಯೇಶ್ ಕುಮಾರ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಪಯಣದಲ್ಲಿ ಸಾಗುವ ಲೈಫ್ ಎಲ್ಲಿಂದ್ ಎಲ್ಲಿಗೆ

ಪಯಣದಲ್ಲಿ ಸಾಗುವ ಕಥೆಯನ್ನು ಹೊತ್ತ ಲೈಫ್ ಎಲ್ಲಿಂದ್ ಎಲ್ಲಿಗೆ ಚಿತ್ರ ತೆರೆಗೆ ಸಿದ್ಧವಾಗಿದೆ. ಅರ್ಜುನ್ ಶಿವನ್ ನಿರ್ದೇಶನದ ಈ ಚಿತ್ರದಲ್ಲಿ ಮೈಸೂರಿನಿಂದ ಕಾಶ್ಮೀರದವರೆಗೂ ಸ್ನೇಹಿತರ ಪಯಣ ಸಾಗಲಿದೆ. ತಮ್ಮ ಸಿನಿಮಾದ ಕುರಿತಂತೆ ನಿರ್ದೇಶಕ ಅರ್ಜುನ್ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ಆಪ್ತ ಮಿತ್ರರು: ಒಂದೇ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಗೆಳೆಯರು ಎಂಟು ವರ್ಷದ ಬಳಿಕ ಸಿಕ್ಕಾಗ ಅವರ ಸಂಭ್ರಮ ಹೇಗಿರುತ್ತದೆ. ಎಲ್ಲರೂ ಸೇರಿ ಪ್ರವಾಸಕ್ಕೆ ಹೊರಟಾಗ ಹಳೆಯ ದಿನಗಳ ನೆನಪುಗಳನ್ನು ಮೆಲುಕು ಹಾಕುತ್ತಾ ಅವರ ಸಂಭ್ರಮದ ಪಯಣ ಹೇಗೆ ಸಾಗಲಿದೆ. ಜೀವನದಲ್ಲಿ ಅಹಂಗಿಂತ ಗೆಳತನ ಮುಖ್ಯ, ಗೆಳೆಯರಿಗಾಗಿ ತ್ಯಾಗ ಮಾಡಿ ಆದರೆ ಗೆಳತನವನ್ನು ತನವನ್ನು ತ್ಯಾಗ ಮಾಡಬೇಡಿ ಎಂಬ ಸಂದೇಶ ಚಿತ್ರದಲ್ಲಿದೆ.

ಆಪ್ತಮಿತ್ರರ ಕಥನವನ್ನು ತೆರೆಯಲ್ಲಿ ನೋಡುತ್ತಿದ್ದರೆ ನಾವು ಕಳೆದ ಕಾಲೇಜು ದಿನಗಳ ನೆನಪುಗಳು ಅಲೆ ಅಲೆಯಾಗಿ ನಮ್ಮ ಮುಂದೆ ಸಾಗುತ್ತವೆ.

ಕಾಮಿಡಿ ಕಥನ: ಹಾಗಂತ ಸಿನಿಮಾ ಸಂದೇಶಕ್ಕೆ ಸೀಮಿತವಾಗಿಲ್ಲ, ಇಲ್ಲಿ ಮನರಂಜನೆಯೇ ಪ್ರಧಾನವಾಗಿದ್ದು, ಕಾಮಿಡಿ ಕಚಗುಳಿಯಿಡುತ್ತದೆ. ಕಾಲೇಜು ಹುಡುಗರ ತರ್ಲೆ ತುಂಟಾಟ ಮನಸಿಗೆ ಮುದ ನೀಡುತ್ತದೆ. ಪಂಚಿಂಗ್ ಡೈಲಾಗ್ ನಗು ತರಿಸುತ್ತದೆ. ಹೀಗೆ ನಗಿಸುತ್ತಾ ನಮ್ಮ ಜರ್ನಿ ಶುರುವಾಗುತ್ತದೆ. ಮೈಸೂರಿನಿಂದ ಆರಂಭವಾಗುವ ಪಯಣ ಕಾಶ್ಮೀರದವರೆಗೂ ಸಾಗುತ್ತದೆ. ಅರ್ಜುನ್ ಶಿವನ್ ನಿರ್ದೇಶನದ ಜತೆಗೆ ಪ್ರಮುಖ ಪಾತ್ರದಲ್ಲಿಯೂ ಕಾಣಿಸಿಕೊಂಡಿದ್ದಾರೆ. ಕ್ರಿಶ್, ಲೆನಿನ್, ಮಂಜುನಾಥ್, ಡಯಾನಾ ಜೆಸ್ಸಿಕಾ, ಅನುಪ್ರೇಮಾ ಹೀಗೆ ಮುಂತಾದವರು ತಾರಾಗಣದಲ್ಲಿದ್ದಾರೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು ಮಧುರವಾಗಿ ಮೂಡಿಬಂದಿವೆ ಎನ್ನುತ್ತಾರೆ ನಿರ್ದೇಶಕ ಅರ್ಜುನ್.

> ಲೈಫ್ ಎಲ್ಲಿಂದ್ ಎಲ್ಲಿಗೆ ಸುಂದರ ಪಯಣದ ಕಥನಾ, ಮೈಸೂರಿನಿಂದ ಆರಂಭವಾಗುವ ಸ್ನೇಹಿತರ ಜರ್ನಿ ಕಾಶ್ಮೀರದವರೆಗೂ ಸಾಗುತ್ತದೆ. ಸುಂದರ ತಾಣಗಳಲ್ಲಿ ಚಿತ್ರೀಕರಣ ನಡೆಸಿದ್ದೇವೆ. ನಮ್ಮ ಚಿತ್ರ ಪ್ರೇಕ್ಷಕರ ಮನದಲ್ಲಿ ಹಸಿರಾಗಿರುವ ನೆನಪುಗಳ ಬುತ್ತಿಯನ್ನು ತೆರೆಯುವಂತೆ ಮಾಡುತ್ತದೆ.
> -ಅರ್ಜುನ್ ಶಿವನ್ ನಿರ್ದೇಶಕ